
ಯಂಡಮೂರಿ ವೀರೇಂದ್ರನಾಥ್ ರವರ

# ಅಷ್ಟಾವಕ್ರ



ಗ್ರಂಥ ಸ್ವಾಮ್ಯ ವಿಭಾಗ
894.814 3
ರಾಜ್ಯ ಕೇಂದ್ರ ಗ್ರಂಥಾಲಯ
SAR ಬೆಂಗಳೂರು

ಕನ್ನಡಕ್ಕೆ: ಸರಿತಾ ಜ್ಞಾನಾನಂದ

# ಅಷ್ಟವಕ್ರ ಭಾಗ - 1

(ಸಾಮಾಜಿಕ ಕಾದಂಬರಿ)

ಸರಿತಾ ಜ್ಞಾನಾನಂದ

ಜ್ಞಾನಭಂಡಾರ
106/ಎ, ಭಾರತ್ ನಗರ, ಬಿ.ಇ.ಎಂ. ಎಲ್ ಅಂಚೆ.
ಕೆ.ಜಿ.ಎಫ್ - 563 115

**ASTAVAKRA PATR -1 : A Social novel by Smt. Saritha Gnanananda, Published by, JNANA BHANDARA, BHARATH NAGAR, BEML Post K.G.F. - 563 115**

© : ಸರಿತಾ ಜ್ಞಾನಾನಂದ

ಪುಟಗಳು : 200 + 4

ಮೊದಲ ಮುದ್ರಣ : 2000

ಬೆಲೆ. ರೂ : 95-00

ಮುಖ ಪುಟ : ಶ್ರೀ ಪಾದ

ಮುದ್ರಣ :
ವಾದಿರಾಜ ಪ್ರಿಂಟರ್ಸ್
ಹನುಮಂತನಗರ,
ಬೆಂಗಳೂರು - 560 050

# ಅಷ್ಟಾವಕ್ರ ಭಾಗ - 1

## 1

ಅರಬ್ಬೀ ಸಮುದ್ರದ ಬೆಟ್ಟದಷ್ಟೆತ್ತರದ ಅಲೆಗಳು ವೇಗವಾಗಿ ಸಮೀಪಿಸುತ್ತಿರುವ ರಭಸಕ್ಕೆ ಸಮೀಪದ ಭವನಗಳು ಉರುಳುವಂತಿವೆ. ಅದರೊಂದಿಗೆ ಸೂಜಿಗಳನ್ನು ಪಂದರಿಯಲ್ಲಿ ಪಂದರಿ ಹಿಡಿದಂತೆ ಸುಂಯ್ ಎಂದು ಸದ್ದುಮಾಡುವ ಗಾಳಿ. ಮೂರು ದಿನಗಳಿಂದ ಒಂದೇ ಸಮನೆ ಸುರಿಯುವ ಜಡಿಮಳೆ. ಆ ದಿನ ಅತ್ತಲೋ, ಇತ್ತಲೋ ನಿಶ್ಚಯಿಸಿಕೊಳ್ಳಬೇಕೆನ್ನುವಂತಿದೆ. ಮೆರೀನ್ ಡ್ರೈವ್‌ನಲ್ಲಿ ಕಾರಿನಲ್ಲಿ ಹೋಗುತ್ತಿರುವವರು ಸಮುದ್ರದತ್ತ ನೋಡಲು ಹೆದರುತ್ತಿದ್ದಾರೆ. ಹತ್ತು ಅಡಿಗಳ ದೂರದಲ್ಲಿರುವವರೂ ಕಾಣಿಸದಷ್ಟು ಭಯಂಕರವಾತಾವರಣ. ಕೆಲವು ಅಲೆಗಳಂತೂ ರಸ್ತೆಯನ್ನು ದಾಟಿ ಅಲ್ಲಿಯ ಮನೆಗಳಲ್ಲಿ ಇಣುಕಿ ನೋಡಿ ಹಿಂದಿರುಗುತ್ತಿವೆ. ಆಕಾಶದಿಂದ ಬಿಳಿಯ ದಾರಗಳು ಇಳಿಬಿಟ್ಟಂತೆ ಒಂದೇ ಸಮನೆ ಮಳೆ ಸುರಿಯುತ್ತಿದೆ.

ಓಷನ್ ವ್ಯೂ ನರ್ಸಿಂಗ್ ಹೋಂ. ಮುಂಬಯಿಯ ಆಸ್ಪತ್ರೆಗಳಲ್ಲೆಲ್ಲಾ ದೊಡ್ಡ ಆಸ್ಪತ್ರೆ.

ಮೊದಲನೆಯ ಅಂತಸ್ತು.

ಮುಚ್ಚಿದ ಕಿಟಕಿ ಬಾಗಿಲುಗಳ ಮೂಲಕ ಒಳನುಗ್ಗುತ್ತಿರುವ ಹೊರಗಿನ ಭಯಾನಕ ವಾತಾವರಣ, ಒಳ ಪರಿಸ್ಥಿತಿಯನ್ನು ಮತ್ತಷ್ಟು ಭೀಕರಗೊಳಿಸಲು ಪ್ರಯತ್ನಿಸುತ್ತಿದೆ. ಗುಡುಗಿನ ಮೊರೆತ ಒಳಕ್ಕೂ ಕೇಳಿಸುತ್ತಿದೆ. ವಿದ್ಯುತ್ ಹೋಗಿ ಬಹಳ ಹೊತ್ತಾಗಿದೆ. ಜನರೇಟರ್ ಕೆಲಸ ಮಾಡುತ್ತಿದೆ.

ಭಾರತ ದೇಶದ ಅತ್ಯುತ್ತಮ ಗೈನಕಾಲಜಿಸ್ಟ್ ಡಾಕ್ಟರ್ (ಮಿಸೆಸ್) ಪರಾಂಜಪೆಯ ಮುಖ ಬೆವರಿನಿಂದಾವರಿಸಿದೆ. ಹಣೆಯ ಮೇಲಿನ ಬೆವರಿನ ಹನಿಗಳು ಮುತ್ತುಗಳಂತೆ ಮಿನುಗುತ್ತಿವೆ. ಸುಮಾರು ಅರ್ಧಗಂಟೆಯಿಂದ ಆಕೆ ತನ್ನ ಎಲ್ಲಾ ಶಕ್ತಿ-ಸಾಮರ್ಥ್ಯಗಳನ್ನು

ಉಪಯೋಗಿಸಿಯೂ ವಿಫಲಳಾಗುತ್ತಿದ್ದಾಳೆ. ಆಕೆಯ ಸಹಾಯ ಮಾಡುತ್ತಿದ್ದ ಇಬ್ಬರು ಡಾಕ್ಟರುಗಳೂ ದಿಗ್ಭ್ರಾಂತರಾಗಿ ನಿಂತಿದ್ದಾರೆ, ಸಹಾಯಕರೆಂದರೆ ಅವರೇನೂ ಸಾಮಾನ್ಯ ವೈದ್ಯರಲ್ಲ. ಇಬ್ಬರೂ ಪ್ರಸಿದ್ಧಿ ಪಡೆದಿರುವವರೇ. ಅವರ ಕನ್ಸಲ್ಟೇಷನ್ ಫೀ ನಾಲ್ಕಂಕಿಗಳಲ್ಲಿರುತ್ತದೆ. ಅಂತಹ ಸುಪ್ರಸಿದ್ಧರಾದ ಮೂವರು ಡಾಕ್ಟರುಗಳನ್ನು ತನ್ನ ಪತ್ನಿಯ ಹೆರಿಗೆಗಾಗಿ ನಿಯೋಜಿಸಿರುವವನು ಸೇಠ್ ಸರೋಜ್‌ಕುಮಾರ್ ಅಗರ್‌ವಾಲ್. ತನ್ನ ಮನೆಯಲ್ಲಿ ಕುಳಿತು ಒಂದು ಇಂಟರ್‌ನ್ಯಾಷನಲ್ ಫೋನ್‌ಕಾಲ್‌ನ ನಿರೀಕ್ಷೆಯಲ್ಲಿ ಇದ್ದಾನೆ. ಅಮೇರಿಕದಿಂದ ಬರಲಿರುವ ಆ ಫೋನ್‌ಕಾಲಿನಲ್ಲಿ ಕಡಲೆಬೀಜದ ಬೆಲೆ ಒಂದು ಡಾಲರ್ ಕಡಿಮೆಯಾದರೂ ತನಗೆ ಉಂಟಾಗುವ ಕೋಟಿ ರೂಪಾಯಿಗಳ ನಷ್ಟವನ್ನು ಕುರಿತು ಚಿಂತಿಸುತ್ತಾ ಅರೆ ಹುಚ್ಚನಂತಾಗಿದ್ದಾನೆ.

ಆತನ ಸೆಕ್ರೆಟರಿ ಹತ್ತು ನಿಮಿಷಗಳಿಗೊಮ್ಮೆ ಬಂದು ಯಜಮಾನನ ವಾರಸುದಾರನ ಜನನ ಇನ್ನೂ ಆಗಲಿಲ್ಲವೆಂಬುದನ್ನು ತಿಳಿಸುತ್ತಲೇ ಇದ್ದಾನೆ. ಅದಕ್ಕಿಂತ ಹೆಚ್ಚಿನ ವಿವರವಾದ ಪ್ರಸನ ಕಷ್ಟಕರವಾಗಿದೆ, ಡಾಕ್ಟರುಗಳು ತಮ್ಮ ಶಕ್ತಿ ಮೀರಿ ಪ್ರಯತ್ನ ನಡೆಸಿದ್ದಾರೆಂಬ 'ಅನಾವಶ್ಯಕ' ವಿಷಯಗಳನ್ನು ಆತನಿಗೆ ತಿಳಿಸುತ್ತಿಲ್ಲ.

ಇಂತಹ ಅನವಶ್ಯಕ ಮಾಹಿತಿಯನ್ನು ಫಿಲ್ಟರ್ ಮಾಡುವುದು ತಾನೆ ಸೆಕ್ರೆಟರಿಯ ಕೆಲಸ? ಕಡಲೆ ಬೀಜದ ಬಗ್ಗೆಯಾದರೆ ಎಲ್ಲ ವಿವರ ಆತನಿಗೆ ತಿಳಿಯಲೇಬೇಕು!

ಡಾಕ್ಟರ್ ಪರಾಂಜಪೆ ಇಂಜಕ್ಷನ್ ಟ್ಯೂಬ್ ಕೈಗೆತ್ತಿಕೊಂಡಳು. ಇದನ್ನು ಬಳಸಬೇಕಾಗುವುದೆಂಬುದನ್ನು ಆಕೆ ಅರಿತಿದ್ದಳು. ಪಕ್ಕದಲ್ಲಿದ್ದ ಟಿ.ವಿ. ಸ್ಕ್ರೀನಿನ ಮೇಲೆ ಪೇಷೆಂಟ್‌ನ ಉದರದಲ್ಲಿರುವ ಶಿಶುವಿನ ಅಸ್ಥಿಪಂಜರದ ಎಕ್ಸರೇ ಸ್ಪಷ್ಟವಾಗಿ ಕಾಣಿಸುತ್ತಿದೆ. 'ಶಿಶು'- ಅಲ್ಲ 'ಶಿಶುಗಳು' ಎನ್ನಬೇಕೇನೋ? ಎರಡು ತಲೆಗಳು, ಎರಡು ಶರೀರಗಳು ಕಾಣುತ್ತಿವೆ. ಅವಳಿ ಮಕ್ಕಳು.

ಅದಕ್ಕಾಗಿಯೇ ಆ ಪ್ರಸವ ಕಷ್ಟವಾಗುತ್ತಿದೆಯೆಂಬುದೂ ಆಕೆಗೆ ಗೊತ್ತು. ಕೊನೆಯ ಪ್ರಯತ್ನವೆನ್ನುವಂತೆ ನಿಧಾನವಾಗಿ ಇಂಜಕ್ಷನ್ ಕೊಡಲಾರಂಭಿಸಿದಳು.

ಅಷ್ಟರಲ್ಲಿ ಪ್ರತಿಮಾ ಅಗರ್‌ವಾಲ್‌ಗೆ ಇದ್ದಕ್ಕಿದ್ದಂತೆಯೇ ನೋವು ಕಡಿಮೆಯಾಗಿ ಮುಖ ಶಾಂತವಾಯಿತು. ಆದರೆ ಇದೆಷ್ಟೂಟ ಅಪಾಯಕರ ಎಂಬುದನ್ನರಿತಿದ್ದ ಡಾಕ್ಟರ್ ಕೂಡಲೇ ಕಾರ್ಯೋನ್ಮುಖಳಾದಳು. ಎಷ್ಟೇ ಆಗಲಿ ಅನುಭವಸ್ಥ ವೈದ್ಯಳಲ್ಲವೇ?

ಗರ್ಭದಲ್ಲಿ ಶಿಶುವನ್ನು ಕುಷನ್ನಿನಂತೆ ರಕ್ಷಿಸುತ್ತಿದ್ದ ಚೀಲ ಒಡೆದು ನೀರು ಹೊರಕ್ಕೆ ಹರಿದು ಅದರೊಂದಿಗೆ ಶಿಶುವೂ ಗರ್ಭಕೋಶದಿಂದ ಹೊಟ್ಟೆಯ ಕಡೆಗೆ ಚಲಿಸಿತ್ತು. ಯಾವುದನ್ನು ಸಾಮಾನ್ಯರು ಬಳಕೆಯಲ್ಲಿ 'ಪಿಂಡ ಎದೆಗೇರುವುದು' ಎನ್ನುತ್ತಾರೋ,

ಅಂತಹ ವಿಷಮ ಪರಿಸ್ಥಿತಿಯಲ್ಲಿ ತಾಯಿ ಮಗುವಿನ ಉಳಿಕೆ ದೈವದ ಅಧೀನ ಎನ್ನುತ್ತಾರೋ ಅಂತಹ ವಿಷಮ ಪರಿಸ್ಥಿತಿ ಈಗ ಒದಗಿತ್ತು.

ಇಂತಹ ಅಪಾಯ ವೃದ್ಧಿಸುತ್ತಿದ್ದುದನ್ನು ಮಿಸೆಸ್ ಪರಾಂಜಪೆ ಕ್ಷಣಮಾತ್ರದಲ್ಲಿ ಗ್ರಹಿಸಿದ್ದಳು. ದೇಶದಲ್ಲೆಲ್ಲಾ ಅತ್ಯಾಧುನಿಕ, ಸುಸಜ್ಜಿತ ಆಸ್ಪತ್ರೆ, ಗೈನಕಾಲಜಿಯಲ್ಲಿ ಆಕೆಯನ್ನು ಮೀರಿಸುವವರಿಲ್ಲ.

ಮರುಕ್ಷಣವೇ ಪೇಷಂಟಿನ ಹೊಟ್ಟೆ ಸೀಳಲಾಯಿತು.

ಉಳಿದಿಬ್ಬರು ಡಾಕ್ಟರುಗಳೂ ಕಾರ್ಯತತ್ಪರರಾದರು. ಒಬ್ಬರು ತಾಯಿಯ ಗರ್ಭಕೋಶವನ್ನೇ ಕತ್ತರಿಸಿ ತೆಗೆದು ಆಕೆಯ ಪ್ರಾಣ ಉಳಿಸುವ ಕಾರ್ಯದಲ್ಲಿ ಮಗ್ನರಾಗಿದ್ದರೆ, ಮತ್ತೊಬ್ಬರು ರಕ್ತನಾಳಗಳನ್ನು ಬಂಧಿಸಿ ರಕ್ತಸ್ರಾವವನ್ನು ಹತೋಟಿಗೆ ತರುವ ಪ್ರಯತ್ನದಲ್ಲಿದ್ದರು.

ಡಾಕ್ಟರ್ ಪರಾಂಜಪೆ ಮಕ್ಕಳ ಯೋಗಕ್ಷೇಮದತ್ತ ಗಮನಹರಿಸಿದಳು. ಸೀಳಿದ ಹೊಟೆಯಿಂದ ಮಕ್ಕಳನ್ನು ಹೊರತೆಗೆಯಲುದ್ಯುಕ್ತಳಾದವಳು, ಷಾಕ್‌ಹೊಡೆದಂತೆ ಸ್ತಬ್ಧಳಾಗಿ ನಿಂತು, ಟಿ.ವಿ.ಯತ್ತ ಮತ್ತೊಮ್ಮೆ ದೃಷ್ಟಿಹರಿಸಿ, ಮಕ್ಕಳನ್ನು ದಿಟ್ಟಿಸಿದಳು. ವಿಜ್ಞಾನ ಇನ್ನೂ ಪೂರ್ಣವಾಗಿ ಅಭಿವೃದ್ಧಿ ಪಡೆದಿಲ್ಲ. ಸ್ಕ್ರೀನಿನ ಮೇಲೆ ಕೇವಲ ಅಸ್ಥಿಪಂಜರಗಳು ಮಾತ್ರವೇ ಅವಳಿ ಮಕ್ಕಳಂತೆ ಕಾಣುತ್ತವೆ.

ಆದರೆ ಹೊಟ್ಟೆಯಲ್ಲಿ ಎರಡು ಮಕ್ಕಳಿಲ್ಲ.

ಎರಡು ತಲೆಗಳು-ನಾಲ್ಕು ಕಾಲುಗಳು- ನಾಲ್ಕು ಕೈಗಳು- ಅಷ್ಟು ಅನುಭವಸ್ಥಳಾದರೂ ಕ್ಷಣಕಾಲ ಸ್ಥಂಭೀಭೂತಳಾಗಿ ನಿಂತಳು. ಮರಕ್ಷಣವೇ ಗ್ಲೌಸ್ ಧರಿಸಿದ ಕೈಗಳಿಂದ ಆ ವಿಚಿತ್ರ ಶಿಶುಗಳ ಶರೀರವನ್ನು ಹೊರತೆಗೆದಳು.

ಅವಳ ಮಕ್ಕಳಾದರೆ ಜೀವಿಸುತ್ತಾರೆ. ಎರಡು ಶರೀರಗಳೂ ಬೆಸೆದುಕೊಂಡು ಹುಟ್ಟಿದವರೂ ಬದುಕುವುದುಂಟು. ಆದರೆ ವಿಚಿತ್ರ ಆಕೃತಿಯ ಶಿಶುಗಳು ಮಾತ್ರ ಉಳಿಯುವುದು ಅಪರೂಪ. ಗರ್ಭದಿಂದ ಹೊರಬಿದ್ದ ಒಂದೆರಡು ಕ್ಷಣಗಳು ಉಸಿರಾಡಿದರೂ ನಂತರ ಕೆಲವೇ ಕ್ಷಣಗಳಲ್ಲಿ ಮರಣವನ್ನಪ್ಪುವುದು ಖಚಿತ.

ಇದನ್ನರಿತಿದ್ದ ಆಕೆ ಆ ಶಿಶುಗಳನ್ನು ಬದುಕಿಸಲು ಪ್ರಯತ್ನಿಸಲಿಲ್ಲ.

ಅವುಗಳ ಮುಖಗಳನ್ನು ತದೇಕದೃಷ್ಟಿಯಿಂದ ನೋಡುತ್ತಿದ್ದವಳು, ಇದ್ದಕ್ಕಿದ್ದಂತೆಯೇ ಬೆಚ್ಚಿದಳು.

ತನ್ನ ಅದುವರೆವಿಗಿನ ಜೀವನದಲ್ಲೆಂದೂ ಆಕೆ ಅಷ್ಟು ಬೆದರಿರಲಿಲ್ಲ. ಕಾರಣ ಎರಡು ಜೋಡಿ ಕಣ್ಣುಗಳೂ ತನ್ನನ್ನೇ ಪರೀಕ್ಷಕ ದೃಷ್ಟಿಯಿಂದ ದಿಟ್ಟಿಸುತ್ತಿವೆ. ಎರಡು ಮುಖಗಳೂ ಆಕೆಯ ಹೃದಯದಾಳವನ್ನು ಅರಿಯುವಂತೆ ನಿಶ್ಚಲವಾಗಿ ಕಾಣುತ್ತಿವೆ. ಸಾಮಾನ್ಯವಾಗಿ ಆಗತಾನೇ ಹುಟ್ಟಿದ ಮಕ್ಕಳು ಕಣ್ಣು ತೆರೆಯುವುದು ಅಪರೂಪ

ಆದರೆ ಈ ವಿಚಿತ್ರ ಶಿಶುಗಳ ಈ ನೋಟ!

ಇದು ತನ್ನ ಭ್ರಮೆಯೇನೋ ಎಂಬ ಅನುಮಾನದಿಂದ ತಲೆ ಕೊಡವಿಕೊಂಡು, ಕೈ ಚಿವುಟಿಕೊಂಡು ನೋಡಿದಳು. ಅವಳ ಅವಸ್ಥೆಯನ್ನು ನೋಡಿಅಪಹಾಸ್ಯ ಮಾಡುತ್ತಿರುವಂತೆ ಎರಡರಲ್ಲಿ ಒಂದು ಮುಖ ಕಿರುನಗೆ ಬೀರಿತು. ಎರಡನೆಯ ಮುಖ ಮಾತ್ರ ಆಕೆಯ ಅಂತರಾಳವನ್ನು ಪರಿಶಿಲಿಸುವಂತೆ ನೆಟ್ಟ ದೃಷ್ಟಿಯಿಂದ ನೋಡುತ್ತಲೇ ಇತ್ತು. ಮೊದಲ ಮುಖದ ಮಂದಹಾಸ ಹೆಚ್ಚು ನಿಖರವಾಯಿತು.

ಆಕೆಗೆ ಕಿಟಾರನೆ ಕಿರುಚಬೇಕೆನಿಸಿತು. ಭಯದಿಂದ ಅದೂ ಸಾಧ್ಯವಾಗಲಿಲ್ಲ. ಒಂದು ಬಗೆಯ ಭೀತಿ ನಿಶ್ಚೇಷ್ಟಿತಳನ್ನಾಗಿಸಿತ್ತು. ತನ್ನ ಮೂವತ್ತುವರ್ಷಗಳ ವೈದ್ಯಕೀಯ ವೃತ್ತಿಯ ಅನುಭವದಲ್ಲಾಗಲಿ, ಅರವತ್ತು ವರ್ಷಗಳ ಜೀವನದಲ್ಲಾಗಲಿ ಆಕೆ ಎಂದೂ ಭಯದಿಂದ ಇಷ್ಟು ವಿಹ್ವಲಳಾಗಿರಲಿಲ್ಲ. ಮತ್ತೊಂದು ಘಳಿಗೆ ಹಾಗೆಯೇ ನಿಂತಿದ್ದರೆ ಏನಾಗುತ್ತಿತ್ತೋ ಏನೋ?! ಅಷ್ಟರಲ್ಲಿ ಆ ಎರಡು ತಲೆಗಳೂ ಪಕ್ಕಕ್ಕೆ ವಾಲಿದವು. ಶಿಶುವಿನ ಪ್ರಾಣಪಕ್ಷಿ ಹಾರಿತು.

ಇದೆಲ್ಲಾ ಒಂದು ಕ್ಷಣದಲ್ಲಿ ನಡೆದ ಘಟನೆ. ಪಕ್ಕದಲ್ಲಿದ್ದ ಡಾಕ್ಟರುಗಳೂ ಸಹ ಗಮನಿಸಲಿಲ್ಲ. ಎಲ್ಲರೂ ತಾಯಿಯ ಪ್ರಾಣವುಳಿಸುವುದರಲ್ಲಿ ತಲ್ಲೀನರಾಗಿದ್ದರು.

ಹತ್ತು ನಿಮಿಷಗಳೊಳಗೆ ಆಪರೇಷನ್ ಪೂರ್ಣವಾಯಿತು.

ವಿಷಯವರಿತ ಸೆಕ್ರೆಟರಿ, ಅಗರ್‌ವಾಲ್ ಬಳಿ ಸಾರಿ, ತಾಯಿ ಆರೋಗ್ಯವಾಗಿರುವಳೆಂದೂ, ಮಗು ಮಾತ್ರ ದಕ್ಕಲಿಲ್ಲವೆಂದೂ ತಿಳಿಸಿದ. ಸರೋಜ್‌ಕುಮಾರ್ ಅಗರ್‌ವಾಲ್ ತನ್ನ ಪ್ರೀತಿಯ ಪತ್ನಿ ಬದುಕಿ ಉಳಿದುದಕ್ಕಾಗಿ ಸಂತೋಷಿಸಿದ. ಐದು ನಿಮಿಷಗಳ ಹಿಂದೆ ತನೆ ಕಡಲೆಬೀಜದ ಬೆಲೆ ಏರಲಿಲ್ಲ ಸ್ಥಿರವಾಗಿದೆಯೆಂದುದನ್ನರಿತ ಆತನಿಗೆ ಅದೇ ಹೆಚ್ಚು ಸಂತಸದ ಸುದ್ದಿಯಾಗಿತ್ತು.

ಡಾಕ್ಟರ್ ಪರಾಂಜಪೆ ತನ್ನ ಚೇಂಬರಿಗೆ ಬರುತ್ತಲೇ ಡಾಕ್ಟರ್ ಅನಿಲ್‌ಗೆ ಫೋನ್‌ಮಾಡಿದಳು. ಪ್ರತಿಮಾಳ ಟಿ.ಪಿ. ಟೆಸ್ಟ್ ಮಾಡುತ್ತಿದ್ದ ಅನಿಲ್ ಕೂಡಲೆ ಬಂದ.

''ಯಾವುದಾದರೂ ಫೋಟೋಗಳನ್ನು ತೆಗೆದಿರಿಸಿದ್ದೀಯಾ ಅನಿಲ್?''.

''ಯಾವುದು?''

''ಗರ್ಭದಲ್ಲಿ ಬೆಳೆಯುತ್ತಿದ್ದ ಶಿಶುಗಳ ಫೋಟೋ''

''ಇಲ್ಲವಲ್ಲ ಏಕೆ?''

''ನಿನ್ನ ರಿಪೋರ್ಟ್‌ನ ಪ್ರಕಾರ ಅವಳಿ ಮಕ್ಕಳಲ್ಲವೇ?''

''ಹೌದು ಡೆಲಿವರಿ ಆಗಲಿಲ್ಲವೇನು?''

''ಆಯಿತು ಅನಿಲ್ ಆದರೆ ಒಂದೇ ಶಿಶು. ಎರಡು ತಲೆಗಳು ನಾಲ್ಕು ಕಾಲುಗಳುಳ್ಳ ಶಿಶು''

''ಅಸಾಧ್ಯ! ಕಳೆದ ನಾಲ್ಕು ತಿಂಗಳುಗಳಿಂದ ಸ್ವತಃ ನಾನೇ ಟಿ.ವಿ. ಟೆಸ್ಟ್ ಮಾಡುತ್ತಿದ್ದೆ. ಆಕೆಯ ಗರ್ಭದಲ್ಲಿ ಅವಳಿ ಮಕ್ಕಳಿರುವುದನ್ನು ನಾನೇ ಟಿ.ವಿ. ಸ್ಕ್ರೀನಿನಲ್ಲಿ ನೋಡುತ್ತಿದ್ದೆ. ಒಂದು ಶಿಶು ತನ್ನ ಬೆರಳನ್ನು ಬಾಯಲ್ಲಿಟ್ಟು ಚೀಪುತ್ತಿದ್ದ ವಿಚಿತ್ರವನ್ನು ನನ್ನ ಕಲೀಗ್ಸ್‌ಗೆ ತೋರಿಸಿದ್ದೆ!''

''ಆದರೆ ನೀನು ನೋಡಿದ್ದು ಕೇವಲ ಸ್ಕೆಲಿಟನ್. ಶಿಶುವನ್ನು ಯಥಾವತ್ತಾಗಿ ತೋರುವ ಪರಿಕರಣಗಳು ನಮ್ಮ ದೇಶದಲ್ಲಿಲ್ಲ. ನಾಲ್ಕು ಕೈಗಳನ್ನು ನಿಡಿ ಅವಳಿ ಮಕ್ಕಳೆಂದುಕೊಂಡೆಯೋ ಏನೋ''

ಆತ ಕೂಡಲೆ ''ಇದೇನು ಹೇಳುತ್ತಿದ್ದೀರಿ? ಶರೀರವು ಒಂದೋ ಅಥವಾ ಎರಡೋ ಎಂಬುದನ್ನೂ ತಿಳಿದುಕೊಳ್ಳಲಾರದವನೇ ನಾನು?'' ಎಂದ ಸ್ವಲ್ಪ ಖಾರವಾಗಿ.

ಆಕೆ ಮಾತನಾಡಲಿಲ್ಲ. ತನ್ನ ಪ್ರಶ್ನೆಗಳಿಂದ ಏನೂ ಪ್ರಯೋಜನವಿಲ್ಲವೆಂಬುದನ್ನರಿತಳು. ಫೋಟೋ ತೆಗೆದಿದ್ದರೆ ಆಗ ಸ್ಪಷ್ಟವಾಗಿ ಎಲ್ಲಿ ತಪ್ಪಾಗಿದೆ ಎಂಬುದನ್ನು ಕಂಡುಹಿಡಿಯಬಹುದಿತ್ತು. ಈಗ ಲಾಭವಿಲ್ಲ. ತನ್ನ ಅನುಭವವನ್ನು ಅನಿಲ್‌ಗೆ ತಿಳಿಸೋಣವೆಂದುಕೊಂಡಳು ಕೂಡಲೆ, ತಾನು ಮತ್ತಷ್ಟು ಪರಿಹಾಸ್ಯಕ್ಕೀಡಾಗಬೇಕಾಗುವುದೆನಿಸಿತು. ಡಾಕ್ಟರ್ ಅನಿಲ್ ಯುವಕ. ಅನುಭವಸ್ಥನಾದ್ದರಿಂದ ರಿಪೋರ್ಟ್‌ನಲ್ಲಿ ಎಲ್ಲಿಯೋ ತಪ್ಪಿರಬಹುದು ಎಂದು ಊಹಿಸಬಹುದು. ಸಾವಿಗೆ ಮೊದಲು, ಪಿಂಡ ತನ್ನತ್ತ ಮಂದಹಾಸಬೀರಿತು ಎಂದರೆ ನಂಬುವುದುಂಟೆ? ಇತರರು ಈ ಮಾತು ಕೇಳಿ ತನಗೆ ಹುಚ್ಚು ಹಿಡಿದಿದೆ ಎಂದರೂ ವಿಚಿತ್ರವಲ್ಲ.

ತನ್ನ ಆಲೋಚನೆಗಳಿಗೆ ಕಡಿವಾಣ ಹಾಕಿ 'ಆಲ್‌ರೈಟ್' ಎಂದು ಅಲ್ಲಿಂದ ಹೊರ ನಡೆದಳು.

'ಒಷನ್ ವ್ಯೂ ನರ್ಸಿಂಗ್ ಹೋಂಗೆ' ಯಾವ ಕಾಲೇಜ್‌ಗಾಗಲಿ, ಇನ್ಸ್‌ಟಿಟ್ಯೂಟ್‌ಗಾಗಲಿ ಸೇರಿಲ್ಲ. ಆದ್ದರಿಂದ ವಿಚಿತ್ರ ಆಕೃತಿಯ ಆ ಶರೀರವನ್ನು ರಕ್ಷಿಸಿಡುವ ಕಾರ್ಯವೇನೂ ನಡೆಯಲಿಲ್ಲ. ಆಪರೇಷನ್ ಥಿಯೇಟರ್‌ನಿಂದ ಕಸ ಹೊರಹಾಕುವ ತೊಟ್ಟಿಯಲ್ಲಿ ಆ ಮಾಂಸಪಿಂಡವನ್ನು ಎಸೆಯಲಾಯಿತು. ಅಲ್ಲಿಂದ ಅದು ವರಾಂಡದ ಕೊನೆಯ ಕೋಣೆಯನ್ನು ತಲುಪಿತು. ಅಲ್ಲಿದ್ದ ಚರಂಡಿ ತೊಟ್ಟಿಯಲ್ಲಿ ಉಳಿದ ಕಸದೊಂದಿಗೆ ಅದನ್ನೂ ಬೇಸಿನ್‌ನಲ್ಲಿ ಹಾಕಿ ನೀರು ಬಿಟ್ಟರು. ನೀರು ಎರಡನೆಯ ಅಂತಸ್ತಿನಿಂದ ಪೈಪಿನ ಮೂಲಕ ಕೆಳಕ್ಕೆಹರಿದು ಒಳಚರಂಡಿಗೆ ಧುಮುಕಿತು. ಮಳೆಗಾಲ. ಭೋರೆಂದು ಸುರಿಯುತ್ತಿದ್ದ ಮಳೆ, ತುಂಬಿ ಹರಿಯುತ್ತಿದ್ದ ಚರಂಡಿಯ ನೀರಿನಲ್ಲಿ ಗಿರ್ರನೆ ತಿರುಗುತ್ತ ಆ ಪಿಂಡ ಬಳಿಯ ಸಮುದ್ರದ ನೀರಿನಲ್ಲಿ ಐಕ್ಯವಾಯಿತು.

ಆಗ ತಾನೇ ಮೇಲೇಳುತ್ತಿದ್ದ ಅಲೆ ಅದನ್ನು ತನ್ನೊಂದಿಗೆ ಇಪ್ಪತ್ತಡಿ ಎತ್ತರಕ್ಕೆತ್ತಿಕೊಂಡು ಹೋಗಿ ರಭಸದಿಂದ ಒಂದು ದೂರದ ಬಂಡೆಗೆ ಬಡಿದು ಮತ್ತೆ ಇತರ ಅಲೆಗಳೊಂದಿಗೆ ಸಮುದ್ರಕ್ಕೆ ಹಿಂದಿರುಗಿತು.

ಬೆಟ್ಟದ ಕಲ್ಲು ಬಂಡೆಗಳಿಗೆ ಬಡಿಯುವ ಒಂದು ಕ್ಷಣದ ಮುನ್ನ ಆ ಪಿಂಡದ ಕಣ್ಣುಗಳು ಮತ್ತೊಮ್ಮೆ ತೆರೆದುಕೊಂಡವೆ? ತನ್ನ ಸುತ್ತ ಆವರಿಸಿದ್ದ ಜಲರಾಶಿಯನ್ನೂ, ಲೈಟಿನ ಬೆಳಕಿನಲ್ಲಿ ಪ್ರಜ್ವಲಿಸುತ್ತಿದ್ದ ಆ ಮಹಾನಗರವನ್ನೂ ನೋಡಿ ಮತ್ತೆ ಆ ಮುಖದಲ್ಲಿ ಕಿರುನಗೆ ಹೊಮ್ಮಿತ್ತೋ ಏನೋ! ಎಲ್ಲ ಭ್ರಮೆ ಇರಬಹುದು. ಏನಾದರೇನು ಕ್ಷಣಮಾತ್ರದಲ್ಲಿ ಮತ್ತೆ ಆ ಮಾಂಸಖಂಡ ಕಲ್ಲು ಬಂಡೆಗಳಿಗೆ ಬಡಿದು ಛಿದ್ರ ಛಿದ್ರವಾಗಿ ಹೋಯಿತು.

ಅದೇ ಸಮಯಕ್ಕೆ ಸರಿಯಾಗಿ,

ಅದೇ ಅರಬ್ಬೀ ಸಮುದ್ರದ ದಕ್ಷಿಣ ತೀರದಲ್ಲಿ-

ಎರ್ನಾಕುಲಂಗೆ ಹತ್ತು ಕಿಲೋಮೀಟರ್ ದೂರದ ಒಂದು ಹಳ್ಳಿಯಲ್ಲಿ ಸಮುದ್ರದ ಮೇಲೇಳುವ ಅಲೆಗಳ ಸಪ್ಪಳ ಭಯಂಕರವಾಗಿ ಕೇಳಿಸುತ್ತಿದೆ. ಆ ತೀರದ ಒಂದು ಗುಡಿಸಲಿನಲ್ಲಿ ಒಬ್ಬ ಸೂಲಗಿತ್ತಿ ಗರ್ಭಿಣಿ ಸ್ತ್ರೀಯೊಬ್ಬಳ ಜೀವರಕ್ಷಿಸಲು ಹೋರಾಡುತ್ತಿದ್ದಾಳೆ. ಮಗುವಿನ ತಲೆ ಕಾಣಿಸುತ್ತಿದ್ದರೂ ದೊಡ್ಡ ನೋವು ಬರದೆ ಪ್ರಸವಕ್ಕೆ ತೊಂದರೆಯಾಗಿ ಸೂಲಗಿತ್ತಿ ಗಾಭರಿಯಾಗಿದ್ದಾಳೆ. ಮಗು ಹೊರಗೆ ಬರಲು ಯೋನಿದ್ವಾರಕ್ಕೆ ಹರಳೆಣ್ಣೆ ಹಚ್ಚುತ್ತಾ ತಾಯಿಗೆ ಉಪದೇಶ ಮಾಡುತ್ತಿದ್ದಾಳೆ. ಪಕ್ಕದಲ್ಲಿ ಕುಳಿತ ಹೆಂಗಸರು ಕೇಳಿದರೆ ''ನಿಮ್ಮ ತಾತನ ಕಾಲದಿಂದ ಇಂತಹ ಹೆರಿಗೆಗಳನ್ನು, ಹೀಗೇ ಅದೆಷ್ಟು ಮಾಡಿಲ್ಲ. ಈಗ ನನಗೆ ಕಲಿಸಿಕೊಡಲು ಬರ್ತೀರಾ?'' ಎಂದು ಗದರಿಸುತ್ತಾಳೆ. ಗರ್ಭಿಣಿಯ ಹೊಟ್ಟೆಯನ್ನು ಒತ್ತುತ್ತಾ ಆಕೆಯನ್ನು ಮೃತ್ಯುವಿನ ಸಮೀಪಕ್ಕೆ ಕರೆದೊಯ್ಯುತ್ತಿದ್ದಾಳೆ.

ಗರ್ಭಿಣಿ ಸ್ತ್ರೀಗೆ ಪ್ರಜ್ಞೆ ಬಂದಿತು. ತನಗಿನ್ನು ಮರಣವೇ ಗತಿ ಎಂಬುದನ್ನು ಗ್ರಹಿಸಿದಳು. ಆಕೆ ಒಬ್ಬ ಕೂಲಿ ಹೆಂಗಸು. ಸಾಯುವ ಮುನ್ನ ತನಗೆ ತಿಳಿದಿರುವ ರಹಸ್ಯವನ್ನು ಈ ಪ್ರಪಂಚಕ್ಕೆ ತಿಳಿಸಿಬಿಡಬೇಕೆಂದು ಚಡಪಡಿಸಿದಳು. ಆ ಭಯಂಕರ ಸತ್ಯ ಆಕೆಯ ಬಾಯಿಂದ ಹೊರಬಿದ್ದಿದ್ದರೆ ಏನಾಗುತ್ತಿತ್ತೋ ಏನೋ. ಆದರೆ ಆ ವಿಷಯ ಹೊರಬೀಳುವುದು ತನಗೆ ಇಷ್ಟವಿಲ್ಲವೆಂಬಂತೆ ಒಬ್ಬ ಪೈಶಾಚಿಕ ಗಣಾಧಿಪತಿ ಮೊಣಕಾಲೂರಿ ಕುಳಿತು ದೀಪವನ್ನು 'ಉಫ್' ಎಂದು ಊದಿ ಆರಿಸಿದಂತೆ ಗರ್ಭಿಣಿ ಸ್ತ್ರೀಯ ಪಕ್ಕದಲ್ಲಿ ಉರಿಯುತ್ತಿದ್ದ ದೀಪ ಆರಿಹೋಯಿತು; ಆಕೆಯ ಪ್ರಾಣಪಕ್ಷಿಯೂ ಹಾರಿಹೋಯಿತು. ಅದೇ ಕ್ಷಣ ಆ ಕತ್ತಲಿನಲ್ಲಿ... ಆ ಕೂಲಿ ಹೆಂಗಸಿನ ಅತ್ತೆ ಮತ್ತೊಂದು ದೀಪವನ್ನು ತರುವದರೊಳಗೆ ಸೂಲಗಿತ್ತಿ ಆ ಮಾಯಾ ಪಿಂಡವನ್ನು ಹೊರಗೆಳೆದು

ಹಾಕಿದಳು. ದೀಪದ ಬೆಳಕಿನಲ್ಲಿ ಮಗು ನಿಶ್ಚಲವಾಗಿರುವುದನ್ನು ಗಮನಿಸಿದಳು. ತನ್ನ ಅನುಮಾನವನ್ನು ಖಚಿತಪಡಿಸಿಕೊಳ್ಳಲೆಂದು ಮಗುವಿನತ್ತ ಪರೀಕ್ಷಕ ದೃಷ್ಟಿ ಹರಿಸಿದವಳು ಕಿಟ್ಟನೆ ಕಿರುಚಿಕೊಂಡಳು. ಕಾರಣ ಮಗುವಿನ ಹಣೆಯಲ್ಲಿ ಮಾತ್ರ ಒಂದೇ ಒಂದು ಕಣ್ಣು. ಮೂಗಿಲ್ಲ, ಬಾಯಿಯ ಸ್ಥಾನದಲ್ಲಿ ಒಂದು ಸಣ್ಣ ರಂಧ್ರವಿತ್ತು. ನೆಲಕ್ಕೆ ಬೀಳುತ್ತಿದ್ದಂತೆ ಆ ಶಿಶು ಮರಣವನ್ನಪ್ಪಿತು.

ಮುಂಬಯಿಯಂತಹ ಹಿರಿಯ ನಗರವಲ್ಲದ ಕಾರಣ ಆ ವಾರ್ತೆ ಕಾಳ್ಗಿಚ್ಚಿನಂತೆ ಆ ಗ್ರಾಮದಲ್ಲೆಲ್ಲ ಹಬ್ಬಿತು. ಜನರು ತಂಡೋಪತಂಡವಾಗಿ ಆಗಮಿಸಿ ಅಚ್ಚರಿಯಿಂದ ಆ ಮಗುವನ್ನು ವೀಕ್ಷಿಸಿದರು.

ಸಂಜೆಯ ವೇಳೆಗೆ ಆ ವಿಶೇಷ ಸುದ್ದಿ ತಣ್ಣಗಾಯಿತು. ನಂತರ ತಾಯಿ, ಮಗುವಿನ ಅಂತ್ಯಕ್ರಿಯೆಗಳನ್ನು ನೆರವೇರಿಸಿದರು.

ಅಂದು ಅರ್ಧರಾತ್ರಿಯ ವೇಳೆಗೆ ಕುರುಬರಂತಿದ್ದ ಇಬ್ಬರು ವ್ಯಕ್ತಿಗಳು ಆ ಮಗುವಿನ ಹೆಣವನ್ನು ಹೊರತೆಗೆದು ಪರೀಕ್ಷಿಸಿ ತೃಪ್ತಿಯ ನಗೆಬೀರಿ ಮತ್ತೆ ಯಥಾರೀತಿ ಅಲ್ಲೇ ಹೂತು ನಡೆದರು. ಕಪ್ಪು ಕಂಬಳಿಗಳನ್ನು ಹೊದ್ದಿದ್ದ ಅವರು ಕತ್ತಲ ಗರ್ಭದಲ್ಲಿ ಅಂತರ್ಧಾನರಾದರು.

ಕೆಲವು ನಿಮಿಷಗಳ ನಂತರ ಅವರಿದ್ದ ಹೆಲಿಕಾಪ್ಟರ್ ಮುಂಬಯಿಯತ್ತ ಹಾರುತ್ತಿತ್ತು.

ದೇಶದ ಎರಡು ದಿಕ್ಕುಗಳಲ್ಲಿ ಘಟಿಸಿದ ಈ ಪ್ರಸವಗಳಿಗೂ ಸಂಬಂಧ ಕಲ್ಪಿಸಲಾಗದ ಪ್ರಪಂಚ ಗಾಢನಿದ್ರೆಯಲ್ಲಿ ಮುಳುಗಿತ್ತು.

## 2

ಗುಲಾಬಿ ಬಣ್ಣದ ಫಿಯೆಟ್ ಕಾರು ಪೋರ್ಟಿಕೋದಲ್ಲಿ ಬಂದು ನಿಂತಿತು. ಕೂಡಲೆ ಡ್ರೈವರ್ ಆತುರವಾಗಿ ಕೆಳಗಿಳಿದು ಹಿಂದಿನ ಬಾಗಿಲನ್ನು ತೆರೆದು ನಮ್ರತೆಯಿಂದ ಸ್ವಲ್ಪ ಬಾಗಿ ನಿಂತ.

ಗಂಭೀರವಾಗಿ ಕೇದಾರಗೌರಿ ಕೆಳಗಿಳಿದಳು.

ಆಕೆಯ ವಯಸ್ಸು ಇಪ್ಪತ್ತು ಇಪ್ಪತ್ತೆರಡಿರಬಹುದು. ಆ ವಯಸ್ಸಿನ ಅನೇಕ ಯುವತಿಯರಲ್ಲಿ ಇರಲಾರದ, ಕಂಡುಬರದ ಕರುಣೆ ಆಕೆಯ ಮುಖದಲ್ಲಿ ಕಾಣುತ್ತಿತ್ತು. ಆಗತಾನೇ ಮಳೆ ಸುರಿದು, ಬರಿದಾದ ತಿಳಿನೀಲಿಯಾಗಸದಂತಹ ಸ್ನಿಗ್ಧಮುಖ. ಯುವಕರು, ಅವರೆಷ್ಟೇ ತುಂಟರಿರಲಿ ಆಕೆಯನ್ನು ನೋಡಿದ ಕೂಡಲೆ 'ತಮಗೆ ಇಂತಹ ತಂಗಿಯೊಬ್ಬಳಿರಬಾರದೆ?' ಎಂದು ಕೊಂಡರೆ ಮಧ್ಯವಯಸ್ಸಿನ ದಂಪತಿಗಳಾದರೋ 'ಇಂತಹ ಹೆಣ್ಣು ತಮ್ಮ ಮಗಳಾಗಿದ್ದರೆ ಎಷ್ಟು ಚೆನ್ನಾಗಿರುತ್ತಿತ್ತು' ಎಂದುಕೊಳ್ಳುತ್ತಾರೆ. ಗಾಂಭೀರ್ಯಕ್ಕೂ, ಮನೋನೈರ್ಮಲ್ಯಕ್ಕೂ ಅಂತರವಿದೆ.

ಮೊದಲಿನದರಲ್ಲಿ ಅಹಂಭಾವವಿದ್ದರೆ ಎರಡನೆಯದಲ್ಲಿ ನಮ್ರತೆ ಇರುತ್ತದೆ.

ಕಾರಿನಿಂದ ಆ ಯುವತಿ ಒಂದು ಕಡೆಯಿಂದ ಕೆಳಗಿಳಿಯುತ್ತಿದ್ದರೆ ಮತ್ತೊಂದು ಕಡೆಯಿಂದ ರಾಕೇಶ್ ಕೆಳಗಿಳಿದ. ಆರು ಅಡಿ ಎತ್ತರ ಚೆಕ್ ಷರ್ಟ್. ಹಣೆಯ ಮೇಲೆ ಹಾರಾಡುವ ಮುಂಗುರುಳು. ಕಾರಿಂದಿಳಿದು ಆಕೆಯನ್ನು ಅನುಸರಿಸುತ್ತ.

''ಸಂಜೆಯ ಪ್ರೋಗ್ರಾಂ ಏನು ಮಾಡಿದೆ ಗೌರಿ?'' ಎಂದು ಪ್ರಶ್ನಿಸಿದ.

ಅವನ ಪಕ್ಕದಲ್ಲಿ ನಡೆಯುತ್ತಿದ್ದರೆ, ಆಕೆ ಅವನ ಭುಜಗಳ ಎತ್ತರಕ್ಕೇ ಇರುವದು. ಆದ್ದರಿಂದ ತಲೆ ಎತ್ತಿ ''ಹೇಳಿದೆನಲ್ಲ ರಾಕೇಶ್ 'ಅಗ್ರಿಕೊ'ಗೆ ಒಂದು ಲೇಖನ ಬರೆಯಬೇಕಾಗಿದೆ ಎಂದು'' ಎಂದಳು. ಇಷ್ಟು ಬೇಗ ಈ ಸಂಗತಿಯನ್ನು ಹೇಗೆ ಮರೆತೆ ಎಂದು ಮೂದಲಿಸುವಂತಿತ್ತು ಆಕೆಯ ಧ್ವನಿ.

''ಯಾವ ವಿಷಯ?''

''ಪ್ಲಾಂಟ್ ಜೆನೆಟಿಕ್ಸ್ ಬಗ್ಗೆ. ಮೊನ್ನೆ ನಮ್ಮ ಪ್ರೊಫೆಸರ್ ಹೇಳಿದ ಪುಸ್ತಕ ಓದಿದೆಯಾ?...ಸಾಯಿಲ್ ಫರ್ಟಿಲಿಟಿ ಅಂಡ್ ಫರ್ಟಿಲೈಜರ್ಸ್...''

ಓರೆಗಣ್ಣಿನಿಂದ ಆಕೆಯನ್ನು ನೋಡುತ್ತ ''ನೀನು ಏನೇ ಹೇಳು ಗೌರಿ, ನನಗೆ ಥಿಯರಿಯಲ್ಲಿ ಅಷ್ಟು ನಂಬಿಕೆ ಇಲ್ಲ'' ಎಂದ ಅವನು ತನ್ನ ಮಾತಿನ ಅಂತರಾರ್ಥವನ್ನು ಗ್ರಹಿಸಬಲ್ಲಳೆಂದೆಣಿಸಿ ನಗುತ್ತ ಆಕೆಯತ್ತ ನೋಡಿದ. ಕೂಡಲೆ ಆತನ ನಗು ಮಾಯವಾಗಿ ಗಾಂಭೀರ್ಯ ಆವರಿಸಿತು. ಆ ಮುಖದಲ್ಲಿ ಅಜ್ಞೆ ಇಲ್ಲ, ತಿರಸ್ಕಾರವಿಲ್ಲ, ಕೋಪವಿಲ್ಲ. ಮಾಮೂಲಾಗಿ ನೋಡಿದಳಷ್ಟೇ! ಪರಿಶುಭ್ರವಾದ ಆ ಮುಖವೇ ಅವನಲ್ಲಿ ಭೀತಿ ಮೂಡಿಸಿತ್ತು. ಆ ಮುಹವೇ, ಆ ಭೀತಿಯೇ ಅವನ ಪಾಲಿಗೆ ಕೋಟೆಯಾಗಿ ಅವಳಿಂದ ದೂರವಿರಿಸಿತ್ತು.

ರಾಕೇಶ್‌ನ ತಾಯಿ, ಗೌರಿಯ ತಂದೆಗೆ ದೂರದ ಸಂಬಂಧದಲ್ಲಿ ತಂಗಿಯಾಗಬೇಕು. ತಂದೆ-ತಾಯಿಯರನ್ನು ಕಳೆದುಕೊಂಡ ಆತ ತನ್ನ ಹದಿನಾರನೆಯ ವಯಸ್ಸಿನಲ್ಲಿ ಅವರ ಮನೆ ಸೇರಿದ್ದನು. ಆದರೆ ಆತನನ್ನು ನೋಡಿದವರೆಲ್ಲ ಅವನು ಆಗರ್ಭ ಶ್ರೀಮಂತರ ಮನೆಯವನೆಂದೇ ಭಾವಿಸುವಂತಿದ್ದ.

ಚಿಕ್ಕವಯಸ್ಸಿನಲ್ಲೇ ಹಣದ ಬೆಲೆಯನ್ನರಿತವನು. ಈಗ ಐಶ್ವರ್ಯ ಆತನನ್ನರಸಿ ಬಂದು ಸೇರಿದೆ. ಗೌರಿಯೊಂದಿಗೆ ಆತನ ವಿವಾಹ ನೆರವೇರಿದ ಮರುಕ್ಷಣದಿಂದ ಅವಳ ಐಶ್ವರ್ಯವೆಲ್ಲ ಅವನದಾಗುತ್ತದೆ. ಆದ್ದರಿಂದಲೇ ಆಕೆಯನ್ನು ತನ್ನ ಪ್ರಾಣಸಮಾನ ಕಾಣುತ್ತಾನೆ.

ಇಬ್ಬರೂ ಅಗ್ರಿಕಲ್ಚರಲ್ ಯೂನಿವರ್ಸಿಟಿಯ ನಾಲ್ಕನೆಯ ವರ್ಷದ ವಿದ್ಯಾರ್ಥಿಗಳು.

ಕೆಲವು ವಿದ್ಯಾರ್ಥಿ-ವಿದ್ಯಾರ್ಥಿನಿಯರು ಎಂ.ಬಿ.ಬಿ.ಎಸ್.ನಲ್ಲಿ ಸೀಟು

ದೊರಕದಿದ್ದರೆ ಬಿ.ಎಸ್ಸಿಗೆ ಅಗ್ರಿಕಲ್ಚರ್‌ಗೆ ಸೇರುತ್ತಾರೆ. ಆದರೆ ಆಕೆ ಹಾಗಲ್ಲ. ಮೊದಲಿನಿಂದಲೂ ಆ ಕೋರ್ಸ್ ಎಂದರೆ ಬಹಳ ಇಷ್ಟ. ಗಿಡ, ಬಳ್ಳಿ, ಹೂವುಗಳೆಂದರೆ ಪಂಚಪ್ರಾಣ. ಅವು ತನ್ನ ಆತ್ಮೀಯ ಮಿತ್ರರೆಂಬ ಭಾವನೆ ಅವಳಿಗೆ. ಅವನ ಭವನ ನಾಲ್ಕು ಎಕರೆ ಜಮೀನಿನ ಮಧ್ಯೆ ಇದೆ. ಭವನ. ಸುತ್ತಲಿರುವ ಪ್ರತಿಯೊಂದು ಗಿಡ, ಬಳ್ಳಿ, ಮರ, ಹೂವುಗಳ ಪರಿಚಯ ತೋಟದ ಖಾಲಿಗಿಂತಲೂ ಆಕೆಗೆ ಚೆನ್ನಾಗಿದೆ. ಗುಲಾಬಿಯಿಂದ ಹಿಡಿದು ವಾಲಾನ್ ತಸ್‌ಅನ್ಲೂಸ್‌ವರೆಗೆ.

ಪ್ಲಾಂಟ್ ಫಿಜಿಯಾಲಜಿ ಆಕೆಯ ಪ್ರಿಯ ವಿಷಯ, ಎಂಟಮಾಲಜಿ ಅಂದರೂ ಅಷ್ಟೇ ಪ್ರೀತಿ. ಆಕೆಗೆ ಸ್ವಲ್ಪ ಕಷ್ಟವೆನಿಸುತ್ತಿದ್ದುದು ಪೆಥಾಲಜಿ ಮಾತ್ರ. ಆದರೆ ಅದನ್ನು ಸುಲಭಗೊಳಿಸಿಕೊಳ್ಳಲು ಸಾಧ್ಯವಾದಷ್ಟು ಪ್ರಯತ್ನಿಸುತ್ತಿದ್ದಳು. ರಾತ್ರಿ ಬಾಲ್ಕನಿಯಲ್ಲಿ ಆರಾಮ ಕುರ್ಚಿಯಲ್ಲಿ ಕುಳಿತು ಲೈಟಿನ ಬೆಳಕಿನಲ್ಲಿ ಓದುತ್ತ ಮೈಮರೆತಿರುವಾಗ ಮಧ್ಯೆ ಒಮ್ಮೆ ಗಿಡಗಳತ್ತ ದೃಷ್ಟಿಹರಿಸಿದರೆ ಅವೆಲ್ಲಾ ತನ್ನನ್ನೇ ದಿಟ್ಟಿಸುತ್ತಿರುವವೆಂಬ ಭಾವನೆ ಅವಳಲ್ಲಿ ಮೂಡುತ್ತಿತ್ತು.

ಆಕೆಯೇನೂ ಅಂತಹ ಬ್ರಿಲಿಯೆಂಟ್ ಸ್ಟೂಡೆಂಟ್ ಅಲ್ಲ. ಆದರೂ ತಾನು ಆರಿಸಿಕೊಂಡ ವಿಷಯದ ಬಗ್ಗೆ ಆಸ್ಥೆ, ಶ್ರದ್ಧೆ ಹೆಚ್ಚಿಸಿಕೊಂಡು ಅಕ್ಕರೆಯಿಂದ ಓದುವ ಆಕೆಯಂಥವರು ತೀರ ವಿರಳ. ಮನುಷ್ಯರಿಗಿಂತ ಹೆಚ್ಚಿನ ಆಸಕ್ತಿಯನ್ನು ಗಿಡಬಳ್ಳಿಗಳಲ್ಲಿ ತೋರಲು ಕಾರಣ ಅವು ಹುಚ್ಚು ಹಿಡಿದಂತೆ ವರ್ತಿಸುವುದಿಲ್ಲ. ಕೂಗಾಟ, ಚೀರಾಟಗಳಿರುವುದಿಲ್ಲ. ನರ್ತಿಸುವುದಿಲ್ಲ. ಓಡಿಹೋಗುವುದಿಲ್ಲ. ಆನಂದವಾದರೆ ಶಾಂತವಾಗಿ ತಲೆದೂಗುತ್ತವೆ ಕೇದಾರಗೌರಿಯಂತೆ!

ಆಕೆಯ ತಂದೆಗೆ ಮಗಳನ್ನು ಕಂಡರೆ ಬಹಳ ಮಮತೆ, ವಾತ್ಸಲ್ಯ. ಆತನ ಹೆಸರು ಶಂಕರಶಾಸ್ತ್ರಿ. ಹೆಸರು ಕೇಳಿ ಬ್ರಾಹ್ಮಣರೆಂದೆಣಿಸಬೇಕಿಲ್ಲ. ಆ ಊರಿನ ದೊಡ್ಡ ವಹಿವಾಟಿನ ಕುಳ. ಹೆಂಚುಗಳ ತಯಾರಿಕೆಯಲ್ಲಿ ತಿಂಗಳಿಗೆ ಕನಿಷ್ಠ ಒಂದು ಲಕ್ಷ ಸಂಪಾದನೆಯುಳ್ಳ ಗಣ್ಯ ವ್ಯಕ್ತಿ.

ಶಂಕರಶಾಸ್ತ್ರಿಯ ತಂದೆ ನಿರೀಶ್ವರವಾದಿ, ಕಮ್ಯುನಿಸ್ಟ್ ಬೆಜವಾಡದ ಅನೇಕ ಮಂದಿ ಕಮ್ಯುನಿಸ್ಟ್‌ಗಳಂತೆ ತಾನೂ ವ್ಯಾಪಾರ ಪ್ರಾರಂಭಿಸಿದ. ಜನ್ಮತಃ ತೇಜಸ್ಸಿನಿಂದ ಕೂಡಿದ ಮುಖವುಳ್ಳವನಾದ್ದರಿಂದ 'ಶಾಸ್ತ್ರಿ' ಎಂದೇಕೆ ತನ್ನ ಮಗನಿಗೆ ಹೆಸರಿಡಬಾರದೆಂದು 'ಶಂಕರಶಾಸ್ತ್ರಿ' ಎಂದೇ ನಾಮಕರಣ ಮಾಡಿದ.

ತಂದೆಯ ಮರಣಾನಂತರ ಅನೇಕ ಸಮಸ್ಯೆಗಳು ಪ್ರಾರಂಭವಾದವು. ಬಫೆಯಲ್ಲಿ ನಾನ್ ವೆಜಿಟೇರಿಯನ್‌ನತ್ತ ನಡೆದರೆ ''ಇದೇನ್ರೀ ಶಾಸ್ತ್ರಿಗಳೇ!'' ಎನ್ನುವರು ''ನೋಡಪ್ಪ ನೀನು ಲಕ್ಷಗಟ್ಟಲೆ ಸಂಪಾದಿಸಬಹುದು. ಇನ್ನೂ ಒಳ್ಳೇ ಪ್ರಾಯ. ನಮ್ಮಲ್ಲಿ ಒಂದು ಹೆಣ್ಣುಂಟು. ಅಂದಹಾಗೆ ನೀವು ವೈದಿಕರೋ? ನಿಯೋಗಿ ಬ್ರಾಹ್ಮಣರೋ?''

ಎಂದು ಗೋತ್ರ ಪ್ರವರಗಳನ್ನು ವಿಚಾರಿಸುತ್ತಿದ್ದದ್ದೂ ಉಂಟು. ಈ ತೊಂದರೆಗಳನ್ನು ಸಹಿಸಲಾರದೆ ಕೊನೆಗೆ ಭವಾನಿಶಂಕರನೆಂದು ಹೆಸರು ಬದಲಾಯಿಸಿಕೊಂಡಿದ್ದ ಆತ.

ಲಕ್ಷಾಧೀಶನಾಗಿದ್ದವನು ಕೋಟ್ಯಾಧೀಶನಾಗುತ್ತಿರುವಾಗ ಹೆಂಡತಿ ಅಸುನೀಗಿದ್ದಳು. ಅಂದಿನಿಂದ ತಮ್ಮ ಮಗ, ಮಗಳನ್ನು ಬೆಳೆಸುವದರಲ್ಲಿ ನಿರತನಾಗಿ ಮತ್ತೆ ವಿವಾಹದ ಸುದ್ದಿ ಎತ್ತಲಿಲ್ಲ. ಈ ಮಧ್ಯೆ ಕಾರಣಾಂತರಗಳಿಂದ ಮಗ ಮನೆಬಿಟ್ಟ ನಂತರ ರಾಕೇಶ್ ಮನೆಸೇರಿ ಸಂಖ್ಯೆಯನ್ನು ಸಮಗಟ್ಟಿದ್ದ.

ಕಾಲೇಜ್‌ನಿಂದ ಸಂಜೆ ಹಿಂದಿರುಗಿದ ಕೂಡಲೆ ಸ್ನಾನ ಮಾಡುವುದು ಗೌರಿಯ ಅಭ್ಯಾಸ. ಆದರೆ ಆ ದಿನ ನಿಯಮ ತಪ್ಪಿಸಿ ಮಲಗಿಬಿಟ್ಟಳು. ವಿಷಯ ಹೇಗೆ ತಲುಪಿತೋ ಏನೋ ಕ್ಷಣದಲ್ಲಿ ಭವಾನಿಶಂಕರ್ ಕಾರು ಮನೆ ಪೋರ್ಟಿಕೋದಲ್ಲಿ ಬಂದು ನಿಂತುಬಿಟ್ಟಿತು. ಆತ ಕಾರಿನಿಂದಿಳಿದು, ಆತುರದಿಂದ ಮಗಳ ಕೋಣೆಗೆ ನಡೆದ.

''ಮಗೂ, ಯಾಕಮ್ಮ ಹುಷಾರಿಲ್ಲವೇ?'' ಎಂದರು ಯೋಚನಾಕ್ರಾಂತರಾಗಿ.

ಆಕೆ ಆ ಪ್ರಶ್ನೆಗೆ ಉತ್ತರಿಸದೆ, ''ಅಪ್ಪಾ, ನೀವು ಎಷ್ಟು ಮಂದಿ ಗೂಢಚಾರರನ್ನು ನನ್ನ ಬೇಹುಗಾರಿಕೆಗೆ ಬಿಟ್ಟಿದ್ದೀರಿ?'' ಎಂದಳು ಗಂಭೀರವಾಗಿ.

ಭವಾನಿಶಂಕರ್ ಬೆದರಿ ''ಏನಮ್ಮಾ ನೀನು ಹೇಳುವುದು?'' ಎಂದ ಗಾಬರಿಯಿಂದ.

''ಈ ದಿನದ ದಿನಚರಿಯಲ್ಲಿ ಉಂಟಾದ ಸಣ್ಣ ಮಾರ್ಪಾಟು ನಿಮಗೆ ಇಷ್ಟು ಬೇಗ ತಿಳಿಯಿತೆಂದರೆ ನಾನು ಹಾಗೆಂದೇ ಊಹಿಸಬೇಕಲ್ಲವೆ?'' ಎಂದಳು ಗೌರಿ ನಗುತ್ತ.

ಹೆದರಿದ್ದ ತಂದೆಯ ಮುಖದಲ್ಲಿ ನಗೆ ತೇಲಿತು. ''ಓ ಹಾಗೋ!'' ಎನ್ನುತ್ತ ಜೋರಾಗಿ ನಗಲಾರಂಭಿಸಿದ.

ಆಕೆ ಆ ಮಾತುಗಳನ್ನು ತಮಾಷೆಯಾಗಿ ಅಂದಳೋ, ನಿಜವಾಗಿಯೇ ಹೇಳಿದಳೋ ಅಂತೂ ಆತನ ಮನುಷ್ಯರು ಆ ಮನೆಯಲ್ಲಿ - ಊರಿನಲ್ಲಿ, ರಾಷ್ಟ್ರದಲ್ಲೆಲ್ಲ ಬಹಳಷ್ಟು ಇದ್ದಾರೆ. ಗೂಢಚಾರಿಗಳೆಂಬ ದೊಡ್ಡ ಪದ ಅವರಿಗೆ ಬಳಸಬೇಕಿಲ್ಲ, ಆದರೆ ಆತನಿಗೆ ಸಂಬಂಧಿಸಿದ ಪ್ರತಿ ಸಣ್ಣ ವಿಷಯವನ್ನೂ ಆತನಿಗೆ ತಿಳಿಸುತ್ತಿರುತ್ತಾರೆ. ಕೋಟ್ಯಂತರ ರೂಪಾಯಿಗಳ ವ್ಯವಹಾರವುಳ್ಳ ಗಣ್ಯ ವ್ಯಕ್ತಿಗಳು ಅಷ್ಟೂ ಮಾಡದಿದ್ದರೆ ಅವರ ವ್ಯಾಪಾರದ ಗತಿ?

ಅಂತಹ ವ್ಯಕ್ತಿ ರಾಕೇಶನನ್ನು ಕುರಿತ ವಿಷಯದಿಂದ ಯೋಚನೆಗೊಳಗಾದರು. ಆದರೆ ವ್ಯಾಪಾರದಲ್ಲಿ ಚೆನ್ನಾಗಿ ಪಳಗಿದ್ದ ಕಾರಣ ಲಾಭ, ನಷ್ಟಗಳನ್ನು ಮುಖಭಾವದಲ್ಲಿ ತೋರ್ಪಡಿಸಿಕೊಳ್ಳದಂತೆಯೇ ಈ ವಿಷಉವನ್ನೂ ಹೃದಯದಲ್ಲಡಗಿಸಿಕೊಂಡರು.

ಮಗಳ ಪಕ್ಕದಲ್ಲಿ ಕುಳಿತು ''ನನ್ನ ಪ್ರಶ್ನೆಗೆ ಉತ್ತರ ಹೇಳಲೇ ಇಲ್ಲವಲ್ಲಮ್ಮಾ''

"ಯಾವ ವಿಷಯ ಡ್ಯಾಡಿ?"

"ಈ ದಿನ ನಿನ್ನ ಮನಸ್ಸು ಸರಿಯಿಲ್ಲ ಎನಿಸುತ್ತಿದೆ"

"ಅಬ್ಬ, ಏನೂ ಇಲ್ಲವಲ್ಲ!"

"ಈ ಪರೀಕ್ಷೆಗಳು ಮುಗಿದ ಕೂಡಲೆ ನಿಮ್ಮಿಬ್ಬರ ವಿವಾಹ ಮುಗಿಸಿ ಬಿಡೋಣವೆಂದಿದ್ದೇನೆ. ನಿನ್ನ ಅಭಿಪ್ರಾಯವೇನಮ್ಮ?"

ಅಸಂಬದ್ಧವೂ, ಅಪ್ರಸ್ತುತವೂ ಆದ ಆ ವಿಷಯವನ್ನು ತಾನೆಣಿಸಿರದ ರೀತಿಯಲ್ಲಿ ತನ್ನ ತಂದೆ ಹಠಾತ್ತಾಗಿ ಕೇಳಿದ ಕೂಡಲೆ ಗೌರಿಯ ಮುಖ ಬಿಳಿಚಿಕೊಂಡಿತು. ಆಘಾತಉಂಟು ಮಾಡುವ ಸುದ್ದಿ. ನಿಶ್ಚೇಷ್ಟಿತಳಾಗಿ ಸ್ವಲ್ಪ ಹೊತ್ತು ಕುಳಿತುಬಿಟ್ಟಳು. ಹೀಗಾಗಬಹುದೆಂಬುದನ್ನು ಊಹಿಸಿಯೇ ಆತನೂ ಬೇಕೆಂದೇ ಕೇಳಿದ್ದು. ಈ ಸಂದಿಗ್ಧ ಪರಿಸ್ಥಿತಿಯಲ್ಲಿ ಹಠಾತ್ತಾಗಿ ಪ್ರಶ್ನಿಸಿದ ಕೂಡಲೆ ಮನಸ್ಸಿನ ನಿಜವಾದ ಅಭಿಪ್ರಾಯ-ಸತ್ಯಾಂಶ-ಹೊರಬೀಳುವುದೆಂಬುದು ಆತನಿಗೆ ಅನುಭವ ಕಲಿಸಿದ ಪಾಠವಾಗಿತ್ತು.

"ಒಂದೇ ಮನೆಯಲ್ಲಿದ್ದುಕೊಂಡು ಇನ್ನೂ ತಡ ಮಾಡುವುದೇಕೆ? ಅದು ಅಷ್ಟು ಒಳ್ಳೆಯದಲ್ಲಮ್ಮ. ನಿಮ್ಮ ಮದುವೆ ಮುಗಿಸಿ ನಿನ್ನ ಮತ್ತು ನನ್ನ ವ್ಯಾಪಾರದ ಹೊಣೆಯನ್ನು ಆತನ ಹೆಗಲಿಗೇರಿಸಿಬಿಟ್ಟರೆ ಮುಗಿಯಿತು ನನ್ನ ಕರ್ತವ್ಯ" ಓರೆಗಣ್ಣಿನಿಂದ ಆಕೆಯ ಮುಖ ಭಾವಗಳನ್ನು ಗಮನಿಸುತ್ತಲೇ ಹೇಳಿದ ಭವಾನಿಶಂಕರ್.

ಆಕೆಯು ಸಂದಿಗ್ಧದಲ್ಲಿರುವಳೆಂಬುದನ್ನು ಮೌನವೇ ಸೂಚಿಸಿತು ಪ್ರತ್ಯುತ್ತರವಿರಲಿಲ್ಲ.

ಹತ್ತು ವರ್ಷಗಳಿಂದ ಜೊತೆಯಲ್ಲೇ ಬೆಳೆಯುತ್ತಿದ್ದಾರೆ, ಎಲ್ಲಾ ತೀರ್ಮಾನವಾಗಿದೆ. ರಾಕೇಶ್‌ನಲ್ಲಿಯೂ ಯಾವ ಲೋಪದೋಷಗಳೂ ಇಲ್ಲ. ಆದರೂ...ಆ...ದ...ರೂ...

ಪ್ರೀತಿಗೆ, ರೂಪು, ಯೌವನ, ವಿದ್ಯೆ ಮತ್ತಿತರ ಅರ್ಹತೆಗಳು ಇದ್ದರೆ ಮಾತ್ರ ಸಾಲದು. ಮತ್ತೇನೋ...ಅವಶ್ಯಕ...

ವಿಹ್ವಲಳಂತೆ ತಲೆ ಎತ್ತಿ "ಇನ್ನೂ ಆರು ತಿಂಗಳ ನಂತರದ ಮಾತು. ಈಗಲೇ ಯಾಕೆ ಆ ಸುದ್ದಿ?"

ಆತ ನೆಮ್ಮದಿಯ ನಿಟ್ಟುಸಿರಿಟ್ಟರು. ಆಕೆ ಏನಾದರೂ ಅಕಸ್ಮಾತ್ ತಲೆ ತಗ್ಗಿಸಿ "ನಿಮ್ಮ ಇಷ್ಟ" ಎಂದಿದ್ದರೆ ಆತನ ತಲೆ ಬಿಸಿ ಏರುತ್ತಿತ್ತು. ಅಂದರೆ ರಾಕೇಶನ ಮೇಲೆ ಗೌರಿಗೆ ಇನ್ನೂ "ಸ್ಪಷ್ಟವಾದ ಪ್ರೀತಿ" ಉಂಟಾಗಿಲ್ಲ ಎಂಬುದು ಆತನಿಗೆ ಸಂತಸವನ್ನೇ ಉಂಟುಮಾಡಿತು. ಇಂದು ತಾನು ರಾಕೇಶನ ಬಗ್ಗೆ ಕೇಳಿದ ವಿಷಯವನ್ನು ಆಮೂಲಾಗ್ರವಾಗಿ ಪರಿಶೀಲಿಸಿ, ವಿಚಾರಿಸಿ ಸತ್ಯವನ್ನರಿಯಲು ಆರು ತಿಂಗಳುಗಳ

ಕಾಲ ಸಾಕು ಎಂದು ತನ್ನಲ್ಲೇ ನಿರ್ಧಾರ ಮಾಡಿಕೊಂಡ.

''ಇಷ್ಟಕ್ಕೂ ನಾನು ಕೇಳಿದ ಪ್ರಶ್ನೆಗೆ ಉತ್ತರ ಹೇಳಲೇ ಇಲ್ಲವಲ್ಲಮ್ಮ?''

''ಯಾವ ಪ್ರಶ್ನೆ ಡ್ಯಾಡಿ?''

''ಈ ದಿನ ಬೆಳಿಗ್ಗೆಯಿಂದ ಒಂದು ರೀತಿ ಇರುವೆಯಲ್ಲಾ?''

''ಏನಿಲ್ಲ, ಆಗಲೇ ಹೇಳಿದೆನಲ್ಲಾ...''

''ನೋಡಮ್ಮಾ ಬಾಲ್ಯದಿಂದ ನಿನ್ನನ್ನು ಅತಿ ಮುದ್ದಿನಿಂದ ಸಾಕಿದ ಎಂಬುದನ್ನು ಒತ್ತಟ್ಟಿಗಿಡು. ಒಬ್ಬ ವಹಿವಾಟುದಾರನಾಗಿ ಎದುರಿನ ವ್ಯಕ್ತಿಯ ಮನಸ್ಸನ್ನು ಗ್ರಹಿಸುವುದು ನನಗೆ ಕರಗತವಾಗಿರುವ ಕಲೆ. ನಿನ್ನಲ್ಲಿ ಕೂದಲೆಳೆಯಷ್ಟು ವ್ಯತ್ಯಾಸ ಕಂಡುಬಂದರೂ ನಾನು ತಕ್ಷಣ ಕಂಡುಹಿಡಿಯಬಲ್ಲೆ. ಇಲ್ಲವೆನ್ನುವೆಯಾ?...ಹೇಳು...''

ಇನ್ನು ತಪ್ಪಿಸಿಕೊಳ್ಳಲಾಗದೆಂಬಂತೆ ''ಬಹಳ ಸಣ್ಣ ವಿಷಯ ಡ್ಯಾಡಿ...'' ಎಂದು ನಾಚಿ ತಲೆ ತಗ್ಗಿಸಿದಳು. ಆತ ಮಾತನಾಡದೆ ಮಗಳಿಗೆ ಮಾತನಾಡಲು ಅವಕಾಶ ಕೊಡುವವನಂತೆ ಮೌನವಹಿಸಿದ. ಆ ನಿಶ್ಶಬ್ದದಲ್ಲಿ ಗೌರಿಯ ಧ್ವನಿ ಸಣ್ಣಗೆ ಕೇಳಿಸಿತು.

''ರಾತ್ರಿ ನಾನೊಂದು ಕನಸು ಕಂಡೆ...ಪೂರ್ತಿ ಕೇಳಿದ ಮೇಲೆ ನಗಬಾರದು!...ಹೀಗೇ ಮಲಗಿದ್ದೆ. ಅರ್ಧರಾತ್ರಿಯಲ್ಲಿ ಆಕಾಶ ಮಾರ್ಗವಾಗಿ ಹೋಗುತ್ತ ಬಾಲ್ಕನಿ ಕಿಟಕಿಯಿಂದ ಪಾರ್ವತಿ ನನ್ನನ್ನು ನೋಡಿ ಶಂಕರನೊಂದಿಗೆ...ಹೋಗಿ ಡ್ಯಾಡಿ, ನಗ್ತಿದೀರ...''

''ಇಲ್ಲ...ಇಲ್ಲಮ್ಮಾ ಹೇಳು''

''...ಈ ಹೆಣ್ಣಿಗೆ ನನ್ನ ಹೆಸರನ್ನೇ ಇಟ್ಟಿದ್ದಾರೆ. ನೋಡಿದರೆ 'ಪಾಪ' ಎನಿಸುತ್ತದೆ. ಯಾವುದಾದರೂ 'ವರ' ಕೊಡೋಣವೇ ಸ್ವಾಮಿ! ಅಂದರು. ಸ್ವಾಮಿಯೂ 'ಆಗಲಿ' ಎನ್ನುತ್ತ ಇಬ್ಬರೂ ನನ್ನ ಬಳಿಗೆ ಬಂದರು. ನನ್ನನ್ನು ಎಚ್ಚರಿಸಿ 'ನಿನಗೇನು ಬೇಕೋ ಬೇಡಿಕೋ' ಎಂದರು. ನಾನು ಮೊದಲು ಚಕಿತಳಾದರೂ ನಂತರ ಚೇತರಿಸಿಕೊಂಡೆ'' ಎಂದು ನಗಲಾರಂಭಿಸಿದಳು. ಆಕೆಯ ಧ್ವನಿಯಲ್ಲೀಗ ಸ್ವಲ್ಪ ವ್ಯತ್ಯಾಸ ಕಂಡುಬಂತು. ಸ್ವಲ್ಪ ನೋವು ಆರ್ದ್ರತೆ ತುಂಬಿದ ಗದ್ಗದ ಕಂಠದಲ್ಲಿ ನುಡಿದಳು.

''ಆ ದೇವ ದೇವರ ಮುಂದೆ ಮೊಣಕಾಲೂರಿ ಕುಳಿತು ಕೈ ಜೋಡಿಸಿ ಭಕ್ತಿಯಿಂದ ಪ್ರಾರ್ಥಿಸಿದೆ. 'ಯಾವ ಜನ್ಮದ ಪುಣ್ಯವೋ ನನಗೆ ಅಲ್ಪಸ್ವಲ್ಪ ವಿದ್ಯೆ ಇದೆ. ಒಲವಿನಿಂದ ಕಾಣುವ ತಂದೆ ಇದ್ದಾರೆ. ಹಣದ ಸಮಸ್ಯೆ ಇಲ್ಲ. ನನ್ನ ಕಾಲುಗಳಿಗೆ ಹೊಳಪು ಕೊಡಿ ಸಾಕು! ಸಾಧ್ಯವಾದರೆ ಈ ಕಾಲಿಗೆ ಶಕ್ತಿನೀಡಿ. ಚೆನ್ನಾಗಿ ನಡೆಯುವಂತೆ ಅನುಗ್ರಹಿಸಿ ಅಷ್ಟೇ ಸಾಕು''

ತುಟಿ ಬಿಗಿದರೆ ದುಃಖವನ್ನು ತಡೆಯಬಹುದು. ಆದರೆ ಧಾರೆಯಾಗಿ ಸುರಿಯುವ ಕಣ್ಣೀರನ್ನು ತಡೆಯುವುದು ಸಾಧ್ಯವಾಗಲಿಲ್ಲ. ಅಷ್ಟು ದೊಡ್ಡ ವ್ಯವಹಾರದ ಕುಳ

ಹೃದಯಾಂತರಾಳವನ್ನು ಯಾರೋ ಇರಿದಂತೆ ದುಃಖ ಉಮ್ಮಳಿಸಿ ಬಂದುದನ್ನು ತಡೆಯುತ್ತ ಮಗಳ ಹೆಗಲ ಮೇಲೆ ಕೈ ಹಾಕಿ ''ದುಃಖಿಸಬೇಡಮ್ಮಾ'' ಎಂದು ಸಂತೈಸಿದರು.

ಕಣ್ಣೀರು ಸುರಿಸುತ್ತಲೇ ''ದುಃಖವೇ? ದುಃಖವೇಕೆ ಡ್ಯಾಡಿ'' ಎನ್ನುತ್ತ ಗೌರಿ ಕುರ್ಚಿಯ ಹಿಂದಕ್ಕೆ ಒರಗಿ ಬೋಗನ್‌ವಿಲ್ಲಾ ಗಿಡದತ್ತ ದೃಷ್ಟಿಹರಿಸುತ್ತ ''ನನಗೀ ರೀತಿಯ ಕನಸು ಬಂದಿತೆಂದರೆ ನನ್ನ ಸಬ್‌ಕಾನ್ಷಸ್ ಮೈಂಡ್‌ನಲ್ಲಿ ಎಲ್ಲಿಯೋ ನಾನು ಇದನ್ನು ಕುರಿತು ಆಲೋಚಿಸುತ್ತಿರುವೆನೆಂದರ್ಥ. ಯಾವ ಚಿಂತೆಯನ್ನು ದೂರಮಾಡಬೇಕೆಂದಿರುವೆನೋ ಅದು ನನ್ನನ್ನಗಲಿ ದೂರ ಹೋಗಿಲ್ಲವೆಂಬುದು ಖಚಿತವಾಯಿತು. ನನ್ನ ಚಿಂತೆ, ದುಃಖವೆಲ್ಲಾ ನನ್ನ ಅಂಗವಿಕಲತೆಯನ್ನು ಕುರಿತು ಅಲ್ಲವೇ ಡ್ಯಾಡಿ. ಈ ಆಲೋಚನೆ ಬಂದುದಕ್ಕೆ''

''ಆದರೆ...''

''ಸ್ವಲ್ಪ ಹೇತ್ತು ನಾನು ಒಂಟಿಯಾಗಿರಲು ಬಿಡಿ, ಪ್ಲೀಸ್''

ಏನೋ ಹೇಳಬೇಕೆಂದುಕೊಂಡವನು ಮತ್ತೆ ಮನಸ್ಸು ಬದಲಿಸಿಕೊಂಡವನಂತೆ ತಲೆದೂಗುತ್ತ ಅಲ್ಲಿಂದ ಕಾಲ್ತೆಗೆದ ಭವಾನೀಶಂಕರ್. ಗೌರಿ ಹಾಸಿಗೆಯಲ್ಲುರುಳಿದಳು.

ಎರಡು ನಿಮಿಷಗಳ ನಂತರ ಚೇತರಿಸಿಕೊಂಡವಳಂತೆ ಪಕ್ಕದ ಸ್ಟೂಲ್‌ಮೇಲಿದ್ದ ಪುಸ್ತಕವನ್ನು ಕೈಗೆತ್ತಿಕೊಂಡಳು. ಪುಸ್ತಕ ತೆರೆಯುತ್ತ ಆಕೆಯ ದೃಷ್ಟಿ ತನ್ನ ಕಾಲುಗಳತ್ತ ಹರಿಯಿತು. ಸೊಪ್ಪಿನಂತೆ ನೇತಾಡುತ್ತಿದ್ದ ಒಂದು ಕಾಲನ್ನು ಹಾಸಿಗೆಯ ಮೇಲೆ ಸರಿಯಾಗಿ ತೆಗೆದಿರಿಸಿಕೊಂಡಳು.

ಆಕೆಗೆ ಪೆಥಾಲಜಿ ಅಂದರೆ ಬಹಳ ಕಷ್ಟದ ಸಬ್ಜೆಕ್ಟ್! ರೋಗಗಳನ್ನು ಕುರಿತ ಶಾಸ್ತ್ರವದು. ಮನುಷ್ಯ ಆನಂದವಾಗಿರುವದು ಇಷ್ಟವಿಲ್ಲದೆ ಭಗವಂತ ಪೆಥಾಲಜಿ ಸೃಷ್ಟಿಸಿದಂತಿದೆ. ಅದೃಷ್ಟವೆಂದರೆ ಆಕೆಯ ಸಬ್ಜೆಕ್ಟ್ 'ಪ್ಲಾಂಟ್ ಪೆಥಾಲಜಿ'ಯಲ್ಲಿ ಸದ್ಯ ಪೋಲಿಯೋವನ್ನು ಕುರಿತ ಅಧ್ಯಾಯವಿಲ್ಲ.

## 3

ಹತ್ತು ಗಂಟೆ ರಾತ್ರಿ.

ಇಕ್ಕಟ್ಟಾದ ಚಿಕ್ಕ ಗಲ್ಲಿ. ಆರೇಳು ಅಡಿಗಳಿಗಿಂತ ಅಗಲವಿಲ್ಲ.

ದಾರಿಯ ಅಗಲಕ್ಕೂ ಸಿಮೆಂಟ್ ಕಲ್ಲುಗಳನ್ನು ಹಾಸಿದ್ದಾರೆ. ಸೈಕಲ್‌ಗಳು ಹೋಗಲು ಸಾಧ್ಯವಿಲ್ಲದಂತೆ ಪಕ್ಕದಲ್ಲಿ ಮೆಟ್ಟಿಲುಗಳು ಬೇರೆ. ಒಡೆದ ಚರಂಡಿಯಿಂದ ಹರಿವ ಕೊಚ್ಚೆ ನೀರು ದಾರಿಯ ಅರ್ಧ ಆಕ್ರಮಿಸಿದೆ.

ನಿಜ ಹೇಳಬೇಕೆಂದರೆ ಅದು ದಾರಿಯೇ ಅಲ್ಲ. ನಾಲ್ಕೈದು ಅಂತಸ್ತುಗಳುಳ್ಳ ಭವನಗಳು ಇಕ್ಕೆಲಗಳಲ್ಲೂ ಗಗನಚುಂಬಿಯಾಗಿ ನಿಂತಿವೆ. ಅವುಗಳ ಮಧ್ಯೆ ಇರುವ

ಸಂದಿ ಅದು. ಮನಂಷ್ಯ ಸಂಚಾರ ಬಹಳ ಕಡಿಮೆ. ಎತ್ತರವಾದ ಭವನಗಳಿರುವುದರಿಂದ ಬೆಳಕು ಹೆಚ್ಚು ಬರುತ್ತಿಲ್ಲ. ಯಾವಾಗಲೂ ಕತ್ತಲೆ ನಾಟ್ಯವಾಡುತ್ತಿದ್ದು, ಗಾಳಿಗೂ ಅಲ್ಲಿ ಪ್ರವೇಶಕ್ಕೆ ಅವಕಾಶವಿಲ್ಲ. ಆದ್ದರಿಂದ ಅಲ್ಲಿಯ ಗಾಳಿ ಒಂದು ತೆರನಾದ ಕಂಪನ್ನು ಮೆಎಗೂಡಿಸಿಕೊಂಡು ಕತ್ತಲೆಯೊಡನೆ ಸರಸವಾಡುತ್ತಿರುತ್ತದೆ.

ಅಂತಹ ದಾರಿಯಲ್ಲಿ ಇಬ್ಬರು ವ್ಯಕ್ತಿಗಳು ನಡೆಯುತ್ತಿದ್ದಾರೆ. ಒಬ್ಬ ಕುಳ್ಳಗೆ ದಪ್ಪಗೆ ಇದ್ದರೆ ಮತ್ತೊಬ್ಬ ಎತ್ತರವಾಗಿದ್ದಾನೆ. ಚಳಿ ಇಲ್ಲದಿದ್ದರೂ ಇಬ್ಬರೂ ಮುಖಗಳನ್ನು ಮಫ್ಲರಿನಿಂದ ಮುಚ್ಚಿದ್ದಾರೆ.

''ಪರೀಕ್ಷೆ ಕಷ್ಟವಾಗಿರುತ್ತೇನು?'' ಎತ್ತರದ ವ್ಯಕ್ತಿ ಪ್ರಶ್ನಿಸಿದ.

''ಅಷ್ಟೇನೂ ಕಷ್ಟವಲ್ಲ. ಆದರೆ ಮನಸ್ಸಿನಲ್ಲಿ ಕಲ್ಮಷವಿದ್ದರೆ ಮಾತ್ರ ಸಾವು ಖಂಡಿತ. ಅದು ಯಾರೇ ಆಗಬಹುದು, ಅಪಾಯ ನಂಬಿಕೆ ಮುಖ್ಯ. ಕೆಲವರು ದೇವರನ್ನು ನಂಬಿದರೆ ಇನ್ನು ಕೆಲವರು ದೆವ್ವಗಳಲ್ಲಿ ನಂಬಿಕೆ ಇರಿಸಿರುತ್ತಾರೆ. ಇದುವರೆಗೂ ಅವರು ರಾಜ್ಯವಾಳಿದರು. ಇನ್ನು ಮುಂದೆ ನಾವು ಆಳುವ ಕಾಲ ಸನ್ನಿಹಿತವಾಗುತ್ತಿದೆ''

''ಯಾವಾಗ?''

''ಹತ್ತಿರವಾಗುತ್ತಿದೆ ಎನ್ನುವುದು ಮಾತ್ರ ಗೊತ್ತು. ಆದರೆ ಯಾವಾಗ ಎಂಬುದು ಖಚಿತವಾಗಿ ಗೊತ್ತಿಲ್ಲ ಆ ಕಾಲ, ಯಾವಾಗ? ಹೇಗೆ ಬರುತ್ತದೆ ಎಂಬುದು ಒಬ್ಬರಿಗೆ ಮಾತ್ರ ಗೊತ್ತು...''

''ಯಾರಿಗೆ?...''

ಕುಳ್ಳ ವ್ಯಕ್ತಿಯ ಮುಖ ಇದ್ದಕ್ಕಿದ್ದಂತೆಯೇ ಕಳಾಹೀನವಾಯಿತು. ಆತನ ನೆನಪು ಬಂದ ಕೂಡಲೆ ಅವನ ಮುಖ ವಿವರ್ಣವಾಯಿತು. ಮೆಲ್ಲಗೆ ನುಡಿದ ''ಮಹಾದ್ರಷ್ಟರಿಗೆ''

''ಮಹಾದ್ರಷ್ಟ!!''

''ಹೌದು, ಆ ಹೆಸರನ್ನು ಕೇಳಿದ ಕೂಡಲೆ ಹಾಕು ಕುಡಿಯುವ ಮಕ್ಕಳೂ ರಕ್ತ ಕೇಳುತ್ತಾರೆ...ಆತನನ್ನು ಸಾಕ್ಷಾತ್ ಪರದೈವದಂತೆ ಆರಾಧಿಸುತ್ತಾರೆ...ಉಸ್ಸೋಕ್‌ನ (ಅಂಡರ್ ವರ್ಲ್ಡ್ ಸೊಸೈಟಿ ಆಫ್ ಸೀಕ್ರೆಟ್ ಅಕಲ್ಟ್) ಪ್ರೆಸಿಡೆಂಟ್; ನಮ್ಮ ನಾಯಕ, ಬಹುಬೇಗ ಈ ಜಗತ್ತಿನ ಚಕ್ರೇಶನಾಗಲಿರುವ ಏಕೈಕ ವ್ಯಕ್ತಿ...ಮಹಾದ್ರಷ್ಟ...''

''ಆತನನ್ನು ಭೇಟಿ ಮಾಡಲು ಸಾಧ್ಯವೇ?''

''ಆತನನ್ನೇ?!...'' ಎನ್ನುತ್ತ ಕುಳ್ಳ ಜೋರಾಗಿ ನಗಲಾರಂಭಿಸಿದ.

''ಆತನನ್ನು ಇದುವರೆಗೂ ಕಂಡಿರುವವರು ತೀರಾ ವಿರಳ. ಕೇವಲ ರೆಡ್ ಸ್ಕೆಲಿಟನ್ಸ್ ಮಾತ್ರ ಆತನನ್ನು ಕಾಣಲು ಅರ್ಹರು. ಆ ರೆಡ್ ಸ್ಕೆಲಿಟನ್‌ಗಳಾಗಬೇಕಾದರೆ ನಾವು ಬಹಳ ಮೆಟ್ಟಲುಗಳನ್ನೇರಬೇಕು''

''ಎಷ್ಟು ಕಾಲ ಬೇಕಾಗುತ್ತದೆ?''

''ನಿನ್ನನ್ನು ಆರು ತಿಂಗಳು ಪರೀಕ್ಷಿಸಿ ತೃಪ್ತಿಯಾದ ನಂತರವೇ ಇಲ್ಲಿಗೆ ಕರೆತಂದಿರುವುದು. ಈ ಸೊಸೈಟಿಯಲ್ಲಿ ನಿನ್ನನ್ನು ಸದಸ್ಯನನ್ನಾಗಿಸಿಕೊಂಡರೆ ಮೊದಲು ಬ್ಲೂ ಸ್ಕೆಲಿಟನ್ ಕೊಡಲಾಗುವುದು. ಹತ್ತು ಹದಿನೈದು ವರ್ಷಗಳ ಕಾಲ ಒಂದೇ ಸಮನೆ ಕೆಲಸ ಮಾಡಿ ನಂಬಿಕೆ ಮೂಡಿಸಿದರೆ ವೈಟ್ ಸ್ಕೆಲಿಟನ್ ಆಗಿ ಪ್ರಮೋಷನ್ ಕೊಡಲಾಗುವುದು. ನಂತರ ಯಲ್ಲೋ...ಆಮೇಲೆ ಬ್ಲ್ಯಾಕ್...ಇವುಗಳನ್ನು ಪಡೆಯಲು ಬಹಳ ಪ್ರಯತ್ನ ಪಡಬೇಕು. ಬ್ಲ್ಯಾಕ್‌ಸ್ಕೆಲಿಟನ್ ನಂತರ ಯಾವುದಾದರೂ ವಿಶಿಷ್ಟ ಸೇವೆ ಸಲ್ಲಿಸಬೇಕಾದ ಅದೃಷ್ಟ ನಮಗೆ ಒದಗಿಬಂದರೆ ಆಗ ಮಾತ್ರ ರೆಡ್ ಸ್ಕೆಲಿಟನ್ ಆಗುವ ಸುಯೋಗ ಆತನಿಗೆ ಮಾತ್ರವೇ ಮಹಾದ್ರಷ್ಟನನ್ನು ಕಾಣುವ ಪುಣ್ಯ ದೊರಕುವುದು ಅಷ್ಟು ಕಷ್ಟ!''

''ಇದೆಲ್ಲಾ ಕರಾಟೆಯಂತಿದೆಯಲ್ಲಾ''

''ಹೌದು ಎಳ್ಳಷ್ಟು ತಪ್ಪು ಹೆಜ್ಜೆ ಇರಿಸಿದರೂ ದೆವ್ವಗಳ ರಾಜ ಕರುಳು ಬಗೆದು ರಕ್ತ ಹೀರಿಬಿಡುತ್ತಾನಲ!''

ಇಷ್ಟೆಲ್ಲಾ ಸಂಭಾಷಣೆ ಮುಗಿಯುವುದರಲ್ಲಿ ಇಬ್ಬರೂ ಒಂದು ಪುರಾತನ ಭವನದ ಮುಂದೆ ಬಂದುನಿಂತರು. ಹತ್ತು ಅಡಿ ಎತ್ತರದ ಬಾಗಿಲುಗಳು, ಮಳೆ-ಗಾಳಿಗೆ ಸಿಕ್ಕಿ, ಬಿಸಿಲಿಗೆ ಒಣಗಿ ಒಡೆದುಹೋಗಿದ್ದವು. ಕುಳ್ಳ ವ್ಯಕ್ತಿ ಕಾಲಿಂಗ್ ಬೆಲ್ ಅದುಮಿದ. ಒಳಗೆ ಬೆಲ್‌ನ ಶಬ್ದ ಕೇಳಿಸಿದ ಮರುಕ್ಷಣದಲ್ಲೇ ಬಾಗಿಲು ತೆರೆದುಕೊಂಡಿತು.

ಒಳಗೆ ಹೆಜ್ಜೆ ಇಡುತ್ತ ''ನನಗೊಂದು ಅನುಮಾನ'' ಎಂದು ನಿಂತ.

''ಏನದು?''

''ಆರು ತಿಂಗಳು ನನ್ನನ್ನು ಪರೀಕ್ಷಿಸಿದೆ, ನಿಜ ಆದರೆ ಎಷ್ಟೋ ರಹಸ್ಯ ಮಯವಾದ ಈ ಸಿಕ್ರೇಟ್ ಸೊಸೈಟಿಯಲ್ಲಿ ಸೇರುವುದು ಇಷ್ಟು ಸುಲಭವಾಗಿರಬೇಕಾದರೆ ಈ ವೇಳೆಗೇ ಇದರಲ್ಲಿ ಯಾರಾದರೂ ಶತ್ರುಗಳು ಸೇರಿಕೊಂಡು ಸರ್ಕಾರಕ್ಕೆ ಇಲ್ಲಿಯ ರಹಸ್ಯಗಳನ್ನು ತಿಳಿಸಬಹುದಿತ್ತಲ್ಲ!''

ಕುಳ್ಳ ವ್ಯಕ್ತಿ ನಗುತ್ತ ''ಮನಸ್ಸಿನಲ್ಲಿ ಕಲ್ಮಷವುಳ್ಳವನಾದರೂ ಸುಳ್ಳು ಹೇಳಲಾರ. ಎಷ್ಟೇ ಅನುಭವ ಉಳ್ಳ ಗೂಢಚಾರಿಯಾಗಿರಲಿ ಕುಟ್ಟಿ ಸೈತಾನನ ಮುಂದೆ ತಲೆತಗ್ಗಿಸಲೇಬೇಕಾಗುತ್ತದೆ. ಸುಳ್ಳು ಹೇಳಿ ಇಲ್ಲಿಯ ತನಕ ಬಂದರೂ ಇಲ್ಲಿಂದ ಹೊರಬೀಳಲಾರ!''

'ಟಪ್' ಎಂಬ ಶದ್ದ ಕೇಳಿ ಎತ್ತರದ ವ್ಯಕ್ತಿ ಹಿಂದಿರುಗಿದ. ತೆರೆದ ಬಾಗಿಲು ತಾನಾಗಿ ಮುಚ್ಚಿಕೊಂಡಿತು.

'ಕೋ ಏನೋ ಆತನ ಮೈ ಬೆವರಿತು, ಸಾವಿರಾರು ಅದೃಶ್ಯ ಶರೀರಗಳು ತನ್ನ

ಸುತ್ತೂ ತಿರುಗುತಿತ್ತುವಂತೆ, ತನ್ನನ್ನು ರಹಸ್ಯವಾಗಿ ಪರಿಶೀಲಿಸುತ್ತಿರುವಂತೆ ಕಿವಿಯ ಪಕ್ಕದಲ್ಲಿ 'ಹೋ ಹೋ' ಎಂದು ಗಾಳಿ ಜೋರಾಗಿ ಬೀಸಿದಂತೆ, ಆ ತಣ್ಣನೆ ಗಾಳಿ ಶರೀರವನ್ನು ಸ್ಪರ್ಶಿಸಿ ತನ್ನ ಸುತ್ತೂ ತಿರುಗುತ್ತಿರುವಂತೆ ಭಾಸವಾಯಿತು. ಅಲ್ಲಿಂದ ಬಿಡಿಸಿಕೊಂಡು ಹೊರಗೆ ಓಡಬೇಕೆಂದು, ಏನನ್ನೋ ಗಟ್ಟಿಯಾಗಿ ಹೇಳಬೇಕೆಂದು ಬಾಯ್ತೆರೆದನು. ಆದರೆ ಧ್ವನಿ ಗಂಟಲಲ್ಲೇ ಅಡಗಿ ಹೋಯಿತು.

ಹೇಗಾದರೂ ಅಲ್ಲಿಂದ ಹೊರಟುಬಿಡಬೇಕೆಂದು ಚಡಪಡಿಸಿದ. ಬೆನ್ನೆಲುಬನ್ನು ಯಾರೋ ಕೈಯಲ್ಲಿ ಹಿಡಿದು ಪರೀಕ್ಷಿಸುತ್ತಿರುವಂತೆ, ನರಗಳೆಲ್ಲ ಕ್ಷೀಣವಾಗುತ್ತ ಹೋದಂತೆ ಒಂದು ರೀತಿಯ ಅನುಭವ.

ಭಯ ವಿಹ್ವಲನಾದ ಆತ ಓಡಲು ಹಿಂದಿರುಗಿದ. ಎಷ್ಟು ಪ್ರಯತ್ನಿಸಿದರೂ ಕಾಲುಗಳಲ್ಲಿ ಶಕ್ತಿ ಉಡುಗಿ ಹೋದಂತೆ ನಿಶ್ಚೇಷ್ಟಿತನಾಗಿ ಬೆದರುಗೊಂಬೆಯಂತೆ ನಿಂತ.

ಇದನ್ನೆಲ್ಲ ಗಮನಿಸಿದ ಕುಳ್ಳ ವ್ಯಕ್ತಿ ತನ್ನಷ್ಟಕ್ಕೆ ತಾನು ಹೇಳುತ್ತ ಹೋದ. ''ಈ ಕಾರಣಗಳಿಂದಲೇ ಈ ಸೀಕ್ರೆಟ ಇಷ್ಟು ದಿನಗಳಿಂದ ಇಷ್ಟು ಬಿಗಿಯಲ್ಲಿ ಇಷ್ಟು ರಹಸ್ಯವಾಗಿ ನಡೆದುಕೊಂಡು ಬರುತ್ತಿದೆ. ನೀನು ಅದೃಷ್ಟವಂತ. ಕೊನೆಘಳಿಗೆಯಲ್ಲಾದರೂ ನಮ್ಮೊಂದಿಗೆ ಸೇರಲು ಬರುತ್ತಿರುವಕ್ಷ ಉಳಿದ ಪ್ರಜೆಗಳೆಲ್ಲರೂ ನಮ್ಮ ಗುಲಾಮರಾಗಲಿರುವ ಸುಸಂದರ್ಭದಲ್ಲಿ...''

ಇಬ್ಬರೂ ವಿಶಾಲವಾದ ಹಾಲನ್ನು ಪ್ರವೇಶಿಸಿದರು.

ಅಲ್ಲೊಬ್ಬ ವೃದ್ಧ ಕುಳಿತಿದ್ದ. ಬಿಳಿಯ ಗಡ್ಡ, ಮೈ ನಡುಗುತ್ತಿದೆ.

''ಈತನೇ ಮಹಾದ್ರಷ್ಟ?'' ರಹಸ್ಯವಾಗಿ ಪ್ರಶ್ನಿಸಿದ ಎತ್ತರದ ವ್ಯಕ್ತಿ.

''ಚೆನ್ನಾಯ್ತು, ಆತ ಕೇವಲ ವೈಟ್ ಸ್ಕೆಲಿಟನ್ ಅಷ್ಟೆ''

''ನೀನು?''

''ನಾನೂ ನಿನ್ನಂತೆ ಬ್ಲೂ ಸ್ಕೆಲಿಟನ್, ಹತ್ತು ವರ್ಷಗಳಿಂದ ಹೀಗೆಯೇ ಇದ್ದೇನೆ''

ಎತ್ತರದ ವ್ಯಕ್ತಿ ಇದನ್ನು ಕುರಿತು ಆರು ತಿಂಗಳಿಂದ ಯೋಚಿಸುತ್ತಲೇ ಇದ್ದ. ಮೊದಲು ಸರಳವೆಂದುಕೊಂಡಿದ್ದ. ಅಷ್ಟು ಗಮನಕೊಡಲಿಲ್ಲ. ಆದರೆ ಮಿತ್ರನ ಒತ್ತಾಯಕ್ಕೆ ಮಣಿದು, ನಿಧಾನವಾಗಿ ಆತನ ಮಾತುಗಳಲ್ಲಿ ನಂಬಿಕೆ ಹುಟ್ಟಲಾರಂಭಿಸಿತು. ಈಗ ಸ್ವತಃ ಇಲ್ಲಿನ ವ್ಯವಹಾರ, ವಾತಾವರಣ, ವಿಷಯಗಳನ್ನು ತಿಳಿಯುತ್ತಿದ್ದಂತೆಲ್ಲ ತನ್ನ ನಂಬಿಕೆ ದೃಢಪಡುತ್ತಿದೆ.

''ವೈಟ್ ಸ್ಕೆಲಿಟನ್ ಆದ ನಂತರ ಈತ ಅದೆಷ್ಟೋ ಘಾತಕ ಕೃತ್ಯಗಳನ್ನೆಸಗಿದ. ಮಹಾದ್ರಷ್ಟನನ್ನು ತೃಪ್ತಿಪಡಿಸಲು ಎಷ್ಟೋ ದುಷ್ಟದೇವತೆಗಳಿಗೆ ಮಕ್ಕಳನ್ನೂ, ಕನ್ಯೆಯರನ್ನೂ ಬಲಿಕೊಟ್ಟ. ಇಷ್ಟಾದರೂ ಇನ್ನೂ ಯಲ್ಲೋ ಸ್ಕೆಲಿಟನ್ ಕೂಡ ಆಗಲಿಲ್ಲ. ಅದಕ್ಕಾಗಿ ನಾನಾ ರೀತಿ ಪ್ರಯತ್ನಿಸುತ್ತಿದ್ದಾನೆ. ಆದರೂ ಮಹಾದ್ರಷ್ಟನ ಅನುಗ್ರಹವಾಗಿಲ್ಲ''

ಎನ್ನುತ್ತ ಆತನ ಹತ್ತಿರ ಸರಿದು ''ಉಸ್ಲೋಕ್‌ನಲ್ಲಿ ಸೇರಿಸಲು ಒಬ್ಬನನ್ನು ಕರೆತಂದಿದ್ದೇನೆ'' ಎಂದ.

ವೃದ್ಧ ತಲೆ ಆಡಿಸಿದ.

ಕುಳ್ಳ ವ್ಯಕ್ತಿ ಆತನ ಕಿವಿಯಲ್ಲಿ ''ಉಸ್ಲೋಕ್ ನಿಬಂಧನೆಗಳನ್ನನುಸರಿಸಿ ಆರು ತಿಂಗಳಿಂದ ಪರೀಕ್ಷಿಸಿ ತೃಪ್ತಿಯಾದ ನಂತರವೇ ಇಲ್ಲಿಗೆ ಕರೆತಂದಿರುವುದು'' ಎಂದ.

ಮೂವರೂ ಪಕ್ಕದ ಕೋಣೆಗೆ ಹೋದರು.

ಆ ವೃದ್ಧ ಮೌನವಾಗಿದ್ದುದನ್ನು ಎತ್ತರದ ವ್ಯಕ್ತಿ ಗಮನಿಸಿದ. ಆತನ ಕಣ್ಣುಗಳಲ್ಲಿ ವಿಷಪೂರಿತ ತೇಜಸ್ಸನ್ನು ಕಂಡು ಆಚ್ಚರಿಯಿಂದ ಮುನ್ನಡೆದ. ಯಾವುದೊ ಒಂದು ವಿನೂತನ ಪ್ರಪಂಚವನ್ನು ಪ್ರವೇಶಿಸಿದಂಥ ಅನುಭವ. ಅಷ್ಟರಲ್ಲಿ ತನ್ನ ಕಣ್ಮುಂದಿನ ದೃಶ್ಯ ವಿಚಲಿತನನ್ನಾಗಿಸಿತು.

ಅಲ್ಲಿ ಆಳೆತ್ತರದ ದೊಡ್ಡ ಗೆಲಿಟನ್; ಆ ಕಡೆ, ಈ ಕಡೆ ಎರಡು ರಂಧ್ರಗಳು. ಮೇಲೆ ಗರಗಸದಂತೆ ಚೂಪಾದ ಹಲ್ಲುಗಳುಳ್ಳ ಬ್ಲೇಡ್. ಪ್ರಾಚೀನ ಯುರೋಪಿನಲ್ಲಿ ಮರಣದಂಡನೆಗೆ ಗುರಿಯಾದವರನ್ನು ಕೊಲ್ಲಲು ಉಪಯೋಗಿಸುತ್ತಿದ್ದುದು ಇಂತಹ ಪರಿಕರವನ್ನೇ!

ಇಬ್ಬರ ಕೈಗಳನ್ನೂ ಹಿಂದಕ್ಕೆ ಕಟ್ಟಲಾಯಿತು.

ಇಬ್ಬರು ಮೊಣಕಾಲೂರಿ ತಲೆಗಳನ್ನು ಗೆಲಿಟನ್‌ನ ನಡುವಿದ್ದ ರಂಧ್ರದಲ್ಲೂ, ಕೈಗಳನ್ನು ಸನಿಹದ ಎರಡು ರಂಧ್ರಗಳಲ್ಲೂ ಇರಿಸಿ ಕುಳಿತ ನಂತರ ಮೇಲಿನ ಭಾಗವನ್ನು ಬೋಲ್ಟ್‌ಗಳಿಂದ ಬಿಗಿಗೊಳಿಸಲಾಯಿತು. ಮೇಲಿದ್ದ ಬ್ಲೇಡಿನ ಹೊಳಪು ಕಣ್ಣುಗಳನ್ನು ಚುಚ್ಚುತ್ತಿದೆ. ಅದು ಕೆಳಗೆ ಬಿದ್ದರೆ ಇಬ್ಬರ ತಲೆಗಳೂ ಪುಟ ನೆಗೆದ ಚೆಂಡುಗಳಂತೆ ಕೆಳಗುರುಳುವುದು ಖಚಿತ!

''ಈಗ ನಿನ್ನನ್ನು ಪ್ರಶ್ನಿಸುತ್ತಾರೆ. ಸುಳ್ಳು ಹೇಳಬೇಕೆಂದುಕೊಂಡರೂ ಹೇಳಲಾರೆ. ಅಕಸ್ಮಾತ್ ನೀನು ಬೇರೆ ಉದ್ದೇಶದಿಂದ ಇಲ್ಲಿಗೆ ಬಂದಿದ್ದರೆ ಆ ಸಂಗತಿ ನಿನ್ನಿಂದ ಹೊರಬಿದ್ದ ಮರುಕ್ಷಣವೇ ಮೇಲಿನ ಬ್ಲೇಡು ಸರ್ರನೆ ಕೆಳಗಿಳಿಯುತ್ತದೆ. ನಿನ್ನನ್ನೂ, ಸರಿಯಾಗಿ ಪರೀಕ್ಷಿಸದೆ ಕರೆತಂದ ನನ್ನನ್ನೂ ಒಂದೇ ಬಾರಿಗೆ ಕೊಲ್ಲುತ್ತದೆ. ಹಾಗಾಗದು ಎಂದೆ ನನ್ನ ನಂಬಿಕೆ...ವಂದನೆಗಳು...'' ಎನ್ನುತ್ತ ಕುಳ್ಳ ವ್ಯಕ್ತಿ ಕಣ್ಣುಗಳನ್ನು ಮುಚ್ಚಿದ.

ಕೆಲ ಕ್ಷಣಗಳವರೆಗೆ ನಿಶ್ಯಬ್ದ ಆವರಿಸಿತು.

ಇದ್ದಕ್ಕಿದ್ದಂತೆ ಏನೋ ಶಬ್ದ. ದೂರದಲ್ಲೆಲ್ಲೋ ಎರಡು ಇಲಿಗಳು ಕಚ್ಚಾಡುತ್ತಿರುವಂಥ ಸದ್ದು. ಮೆಲ್ಲಮೆಲ್ಲನೆ ಅವರನ್ನು ಸಮೀಪಿಸಿತು. ಒಂದು ಕಂಬಿಯ ಮೇಲೆ ಒಂದೇ ಲಯದಲ್ಲಿ ಹೊಡೆಯುತ್ತಿರುವ ಸದ್ದು. ಎತ್ತರದ ವ್ಯಕ್ತಿ ತನ್ನನ್ನು ಹತೋಟಿಯಲ್ಲಿಟ್ಟುಕೊಳ್ಳಲು ಎಷ್ಟು ಪ್ರಯತ್ನಿಸಿದರೂ ವಿಫಲನಾದ ಸದ್ದು

ಕಡಿಮೆಯಾಗುತ್ತಿದ್ದಂತೆ ವೃದ್ಧನ ಮಾತು ಕೇಳಿಸಿತು.

''ಉಸ್ಲೋಕ್‌ನಲ್ಲಿ ಸೇರಲು ತವಕದಿಂದ ಬಂದಿರುವ ನಿನಗೆ ಸ್ವಾಗತ. ನಿನ್ನ ಬಯಕೆಗಳನ್ನೆಲ್ಲ ಕುಟ್ಟಸೆಎತಾನ್ ಪೂರ್ಣಗೊಳಿಸುತ್ತಾನೆ. ನಂಬಿಕೆ ಇರಲಿ, ಈಗ ನೀನು ಸುಳ್ಳು ಹೇಳದೆ, ಸತ್ಯವನ್ನೇ ಹೇಳುವೆ''

ಎತ್ತರದ ವ್ಯಕ್ತಿಗಕ್ಷ ಈ ಆಮತುಗಳೆಲ್ಲಾ ಕೇಳಿಸುತ್ತಿವೆ. ಆದರೆ ತನ್ನ ಬುದ್ಧಿ ತನ್ನ ಅಧೀನದಲ್ಲಿಲ್ಲ.

''ಮಿತ್ರ, ಇಂಥ ಕಷ್ಟಸಾಧ್ಯವಾದ ಕೆಲಸಕ್ಕೆ ಏಕೆ ಕೈ ಹಾಕಿದೆ ಹೇಳು? ನಮ್ಮಲ್ಲಿ ಸೇರಬೇಕೆಂಬ ಆತುರ ನಿನಗೇಕೆ?''

ಎತ್ತರದ ವ್ಯಕ್ತಿಯ ಅಂತರಾಳದಿಂದ ಮಾತುಗಳು ಹೊರಟವು.

''ನನಗೆ ಹಣವೆಂದರೆ ಪಂಚಪ್ರಾಣ. ಈ ಪ್ರಪಂಚದಲ್ಲಿ ಅನೇಕ ಭವನಗಳೂ, ಕಾರುಗಳೂ ನನ್ನ ಸ್ವಂತದ್ದಾಗಿರಬೇಕೆನ್ನುವ, ಸುಂದರ ಸ್ತ್ರೀಯರನ್ನು ಅನುಭವಿಸಬೇಕೆನ್ನುವ, ಎಲ್ಲಾ ಭೋಗಭಾಗ್ಯಗಳನ್ನೂ ಅನುಭವಿಸಬೇಕೆನ್ನುವ ಉತ್ಕಟೇಚ್ಛೆ ನನ್ನನ್ನು ಕೊಲ್ಲುತ್ತಿದೆ''

''ಸತ್ಯವನ್ನೇ ನುಡಿದಿರುವೆ. ಧನ್ಯವಾದಗಳು. ಮಿತ್ರನೆ...ನಿನ್ನಹೆಸರೇನು?''

ಆತನಿಗೆ ಸುಳ್ಳು ಹೇಳಬೇಕೆಂದೆನಿಸಿತು. ಆದರೆ ಇಂಥ ಅನೇಕರನ್ನು ಕಂಡಂತೆ ಆ ಎಳೆಗಳ ಪ್ರಕಂಪನ ಒಂದೇ ತಾಳಗತಿಯಲ್ಲಿ ಕೇಳಿಸುತ್ತಿದೆ. ನಾಲಿಗೆ, ಬುದ್ಧಿ ಸ್ವಾಧೀನದಲ್ಲಿಲ್ಲ. ಅವೆರಡೂ ತನ್ನ ಅಂತರಾತ್ಮದ ಅಧೀನದಲ್ಲಿದೆಯೆಂಬ ಭಾವನೆ. ಬುದ್ಧಿ ಆಲೋಚಿಸುತ್ತಿದೆ...ನಾಲಿಗೆ ಉತ್ತರ ನೀಡುತ್ತಿದೆ.

''ಮಿತ್ರ ನಿನ್ನ ಹೆಸರೇನು?'' ಮತ್ತೆ ಪ್ರಶ್ನೆ.

''ರಾಕೇಶ್...''

......

ನಂತರದ ಪ್ರಶ್ನೆಗಳ ಸರಪಳಿಗೆ ಸಮರ್ಪಕ ಉತ್ತರ ನೀಡುತ್ತಿತ್ತು ನಾಲಿಗೆ.

ಸ್ವಲ್ಪ ಹೊತ್ತಿನ ಮೇಲೆ ಆತ ಕಣ್ತೆರೆದ.

ಅವರಿಬ್ಬರ ಕೈಕಟ್ಟುಗಳನ್ನು ಕೂಡ ಬಿಡಿಸಲಾಯಿತು.

ಕುಳ್ಳ ವ್ಯಕ್ತಿ ರಾಕೇಶನತ್ತ ಕೃತಜ್ಞತೆಯ ದೃಷ್ಟಿ ಬೀರಿದ. ಅಭಿನಂದಿಸುವವನಂತೆ.

ಮೂವರೂ ಮತ್ತೊಂದು ಕೊಠಡಿಯನ್ನು ಪ್ರವೇಶಿಸಿದರು. ಅಲ್ಲಿ ನಾಲ್ಕು ಮಂದಿ ಕುಳಿತಿದ್ದರು. ಎಲ್ಲರೂ ವೃದ್ಧರೇ. ಬಿಳೀ ಗಡ್ಡ, ಕೂದಲುಗಳೊಂದಿಗೆ ಎಲ್ಲರೂ ಒಂದೇ ರೀತಿ ಕಾಣುತ್ತಿದ್ದರು.

''ಷರ್ಟ್ ಬಿಚ್ಚು'' ಎಂದನೊಬ್ಬ ಕುಳ್ಳ ವ್ಯಕ್ತಿ ''...ಪ್ಯಾಂಟೂ ಸಹ''

ರಾಕೇಶ್ ಚಡಪಡಿಸಿದ, ಈ ಕಾರ್ಯ ತನ್ನಿಂದಾಗದೆಂಬಂತೆ ಸುಮ್ಮನೆ ನಿಂತ.

ಯಾರೂ ಇದನ್ನು ಗಮನಿಸಿದಂತೆ ತೋರಲಿಲ್ಲ. ಯಜ್ಞಕುಂಡ, ಅದರ ಸುತ್ತಲೂ ಕುಳಿತ ನಾಲ್ವರು ಅದೇನನ್ನೋ ಹಾಕುತ್ತಿದ್ದಾರೆ. ಕೊಠಡಿಯೆಲ್ಲಬಿಳಿಯ ಹೊಗೆಂದಾವರಿಸಿತು. ಒಬ್ಬರ ಮುಖ ಮತ್ತೊಬ್ಬರಿಗೆ ಕಾಣದಂತಾಯಿತು.

ಅಷ್ಟರಲ್ಲಿ ರಾಕೇಶನ ಭುಜದ ಮೇಲೆ ಹಿಂದಿನಿಂದ ಯಾರದ್ದೋ ಕೈ.

''ಬ್ರಹ್ಮೋಪಾಸನೆ, ಮಂತ್ರೋಪಾಸನೆ, ಪ್ರತಿಮೋಪಾಸನೆಗಳ ಮೂಲಕ ಕುಟ್ಟಿ ಸೈತಾನ್‌ನ ಅನುಗ್ರಹ ಪಡೆಯಲಿರುವ ನೂತನ ಸದಸ್ಯನೇ, ಅಷ್ಟವಿಧ ಪುರುಷ ಶಕ್ತಿ ಗ್ರಹಾಧಿಪತಿಯಾದ ಕುಟ್ಟಿ ಸೆಐತಾನ್ ನಿನ್ನನ್ನು ಅನುಗ್ರಹಿಸಲಿ. ದಂತಾಕೂಷಿ (ನಿದ್ರಿಸುವ ಮಕ್ಕಳು ಹಲ್ಲು ಕಡಿಯುವಂತೆ ಮಾಡುವ ದುಷ್ಟ ಶಕ್ತಿ), ದುಸ್ವಾಸ್ತು (ಮನೆಗಳಲ್ಲಿ ಸೇರಿ ವಾಸ್ತುವಿನ ಮೂಲಕ ಅಮಂಗಳ ಮಾಡುವ ಶಕ್ತಿ), ಪರಿವರ್ತಿ (ಶಕುನದ ಮೂಲಕ ಕೇಡನ್ನುಂಟುಮಾಡುವ ಶಕ್ತಿ), ಅಂಗಯುಕ್ತಾ (ಭುಜಗಳೂ, ಹುಬ್ಬುಗಳೂ ಅದುರುವ ಮೂಲಕ ಅಶುಭ ಭಯವನ್ನುಂಟು ಮಾಡುವ ಕಂಪನ ಕ್ಷುದ್ರಶಕ್ತಿ), ಶಕುನಿ (ಕಾಗೆ, ಹಲ್ಲಿ ಮೊದಲಾದವುಗಳಲ್ಲಿದ್ದುಕೊಂಡು ಕೇಡುಂಟು ಮಾಡುವ ಕ್ಷುದ್ರಶಕ್ತಿ), ಗೊಂಡಪಾತ್ರಕ (ಮುಹೂರ್ತವನ್ನು ತಪ್ಪಿಸುವ ಪಿಪೀಲಿಕಾ ಶಕ್ತಿ), ಗರ್ಭಮ್ನು (ಗರ್ಭಧಾರಣೆ ರತಿಯಲ್ಲಿ ರೇತಸ್ಸಿನ ಮೂಲಕ ಪ್ರವೇಶಿಸಿ ಪಿಂಡವನ್ನು ತಿಂದು ಹಾಕುವ ಶಕ್ತಿ), ಸ್ತನ್ಯಘ್ನ (ಸ್ತನಗಳನ್ನು ಕೆಡಿಸಿ ಮಕ್ಕಳಿಗೆ ಹಾಲಿಲ್ಲದಂತೆ ಮಾಡುವ ದುಷ್ಟಶಕ್ತಿ) ಈ ಎಂಟು ಶಕ್ತಿಗಳಿಗೂ ಅಧಿಪತಿಯಾದ ಕುಟ್ಟಿ ಸೆಐತಾನ್ ನಿನ್ನ ಮೇಲೆ ಅನುಗ್ರಹ ತೋರಲಿ!''

ದಟ್ಟವಾಗಿ ಆವರಿಸಿದ ಹಿಮ ಮೇಘಗಳ ನಡುವೆ ಯಾರೋ ದೀಪ ಹಿಡಿದಂತೆ ಸಣ್ಣ ಬೆಳಕು ಸಮೀಪಿಸಿತು. ಸನಿಹಕ್ಕೆ ಬಂದ ನಂತರ ಅದು ದೀಪವಲ್ಲ ತಟ್ಟೆಯಲ್ಲಿ ಆರತಿ ತರುತ್ತಿದ್ದಾರೆಂದು ರಾಕೇಶ್ ಗ್ರಹಿಸಿದ. ಇನ್ನೂ ಹತ್ತಿರ ಬಂದಾಗ ಅದು ಆರತಿಯ ತಟ್ಟೆಯೂ ಅಲ್ಲ; ರಬ್ಬರ್ ಮುದ್ರೆಯಂತಹುದೊಂದು ವಸ್ತು ನಿಗಿನಿಗಿಯೆಂದು ಹೊಳೆಯುತ್ತಿರುವುದನ್ನು ಕಂಡ.

ಮುಂದೇನಾಗಲಿದೆಯೆಂಬುದನ್ನು ಊಹಿಸುವುದರೊಳಗೆ ವೃದ್ಧನು ಅದನ್ನು ಇಕ್ಕಳದಲ್ಲಿ ಹಿಡಿದು ಎರಡು ಕೈಗಳಿಂದಲೂ ಅದನ್ನು ರಾಕೇಶನ ಶರೀರದ ಮೇಲೆ ಒತ್ತಿದನು. ಕೋಣೆಯೇ ನಡುಗುವಂತೆ ಚೀರುತ್ತಾ ಪ್ರಜ್ಞೆತಪ್ಪಿ ನೆಲಕ್ಕುರುಳಿದ ರಾಕೇಶ್.

ಮತ್ತೆ ಕಣ್ತೆರೆದು ನೋಡುವ ವೇಳೆಗೆ ಅವರಿಬ್ಬರೇ ಇದ್ದರು.

''ನಾವಿನ್ನು ಹೊರಡೋಣವೇ?'' ಕುಳ್ಳವ್ಯಕ್ತಿ ಪ್ರಶ್ನಿಸಿದ.

ರಾಕೇಶನು ಶಕ್ತಿಯನ್ನೆಲ್ಲ ಕಳೆದುಕೊಂಡವನಂತೆ ಅವನ ಮುಖವನ್ನೇ ದಿಟ್ಟಿಸಿದ. ಹೊಕ್ಕುಳ ಕೆಳಗೆ ಚರ್ಮ ಸುಟ್ಟ ಗುರುತು. ವಾಸನೆ ಮೂಗಿಗೆ ಬಡಿಯಿತು. ಅವನು ಮೆಲ್ಲನೆ ಏಳಲು ಪ್ರಯತ್ನಿಸುತ್ತಿದ್ದಂತೆಯೇ ಕುಳ್ಳವ್ಯಕ್ತಿ ''ನಮ್ಮವರೆಲ್ಲರನ್ನು ನೀನಿನ್ನು ಮುಂದೆ

ಅತಿ ಸುಲಭವಾಗಿ ಗುರುತಿಸಬಲ್ಲೆ. ಹಾಗೆಯೇ ಅವರೂ ನಿನ್ನನ್ನು ಗುರುತಿಸುತ್ತಾರೆ. ಶರೀರದ ಮೇಲಿನ ಗುರುತನ್ನು ಬಟ್ಟೆಗಳ ಹಿಂದಿನಿಂದ ಕಾಣಬಲ್ಲರು. ನಮ್ಮವರೊಂದಿಗೆ ನೀನಿನ್ನು ಏನನ್ನಾದರೂ ಮಾತಾಡಬಹುದು. ಆದರೆ ಇತರರೊಂದಿಗೆ ನಮ್ಮ ವಿಷಯದ ಬಗ್ಗೆ ಬಾಯಿ ತೆರೆಯಕೂಡದು''

''ನನಗಿನ್ನೂ ಆಶ್ಚರ್ಯವೆನಿಸುತ್ತಿದೆ''

''ಏನದು?''

''ಇಷ್ಟು ದಿನಗಳಿಂದ ಈ ವಿಷಯಗಳೆಲ್ಲ ಹೊರಬೀಳದೆ ರಹಸ್ಯವಾಗುಳಿದಿವೆಯಲ್ಲ?''

ಕುಳ್ಳವ್ಯಕ್ತಿ ನಗುತ್ತ ಅವರ ಮುಂದೆ ಒಂದು ಪಾತ್ರೆಯನ್ನು ಹಿಡಿದುಕೊಂಡು ಬರುತ್ತಿದ್ದ ಒಬ್ಬ ಸೇವಕನನ್ನು ಕರೆದನು.

''ಸುಮಾರು ಒಂದು ವರ್ಷದ ಹಿಂದೆ ನಮ್ಮ ಸದಸ್ಯನೊಬ್ಬ ಈತನನ್ನು ಉಸ್ಲೋಕ್‌ನಲ್ಲಿ ಸೇರಿಸಲು ಇಲ್ಲಿಗೆ ಕರೆತಂದ. ಈತ ಗೂಢಚಾರಿ ಅಲ್ಲ, ನಿಜವಾಗಿ ನಮ್ಮಲ್ಲಿ ಸೇರಬೇಕೆಂಬಾಸೆ. ಆದರೆ ಆ ಅರ್ಹತೆ ಪಡೆದಿಲ್ಲವೆಂದು ನಮ್ಮ ಗಣಾಧಿಪತಿಯ ಅಭಿಪ್ರಾಯವಾದ್ದರಿಂದ ಅಂದಿನಿಂದ ಇಂದಿನವರೆಗೆ ಇಲ್ಲಿ ಸೇವೆಸಲ್ಲಿಸುವ ಅನುಗ್ರಹಕ್ಕಾಗಿ ದಿನ ಕಳೆಯುತ್ತಿದ್ದಾನೆ. ನೀನು ಉಸ್ಲೋಕನಿಂದ ತಿಳಿದಿರುವ ಒಂದು ರಹಸ್ಯವನ್ನು ಈತನಿಗೆ ಹೇಳು ನೋಡೋಣ...''

ರಾಕೇಶ್ ಅವನನ್ನು ಪರೀಕ್ಷಕ ದೃಷ್ಟಿಯಿಂದ ದಿಟ್ಟಿಸಿದ. ಆತನ ಶರೀರದಲ್ಲೆಲ್ಲೂ ಮುದ್ರೆ ಕಾಣಸಲಿಲ್ಲ. ''ನೀನು ಉಸ್ಲೋಕ್‌ನಲ್ಲಿ ಸೇರುವ ಮೊದಲು ನಿನ್ನ ಶರೀರದ ಮೇಲೆ ಮುದ್ರೆ ಒತ್ತುತ್ತಾರಂತೆ'' ಎಂದು ಹೇಳುವ ಇಚ್ಛೆ ಉಂಟಾಯಿತು. ಆ ಆಲೋಚನೆ ಬರುತ್ತಿದ್ದಂತೆ ತನ್ನ ಮೆದುಳನ್ನು ಯಾರೋ ಒತ್ತಿ ಹಿಡಿದಂತೆ ಭಾಸವಾಯಿತು. ತಲೆಯ ರಕ್ತನಾಳಗಳೆಲ್ಲ ಒಡೆದು ಹೋದ ಅನುಭವ. ಏನೂ ಮಾತನಾಡಲಾರದೆ ಸ್ತಂಭೀಭೂತನಾಗಿ ನಿಂತ. ಆತನ ನಂಬಿಕೆ ಮತ್ತಷ್ಟು ದೃಢವಾಯಿತು.

''ಕೊನೆಯ ಪ್ರಶ್ನೆ''

''ಕೇಳು''

''ಸಾಮಾನ್ಯ ಸದಸ್ಯತ್ವ ಪಡೆಯಲು ಇಷ್ಟು ಕಷ್ಟವಾದ ಈ ರಹಸ್ಯ ಸಮಾಜದಲ್ಲಿ ನನ್ನನ್ನು ಕೇವಲ ಎರಡೇ ಪ್ರಶ್ನೆಗಳನ್ನು ಕೇಳಿ ಹೇಗೆ ಸೇರಿಸಿಕೊಂಡರು?''

''ಬ್ಲೇಡಿನ ಕೆಳಗೆ ಕುತ್ತಿಗೆಯನ್ನಿರಿಸಿ ನಾವಿಬ್ಬರೂ ಆ ಗ್ಯಲಿಟನ್‌ನಲ್ಲಿ ಎಷ್ಟು ಹೊತ್ತು ಕಳೆದೆವೆಂಬುದು ಊಹಿಸು ರಾಕೇಶ್ ನೋಡೋಣ?''

''ಐದೋ ಹತ್ತೋ ನಿಮಿಷಗಳಿರಬಹುದು''

''ನಾವು ಈ ಗೃಹವನ್ನು ಪ್ರವೇಶಿಸಿ?''

ರಾಕೇಶ್ ಮನದಲ್ಲೇ ಲೆಕ್ಕಹಾಕಿ ''ನಾವು ಒಳಕ್ಕೆ ಬಂದಾಗ ಹತ್ತು ಗಂಟೆ. ಈಗ ಅರ್ಧರಾತ್ರಿ ಆಗಿರಬೇಕಲ್ಲವೇ?'' ಎಂದ.

ಇಬ್ಬರೂ ದ್ವಾರದ ಬಳಿ ಬಂದರು.

''ಉಸ್ಲೋಕನ್ನು ಅಷ್ಟು ಸುಲಭ, ಕನಿಷ್ಠವೆಂದು ಪರಿಗಣಿಸಬೇಡ ರಾಕೇಶ್. ನಿನ್ನನ್ನು ಅನೇಕ ಪ್ರಶ್ನೆಗಳನ್ನು ಕೇಳಿದರು. ನಿನ್ನ ಚರಿತ್ರೆ, ಕಾರ್ಯಕ್ರಮಗಳು ನೀನೇ ಅರಿತಿರುವ ನಿನ್ನ ನಿಜ ವ್ಯಕ್ತಿತ್ವ, ನಿನ್ನ ದೌರ್ಬಲ್ಯ, ಮನಸ್ಸಿನಾಳದಲ್ಲಿ ಅಡಗಿರುವ ಭಾವನೆಗಳು ಆಲೋಚನೆಗಳು ಇವೆಲ್ಲ ಉಸ್ಲೋಕ್‌ನಲ್ಲಿ ರೆಕಾರ್ಡ್ ಆಗಿವೆ. ಒಂದು ಕಾಲದಲ್ಲಿ ಉಸ್ಲೋಕ್‌ನಲ್ಲಿ ಮಂತ್ರವಾದಿಗಳೂ, ಕ್ಷುದ್ರದೇವತೋಪಾಸಕರೂ ಮಾತ್ರ ಇದ್ದರು. ಕಾರ್ಯಕ್ರಮಗಳು ನಿಗೂಢ ರೀತಿಯಲ್ಲಿ ನಡೆಯುತ್ತಿದ್ದವು. ಈಗ ಇದನ್ನು ವಿಸ್ತರಿಸಬೇಕೆಂದು ಮಹಾದ್ರಷ್ಟ ಆಜ್ಞಾಪಿಸಿದರು. ಏನೋ ಘನಕಾರ್ಯ ನಡೆಯಲಿದೆ. ಪ್ರಪಂಚವೆಲ್ಲ ಕುಟಿಲ ಸೈತಾನನ ಅಧೀನಕ್ಕೆ ಬರುವ ಶುಭ ಮುಹೂರ್ತ ಸನ್ನಿಹಿತವಾಗುತ್ತಿದೆಯೆಂಬುದು ನಮ್ಮೆಲ್ಲರ ನಂಬಿಕೆ. ನಾಗರಿಕ ಪ್ರಪಂಚದಲ್ಲಿ ನಾವೆಲ್ಲ ಮಾಮೂಲು ಮನುಷ್ಯರಂತೆ ವಿಲೀನರಾಗಿ ಕೆಲವು ಕಾರ್ಯಗಳನ್ನು ಸಾಧಿಸಬೇಕಾಗಿವೆ. ಈ ಕೊನೆಯ ಘಳಿಗೆಯಲ್ಲಿ ನೀನು ಈ ಸಂಸ್ಥೆಗೆ ಸೇರಿರುವುದು ಸುಯೋಗ'' ಎನ್ನುತ್ತ ಬಾಗಿಲು ತೆರೆದನು.

ಹೊರಗೆ ಹೆಜ್ಜೆ ಇರಿಸಿದ ರಾಕೇಶ್‌ಗೆ ಷಾಕ್ ಹೊಡೆದಂತಾಯಿತು ಕಾರಣ ಸೂರ್ಯನು ನಡುನೆತ್ತಿಯ ಮೇಲೆ ತೀಕ್ಷ್ಣವಾಗಿ ಪ್ರಜ್ವಲಿಸುತ್ತಿದ್ದಾನೆ. ಬಿಸಿಲು ಸುಡುತ್ತಿದೆ.

**4**

ಕೃಷಿ ಪದವಿ ಬಿಎಸ್ಸಿ (ಅಗ್ರಿ) ಕೋರ್ಸ್‌ನ ಫೈನಲ್ ಇಯರ್‌ನಲ್ಲಿ 'ಗ್ರಾಮೀಣ ಸಂಸ್ಕೃತಿಯ ತರಬೇತಿ' (ರೂರಲ್ ಅಗ್ರಿಕಲ್ಚರಲ್ ವರ್ಕ್ ಎಕ್ಸ್ ಪೀರಿಯನ್ಸ್) (RNWE) ಎಂಬ ಪ್ರೋಗ್ರಾಂ ಇರುತ್ತದೆ. ಇದರ ಪ್ರಕಾರ ಯಾವುದಾದರೂ ಒಂದು ಗ್ರಾಮದಲ್ಲಿ ಬೀಡು ಬಿಟ್ಟು ಗ್ರಾಮಸ್ಥರೊಡನೆ ಬೆರೆತು, ಆರುತಿಂಗಳ ಕಾಲ ಕಳೆಯಬೇಕು. ಕಾಲೇಜು ಸ್ಟೈಪೆಂಡ್ ನೀಡುತ್ತದೆ. ಅಡಿಗೆ, ಊಟ, ನಿದ್ರೆಗೆ ಎಲ್ಲ ವ್ಯವಸ್ಥೆಗಳನ್ನೂ ಏರ್ಪಡಿಸಿರುತ್ತಾರೆ. ಸಾಮೂಹಿಕ ಜೀವನ. ರೈತರ ವ್ಯವಸಾಯ ಪದ್ಧತಿಗಳನ್ನೆಲ್ಲ ಸೂಕ್ಷ್ಮವಾಗಿ ಪರೀಕ್ಷಿಸಬೇಕು. ಅವರಿಗೆ ಆಗಾಗ ಸಲಹೆಗಳನ್ನು ನೀಡುತ್ತಿರಬೇಕು. ಒಂದೊಂದು ಸಲ ಓದಿದವರು ನೀಡುವ ಸಲಹೆಗಳಿಗಿಂತ ಅಲ್ಲಿಯ

ರೈತರ ಅನುಭವವೇ ಮಹತ್ವದ್ದಾಗಿದ್ದರೆ, ಪ್ರಯೋಜಕವಾಗಿದ್ದರೆ ಮುಖ ಮುದುಡಿ ಅಲ್ಲಿಂದ ಕಾಲ್ಕಿಗೆಯಬೇಕು.

ಒಂದೊಂದು ಗ್ರಾಮಕ್ಕೆ ವಿದ್ಯಾರ್ಥಿಗಳ ಒಂದೊಂದು ತಂಡವನ್ನು ಆರಿಸಿಕಳುಹಿಸುತ್ತಾರೆ. ಅವರು ಗ್ರಾಮದಲ್ಲಿ ಯಾರೊಂದಿಗಾದರೂ ಇರಬಹುದು. ಸಾಧ್ಯವಾಗದಿದ್ದಲ್ಲಿ ತಾವೇ ಎಲ್ಲ ವ್ಯವಸ್ಥೆ ಮಾಡಿಕೊಳ್ಳಬಹುದು.

ಕೇದಾರಗೌರಿ, ರಾಕೇಶ್ ಒಂದೇ ತಂಡದಲ್ಲಿ ಆ ಗ್ರಾಮಕ್ಕೆ ಆಗಮಿಸಿದರು. ಅಲ್ಲಿನ ಶ್ಯಾನಭೋಗರು ಅವರಿಗೆ ತಮ್ಮ ಮನೆಯಲ್ಲಿ ಆತಿಥ್ಯ ನೀಡಿದರು. ವಿಶಾಲವಾದ ಮನೆ. ಮೊದಲ ದಿನ ಅತಿಥಿಯಾಗಿ ಹೋದವರು ಮರುದಿನದಿಂದ ಗೌರಿ ತಾನೇ ಅಡಿಗೆ ಮಾಡಲು ಪ್ರಾರಂಭಿಸಿದಳು. ನೂತನ ದಂಪತಿಗಳ ಸಂಸಾರವೇನೋ ಎಂಬಂತಿತ್ತು. ಉಳಿದ ಅನೇಕ ವಿದ್ಯಾರ್ಥಿ-ವಿದ್ಯಾರ್ಥಿನಿಯರು ಅಕ್ಕಿ, ಬೇಳೆ, ಉಪ್ಪು, ಬೆಲ್ಲ ಮತ್ತಿತರ ದಿನಸಿ ಸಾಮಗ್ರಿಗಳನ್ನು ಕೊಳ್ಳುವುದು, ಸ್ವಯಂಪಾಕ ಸಿದ್ಧಪಡಿಸಿ ಊಟ ಮಾಡುವುದು. ಕೆಲವು ವಿದ್ಯಾರ್ಥಿಗಳಿಗೆ ಅಡಿಗೆ ಮಾಡಲು ಬರದೆ ಪಟ್ಟ ಅವಸ್ಥೆ, ಉರಿಬಿಸಿಲಿನಲ್ಲಿ ಹೊಲಗಳಲ್ಲಿ ತಿರುಗಾಟ ಇವೆಲ್ಲ ಅವರಿಗೆ ಒಂದು ರೀತಿ ಖುಷಿತಂದಿತ್ತು.

ಈ ಕೋರ್ಸ್‌ನಲ್ಲಿ ಅನೇಕರು ಸೇರಿದ ಕೆಲವು ದಿನಗಳು ದುಃಖಿತರಾಗಿರುತ್ತಾರೆ. ಎಂ.ಬಿ.ಬಿ.ಎಸ್.ನಲ್ಲಿ ಸೀಟು ಸಿಕ್ಕದೆ ಇಲ್ಲಿಗೆ ಬಂದ ಕೆಲವರು ಸ್ವರ್ಗ ಸ್ವಲ್ಪದರಲ್ಲಿ ತಪ್ಪಿ ಜಾರಿ ಇಲ್ಲಿಗೆ ಬಿದ್ದಂತೆ ಜುಗುಪ್ಸೆ ತುಂಬಿದ ವರ್ತನೆಯಿಂದ ನಿರುತ್ಸಾಹಿಗಳಾಗಿರುತ್ತಾರೆ. ಆದರೆ ಕೆಲವೇ ದಿನಗಳಲ್ಲಿ ಚೇತರಿಸಿಕೊಂಡು ಹೊಂದಿಕೊಂಡುಬಿಡುತ್ತಾರೆ, ಅಧ್ಯಾಪಕರ ಆಸಕ್ತಿಯ ಪರಿಣಾಮ.

ವೃತ್ತಿಪರ ಶಿಕ್ಷಣವಾಗಿರುವ ಕೆಲವೇ ಕೋರ್ಸ್‌ಗಳಲ್ಲಿ ಇದೂ ಒಂದು. ಆದರೆ ಬಹಳ ಶುಷ್ಕವಾದದ್ದು. ಜೀವಂತವೆಂದರೆ ಈ 'ರಾವೇ' ಪ್ರೋಗ್ರಾಂ ಒಂದೇ 'ರಾವೇ' ನೂತನವಾಗಿಯೂ, ರೋಮಾಂಚನವಾಗಿಯೂ ವಿದ್ಯಾರ್ಥಿಗಳಲ್ಲಿ ಉತ್ಸಾಹದ ಚಿಲುಮೆಯನ್ನು ಪುಟಿಸುವ ಕಾರ್ಯಕ್ರಮ.

ಈ ಪ್ರೋಗ್ರಾಂನಲ್ಲಿ ಮೊದಲೆಲ್ಲ ವಿದ್ಯಾರ್ಥಿ, ವಿದ್ಯಾರ್ಥಿನಿಯರನ್ನು ಬೇರೆ ಬೇರೆಯಾಗಿ ಕಳುಹಿಸುತ್ತಿದ್ದರು. ಇತ್ತೀಚೆಗೆ ಅವರಲ್ಲಿ ಜೀವ ತುಂಬಲು ಒಟ್ಟಿಗೆ ಕಳಿಸಲಾರಂಭಿಸಿದ್ದಾರೆ. ಆರು ತಿಂಗಳ ಕಾಲ ಒಟ್ಟಿಗೆ ತಿರುಗಾಡುತ್ತ ತಮಾಷೆಯ ಮಾತು, ಹಾಸ್ಯದ ನಡಿಗೆ ನಡೆಯುತ್ತಾ ನಗೆಗಡಲಲ್ಲೀ ತೇಲಾಡತ್ತಾ ಇರುತ್ತಾರೆ.

ಇವನ್ನೆಲ್ಲ ಒತ್ತಟ್ಟಿಗಿಟ್ಟರೂ ರೈತರಿಂದ ಕಲಿಯುವುದು ಸಾಕಷ್ಟಿರುತ್ತದೆ. ಥಿಯರಿಗೂ, ಪ್ರಾಕ್ಟಿಕಲ್‌ಗೂ ಬಹಳ ವ್ಯತ್ಯಾಸ! 'ಬೀಜರಹಿತ ದ್ರಾಕ್ಷಿಯನ್ನು ರೂಪಿಸಿದಂತೆಯೇ, ಬೀಜರಹಿತ ಕಡಲೆಕಾಯಿಗಳನ್ನು ಏಕೆ ಸೃಷ್ಟಿಸಬಾರದು?' ಎಂದು

ಪ್ರಶ್ನಿಸುವ ಪ್ರಬುದ್ಧರು! ನೇಗಿಲನ್ನು ಸರಿಯಾಗಿ ಹಿಡಿಯಲು ಬಾರದೆ ಒದ್ದಾಡುವ ವಿದ್ಯಾರ್ಥಿಗಳು! ಎತ್ತುಗಳನ್ನು ಹತೋಟಿಗೆ ತರಲಾರದೆ ಕುಣದಾಡುವ ತರುಣಿಯರು, ಚಿತ್ರ ವಿಚಿತ್ರ ದೃಶ್ಯಗಳು ನೂರಾರು...ಆಳವಾಗಿ ಅಭ್ಯಾಸ ಮಾಡಿದಷ್ಟೂ ಉತ್ಸಾಹವನ್ನು ಹೆಚ್ಚಿಸುವ ಸಬ್ಜೆಕ್ಟ್, ಕೇದಾರಗೌರಿಯಂಥವರಿಗಂತೂ ಇನ್ನೂ ಹೆಚ್ಚಿನ ಆನಂದ ನೀಡುವ ವಿಷಯ!!

ಬಹಳ ಚಿಕ್ಕ ಹಳ್ಳಿ, ಪಕ್ಕದಲ್ಲೇ ಹೊಲ - ಗದ್ದೆಗಳು. ನಾಗರಿಕತೆಯ ಸೋಂಕಿಲ್ಲ. ಗ್ರಾಮಸ್ಥರು ಸರಳ ಜೀವಿಗಳು. ಸುಳ್ಳು, ಕಪಟ, ವಂಚನೆ ಅರಿಯದ ಮುಗ್ಧ ಜೀವಿಗಳು ಹಳ್ಳಿಗೆ ವಿದ್ಯುಚ್ಛಕ್ತಿಯ ಸರಬರಾಜಿದೆ.

ಸಾಧಾರಣವಾಗಿ ಪ್ರಾರಂಭದ ಕೆಲವು ದಿನಗಳು ಮಾತ್ರ ರಾವೇಪ್ರೋಗ್ರಾಂ ವಿದ್ಯಾರ್ಥಿಗಳಿಗೆ ಕುತೂಹಲಕರವಾಗಿರುತ್ತದೆ. ಕ್ರಮೇಣ ಉತ್ಸಾಹಕುಗ್ಗಿ ಉದಾಸೀನತೆ ಇಣುಕುಹಾಕುತ್ತದೆ. ತಮ್ಮ ನಗರದ ನೆನಪು ಮರುಕಳಿಸುತ್ತದೆ.

ಆದರೆ ಕೇದಾರಗಔರಿಗೆ ಆ ಹಳ್ಳಿ ಅತಿ ಪ್ರಿಯವೆನಿಸಿತು. ಯಾವುದೋ ಕೃತ್ರಿಮ ವಾತಾವರಣದಿಂದ ಹೊರಬಂದು ಸ್ನಿಗ್ಧ ಸೌಂದರ್ಯವನ್ನು ಆಸ್ವಾದಿಸಲು, ಮುಕ್ತ ವಾತಾವರಣದಲ್ಲಿ ತನ್ನಿಚ್ಛೆಯಂತೆ ಓಡಾಡಲು ಅವಕಾಶ ದೊರಕಿರುವುದು ಸಂತಸ ನೀಡಿತ್ತು. ಪರಿಶುದ್ಧವಾದ ಗಾಳಿಯಲ್ಲಿ ನೆಮ್ಮದಿಯಿಂದ ಶಾಂತಿಯಿಂದ ಉಸಿರಾಡಿದ ಸುಖಾನುಭವ.

ಆ ದಿನ ಆಕೆ ಬಹಳ ಆಯಾಸಗೊಂಡಿದ್ದಳು.

ತನಗೆ ತಿಳಿದಿದ್ದ ಎಂಟಮಾಲಜಿಯ ಪರಿಧಿಯಲ್ಲಿ ಮುಸುಕಿನ ಜೋಳಕ್ಕೆ ಹಿಡಿದ ಕ್ರಿಮಿಗಳನ್ನು ನಾಶಪಡಿಸುವ ವಿಧಾನವನ್ನು ವಿವರಿಸಲು ಪ್ರಯತ್ನಿಸಿದಳು. ಉರಿವ ಬಿಸಿಲಿನಲ್ಲಿ ಸುಮಾರು ಎರಡೆಕೆರೆಯಷ್ಟು ಜಮೀನಿನಲ್ಲೆಲ್ಲ ತಿರುಗಾಡಿದಳು.

ರಾತ್ರಿ ಸುಮಾರು ಹನ್ನೆರಡು ಗಂಟೆ. ಆಕೆ ಗಾಢ ನಿದ್ರೆಯಲ್ಲಿದ್ದಾಳೆ. ವಿಶಾಲವಾದ ಹೆಂಚಿನ ಮನೆ. ಹೊಲದಲ್ಲಿ ರಾಗಿ ಪೈರಿನ ಮೇಲೆ ಸುಗಂಧಭರಿತ ತಣ್ಣನೆಗಾಳಿ ಬೀಸುತ್ತಿದೆ. ಪ್ರಶಾಂತ ವಾತಾವರಣ ಎಲ್ಲೆಡೆತುಂಬಿದೆ.

ಆಕಸ್ಮಾತ್ತಾಗಿ ಗೌರಿಗೆ ಎಚ್ಚರವಾಯಿತು.

ಬಾಗಿಲ ಬಳಿ ರಾಕೇಶ್! ತನ್ನನ್ನೇ ದಿಟ್ಟಿಸುತ್ತ ನಿಂತಿದ್ದಾನೆ.

ಬೆಳ್ದಿಂಗಳು ಹಾಲ್ಚೆಲ್ಲಿದಂತೆ ಇಬ್ಬರ ಮೇಲೂ ಪಸರಿಸಿದೆ.

ಆಕೆ ತಕ್ಷಣ ಎದ್ದು ಕುಳಿತಳು. ''ಏನು ಬೇಕು ರಾಕೇಶ್?'' ಎಂದಳು ಬೆದರಿದ ಹರಿಣಿಯಂತೆ. ತನ್ನ ಬಟ್ಟೆಗಳನ್ನು ಸರಿಪಡಿಸಿಕೊಂಡಳು.

''ಏನಿಲ್ಲ ಗೌರಿ. ನೀನು ಹೇಗೆ ಮಲಗಿದ್ದರೆ ನೋಡಲು ಅದೆಷ್ಟು ಸುಂದರಳಾಗಿ ಕಾಣುತ್ತಿರುವೆ ಗೊತ್ತೇ? ಸಾರಿ. ನಿನ್ನನ್ನು ಡಿಸ್ಟರ್ಬ್ ಮಾಡಿದೆ!!'' ಎನ್ನುತ್ತ ಅಲ್ಲಿಂದ

ಹೊರನಡೆದ. ಆತನ ಕಣ್ಣುಗಳಲ್ಲಿ ಅಪರಾಧೀಭಾವಕ್ಕಿಂತ ಮೆಚ್ಚುಗೆ ಸ್ಪಷ್ಟವಾಗಿ ಮೂಡಿತ್ತು.

ತನ್ನ ಮಾತುಗಳು ಆಕೆಯ ಹೃದಯವನ್ನು ಸ್ಪಂದಿಸುವುವು. ಹಾಗೆ ದೂರವಾಗಿ ನಿಂತು ಆಕೆಯ ಸೌಂದರ್ಯೋಪಾಸನೆ ಮಾಡುತ್ತಿದ್ದ ತನ್ನಲ್ಲಿ ಗೌರವ ಮೂಡುವುದು ಎಂದು ಆತ ಚೆನ್ನಾಗಿ ಅರಿತಿದ್ದ. ಆಕೆ ತಾನಾಗಿಯೇ ತನ್ನ ಆಕರ್ಷಣೆಗೊಳಪಟ್ಟು ಒಲಿಯುವುದನ್ನು ನಿರೀಕ್ಷಿಸುತ್ತಿದ್ದ, ಹಾಗೆ ಎಷ್ಟುದಿನ! ತಿಂಗಳು!! ವರ್ಷಗಳಾದರೂ ಕಾದಿರುವ ತಾಳ್ಮೆ ಆತನಲ್ಲಿತ್ತು. ಸ್ವಲ್ಪ ಸ್ವಲ್ಪವಾಗಿ ಆಕೆಯನ್ನು ಇಂಪ್ರೆಸ್ ಮಾಡುವುದೇ ಆತನ ಉದ್ದೇಶ.

ಮತ್ತೆ ಆಕೆ ಹಾಸಿಗೆಯಲ್ಲಿ ಒರಗಿದಳು. ದೃಷ್ಟಿ ಬಾಗಿಲತ್ತ ಸರಿಯಿತು.

ಅವನು ಅದೆಷ್ಟು ಸಮಯದಿಂದ ಹಾಗೆ ನಿಂತಿದ್ದನೋ? ಆಕೆಯನ್ನು ಸ್ಪರ್ಶಿಸುವುದೇನೂ ಕಷ್ಟವಾಗಿರಲಿಲ್ಲ. ಆದರೆ ಹಾಗೆ ಮಾಡದೆ ದೂರದಲ್ಲಿ ನಿಂತು ಸೌಂದರ್ಯವನ್ನು ಆರಾಧಿಸುತ್ತಿದ್ದ. ಇಪ್ಪತ್ತರ ಹರೆಯದ ಆ ಮುಗ್ಧಯುವತಿಗೆ ಸಂತಸ ನೀಡಿದ ಅನುಭವವಿದು.

ಹೆಮ್ಮೆಯ ಸಂಗತಿಯಾಗಬೇಕಿದ್ದ ಈ ಸಂದರ್ಭ ಆಕೆಯಲ್ಲಿ ಅಷ್ಟೇನೂ ಬದಲಾವಣೆಯನ್ನುಂಟು ಮಾಡಲಿಲ್ಲ.

ತಾನು ರೂಪವತಿಯಲ್ಲವೆಂಬುದು ಆಕೆಗೆ ತಿಳಿದ ವಿಷಯವೇ ಹುಣ್ಣಿಮೆ ಬೆಳಕಿನಲ್ಲಿ ತನ್ನನ್ನು ದಿಟ್ಟಿಸುತ್ತ ಗಂಟೆಗಟ್ಟಲೆ ನಿಲ್ಲುವ ಅವಶ್ಯಕತೆ ಏನು? ಕೇವಲ ತನ್ನನ್ನು ತೃಪ್ತಿಪಡಿಸಲು ಆ ಮಾತನ್ನಾಡಿರಬೇಕು! ಅದೂ ಆತ್ಮವಂಚನೆಯೇ!

ಗೌರಿ ಕಣ್ಣುಗಳನ್ನು ಮುಚ್ಚಿಕೊಂಡಳು.

ಆತ್ಮವಂಚನೆ ಅವಳಿಗೆ ಇಷ್ಟವಾಗದ ಗುಣ!

★★★

ಒಟ್ಟು ಇಪ್ಪತ್ತೈದು ಮಂದಿ ವಿದ್ಯಾರ್ಥಿಗಳಿದ್ದಾರೆ. ಅವರಲ್ಲಿ ವಿದ್ಯಾರ್ಥಿನಿಯರು ಆರು ಮಂದಿ. ಆ ದಿನ ಎಲ್ಲರೂ ಅಕ್ಕಪಕ್ಕದ ಗ್ರಾಮಗಳಿಂದ ಅಲ್ಲಿಗೆ ಬಂದು ಸೇರಿದರು.

ಅಂದು ಭಾನುವಾರ. ಅನೇಕ ತಿಂಗಳುಗಳ ನಂತರ ಒಂದು ಕಡೆ ಸೇರಿದ್ದು ಎಲ್ಲರಿಗೂ ಹರ್ಷವನ್ನುಂಟು ಮಾಡಿದೆ.

ಹಾಡುಗಳು...ಮಿಮಿಕ್ರಿ...ಅಂತ್ಯಾಕ್ಷರಿ...

ಆ ಗುಂಪಿನಲ್ಲಿ ಎಲ್ಲರಿಗಿಂದ ಚುರುಕು-ಸತ್ಯಮೂರ್ತಿ.

ಪರಾವಲಂಬಿ ಜೀವಿಯಂತೆ ಎಲ್ಲ ವಿಷಯಗಳಿಗೂ ರಾಕೇಶ್‌ನನ್ನು ಅವಲಂಬಿಸಿರುತ್ತಾನೆ.

''ಈಗೊಂದು ಚಿಕ್ಕ ಗೇಮ್. ಬುದ್ಧಿಗೆ ಕಸರತ್ತು ನೀಡುವವರಿಗೆ ಮಾತ್ರ'' ಎಂದ ಸತ್ಯಮೂರ್ತಿ.

ಎಲ್ಲರೂ ಆಸಕ್ತಿಯಿಂದ ಅವನತ್ತ ತಿರುಗಿದರು.

''ನಾನು ಸಾಲಾಗಿ ಪ್ರಶ್ನೆಗಳನ್ನು ಕೇಳುತ್ತೇನೆ. ಎಲ್ಲರಿಗೂ ತಿಳಿದ ಉತ್ತರಗಳೇ ಅದನ್ನು ನೀವು ಕಾಗದದ ಮೇಲೆ ಬರೆಯಿರಿ. ಎಲ್ಲ ಉತ್ತರಗಳನ್ನೂ ಸರಿಯಾಗಿ ಬರೆಯುವವರಿಗೆ ಉಡುಗೊರೆ ನೀಡಲಾಗುವುದು''

''ನಮಗೆ ತಿಳಿಯದ ಪ್ರಶ್ನೆಗಳು ಬಂದರೆ?''

''ತಿಳಿಯದು ಎಂಬ ಮಾತೇ ಇಲ್ಲ. ಹೆಚ್ಚಿನ ಸಂಖ್ಯೆಯಲ್ಲಿ ಯಾವ ಉತ್ತರವಿರುತ್ತದೆಯೋ ಅದೇ ಸರಿ ಉತ್ತರ. ಮೆಜಾರಿಟಿನೇ ಸರಿ. ಹ್ಞೂ ಮೊದಲ ಪ್ರಶ್ನೆ...ಚಿತ್ರರಂಗದ ಅನಭಿಷಕ್ತ ದೊರೆ ಯಾರು?''

ಎಲ್ಲರೂ ಮುಸಿಮುಸಿ ನಗುತ್ತ ತಮ್ಮ ನೆಚ್ಚಿನ ನಟರ ಹೆಸರನ್ನು ಬರೆದರು. ಹದಿನೆಂಟು ಓಟುಗಳು ಸುರೇಶ್‌ಕುಮಾರ್‌ಗೆ ಬಿದ್ದವು. ಆತ ಚಿತ್ರರಂಗವನ್ನು ಪ್ರವೇಶಿಸಿದ ಹತ್ತೇ ವರ್ಷಗಳಲ್ಲಿ ನಾಡಿನ ಯುವತಿ, ಯುವಕರ ಹೃದಯಗಳನ್ನು ಸೂರೆಗೊಂಡ ಅದೃಷ್ಟವಂತ. ಡಿಸ್ಕೋನಿಂದ ಹಿಡಿದು ಕ್ಲಾಸಿಕಲ್, ಮೆಲೋಡ್ರಾಮಾವರೆಗೂ ಎಲ್ಲ ರೀತಿಯ ಪಾತ್ರಗಳಲ್ಲಿ ವಿಜೃಂಭಿಸಿದ್ದ ಏಕೈಕ ನಟ.

ಸತ್ಯಮೂರ್ತಿ ನುಡಿದ : ''ಗೆಲ್ಲಬೇಕಾದರೆ ನಿಮ್ಮ ಅಭಿಪ್ರಾಯ ಬರೆಎಯುವದಲ್ಲ ಲೋಕಾಭಿಪ್ರಾಯವನ್ನು ಬರೆಯಬೇಕು. ಅದನ್ನು ಮನಸ್ಸಿನಲ್ಲಿರಿಸಿಕೊಂಡು ಉತ್ತರಿಸಿದರೆ ನೀವು ಜಯಗಳಿಸುತ್ತೀರಿ. ಇನ್ನು ಎರಡನೆಯ ಪ್ರಶ್ನೆ. ನಮ್ಮ ಬ್ಯಾಚ್‌ನಲ್ಲಿ ಎಲ್ಲರಿಗಿಂತ ಸುಂದರಳಾದ ಯುವತಿ ಯಾರು?''

ಪ್ರೀತಿಗೆ ಇಪ್ಪತ್ತು ಓಟುಗಳು. ಆಕೆಯಲ್ಲಿ ರೂಪಕ್ಕಿಂತ ಆಕರ್ಷಣೆ ಅರಿಸಿ ತಂದ ಹೂವಿನ ಕಿರೀಟ ಆಕೆಯ ತಲೆಯನ್ನಲಂಕರಿಸಿತು.

ಎಲ್ಲರೂ ಸಂತಸದಿಂದ ಚಪ್ಪಾಳೆ ತಟ್ಟಿದರು.

''ಎಲ್ರಿಗಿಂತ ಶಾಂತ ಸ್ವಭಾವದ, ಪರಿಸರಕ್ಕೆ ಹೊಂದಿಕೊಳ್ಳುವ, ಸರಳ, ಮೃದು ಸ್ವಭಾವದ, ಎಲ್ಲರ ಪ್ರೀತಿಗೂ ಪಾತ್ರಳಾದ ಯುವತಿ ಯಾರು?''

ಕೇದಾರಗೌರಿಗೆ ಇಪ್ಪತ್ನಾಲ್ಕು ಓಟುಗಳು.

ಬೀಳದ ಒಂದು ಓಟು ಕೇದಾರಗೌರಿಯದೇ.

''ಎಲ್ಲರಿಗಿಂತ ಸುಂದರನಾದ ಯುವಕನಾರು?''

ರಾಕೇಶ್‌ಗೆ ಇಪ್ಪತ್ತೈದು ಓಟುಗಳು.

''ಈ ಶುಭ ಸಂದರ್ಭದಲ್ಲಿ ರಾಕೇಶ್ ನಮ್ಮೆಲ್ಲರಿಗೆ ಈ ರಾತ್ರಿ ಪಟ್ಟಣದಿಂದ

ಡಿನ್ನರ್ ತರಿಸುತ್ತಾನೆ'' ಎಂದು ಅನೌನ್ಸ್ ಮಾಡಿದ ಸತ್ಯಮೂರ್ತಿ...ಚಪ್ಪಾಳೆ ಮಳೆಗರೆಯಿತು.

''ಮತ್ತೊಂದು ಪ್ರಶ್ನೆ. ಎಲ್ಲರಿಗಿಂತ ಕುರೂಪಿ ಯಾರು?''

ಈ ಪ್ರಶ್ನೆ ಹೊರಬಿದ್ದ ಕೂಡಲೆ ಅಲ್ಲಿ ನಿಶ್ಶಬ್ದ ಆವರಿಸಿತು. ಒಬ್ಬರ ಮುಖ ಒಬ್ಬರು ನೋಡಿಕೊಂಡರು. ವಾತಾವರಣವನ್ನು ಹಗುರಗೊಳಿಸುವವನಂತೆ ಸತ್ಯಮೂರ್ತಿಯೇ ಮತ್ತೆ ''ಹೌದು ಆತನಿಗೆ 'ಅಷ್ಟಾವಕ್ರ' ಎಂಬ ಬಿರುದು ನೀಡಲಾಗುತ್ತದೆ'' ಎಂದ ಕೂಡಲೆ ವಿದ್ಯಾರ್ಥಿಗಳೆಲ್ಲ ಮುಸಿಮುಸಿ ನಗುತ್ತ ಉತ್ತರ ಬರೆದರು.

ಇಪ್ಪತ್ನಾಲ್ಕು ಓಟುಗಳನ್ನು ಗಳಿಸಿದ ವಿದ್ಯಾರ್ಥಿ ಎದ್ದುನಿಂತ. ಆತ ನಿಜವಾಗಿಯೂ ಅಷ್ಟಾವಕ್ರನಲ್ಲದಿದ್ದರೂ ಕುರೂಪಿಯೇ. ಕಪ್ಪಗೆ, ವಿಶಾಲವಾದ ಹಣೆಯುಳ್ಳ ವಿಕಾಶಮೂರ್ತಿ ನಗುನಗುತ್ತ ಎಲ್ಲರಿಗೂ ವಿನಮ್ರನಾಗಿ ವಂದಿಸಿದ. ಸುತ್ತಲಿದ್ದವರೆಲ್ಲ ತುಟಿ ಬಿಗಿದುಕೊಂಡು ಒಳಗೊಳಗೇ ನಗುತ್ತಿದ್ದರು.

ಆತನ ಹೆಸರು ಸಿದ್ಧಾರ್ಥ.

ಕೇದಾರಗಎರಿ ಸಹಾನುಭೂತಿಯಿಂದ ಆತನನ್ನು ದಿಟ್ಟಿಸಿದಳು.

ಆತನ ಆ ನಗುಮುಖದ ಹಿಂದೆ ಅಡಗಿದ್ದ ವಿಷಾದವನ್ನು ಗ್ರಹಿಸಬಲ,ಲವಳು ಆಕೆಯೊಬ್ಬಳೇ.

ಬೇರೆಯವರಾಗಿದ್ದರೆ ಅಂತಹ ಅಪಮಾನಕರ ಪ್ರಸಂಗದಲ್ಲಿ ಕೋಪಿಸಿಕೊಂಡು ರಿಷದಿಂದ ಎದ್ದು ಹೊರಟುಬಿಡುತ್ತಿದ್ದರೋ ಏನೋ. ಆತನಿಗೆ ಇಪ್ಪತ್ನಾಲ್ಕು ಓಟುಗಳು ಬಿದ್ದಿದ್ದವು. ಕೇದಾರಗಎರಿ ಯಾರಿಗೂ ಓಟು ಹಾಕಿರಲಿಲ್ಲ. ಅಂದರೆ ತನ್ನ ಓಟನ್ನು ತನಗೇ ಹಾಕಿಕೊಂಡಿದ್ದನೇ ಸಿದ್ಧಾರ್ಥ?

5

ರಾಕೇಶ್, ಗೌರಿ ಅಲ್ಲದೆ ಸಿದ್ಧಾರ್ಥನೂ ಸೇರಿ ಆ ಬ್ಯಾಚ್‌ನಲ್ಲಿ ಆರು ಮಂದಿ ವಿದ್ಯಾರ್ಥಿಗಳು. ಅಂದು ಇಬ್ಬರು ಸಮೀಪದಲ್ಲಿದ್ದ ಹಾರ್ಟಿಕಲ್ಚರಲ್ ತೋಟಕ್ಕೆ ಹಿಗಿದ್ದರು. ಉಳಿದವರು ಹೊಲದತ್ತ ನಡೆದರು.

ಅಗ್ರಿಕಲ್ಚರಲ್ ಸ್ಟೂಡೆಂಟ್ಸ್ (ಗಂಡಸರು) ಫೀಲ್ಡ್ ಪ್ರಾಕ್ಟಿಕಲ್‌ಗೆ ತಪ್ಪದೆ ನಿಕ್ಕರ್ ಬಳಸಬೇಕು. ವಿದ್ಯಾರ್ಥಿನಿಯರಿಗೂ ಈ ನಿಯಮ ಕಡ್ಡಾಯಮಾಡಬೇಕೆಂದು ಕೆಲವು ವಿದ್ಯಾರ್ಥೋಗಳು ವಾದಿಸಿದರು. ಆದರೆ ಗೆಲ್ಲಲಿಲ್ಲ. ರಾಕೇಶ್ ಕೆಸರು ನೀರಿನಲ್ಲಿ ಬಹು ಜಾಗರೂಕತೆಯಿಂದ ಮುಂದೆ ಸಾಗುತ್ತಿದ್ದಾನೆ.

ಕೆರೆಯಿಂದ ಹರಿದುಬರುತ್ತಿರುವ ನೀರನ್ನು ಒಬ್ಬ ವೃದ್ಧ ಹೊಲದೊಳಕ್ಕೆ

ತಿರುಗಿಸುತ್ತಿದ್ದಾನೆ. ಅಸ್ಥಿಪಂಜರದಂತಿದೆ ಆತನ ದೇಹ. ಕೈಯೆಲ್ಲ ಕೆಸರು. ಮುಖದಲ್ಲಿ ಬೆವರು ಸುರಿಯುತ್ತಿದೆ.

'4ಈ ಸಮಯದಲ್ಲಿ ಹೊಲಕ್ಕೆ ನೀರು ಬಿಡುತ್ತಿರುವೆಯಲ್ಲಾ ಏಕೆ?''

ಕೆಲಸದಲ್ಲಿ ಮಗ್ನನಾಗಿದ್ದ ವೃದ್ಧ ತಲೆಯೆತ್ತಿ ರಾಕೇಶನತ್ತ ನೋಡುತ್ತ ''ಬಿಡಬಾರದೇ?'' ಎಂದು ಮರುಪ್ರಶ್ನೆ ಹಾಕಿದ.

''ಇದು ಒಳ್ಳೆಯದಲ್ಲ'' ಎಂದು ವಿವರಿಸಿದ.

ಎಲ್ಲವನ್ನೂ ಶಂತವಾಗಿ ಕೇಳಿದ ವೃದ್ಧ ನೀರಿನ ಧಾರೆಗೆ ಮಣ್ಣನ್ನು ಅಡ್ಡಗಟ್ಟಿ ''ನಿಮ್ಮಂಗೆ ಕಲ್ತವರಲ್ಲ ನಾವು'' ಎನ್ನುತ್ತ ಎದ್ದುನಿಂತು ''ಅಲ್ಲಿ ನೋಡು ಆ ಮೂಲೇಲಿರೋ ಪೈರಿಗೆ ಯಾವುದೋ ಹುಳ ಬಿದ್ದೈತೆ. ಅದೇನು ಹೇಳ್ತೀರಾ?'' ಎಂದ.

ತನ್ನ ಅಭಿಪ್ರಾಯ ಕೇಳಿದ್ದರಿಂದ ರಾಕೇಶ್‌ನಿಗೆ ಹೆಮ್ಮೆ ಎನಿಸಿತು. ಉಳಿದವರನ್ನಲ್ಲೇ ಬಿಟ್ಟು ಆ ವೃದ್ಧನೊಂದಿಗೆ ಅತ್ತ ನಡೆದ. ಅಲ್ಲಿದ್ದ ಪೈರು ಹಸಿರಿನಿಂದ ಹಳದಿ ಬಣ್ಣಕ್ಕೆ ತಿರುಗುತ್ತಿರುವುದನ್ನು ಗಮನಿಸಿ ತನ್ನ ತಿಳಿವಿಗೆಟುಕಿದಷ್ಟು ಹೇಳಲಾರಂಭಿಸಿದ. ''ಇದು ಹೈಪ್ಪೋ...''

ವೃದ್ಧನು ಎಲೆಗಳನ್ನು ಪಕ್ಕಕ್ಕೆ ಸರಿಸುತ್ತಿರುವವನಂತೆ ಅಸ್ಪಷ್ಟವಾಗಿ ತುಟಿಯಲುಗಿಸಿದ. ''ನಾಳೆ ರಾತ್ರಿ ಎಂಟು ಗಂಟೆಗೆ 'ಮಹಾದ್ರಷ್ಟ' ಉಸ್ಲೋಕ್ ಸದಸ್ಯರನ್ನುದ್ದೇಶಿಸಿ ಭಾಷಣ ನೀಡಲಿದ್ದಾನೆ. ಕ್ಲೋಸ್ ಸರ್ಕ್ಯೂಟ್ ಟಿವಿಯಲ್ಲಿ ರಿಲೇ ಮಾಡಲಿದ್ದಾರೆ. ಕೂಡಲೇ ನಮ್ಮ ಕಾರ್ಯಾಲಯಕ್ಕೆ ಹೊರಡು''

ಕೈಯಲ್ಲಿ ಗಿಡವನ್ನು ಹಿಡಿದಿದ್ದ ರಾಕೇಶ್ ದಿಗ್ಭ್ರಾಂತನಾಗಿ ತಲೆಯೆತ್ತಿ ನೋಡಿದ.

ವೃದ್ಧನು ಎದ್ದು ತನ್ನ ನೇಗಿಲಿನತ್ತ ಹೆಜ್ಜೆ ಹಾಕಿದ. ಬಂದ ಕೆಲಸ ಪೂರ್ಣವಾದಂತಿತ್ತು ಆತನ ಮುಖಭಾವ.

ರಾಕೇಶ್ ರೋಮಾಂಚಿತನಾಗಿದ್ದ.

ವೃದ್ಧನ ಹೊಕ್ಕಳ ಕೆಳಭಾಗ ಸ್ಪಷ್ಟವಾಗಿ ಕಾಣುತ್ತಿದೆ. ಕೆಂಪಗೆ ಉಸ್ಲೋಕ್ ಸದಸ್ಯರಲ್ಲಿ ಅತ್ಯುತ್ತಮ ಸ್ಥಾನ ರೆಡ್ ಸ್ಕೆಲಿಟನ್.

★★★

ಒಂದೇ ಸಮನೆ ಅಗೆಯುತ್ತಿದ್ದಾರೆ. ಬೆವರು ಧಾರೆಯಾಗಿ ಅವರ ನೊಸಲಿನಿಂದ ಹನಿಯುತ್ತಿದೆ. ಆದರೂ ಅವರು ತಮ್ಮ ಕೆಲಸ ನಿಲ್ಲಿಸಲಿಲ್ಲ.

ಆ ಸ್ಮಶಾನದಲ್ಲಿದ್ದ ಮೌನವನ್ನು 'ರಪ್...ರಪ್...' ಎನ್ನುವ ಸದ್ದು ಮುರಿದಿದೆ. ಅವ್ಯಾಹತವಾಗಿ ಕೇಳಿ ಬರುತ್ತಿರುವ ಸದ್ದಿನಿಂದ ನಿದ್ರಿಸುತ್ತಿರುವ ಹಕ್ಕಿಗಳ್ಯಾಣಗಳು ಎಚ್ಚರಗೊಂಡು ನಿಶಾಚರರಾದ ಅವರನ್ನು ಕಂಡು ನಡುಗಿದವು.

ಸುಮಾರು ಅರ್ಧಗಂಟೆಯ ನಂತರದ ಅಗೆತದ ಫಲವಾಗಿ ಕೊನೆಗೂ ಹೊರಬಿತ್ತು ಆ ಕೈ. ಕಾಲಗರ್ಭದಲ್ಲಿ ಬೆರೆತಿದ್ದರೂ, ಆ ಕೈಮೇಲೆ ಮಣ್ಣಿದೆ ಎಂಬುದರ ವಿನಾ ಬೇರಾವ ಮಾರ್ಪಾಡೂ ಕಾಣಿಸುತ್ತಿರಲಿಲ್ಲ. ಅದುವರೆವಿಗೂ ಪಕ್ಕದಲ್ಲಿ ನಿಂತು ನೋಡುತ್ತಿದ್ದ ವೃದ್ಧ ಕಿಎ ಕಾಣಿಸುತ್ತಲೇ ಹಳ್ಳದೊಳಕ್ಕೆ ಇಳಿದ. ಆತುರದಿಂದ ಅದರ ಮೇಲಣ ಮಣ್ಣು ದೂರ ಸರಿಸಿದ. ಮೊದಲು ಎದೆ ಮೇಲೆ ಕಾಣಿಸಿತು. ನಂತರ ಕ್ರಮಕ್ರಮವಾಗಿ ತಲೆ...ಕಪಾಲ...

ಇಬ್ಬರೂ ಅಪ್ರಯತ್ನವಾಗಿ ಒಂದಡಿ ಹಿಂದಿರಿಸಿದರು ಭಯದಿಂದಲ್ಲ, ಗೌರವದಿಂದ. ಈ ಶರೀರವು ಕ್ಷುದ್ರ ಗಣಾಧಿಪತಿಗಳಲ್ಲಿ ಕೊನೆಯ ಬಾರಿಗೆ ಕಾಷ್ಮೊರಾವನ್ನು ಪ್ರಯೋಗಿಸಿದ ಶಕ್ತಿ ಸಂಪನ್ನನಾದವನದು. ಆತನ ಹೆಸರನ್ನು ಉಚ್ಛರಿಸಿದರೆ ಚಿಕ್ಕ ಮಕ್ಕಳು ಭಯದಿಂದ ನಡುಗುತ್ತಿದ್ದವು. ಹಿರಿಯರು ಕೈಜೋಡಿಸಿ ಭಗವಂತನಲ್ಲಿ ಪ್ರಾರ್ಥನೆ ಸಲ್ಲಿಸುತ್ತಿದ್ದರು. ಬೀಜಾಕ್ಷರಗಳು ಬರೆದ ದೊಣ್ಣೆಯಿಂದ ಹೊಡೆದು ಮುಂದಿದ್ದ ಹಲ್ಲು, ಬಿರಿದ ಕಪಾಲ ಎಲ್ಲವೂ ಹಾಗೇ ಭಯಂಕರವಾಗಿದೆ. ಕಣ್ಣಿನ ರಂಧ್ರಗಳಲ್ಲಿ ಮಣ್ಣು ಸೇರಿಕೊಂಡು ಕಪ್ಪಾಗಿದ್ದು ಈ ಲೋಕದ ಮೇಲೆ ಹಗೆ ತೀರಿಸಿಕೊಳ್ಳಲು ಸಮಯಕ್ಕಾಗಿ ಕಾಯುತ್ತಿರುವ ಮನುಷ್ಯನಂತೆ ಕಾಣಿಸುತ್ತಿದೆ. ಬದುಕಿದ್ದಾಗಲೂ ಅಷ್ಟೇ ಕ್ರೂರವಾಗಿ ನೋಡಬಲ್ಲ ವ್ಯಕ್ತಿ ಒಬ್ಬನೇ ಒಬ್ಬ ಕಾದ್ರಾ. ಆತನದೇ ಈ ಕಪಾಲ.

ವೃದ್ಧನು ಆತನ ಕಿಎ ಮೂಳೆಗಳನ್ನು ಮುರಿದಿರಿಸಿಕೊಂಡ. ಈ ಘಟನೆ ತುಂಬಾ ಸದ್ದಿಲ್ಲದೆ ನಡೆಯಿತು. ಆದರೂ ಮರದ ಕೊಂಬೆಗಳ ಮೇಲೆ ಇದ್ದ ಪಕ್ಷಿಗಳು, ಭೂಮಿಯ ಮೇಲಿದ್ದ ಹಾವುಗಳು, ಇತರ ಹುಳು ಹುಪ್ಪಟೆಗಳು, ಆ ಸ್ಮಶಾನದ ಬಳಿ ಇದ್ದ ಸಕಲ ಜೀವರಾಶಿಗಳೂ ನಡೆದ ವಿಪತ್ತನ್ನು ತಿಳಿದವೇನೋ ಎಂಬಂತೆ ಹೆದರಿ ಭಯದಿಂದಲೇ ಈ ದೃಶ್ಯವನ್ನು ನೋಡುತ್ತಿವೆ.

ಮೂಳೆಗಳನ್ನು ಮೂಟೆ ಕಟ್ಟಿಕೊಂಡು ಗುಣಿಯಿಂದ ಮೇಲೆ ಬಂದು ''ನಡಿಯಿರಿ'' ಎಂದ.

ಮರುದಿನ ಅದೇ ಸಮಯಕ್ಕೆ ಅದೇ ಮುದುಕ ಸ್ಮಶಾನದಲ್ಲಿ ಮತ್ತೊಂದು ಕಳೇಬರವನ್ನು ಅಗೆದು ಹೊರತೆಗೆದ. ಆಗ ಮಳೆ ವಿಪರೀತವಾಗಿ ಸುರಿಯುತ್ತಿತ್ತು. ವರ್ಷಾಧಾರೆಯ ಮಧ್ಯದಲ್ಲಿ ಆ ಅಸ್ಥಿಪಂಜರವನ್ನು ಹೊರತೆಗೆದ. ಅದು ದಾರ್ಕಾನ ಶವದ್ದು. ಅದರ ಮೂಳೆಗಳನ್ನೂ ಮೂಟೆ ಕಟ್ಟಿದ್ದಾಯಿತು.

ರಾಹು-ಕೇತುಗಳು ಸಮಾನಾಂತರದಲ್ಲಿ ಬರುವ ಘಳಿಗೆ. ಹದಿನೈದು ವರ್ಷಗಳಿಗೊಮ್ಮೆ ಮಾತ್ರ ಸಂಭವಿಸುವ ಅಪೂರ್ವ ಪರ್ವ. ಈ ಘಳಿಗೆಗಾಗಿಯೇ ಉಸ್ಲೋಕ್ ವರ್ಷಗಳಿಂದ ಕಾದಿತ್ತು. ಉಸ್ಲೋಕ್ ಸಮಾಜದ ಪ್ರತಿಯೊಬ್ಬ ಸದಸ್ಯನೂ

ಆ ದಿನಕ್ಕಾಗಿ ಕಾತರದಿಂದ ನಿರೀಕ್ಷಿಸುತ್ತಿದ್ದ. ಅಂದಿನ ಮಧ್ಯರಾತ್ರಿಯ ಕತ್ತಲೆ ಭಯಂಕರ ರಹಸ್ಯವೊಂದನ್ನು ಹೊರಗಿರಿಸುತ್ತದೆ. ಅದರೊಂದಿಗೆ ಜಗತ್ತಿನ ಗತಿಯೇ ಬದಲಾಗುತ್ತದೆ ಈ ಬದಲಾವಣೆಗಾಗಿಯೇ ಅವರೆಲ್ಲರ ಕಾತರ!

★★★

ಹಾಲ್ ತುಂಬಾ ಕತ್ತಲೆ, ಸುಮಾರು ಹತ್ತು ಮಂದಿ ಸದಸ್ಯರು ಕುಳಿತ್ತಿದ್ದರೂ ಅಲ್ಲಿ ಮೌನವೇ ಹರಡಿದೆ. ಎಲ್ಲರ ನೋಟವೂ ಟಿವಿ ಮೇಲೇ ಕೇಂದ್ರೀಕರಿಸಿದೆ. ಹೆಸರಿಗೆ ಅದಟ 'ಕ್ಲೋಸ್ಡ್ ಸರ್ಕ್ಯೂಟ್ ಟಿವಿ' ಆದರೆ ಪ್ರಸಾರ ಎಲ್ಲಿಂದ ಬರುತ್ತದೆ ಎಂಬುದನ್ನು ಯಾರೂ ಅರಿಯರು. ದೇಶದ ಮುಖ್ಯ ಪಟ್ಟಣಗಳಲ್ಲಿರುವ ಉಸ್ಲೋಕ್ ಸದಸ್ಯರೆಲ್ಲರೂ ತಮ್ಮ ರಹಸ್ಯ ನಿವಾಸಗಳಲ್ಲಿ ಸಮಾವೇಶಗೊಂಡು ಟಿವಿಯಲ್ಲಿ ಕಾಣಸಲಿರುವ ದೃಶ್ಯ ವೀಕ್ಷಣೆಗಾಗಿ ನಿರೀಕ್ಷಿಸುತ್ತಿದ್ದಾರೆ.

ಕ್ರಮಕ್ರಮವಾಗಿ ಟಿವಿ ಬೆಳಗಿತು. ಬಾನಿನಲ್ಲಿ ಗುಡುಗು, ಮಿಂಚು, ಕುಂಭದ್ರೋಣ ವರ್ಷ. ಸ್ಮಶಾನದಲ್ಲಿ ವೃದ್ಧ ಅಗೆಯುತ್ತಿದ್ದಾನೆ. ಪಿಶಾಚಿ ಕೆಲ ಮೂಳೆಗಳನ್ನು ಸಂಗ್ರಹಿಸಿದ.

ನೋಡುತ್ತಿದ್ದವರೆಲ್ಲಾ ಅದು ತಮ್ಮ ಊರಿಗೆ ಸೇರಿದ ಸ್ಥಳವಲ್ಲ ಎಂಬುದನ್ನು ಸುಲಭವಾಗಿ ತಿಳಿದುಕೊಂಡರು.

ಇದು ಕಾಷ್ಮೋರಾ ಪ್ರಸನ್ನವಾಗುವ ಘಳಿಗೆಯ 'ಲೈವ್ ಟೆಲಿಕಾಸ್ಟ್' ಕಾತರದಿಂದ ಅವರೆಲ್ಲರ ಹೃದಯಗಳು ವೇಗವಾಗಿ ಬಡಿದುಕೊಳ್ಳುತ್ತಿವೆ.

ನಾಲ್ವರು ರೆಡ್ ಸ್ಕೆಲಿಟನ್ಸ್ ನಾಲ್ಕು ರೀತಿಯ ಸೃಷ್ಟಿ ಭೇದಗಳನ್ನು ಕಾಷ್ಮೋರಾಕ್ಕೆ ಅರ್ಪಿಸಿದರು. ಮೊದಲಿನದು ಅಂಡಜ (ಹಕ್ಕಿ). ನಂತರದ್ದು ಉದ್ಭೀಜ (ಮಣ್ಣಿನಿಂದ ಹುಟ್ಟಿದ ಗಿಡ) ತರುವಾಯ ಸ್ವೇದಜ (ಬೆವರಿನಿಂದ ಹುಟ್ಟಿದ ಕೂರೆ). ಕೊನೆಯದಾಗಿ ಜರಾಶಯ (ಕನ್ನೆಯ ಪ್ರಥಮ ರತಿರಕ್ತ). ಕ್ರಮವಾಗಿ ಈ ಅರ್ಪಣೆ ನಡೆಸಿದ ನಂತರ ದೃಶ್ಯ ಬದಲಾಯಿತು.

ಮೊದಲು ಕಾಣಿಸಿದ ವೃದ್ಧ ಒಂದು ಪರ್ವತದ ಮೇಲಿದ್ದಾನೆ. ಆಕಾಶದತ್ತ ಕೆಎಚಾಚಿ ಮಂತ್ರಪಠಣ ನಡೆಸುತ್ತಿದ್ದಾನೆ. ಪಂಚಜ್ಞಾನೇಂದ್ರಿಯ ದೇವತೆಗಳಾದ ಗಾಳಿ, ಸೂರ್ಯ, ವರುಣರೂ ಕೂಡ ಬೆದರುವಂತೆ ಪ್ರಕೃತಿ ತಲ್ಲಣಿಸುತ್ತಿದೆ. ಆತನ ಕಂಠ ಮತ್ತಷ್ಟು ಉಚ್ಛ್ರಾಯಕ್ಕೇರಿತು.

ರಾತ್ರಿ ಹನ್ನೆರಡು ಘಂಟೆ. ಎಲ್ಲೋ ಭೂಮಿಗೆ ಕಾಣಿಸದೆಡೆ ರಾಹು-ಕೇತುಗಳು ಸಮಾನಾಂತರದಲ್ಲಿ ನಿಂತರು.

ಅದೇ ಕ್ಷಣದಲ್ಲಿ ಬಾನೇ ಬಿರಿದು ಬಾಯ್ಬಿಟ್ಟಂತೆ ಫಳಾರನೆ ಸದ್ದು. ಆ ಮಿಂಚೇ ಸಿಡಿಲಾಗಿ ನೋಡುತ್ತಿದ್ದವರ ಕಣ್ಕೋರೈಸುತ್ತಾ ಭೂಮಿಯನ್ನು ಸೀಳಿಕೊಂಡು ಮರೆಯಾಯಿತು. ಆಳವಾದ ಬಾವಿ ಅಗೆದಂತೆ ಭೂಮಿಯಲ್ಲಿ ಕಪ್ಪಾದ

ಕಂದರವಾಯಿತು. ಒಡೆದು ಬಿರಕಾಗಿದ್ದ. ಭೂಮಿಯ ಬಿರುಕಿನಿಂದ ಮೂಳೆಗಳಿಂದ ಮಾಡಿದ ಪೆಟ್ಟಿಗೆಯೊಂದು ಹೊರಬಂತು.

ವೃದ್ಧ ಮಂತ್ರೋಚ್ಚಾರಣೆ ನಿಲ್ಲಿಸಿ ಶಿಖರದಿಂದ ಇಳಿದು ಆ ಪೆಟ್ಟಿಗೆಯ ಬಳಿಗೆ ಬಂದ. ತನ್ನ ರಕ್ತದಿಂದಲೇ ಅದನ್ನು ಅಭಿಷೇಕ ಮಾಡಿ ಅದರ ಮುಚ್ಚಳತೆರೆದು ಒಳಗಿನಿಂದ ಒಂದು ಚರ್ಮ ಹೊರತೆಗೆದ. ಅದೆಷ್ಟು ವರ್ಷಗಳಿಂದ ಹಾಗೇ ಭದ್ರಪಡಿಸಲಾಗಿತ್ತೋ ಆದರೂ ಅದು ಹೊಸದಾಗಿಯೇ ಇತ್ತು. ಆ ಚರ್ಮದ ಮೇಲೆ ರಕ್ತಾಕ್ಷರಗಳಲ್ಲಿ ಬರೆದಿದ್ದನ್ನು ಗಟ್ಟಿಯಾಗಿ ಓದತೊಡಗಿದ.

ರಾಜಾಧಿರಾಜ ಕ್ಷುದ್ರ ಗಣಾಧಿಪತಿಯಾದ ಕಾಷ್ಮೋರಾದ ಅಂಶದೊಂದಿಗೆ ಮಾನವ ಕುಲವನ್ನು ಆಳಲು ಕುಟ್ಟಿ ಸೈತಾನ್ ವಾರಸುದಾರ ಹುಟ್ಟುವ ಕಾಲವು ಸನ್ನಿಹಿತವಾಗುತ್ತಿದೆ.

ಮಹಾ ಮಾಂತ್ರಿಕರಾದ ಪಿಶಾಚಿ, ಕಾದ್ರಾ ಇವರ ಮೂಳೆಗಳ ಪುಡಿಯನ್ನು ಗ್ರಾಮದ ಉತ್ತರ ದಿಕ್ಕಿನಲ್ಲಿ ಪೈರುಗಳ ಮೇಲೆ ಸಿಂಪಡಿಸಿ, ನೀರಿನಲ್ಲಿ ಬಲರೆಸಿ, ಅಗ್ನಿಯಲ್ಲಿ ಹಾಕಿ ಆ ಧೂಮವು ಗಾಳಿಯೊಂದಿಗೆ ಗ್ರಾಮವನ್ನು ಆವರಿಸುವಂತೆ ಮಾಡಿದ. ಇದು ಕುಟ್ಟಿ ಸೈತಾನ್‌ನಿಯತಿ.

ಈ ಕೃತ್ಯವನ್ನೆಸಗುವವನು ಅತ್ಯಂತ ನೀಚನೂ, ಮಲತಾಯಿಯನ್ನೇ ರಮಿಸಿದವನೂ, ಮನವೆಲ್ಲಾ ಕಾಲುಷ್ಯದಿಂದಲೇ ತುಂಬಿಕೊಂಡವನೂ ಆಗಿರಬೇಕು. ಈತನಿಗೆ ಈ ಕೃತ್ಯದಲ್ಲಿ ನೆರವಿಗೆ ಒಬ್ಬ ಕನ್ಯೆ ಇರಬೇಕು.

ಈ ಕಾರ್ಯ ನಡೆದ ನಂತರ ಆ ಗ್ರಾಮದಲ್ಲಿ ಎಂಟು ಮಂದಿ ಮಕ್ಕಳು ಜನಿಸುತ್ತಾರೆ ಒಂದೇ ಕಣ್ಣಿರುವವನೊಬ್ಬ, ಒಂದೇ ಸ್ತನವುಳ್ಳವನೊಬ್ಬ, ನಾಲ್ಕು ಕೈಗಳಿರುವ ಇನ್ನೊಬ್ಬ, ಎರಡು ಮೈಗಳನ್ನು ಬೆಸೆದುಕೊಂಡಿರುವ ಮತ್ತೊಬ್ಬ ಹೀಗೆ ಏಳು ಮಂದಿ ಜನಿಸುತ್ತಾರೆ. ಎಂಟನೆಯವನು 'ಅಷ್ಟಾವಕ್ರ'

ಎಲ್ಲರಂತಲ್ಲದೆ ಅವನು ಗರ್ಭವನ್ನು ಸೀಳಿಕೊಂಡು ಹೊರಬರುತ್ತಾನೆ. ಈ ವಿಧವಾದ ಪ್ರಸವದಲ್ಲಿಯೇ ತಾಯಿಯು ಸಾಯುತ್ತಾಳೆ. ಹುಟ್ಟಿದ ಮೊದಲ ದಿನವೇ ತಂದೆಯ ಸಾವಿಗೆ ಕಾರಣನಾಗುತ್ತಾನೆ. ಆತನು ನಗುವುದಿಲ್ಲ; ಅಳುವುದಿಲ್ಲ. ಭೂತವನ್ನು ನಂಬಿದವರನ್ನೆಲ್ಲಾ ತನ್ನೊಂದಿಗೆ ಸೇರಿಸಿಕೊಂಡು ಈ ಜಗತ್ತನ್ನೆಲ್ಲಾ ಆಳುತ್ತಾನೆ. ಈ ಕಾರ್ಯಕ್ಕೆ ಅಡ್ಡಿಯಾದವರನ್ನು ನಿಲುವಿನಲ್ಲೇ ಸೀಳಿ ಅವರ ರಕ್ತಪಾನಮಾಡುತ್ತಾನೆ. ಆತನನ್ನು ಆಶ್ರಯಿಸಿ ಭೂತವನ್ನು ನಂಬಿದವರು ಮಾತ್ರವೇ ಸುಖವಾಗಿ ಬದುಕಬಲ್ಲರು.

ಇನ್ನೊಂದು ವರ್ಷದ ಅವಧಿಯಲ್ಲಿ ಹುಟ್ಟಲಿರುವ ಈ ಅಷ್ಟಾವಕ್ರನ ಜನನ ಕಾಲದಲ್ಲಿನರಿಗಳು ಬಾನಿನತ್ತ ಮೊಗ ಮಾಡಿ ಅಳುತ್ತವೆ. ಕೊಂಬೆಗಳ ಮೇಲೆ ಕುಳಿತಿದ್ದ ಕಾಗೆಗಳು ಹಾಗೇ ಸತ್ತು ಕೆಳಗುರುಳುತವೆ.

ಮೊದಲು ಜನಿಸಿದ ಏಳು ಮಕ್ಕಳೂ ಸಾಯುತ್ತಾರೆ.

ಪ್ರಸವಿಸಿದ ತಾಯಿಗೆ ಪ್ರಸೂತಿತಲ್ಪವೇ ಮರಣ ಶಯ್ಯೆಯಾಗುತ್ತದೆ. ಆಕೆಯ ಪ್ರಸವಕ್ಕೆ ನೆರವಾಗುವ ಸೂಲಗಿತ್ತಿ ಅಲ್ಲಿಯೇ ರಕ್ತವನ್ನು ಕಕ್ಕುತ್ತ ಸಾಯುತ್ತಾಳೆ. ಮಗುವನ್ನು ನೋಡಲು ಹೋದತಂದೆ ಬಾಗಿಲ ಬಳಿಯೇ ಸಾಯುತ್ತಾನೆ.

ಈ ಯಾವ ವಿವರಗಳೂ ಬೇರೆ ಯಾರಿಗೂ ತಿಳಿಯಬಾರದು. ಈ ಸಂಪುಟವನ್ನು ತೆರೆಯುವವನು ಸಕಲ ಬ್ರಹ್ಮವೃತ್ತ ಖೇಚರಿ ವಿದ್ಯೆ ಅರಿತವನಾಗಿರಬೇಕು. ಆತನೇ ಅಷ್ಟಾವಕ್ರದ ರಾಜ್ಯದಲ್ಲಿ ಮಂತ್ರಿಯಾಗಬಲ್ಲವನು. ಪಿಶಾಚ ಗಣಾಧಿಪ ಕಾಷ್ಮೋರಾ ತನ್ನವಾಗಿ ಈ ಪ್ರಪಂಚವನ್ನು ಅಷ್ಟಾವಕ್ರನ ರೂಪದಲ್ಲಿ ಆಳುವ ಕಾಲದಲ್ಲಿ ಆತನನ್ನು ನಂಬಿದವರಿಗೆ ಮಾತ್ರವೇ ಸುಖ.

ಈ ಪತ್ರವನ್ನು ಓದಿದವರು, ಕೇಳಿದವರು ಈ ಕ್ಷಣದಿಂದಲೇ ಅಷ್ಟಾವಕ್ರನ ಜನನಕ್ಕಾಗಿ ತಪಸ್ಸು ನಡೆಸಬೇಕು, ಪೂಜೆಗಳನ್ನು ಮಾಡಬೇಕು ರಕ್ತತರ್ಪಣ ಕೊಡಬೇಕು.

ಹಾಲ್ ಕತ್ತಲಾಯಿತು. ಸದಸ್ಯರಾರೂ ಚಲಿಸಲಿಲ್ಲ. ಎಲ್ಲರಲ್ಲೂ ಆನಂದ ತುಂಬಿದೆ. ಅದರೊಂದಿಗೆ ಭಯವೂ ಮಿಳಿತವಾಗಿದೆ. ಬಗೆಬಗೆಯ ಭಾವಗಳು ಅವರಲ್ಲಿ ಮನೆ ಮಾಡಿದೆ. ಅಷ್ಟಾವಕ್ರನು ಜನಿಸುವತನಕ ತಮ್ಮ ಮೇಲೆ ಗುರುತರವಾದ ಹೊಣೆಗಾರಿಕೆ ಇದೆಯೆಂಬುದನ್ನು ಅವರೆಲ್ಲರೂ ಸ್ಪಷ್ಟವಾಗಿ ಬಲ್ಲರು.

★★★

''ಯಾಕೆ ಏನೋ ಒಂದು ಥರಾ ಇದೀಯಲ್ಲಾ?'' ಎಂದು ಕೇಳಿದಳು ಕೇದಾರಗೌರಿ.

''ಏನೂ ಇಲ್ವಲ್ಲಾ!...'' ಎಂದು ಮಾತು ತಪ್ಪಿಸಲು ಪ್ರಯತ್ನಿಸಿದ ರಾಕೇಶ್.

ಮರುದಿನವಲೂ ಗದ್ದೆಗೆ ಮಾಮೂಲಿನಂತೆಯೇ ಹೊರಟ. ಮಧ್ಯಾಹ್ನ ಕ್ಯಾರಿಯರ್ ಬಿಚ್ಚಿ ಊಟ ಮುಗಿಸಿ ಕೈ ತೊಳೆಯುತ್ತಿದ್ದಾಗ ಪೊದೆಗಳ ಹಿಂದಿನಿಂದ ''ರಾಕೇಶ್...'' ಎಂದು ಕೇಳಿಸಿತು.

ಅತ್ತಕಡೆ ಹೋದ. ಅಲ್ಲಿ ತನ್ನನ್ನು ಈ ಮೊದಲು ಉಸ್ಟೋಕ್ ಸಭೆಗೆ, ಹೋಗಲು ಹೇಳಿದ 'ರೆಡ್ ಸ್ಕೆಲಿಟನ್' ಬೇಸಾಯಗಾರ. ಆತನತ್ತ 'ಏನು?' ಎನು-ನವಂತೆ ನೋಡಿದ.

'4ಆ ಕಡೆ ಹೋಗು'' ಎಂದು ಕೆಳಗಿದ್ದ ಬಾವಿಯತ್ತ ತೋರಿದ.

''ಎಲ್ಲಿಗೆ?'' ಅರ್ಥವಾಗದೆ ಕೇಳಿದ.

''ಬಾವಿ ಒಳಕ್ಕೆ''

ಉಸ್ಟೋಕ್‌ನಲ್ಲಿ ತನಗಿಂತಲೂ ಮೇಲು ವರ್ಗದವರು ಹೇಳಿದ ಮಾತಿಗೆ ಮರುಪ್ರಶ್ನೆ ಚರ್ಚೆಗೆ ಅವಕಾಶವಿಲ್ಲ. ರಾಕೇಶ್ ಬಾವಿಯ ಮೆಟ್ಟಿಲು ಇಳಿದು ಒಳಕ್ಕೆ ಹೋದ.

ಬಾವಿಯಲ್ಲಿ ನೀರಿಲ್ಲ. ಒಣಗಿದ್ದ ತಳದ ಒಂದು ಕಡೆ ಒಂದು ಚಿಕ್ಕ ಬಿಲ. ಸೊಂಟಬಗ್ಗಿಸಿ ಅದರೊಳಕ್ಕೆ ಹೋದ. ಅಂದೊಂದು ಸಣ್ಣಕೋಣೆ. ಸರಿಯಾಗಿ ಹೇಳಬೇಕೆಂದರೆ ಸಮಾಧಿ. ಅತ್ತಕಡೆ ಕುಳಿತಿದ್ದ ವ್ಯಕ್ತಿ ತಲೆ ತಿರುಗಿಸದೆಯೇ ''ಬಾ, ಇಲ್ಲಿ ಈ ಪುಡಿಯನ್ನು ಇರಿಸುತ್ತಿದ್ದೇನೆ. ಇದಕ್ಕೆ ಸೂರ್ಯರಶ್ಮಿ ಸೋಂಕಕೂಡದು. ರಾತ್ರಿಗೆ ಇದನ್ನು ತೆಗೆದುಕೊಂಡು ಹೋಗು. ಇದನ್ನು ಈ ಹಳ್ಳಿಯ ಯತ್ತರ ದಿಕ್ಕಿನ ಗದ್ದೆಗಳ ಮೇಲೆ ಚೆಲ್ಲು ಇದರಲ್ಲಿ ಸ್ವಲ್ಪವನ್ನು ಗಾಳಿ ಬೀಸುವ ದಿಕ್ಕನ್ನು ಗಮನಿಸಿ ಹಳ್ಳಿಯ ಮೇಲೆ ಬೀಳುವಂತೆ ಚೆಲ್ಲು. ಉಳಿದದ್ದು ನೀರಿನಲ್ಲಿ ಬೆರೆಸು...''

ರಾಕೇಶನ ಆನಂದಕ್ಕೆ ಪರಿಧಿಯೇ ಇಲ್ಲ. ಈ ಕೆಲಸಕ್ಕೆ ತನ್ನನ್ನು ಆಯ್ಕೆಮಾಡಿಕೊಂಡಿದ್ದಾರೆ! ಅದೇ ಕಂಠದಲ್ಲಿ ''ನಾನು ಅಗ್ರಿಕಲ್ಚರಲ್ ಬಿಎಸ್ಸಿ. ಈ ಕೆಲಸವನ್ನು ತುಂಬಾ ಸುಲಭವಾಗಿ ಮಾಡಬಲ್ಲೆ!'' ಎಂದ.

''ಮೂರ್ಖಾ, ನಿನ್ನನ್ನು ಈ ಕೆಲಸಕ್ಕೆ ಆಯ್ಕೆಮಾಡಿರುವ ಕಾರಣ ಅದಲ್ಲ'' ಎಂದ ವೃದ್ಧ. ''ತನಗಿಂತ ಹಿರಿಯರೊಂದಿಗೆ ಇತರರು ಅನೀತಿ ಎಂದು ಹೇಳುವ ಸಂಬಂಧ ಇರಿಸಿಕೊಂಡಿರುವ ನೀಚಾತಿನೀಚನೇ ಈ ಕೆಲಸಕ್ಕೆ ಬೇಕು!''

ಕೊತಕೊತನೆ ಕುದಿಯುತ್ತಿರುವ ಎಣ್ಣೆಯನ್ನು ಮುಖದ ಮೇಲೆ ಎರಚಿದಂತಾಯಿತು ರಾಕೇಶನಿಗೆ. ಉಸ್ಸೋಕ್ -ಉಸ್ಸೊಕ್ - ಉಸ್ಸೊಕ್ ಮನದ ತೆರೆಯ ಆಳಕ್ಕೆ ಇಳಿಯುವ ಉಸ್ಸೋಕ್.

''ನಿನ್ನೊಂದಿಗೆ ಆ ಹುಡುಗಿಯನ್ನೂ ಕರೆದುಕೊಂಡು ಹೋಗು. ಅವಳು ಇನ್ನೂ ಕನ್ಯೆಯೇ ತಾನೇ?''

''ಹೌದು''

''ಆಕೆಗೆ ಈ ಯಾವ ಸಂಗತಿಗಳು ಗೊತ್ತಾಗಬೇಕಾಗಿಲ್ಲ. ನಿನ್ನೊಂದಿಗೆ ಇದ್ದರೆ ಸಾಕು''

ರಾಕೇಶ್ ತಲೆದೂಗಿದ.

''ಇನ್ನು ಈಗ ಹೊರಡಬಹುದು, ರಾತ್ರಿಗೆ ಬಾ''

ಹೊರಡಲು ರಾಕೇಶ್ ಹಿಂದಕ್ಕೆ ತಿರುಗುತ್ತಲೇ ''ನಿಲ್ಲು'' ಎಂದ.

ರಾಕೇಶ್ ನಿಂತು ಹಿಂದೆ ನೋಡಿದ.

''ಬ್ರಹ್ಮವೃತ್ತ ಖೇಚರೀವಿದ್ಯೆ ಹಸ್ತಗತ ಮಾಡಿಕೊಳ್ಳಬೇಕೆಂಬ ಆಸೆ ಈಗ ಇರಿಸಿಕೊಳ್ಳಬೇಡ. ತುಂಬಾ ಕಷ್ಟಸಾಧ್ಯವಾದ ವಿದ್ಯೆ ಅದು''

ಒಮ್ಮೆಲೆ ಬೆಚ್ಚಿ ''ಆ್ಞ...ಎಂದ''

''ನನ್ನನ್ನು ಕೊಂದು ಅಷ್ಟಾವಕ್ರನ ಬಲಭುಜವಾಗಬೇಕೆಂಬ ನಿನ್ನ ಆಸೆ ಸಿದ್ಧಿಸದೆಂದು ಹೇಳುತ್ತಿದ್ದೇನೆ''

ರಾಕೇಶನ ಬಾಯಿ ಒಣಗಿತು. ''ಯಾರು?...ನೀವು ಯಾರು?'' ಎಂದು ಕೇಳಿದ.

ಮುಖವನ್ನು ರಾಕೇಶನ ಕಡೆಗೆ ತಿರುಗಿಸಿ ನೋಡಿದ ಆ ವೃದ್ಧ. ಹೊದೆದಿದ್ದ ಕಂಬಳಿ ಮೆಲ್ಲನೆ ಕೆಳಕ್ಕೆ ಜಾರಿತು. ಮನಸ್ಸಿನ ಆಳಕ್ಕೆ ಇಳಿದು ರಹಸ್ಯಗಳನ್ನು ಶೋಧಿಸಬಲ್ಲ ಆ ನೋಟ! ಬರಲಿರುವ ಕುಟ್ಟಿ ಸೈತಾನನ ಅನುಚರನಾಗಲಿರುವವನು, ಕಾದ್ರಾನ ಸಮಾಧಿ ಅಗೆದವನು, ಪರ್ವತವನ್ನು ಏರಿದವನು. ಯಾರೀತ? ಅಷ್ಟರಲ್ಲಿ ಆ ವೃದ್ಧನ ತುಟಿಗಳು ಚಲಿಸಿತು ''ನನ್ನನ್ನು ಮಹಾದ್ರಷ್ಟ ಎನ್ನುತ್ತಾರೆ''

ರಾಕೇಶ್ ನಡುಗಿದ. ರೆಡ್ ಸ್ಕೆಲಿಟನ್ಸ್‌ಗೆ ಕೂಡ ಯಾರನ್ನು ದರ್ಶಿಸುವ ಭಾಗ್ಯ ದೊರೆಯದೋ, ಯಾರು ಈ ಪ್ರಪಂಚದ ಭವಿಷ್ಯದ ಚಕ್ರೇಶನೋ ಅಂತ ಹವನಿಗೆ ಇಷ್ಟೊಂದು ಸಮೀಪದಲ್ಲಿ ತಾನು!

''ರಾಕೇಶ್ ನಿನ್ನ ಮನದ ಯೋಚನೆಗಳ ಬಗ್ಗೆ ನೀನು ನಾಚಬೇಡ. ಇಂತಹ ದುರ್ಯೋಚನೆಗಳು, ದುರ್ವ್ಯಾಪಾರಗಳೂ, ದುಷ್ಟಚೇಷ್ಟೆಗಳೂ ಇರುವ ಮನುಷ್ಯರೇ ಸೈತಾನನಿಗೆ ಪ್ರಿಯರು. ಮುಂದೆ ನಿನಗೆ ಒಳ್ಳೆಯ ಸ್ಥಾನವೇ ದೊರಕುತ್ತದೆ. ನೀನು ಮತ್ತಷ್ಟು ಇರುವ ಶ್ರದ್ಧೆ-ಭಕ್ತಿಗಳನ್ನು ಬುಡಸಹಿತವಾಗಿ ಕೀಳಬೇಕು. ಅದರ ಪ್ರಾರಂಭೋತ್ಸವ ಇಂದಿನ ರಾತ್ರಿಯೇ ನಡೆಯಲಿ ಪಿಶಾಚಿ, ಕಾದ್ರಾ ಅವರ ಮೂಳೆಗಳ ಪುಡಿಯನ್ನು ಪಯಿರುಗಳ ಮೇಲೆ ಚೆಲ್ಲಿ ಅವನ್ನೆಲ್ಲಾ ವಿಷಪೂರಿತಗೊಳಿಸು. ಇದರಿಂದ ಆ ಬೆಳೆಯನ್ನು ತಿಂದ ಗ್ರಾಮಸ್ಥರ ರೇತಸ್ಸು ವಿಕೃತಗೊಳಿಸು. ಇಲ್ಲಿ ಒಟ್ಟು ಎಂಟು ಮಂದಿ ಹುಟ್ಟಬೇಕು. ಎಂಟನೆಯವನು ಬೇಗ ಜನಿಸಬೇಕು...ಇನ್ನು ಹೊರಡಬಹುದು. ಅವಳನ್ನೂ ನಿನ್ನೊಂದಿಗೆ ಕರೆದುಕೊಂಡು ಹೋಗು. ಕ್ಷುದ್ರ ಗಣಾಧಿದೇವತೆ ಕಾಷ್ಮೋರಾಕ್ಕೆ ಹೆಂಗಸರೆಂದರೆ ತುಂಬಾ ಇಷ್ಟ''

ಅಂದು ಸಂಜೆ ಗೌರಿಯನ್ನು ರಾಕೇಶ್ ಕೇಳಿದ ''ರಾತ್ರಿಗೆ ನಾವೊಂದು ಸಾಹಸ ನಡೆಸೋಣವೇ?''

ಕೇದಾರಗೌರಿ ಅದೇನೂ ತಿಳಿಯಲಾರದೆ ''ಅದೇನು?''

''ಬಡ ರೈತರ ಗದ್ದೆಗಳಲ್ಲಿ ರಹಸ್ಯವಾಗಿ ಗೊಬ್ಬರ ಚೆಲ್ಲೋಣವೇ?''

ಅವಳಿಗೆ ಅರ್ಥವಾಗಲಿಲ್ಲ ''ಅದೇಕೇ?''

''ಸುಮ್ಮನೆ ಒಂದು ಥ್ರಿಲ್ ಅಷ್ಟೆ. ಸ್ವಲ್ಪ ದಿನವಾದ ನಂತರ ಈ ಸಂಗತಿ ಹೇಳೋಣ''

''ಇದರಲ್ಲಿ ಎಂಥಾ ಥ್ರಿಲ್?''

''ಪ್ಲೀಸ್...''

ಕೇದಾರಗೌರಿ ಈ ಬೇಡಿಕೆಗೆ ಒಪ್ಪಿದಳು.

## 6

ಕೂಷ್ಮಾಪುರ ಸುಂದರವಾದ ಊರು. ಒಂದು ಒಂದೂವರೆ ಸಾವಿರಕ್ಕಿಂತಲೂ ಹೆಚ್ಚು ಮನೆಗಳಿಲ್ಲ. ಕೊರಳ ಸುತ್ತಲೂ ಪಚ್ಚೆಹಾರದಂತೆ ಆ ಊರಸುತ್ತಲೂ ಹಸುರಾದ ಹೊಲಗದ್ದೆಗಳು. ಅಲ್ಲಿಯ ಜನರು ಮುಗ್ಧರು. ಇನ್ನೂ ರಾಜಕೀಯ ಅಲ್ಲಿ ಪ್ರವೇಶಿಸಿಲ್ಲ. ಅಲ್ಲಿರುವ ಅಂತರ 'ಕುಲ'ದ್ದೊಂದೇ. ಹೆಂಚಿನ ಮನೆಗಳು ಐವತ್ತಕ್ಕಿಂತಲೂ ಹೆಚ್ಚಿಲ್ಲ. ಊರಿನಲ್ಲಿ ದೇವಾಲಯವೊಂದಿದೆ. ಪಕ್ಕದಲ್ಲಿ ಕಲ್ಯಾಣಿ. ದೇವಾಲಯದಿಂದ ಶಾಲೆಯ ತನಕ ಇರುವ ರಸ್ತೆಯೇ ಊರಿಗೆಲ್ಲಾ ದೊಡ್ಡದು. ಅದರ ಪಕ್ಕದಲ್ಲಿಯೇ ವಿಶಾಲವಾದ ಅರಳೀಮರವಿದೆ. ಊರಿನ ಗಣ್ಯರು ಚುಟ್ಟಾ ಹಚ್ಚಿಕೊಂಡು ಅರಳೀಕಟ್ಟೆಯ ಮೇಲೆ ಕುಳಿತಿರುತ್ತಾರೆ. ಅಲ್ಲಿಂದ ಯಾವ ದಿಕ್ಕಿನಲ್ಲಿ ಒಂದು ಫರ್ಲಾಂಗ್ ನಡೆದರೂ ಊರಿನಿಂದ ಹೊರಕ್ಕೆ ಬರುತ್ತೇನೆ. ಅಲ್ಲಿಂದ ಗದ್ದೆಗಳು. ಭತ್ತದ ಗದ್ದೆಗಳೇ ಹೆಚ್ಚು.

ದೇವಾಲಯದ ಪಕ್ಕದ ಕಲ್ಯಾಣಿಯ ನೀರನ್ನಾಗಲಿ, ದೂರದ ಕೆರೆಯನೀರನ್ನಾಗಲಿ ಊರಿನವರಾರೂ ಕುಡಿಯಲು ಬಳಸುತ್ತಿರಲಿಲ್ಲ. ಊರಿನಲ್ಲಿ ನಾಲ್ಕು ಬಾವಿಗಳಿವೆ. ಅವುಗಳಲ್ಲಿ ಒಂದು ಬ್ರಾಹ್ಮಣರದು. ಇನ್ನೊಂದು ಶ್ಯಾನುಭಿಗರದು. ಉಳಿದೆರಡು ಊರಿನ ಉಳಿದ ಮಂದಿಗೆ.

ರಾತ್ರಿ ಒಂದು ಗಂಟೆಗೆ ಅವುಗಳಲ್ಲಿ ಕಾದ್ರಾ, ವಿಷಾಚಿಗಳ ಅಸ್ಥಿಚೂರ್ಣವನ್ನು ಬೆರೆಸಿದ ರಾಕೇಶ್. ಆಗ ಅವನೊಂದಿಗೆ ಕೇದಾರಗೌರಿ ಇರಲಿಲ್ಲ. ಅದಕ್ಕೂ ಒಂದು ಗಂಟೆ ಮೊದಲೇ ಅವಳೊಂದಿಗೆ ಹೋಗಿ ಗಾಳಿ ಬೀಸುವ ದಿಕ್ಕನ್ನು ಅನುಸರಿಸಿಅಚೂರ್ಣವನ್ನು ಗದ್ದೆಗಳ ಮೇಲೆ ತೂರಿದ್ದ. ಇದು ತೀರಾ ಕಷ್ಟದ ಕೆಲಸವಾಗಿತ್ತು. ''ಈ ಅರ್ಧ ರಾತ್ರಿಯಲ್ಲಿ ಯಾರ ಹೊಲದಲ್ಲಿ ಗೊಬ್ಬರ ಚೆಲ್ಲಲು ಸಾಧ್ಯ?'' ಎಂದು ತನ್ನ ವಿರೋಧವನ್ನು ತಿಳಿಸಿದ್ದಳು ಗೌರಿ.

ರಾಕೇಶ್ ''ಅದೆಲ್ಲಾ ದಾರಿಯಲ್ಲಿ ವಿವರಿಸುತ್ತೇನೆ. ಪ್ಲೀಸ್ ನನ್ನೊಡನೆ ಬಾ'' ಎಂದು ಅನುನಯದಿಂದ ಪ್ರಾರ್ಥಿಸಿದ್ದ.

ಎಲ್ಲರಂತೆ ಸಾಮಾನ್ಯಳಾಗಿಯೇ 'ರಾವೇ' ಪ್ರೋಗ್ರಾಂ ಮುಗಿಸಬೇಕೆಂಬುದು ಅವಳ ಇಷ್ಟ. ಅದಕ್ಕಾಗಿ ಅಲ್ಲಿಗೆ ಕಾರಲ್ಲಿ ಬರಬಾರದೆಂದೇ ತೀರ್ಮಾನಿಸಿದ್ದಳು. ಆದರೆ ಆಕೆಯ ತಂದೆ ಈ ತೀರ್ಮಾನವನ್ನು ಒಪ್ಪಲಿಲ್ಲ. ರಾಕೇಶ್ ಕೂಡ ಆಕೆಯ ತಂದೆಯನ್ನೇ ಸಮರ್ಥಿಸಿದ್ದ. ಆದ್ದರಿಂದ ಕಾರು ತರಬೇಕಾಯಿತು. ಅಂದಿನ ರಾತ್ರಿ ಅದೇ ಕಾರಿನಲ್ಲಿ ಅವರು ಊರಿನ ಉತ್ತರದಿಕ್ಕಿನಲ್ಲಿ ಮುಂದೆ ಸಾಗಿದರು. ಸ್ಟೀರಿಂಗ್ ಮುಂದೆ ರಾಕೇಶನಿದ್ದ. ಪಕ್ಕದಲ್ಲಿ ಕೇದಾರಗೌರಿ. ಅವರಿಬ್ಬರ ಮಧ್ಯೆ ಒಂದು ಚರ್ಮದ ಚೀಲ. ಅದರಲ್ಲಿ ಮಹಾ ಮಾಂತ್ರಿಕನೊಬ್ಬನ ಕುಲ್ಯ ಭಸ್ಮ, ಗಣಾಧಿಪತಿಯೊಬ್ಬನ ಶಲ್ಯ ಭಸ್ಮ ಇದೆ ಎಂಬುದಾಗಲಿ, ಜಗತ್ತನ್ನೆಲ್ಲಾ ಗಡಗಡನೆ ನಡುಗಿಸಬಲ್ಲ ಏಕೈಕ ಶಕ್ತಿ ಕಾಷ್ಮೋರಾವನ್ನು

ನಿಯಂತ್ರಿಸಿ ಶಾಸಿಸಬಲ್ಲ ಇಬ್ಬರು ಮಾಂತ್ರಿಕರ ಆ ಅಸ್ಥಿಭಸ್ಮ ಮಿಶ್ರಣದಿಂದ ಪ್ರಪಂಚವು ಅತ್ಯಂತ ದಾರುಣ ಭೀಭತ್ಸ ಪ್ರಮಾದವನ್ನು ಎದುರಿಸಲಿದೆ ಎಂಬುದಾಗಲಿ ಕೇದಾರಗೌರಿಗೆ ತಿಳಿದಿರಲಿಲ್ಲ.

ಊರು ಎಳೆ ಮಗುವಿನಂತೆ ನಿದ್ರಿಸುತ್ತಿದೆ. ಆ ಊರಿಗೂ ಏನೂಗೊತ್ತಿಲ್ಲ! ಕ್ಷುದ್ರ ಗಣಾಧಿಪತಿ ಕಾಷ್ಮೋರಾದ ಅಂಶದಿಂದ ಜನಿಸಿ, ಪ್ರಪಂಚವನ್ನೇ ತನ್ನ ಅಡಿಗಳ ಬಳಿಗೆ ಇಳಿಸಿ, ಒಳಿತನ್ನು ನಿರ್ದಯವಾಗಿ ಕೊಂದು, ಸೈತಾನನ ಸಾಮ್ರಾಜ್ಯ ಸ್ಥಾಪನೆಗಾಗಿ ಅಷ್ಟಾವಕ್ರನು ತಮ್ಮ ಗ್ರಾಮದಲ್ಲಿಯೇ ಜನಿಸಲಿದ್ದಾನೆ ಎಂಬುದು ಅವರು ಯಾರೂ ಅರಿಯರು.

ಅಷ್ಟಾವಕ್ರನಿಗೆ ಹಣೆಯಲ್ಲಿ ಒಂದು ಕಣ್ಣು. ಬೆರೆತು ಒಂದೇ ಆದ ಮೂಗು-ಬಾಯಿಗಳ ರಂಧ್ರ, ನಾಲ್ಕು ಕೈಗಳು, ಒಂದೇ ಸ್ತನ, ಕಿವಿಗಳ ಬಳಿಗೆ ಎಳೆದಂತೆ ಚರ್ಮ, ಬಾಗಿದ ಬೆನ್ನೆಲುಬು, ಇಲ್ಲ. ಜನನಾಂಗ, ಬಿಲ್ಲಿನಂತಹ ಕಾಲುಗಳು ಇದ್ದು ಅಷ್ಟ-ವಕ್ರ ಸಮಾಯುಕ್ತನಾಗಿರುತ್ತಾನೆ. ನೆತ್ತಿಯ ಮೇಲೊಂದು ಜುಟ್ಟು ಅವನು ಯೋನಿಯಿಂದಲ್ಲದೆ ಗರ್ಭದಿಂದಲೇ ನೇರವಾಗಿ ಹೊರಬರುತ್ತಾ ತಾಯಿಯ ಸಾವಿಗೆ ಕಾರಣನಾಗುತ್ತಾನೆಂದೂ, ಹುಟ್ಟುತ್ತಲೇ ತಂದೆಯನ್ನು ಕೊಲ್ಲುತ್ತಾನೆಂದೂ, ಹೀಗೆ ಅನಾಥನಾದವನು ಜನಿಸಿದ ಕೆಲವು ನಿಮಿಷಗಳಲ್ಲಿಯೇ ಉಸ್ಪೋಕ್‌ನ ಭೂಗತ ಜಗತ್ತಿನಲ್ಲಿ ಬೆಳೆಸಲ್ಪಡುತ್ತಾನೆಂದೂ, ಅಲ್ಲಿ ಮೂರನೆಯವರ ದೃಷ್ಟಿಗೇ ಬೀಳದಂತೆ ರಕ್ಷಿಸಲ್ಪಡುತ್ತಾನೆಂದೂ, ನಂತರದಲ್ಲಿ ಸರ್ವಶಕ್ತಿ ಸಂಪನ್ನನಾಗಿ ಹಂದಿಗಳನ್ನು, ಮೊಸಳೆಗಳನ್ನು, ಎಮ್ಮೆಗಳನ್ನು, ನಾಯಿಗಳನ್ನು ವಶೀಕರಣ ಮಾಡಿಕೊಳ್ಳುತ್ತಾನೆಂದೂ, ಈ ಮಾನವಾತೀತ ಶಕ್ತಿಗೆ ತಿಳಿವು ಇರುವವರೂ, ಶಾಸ್ತ್ರಜ್ಞರೂ, ಎಲ್ಲರೂ 'ದಾಸೋಹಂ' ಎನ್ನುತ್ತಾರೆಂದೂ, ಹಾಗನ್ನದವರು ಸಾವನ್ನಪ್ಪುತ್ತಾರೆ ಎಂದೂ ನಂಬದವರು ಉಸ್ಪೋಕ್ ಸದಸ್ಯವರ್ಗದಲ್ಲೇ ಕೆಲವರಿದ್ದಾರೆ.

ಅಷ್ಟಾವಕ್ರನು ಅಷ್ಟಮ ಗರ್ಭತಾನೇ? ಮೊದಲು ಒಂದು ವಕ್ರದ ಕೂಸು ಜನಿಸಲಿ. ನಂತರದಲ್ಲಿ ನೋಡೋಣ ಎನ್ನುವವರೂ ಇದ್ದಾರೆ.

ಉಸ್ಪೋಕ್ ಗ್ರಾಂಡ್ ಮಾಸ್ಟರ್‌ರೆಡ್ ಸ್ಪೊಲಿಟನ್ಸ್ ಮೊದಲ ಪರೀಕ್ಷೆಯಲ್ಲಿಯೇ ಇವರ ಮನದಾಳವನ್ನು ಅರಿತಿದ್ದರು. ಆದರೂ ಕಂಡೂಕಾಣದಂತೆ ಇದನ್ನು ಬಿಟ್ಟಿದ್ದಾರೆ. ಸಂಶಯ ತಪ್ಪಲ್ಲ. ಅದು ನಂಬಿಕೆಯಾಗಿ ಮಾರ್ಪಡುವ ಅವಕಾಶ ಇದ್ದೇ ಇದೆ. ಆದರೆ ದ್ರೋಹದ ಮಾತೇ ಬೇರೆ. ಕಿಂಚಿತ್ ದ್ರೋಹವನ್ನೂ ಉಸ್ಪೋಕ್ ಸಹಿಸದು.

''ನಾನೊಂದು ಮಾತು ಹೇಳಿದರೆ ತಮಾಷೆ ಮಾಡೋಲ್ಲ ತಾನೇ?'' ರಾಕೇಶ್ ಕಾರನ್ನು ನಡೆಸುತ್ತಾ ಕೇಳಿದ.

ಗೌರಿ ''ಅದೇನು?'' ಎಂದಳು ಸಾಧಾರಣ ಧ್ವನಿಯಲ್ಲಿ.

''ಈ ಭಸ್ಮವನ್ನು ಒಬ್ಬ ಬೈರಾಗಿ ಕೊಟ್ಟ, ಇದನ್ನು ಪಯಿರಿನ ಮೇಲೆ ಚೆಲ್ಲಿದರೆ ಬೆಳೆ ತುಂಬಾ ಚೆನ್ನಾಗಿರುತ್ತದೆಯಂತೆ. ಇದು ಗೊಬ್ಬರವಲ್ಲ''

''ಇದೇನು ಹುಚ್ಚಾಟ? ಕಾರನ್ನು ಹಿಂದಕ್ಕೆ ತಿರುಗಿಸು''

''ಇದೇನು ಹುಚ್ಚಾಟ? ಕಾರನ್ನು ಹಿಂದಕ್ಕೆ ತಿರುಗಿಸು''

''ಪ್ಲೀಸ್...ಹಾಗೆನ್ನಬೇಡ. ನನ್ನ ನಂಬಿಕೆ ನನ್ನದು. ನಮ್ಮ 'ರಾವೇ' ಪ್ರೋಗ್ರಾ ಕೂಡ ಮುಗಿಯುತ್ತಾ ಬರುತ್ತಿದೆ. ಮತ್ತೆ ಈ ಊರಿಗೆ ನಾವು ಬರುವುದಿಲ್ಲ. ಹೋಗುವಾಗ ಸ್ವಲ್ಪ ಒಳ್ಳೆಯದನ್ನು ಮಾಡಿ ಹೋಗುವುದರಲ್ಲಿ ತಪ್ಪೇನು?'' ಎಂದ ರಾಕೇಶ್.

''ನೀನು ಹೀಗೆ ಮೌಢ್ಯದ ಶಿಷ್ಯನೆಂಬುದು ಗೊತ್ತಿರಲಿಲ್ಲ''

''ಈ ದಿನ ಶುಕ್ರವಾರ ತಾನೇ?''

''ಹೌದು ಏಕೆ?''

''ಇಂದೇ ಏಕೆ ಅಭ್ಯಂಜನ ಸ್ನಾನ ಮಾಡಬೇಕು? ಅವರವರ ನಂಬಿಕೆ ಅವರದು''

ಅವಳ ಬಳಿ ಈ ಮಾತಿಗೆ ಉತ್ತರವಿರಲಿಲ್ಲ. ಒಂದು ಸಂಪ್ರದಾಯ, ಇನ್ನೊಂದು ನಂಬಿಕೆ. ಇವೆರಡರ ಅಂತರವನ್ನು ವಿವರಿಸುವ ಅವಶ್ಯಕತೆ ಇಲ್ಲ.

ಆ ಊರನ್ನು ನಗರದೊಂದಿಗೆ ಬೆರೆಸುವ ಆ ಹಾದಿಯಲ್ಲಿ ಕಾರು ನಿಂತಿತು. ದಿನಕ್ಕೊಮ್ಮೆ ಮಾತ್ರವೆ ಬಸ್ ಆ ದಾರಿಯಲ್ಲಿ ಬರುತ್ತದೆ. ಕಾರನ್ನು ನಿಲ್ಲಿಸಿ ''ಇಳಿ'' ಎಂದ ರಾಕೇಶ್.

''ನಾನ್ಯಾಕೆ?'' ಎಂದಳು ಕೇಂದಾರಗೌರಿ. ಈ ಕೆಸವೇನಿದೆಯೋ ಅದನ್ನು ನೀನೇ ಮಾಡು ಎನ್ನುವಂತೆ.

ಅವನು ಸ್ವಲ್ಪ ನಾಚುತ್ತಾ ''ಈ ಕೆಲಸದಲ್ಲಿ ಹೆಂಗಸೂ ಇರಬೇಕಂತೆ'' ಎಂದ. ''ನಾಳೆ ಬೆಳೆ ಹೆಚ್ಚಾದಾಗ ಬರುವ ಪುಣ್ಯದಲ್ಲಿ ನಿನಗೂ ಪಾಲಿರುತ್ತದೆ?''

''ಸಾಕು ಮಾಡು ನಿನ್ನ ಪುರಾಣ'' ಎನ್ನುತ್ತಾ ಗೌರಿ ಕಾರಿನಿಂದ ಇಳಿದಳು.

ಅವನೆಂದರೆ ಆಕೆಗೆ ಪ್ರೇಮವಿಲ್ಲದೆ ಇರಬಹುದು ತಾಯಿಯೊಬ್ಬಳಿಲ್ಲದೆಯೇ ತಾನಲಷ್ಟು ಒಂಟಿತನವನ್ನು ಆಗಾಗ ಅನುಭವಿಸುತ್ತಿರುವಳೆಂಬುದು ಅವಳಿಗೆ ತಿಳಿಯದ್ದೇನೂ ಅಲ್ಲ. ಅಂತಹುದರಲ್ಲಿ ತಾಯಿ-ತಂದೆಗಳಿಬ್ಬರೂ ಇಲ್ಲದ ಅವನನ್ನು ಯಾವುದೇರೀತಿ ನೋವಿಗೆ ಗುರುಮಾಡಬಾರದು ಎಂಬ ವಾತ್ಸಲ್ಯ ಆದ್ದರಿಂದಲೇ ಕಾರಿನಿಂದ ಇಳಿದಳು.

ದಕ್ಷಿಣ ದಿಕ್ಕಿನಿಂದ ಗಾಳಿ ಬಲವಾಗಿ ಬೀಸುತ್ತಿದೆ. ಗೌರಿಯ ಸೆರಗು ಪಟಪಟನೆ ಸದ್ದುಮಾಡುತ್ತಾ ಗಾಳಿಯಲ್ಲಿ ಆಡುತ್ತಿದೆ. ಮನುಷ್ಯನನ್ನೇ ಪಕ್ಕಕ್ಕೆ ತಳ್ಳುವಷ್ಟು ಬಲವಾಗಿದೆ ಗಾಳಿ.

''ಏನು ಮಾಡಬೇಕು''

''ಯಲ್ಲಿ ಕೈಹಿಡಿ'' ಎನ್ನುತ್ತಾ ಚೀಲವನ್ನು ತೆಗೆದ.

ಇದ್ದಕ್ಕಿದ್ದಂತೆ ಗಾಳಿ ತನ್ನ ಚಲನೆ ನಿಲ್ಲಿಸಿತು!

ಬಲವಾಗಿ ಬೀಸುತ್ತಿದ್ದ ಗಾಳಿ ಇದ್ದಕ್ಕಿದ್ದಂತೆಯೇ ನಿಂತಿದ್ದನ್ನು ಅವಳೂ ಗಮನಿಸಿ ಅಚ್ಚರಿಗೊಂಡಳು. ಮಳೆಯೇನಾದರೂ ಬರುವುದೇನೋ ಎಂದು ಆಕಾಶ ನೋಡಿದರೆ ನಿರ್ಮಲವಾಗಿದೆ. ಅಷ್ಟರಲ್ಲಿ ಅವನು ಭಸ್ಮವನ್ನು ಅವಳ ಕೈಯಲ್ಲಿರಿಸಿದ.

''ಈ ಬೂದಿ ಯಾವ ಗದ್ದೆಯ ಮೇಲೆ ಬಿದ್ದರೆ ಆ ಗದ್ದೆಯಲ್ಲಿ ಬೆಳೆಚೆನ್ನಾಗಿ ಬರುತ್ತಲ್ಲಾ! ಇದರ ಎಫೆಕ್ಟ್ ಪಕ್ಕದ ಗದ್ದೆನೂ ಇದೆಯೋ?'' ನಗುತ್ತಾ ಕೇಳಿದಳು.

ಅವನು ನಗಲಿಲ್ಲ ಗಂಭೀರನಾಗಿದ್ದ.

ದೂರದಲ್ಲೆಲ್ಲೋ 'ಸ್ ಸ್ ಸ್...' ಎಂದು ಸಪ್ಪಳ ಕೇಳಿಸಿತು ಇಬ್ಬರೂ ಅತ್ತ ನೋಡಿದರು. ಬೆಟ್ಟಗಳ ಆಚೆಯಿಂದ ಸುರಳಿ ಸುತ್ತುತ್ತಾ ಬರುತ್ತಿರುವ ಸುಳಿಗಾಳಿ, ಬೆಳ್ದಿಂಗಳಲ್ಲಿ ಧೂಳು ಸ್ಪಷ್ಟವಾಗಿ ಕಾಣಿಸುತ್ತಿದೆ. ಸದ್ದು ಗುಂಡಿಗೆಯನ್ನು ನಡುಗಿಸುವಂತಿದೆ. ಅದು ಇತ್ತಕಡೆಯೇ ಸಾಗಿಬರುತ್ತಿದೆ. ಅವನೇಕೋ ನಡುಗಿದ.

ಪಂಚಭೂತಗಳಲ್ಲಿ ಮೊದಲಿನದಾದ ಗಾಳಿ ಎರಡನೆಯದಾದ ಆಕಾಶಕ್ಕೆ ತಲುಪಿಸಲೆಂದೇನೋ ಅವಳ ಕೈಯಲ್ಲಿದ್ದ ಭಸ್ಮವನ್ನು ಮೇಲಕ್ಕೆಹಾರಿಸಿಕೊಂಡು ಹೋಯಿತು. ಅದು ಭೂಮಿಯನ್ನೆಲ್ಲಾ ಆವರಿಸಿತು. ಭೂಮಿ ನೋವಿನಿಂದ ವಿಲಾಪಿಸಿದಂತೆ ಮುಲುಕು ಆಕಾಶವು ಸುಟ್ಟಂತೆ ಬೆಳಕು.

ಪೋಲಿಯೋ ಕಾಲಿನಿಂದ ನಿಂತಿರಲು ಸಾಧ್ಯವಾಗದೆ ಕೆಳಕ್ಕೆ ಕುಳಿಸಿದವಳು ಸೈರಿಸಿಕೊಂಡು ನಿಂತಳು ಕೇದಾರಗೌರಿ.

ಸುತ್ತಲೂ ಇದ್ದ ಪಯಿರುಗಳಿಗೇ ಬಾಯಿದ್ದರೆ ಆಕೆ ಮಾಡುತ್ತಿದ್ದ ಕೆಲಸವನ್ನು ಇಡೆಯಲು ಏಕಕಂಠದಿಂದ ಅರಚುತ್ತಿದ್ದವೇನೋ? ತನ್ನ ಶಕ್ತಿಯನ್ನೆಲ್ಲಾ ಕಳೆದುಕೊಂಡವಳಂತೆ ಪ್ರಯತ್ನಪೂರ್ವಕವಾಗಿ ಕಾರಿನ ಬಳಿಗೆ ನಡೆದುಒಳಗೆ ಕುಳಿತಳು.

ತನ್ನ ಕೆಲಸ ಮುಗಿಸಿದ ನಂತರ ಕಾರನ್ನು ಸ್ಟಾರ್ಟ್ ಮಾಡಿದ. ಕಾರು ಚಲಿಸುತ್ತಿದ್ದಂತೆ ಮಳೆಯ ಹನಿ ಉದುರಿತು. ಮರು ನಿಮಿಷವೇ ಧಾರಾಕಾರವಾದ ಮಳೆ. ಪಯಿರುಗಳ ಮೇಲೆ ಪೂರೆಯಾಗಿ ಹರಡಿದ ಭಸ್ಮ ಮತ್ತೆ ಗಾಳಿಗೆ ಮೇಲೆ ಹಾರದಂತೆ ಒಂದೇ ಸಮನೆ ಮಳೆ. ಆಕಾಶದಿಂದ ಕುಂಭದ್ರೋಣದಂತೆ ವರ್ಷ.

ಕಾರು ಊರಿನತ್ತ ಹೋಗುತ್ತಿದ್ದಾಗ ''ಅಯ್ಯೋ, ಅದೇನು ಆ ಕಡೆ ನೋಡು'' ಎಂದಳು.

ಗದ್ದೆಗಳಲ್ಲಿ ಬೆಂಕಿ. ''ಯಾರೋ ಕಬ್ಬಿನ ತೋಟಕ್ಕೆ ಬೆಂಕಿ ಇಡುತ್ತಿದ್ದಾರೆ'' ಎಂದು ಹಿಂತಿರುಗಿ ನೋಡದೆ.

''ಇದೇನು ಹೇಳ್ತಿಯ? ಈಗ ಕಬ್ಬು ಎಲ್ಲಿಯದು. ಇಷ್ಟೊಂದು ಮಳೆ

ಹಾಯುತ್ತಿದ್ದರ ಆ ಊರಿ ಎಲ್ಲಿರುತ್ತ?''

ಆ ಮಾತಿಗೆ ಅವನೇನೂ ಉತ್ತರಿಸಲಿಲ್ಲ. ಪಂಚಭೂತಗಳಲ್ಲಿ ಕೊನೆಯದಾದ ಅಗ್ನಿಯನ್ನು ಪ್ರಸನ್ನಗೊಳಿಸಿಕೊಳ್ಳಲು ಉಸ್ಸೋಕ್ ನಡೆಸುತ್ತಿರುವ ಕಾರ್ಯ ಅದೆಂದು ಅವನಿಗೆ ತಿಳಿದಿತ್ತು.

ಕಾರು ಊರನ್ನು ಪ್ರವೇಶಿಸಿತು...

ಮಾನವನ ಜೀವನದಲ್ಲಿ ಅತಿ ಮುಖ್ಯವಾದ ತಿರುವು ನೀಡುವ ಘಟನೆಗಳೆಲ್ಲಾ ಅನಿರೀಕ್ಷಿತವಾಗಿಯೇ ನಡೆಯುತ್ತಿರುತ್ತವೆ. ಕೆಲವು ಘಟನೆಗಳು ಬಾಳದಿಕ್ಕನ್ನೇ ಬದಲಿಸುವಷ್ಟು ಬಲವಾಗಿರುತ್ತವೆ. ಅಂತಹ ಘಟನೆಯೊಂದು ಕೇಂದರಗೌರಿಯ ಬದುಕಿನಲ್ಲಿ ಅಂದು ನಡೆಯಿತು.

ರಾವೇ ಕಾರ್ಯಕ್ರಮ ಮುಗಿಯುತ್ತಾ ಬಂತು. ಇನ್ನೊಂದು ವಾರದಲ್ಲಿ ಎಲ್ಲರೂ ಹಿಂತಿರುಗಬೇಕು.

ಗದ್ದೆಯ ಮಧ್ಯೆ+ಯ ನಿಂತು ರೈತನೊಂದಿಗೆ ಕೇದಾರಗೌರಿ ಏನೋ ಮಾತನಾಡುತ್ತಿದ್ದಾಳೆ. ಅಂಗಾಲ ಬಳಿ ಬಹುಹೊತ್ತಿನಿಂದ ಕೆರೆಯುತ್ತಿದ್ದಂತೆ ಅನಿಸುತ್ತಿತ್ತು. ಮಾತಿನಲ್ಲಿ ಅದನ್ನು ಉಪೇಕ್ಷಿಸಿದ್ದಳು. ಕೆರೆತ ಹೆಚ್ಚಾದಾಗ ಅದನ್ನು ಗಮನಿಸಿದಳು. ಅವಳಿಗೆ ಅವರಿಲ್ಲದಂತೆ ಚಟ್ಟನೆ ಚೀರಿದಳು.

ಪೆನ್ಸಿಲ್ ಗಾತ್ರದ ಜಿಗಣೆಯೊಂದು ಅವಳ ಪಾದವನ್ನು ಕಚ್ಚಿ ಹಿಡಿದು ರಕ್ತವನ್ನು ಸೆಳೆಯುತ್ತಿದೆ.

ವೃದ್ಧನಾದ ರೆಎತ ಅದನ್ನು ಕಿತ್ತು ತೆಗೆಯಲು ಪ್ರಯತ್ನಿಸಿದ. ಆಗಲಿಲ್ಲ. ಚರ್ಮಕ್ಕೆ ಅಂಟಿಕೊಂಡಿದೆ ಜಿಗಣೆ.

ಕೇಂದಾರಗೌರಿಯ ಕೂಗು ನಿಲ್ಲಲಿಲ್ಲ.

ಸ್ವಲ್ಪ ದೂರದಲ್ಲಿ ಪಯಿರನ್ನು ಪರೀಕ್ಷಿಸುತ್ತಿದ್ದ ಸಿದ್ಧಾರ್ಥ ಅಲ್ಲಿಗೆ ಓಡುತ್ತಾ ಬಂದ. ಜೇಬಿನಿಂದ ಚಿಕ್ಕ ಚಾಕುವನ್ನು ತೆಗೆದು ಜಿಗಣೆಯನ್ನು ಬೇರ್ಪಡಿಸಿದ.

ಆ ವೇಳೆಗೆ ಕೇದಾರಗೌರಿ ಅರೆ ಪ್ರಜ್ಞಾಸ್ಥಿತಿಗೆ ಜಾರಿದ್ದಳು. ಯಾರೋ ತನ್ನನ್ನು ನಡೆಸಿಕೊಂಡು ಹೋಗುತ್ತಿದ್ದಾರೆ ಎಂಬುದು ಮಾತ್ರವೇ ಗೊತ್ತು ಅವಳಿಗೆ. ''ಸ್ವಲ್ಪ ಹೊತ್ತು ಮಲಗಮ್ಮ'' ಎಂದು ಹೇಳುತ್ತಿದ್ದಾರೆ. ಹಗ್ಗದಿಂದ ಹೆಣೆದ ಮಂಚದ ಮೇಲೆ ಬಿದ್ದುಕೊಂಡಳು.

ಕಣ್ತೆರೆದಾಗ ಒಬ್ಬಾಕೆ ನಿಂತಿದ್ದಳು. ಹಣೆಯಲ್ಲಿ ಕುಂಕುಮವಿಲ್ಲ. ಬಳಿಯಲ್ಲಿದ್ದ ಸಿದ್ಧಾರ್ಥ ''ನಮ್ಮ ತಾಯಿ'' ಎಂದ.

ಗೌರಿ ಏಳಲು ಪ್ರಯತ್ನಿಸಿದರೆ ಆಕೆ ''ಇನ್ನೂ ಸ್ವಲ್ಪ ಹೊತ್ತು ಮಲಗಮ್ಮ'' ಎಂದಳು.

ಆಕೆಯ ಹೆಸರು ಪಾರ್ವತಿ. ಇಪ್ಪತ್ತೈದು ವರ್ಷಗಳ ಹಿಂದೆಯೇ ಆಕೆಯನ್ನು

ವೈಧವ್ಯ ಆವರಿಸಿತ್ತು. ಆಕೆ ತಂದುಕೊಟ್ಟ ಮಜ್ಜಿಗೆಯನ್ನು ಕುಡಿದು ಗೌರಿ ಎದ್ದಳು. ಕೈಜೋಡಿಸಿ ನಮಸ್ಕರಿಸುತ್ತಾ ''ಬರ್ತೀನಮ್ಮಾ, ಅನಾವಶ್ಯಕವಾಗಿ ಚಿಕ್ಕ ಸಂಗತಿಗೆ ಇಷ್ಟೊಂದು ತೊಂದರೆಕೊಟ್ಟೆ'' ಎಂದಳು.

''ಇದೇನು ಮಾತು? ಇದೆಲ್ಲಾ ತೊಂದರೆಯೇ''

ಸಿದ್ಧಾರ್ಥನೊಂದಿಗೆ ಆಕೆ ಹೊರಕ್ಕೆ ಬಂದಳು.

''ನಿಮ್ಮದು ಇದೇ ಊರೆಂದು ನನಗೆ ಗೊತ್ತಿರಲಿಲ್ಲ'' ಎಂದಳು.

ಸಿದ್ಧಾರ್ಥ ಉತ್ತರಿಸದೆ ನಸುನಕ್ಕ.

''ಈ ಮನೆ, ಈ ಗದ್ದೆ ನಿಮ್ಮದೇನೇ?'' ಎಂದು ಕೇಳಿದಳು ತಾನು ಬಂದ ಗುಡಿಸಲು, ಪಕ್ಕದ ಗದ್ದೆ ತೋರಿಸುತ್ತಾ.

ಸಿದ್ಧಾರ್ಥ ''ಒಂದು ರೀತಿಯಲ್ಲಿ ನಮ್ಮದೆ, ಇನ್ನೊಂದು ರೀತಿಯಲ್ಲಿ ಅಲ್ಲ'' ಎಂದ.

''ಹಾಗೆಂದರೆ?''

''ಆ ಮಾತು ಈಗೇಕೆ?...ಬಿಡಿ'' ಎಂದ ಸಿದ್ಧಾರ್ಥ.

''ನಿಮ್ಮದು ಈ ಊರೆಂದು ಇದುವರೆಗೂ ಹೇಳಲೇ ಇಲ್ಲವಲ್ಲ! ನಾವೆಲ್ಲಾ ಊಟಕ್ಕೆ ಬರುತ್ತೇವೆ ಎನ್ನುವ ಭಯವೇನೋ?'' ಎನ್ನುತ್ತಾ ಅವನತ್ತ ನೋಡಿ ನಕ್ಕಳು ಗೌರಿ.

''ಅದೇನು ಭಯ ಹುಟ್ಟಿಸುವ ವಿಷಯವಲ್ಲ. ಒಂದು ವೇಳೆ ನಾನೇ ನಿಮ್ಮನ್ನೆಲ್ಲಾ ಊಟಕ್ಕೆ ಆಹ್ವಾನಿಸಿದರೆ ಅದನ್ನು ಹೇಗೆ ತಪ್ಪಿಸಿಕೊಳ್ಳುವುದೆಂದು ನಿಮ್ಮಲ್ಲಿ ಬಹುಮಂದಿ ಯೋಚಿಸುವುದೂ ನನಗೆ ಗೊತ್ತಿದೆ''

ಒಡನೆಯೇ ''ಕ್ಷಮಿಸಿ, ನನ್ನ ಉದ್ದೇಶ ಅದಲ್ಲ'' ಎಂದಾಗ ಅವಳಲ್ಲಿ ತನ್ನ ಮಾತಿಗೆ ಪಶ್ಚಾತ್ತಾಪವಿತ್ತು.

''ನಾನೂ ಸುಮ್ಮನೆ ಹೇಳಿದೆ ಅಷ್ಟೆ'' ಎಂದ ಸಿದ್ಧಾರ್ಥ.

## 7

ಇನ್ನೆರಡು ದಿನಗಳಲ್ಲಿ ಅವರ ಪ್ರೋಗ್ರಾಂ ಮುಗಿಯುತ್ತದೆ. ಅಗ್ರಿಕಲ್ಚರಲ್ ಯಕ್ಸ್‌ಟೆನ್ಷನ್ ಆಫೀಸರ್ ಜೀಪಿನಲ್ಲಿ ಕೆಲವು ಮಂದಿ ವಿದ್ಯಾರ್ಥಿನಿಯರನ್ನು ಗದ್ದೆಗಳ ಬಳಿ ಕರೆತಂದು ಬಿಟ್ಟುಹೋದರು.

ಕ್ರಿಮಿನಾಶಕಗಳನ್ನು ಸಿಂಪಡಿಸುವುದನ್ನು ತಾವೇ ಮಾಡಿ ತೋರುತ್ತಾ ಓಡಾಡುವಾಗ ಒಂದು ಗದ್ದೆಯ ಅಂಚಿಗೆ ಬಂದರು. ಆಗ ಸಿದ್ಧಾರ್ಥನ ನೆನಪಾಗಿ ''ಇದು ನಮ್ಮ

ಸಿದ್ಧಾರ್ಥನ ಗದ್ದೆಯಲ್ಲವೇ?'' ಎಂದು ಕೇಳಿದಳು ಕೇದಾರಗೌರಿ.

''ಹೌದವ್ವ. ಇದ್ನ ದೊಡ್ಡ ಸ್ವಾಮ್ಯೋಗೇ ಭೋಗ್ಯ ಮಾಡ್ಯತಿ'' ಎಂದ ಒಬ್ಬ ಕೂಲಿಯಾಳು.

''ಅದು ಅವ್ರ ಅಮ್ಮ ಮಾಡಿರೋದು'' ಎಂದು ಸೇರಿಸಿದ ಇನ್ನೊಬ್ಬ.

ನಂತರದಲ್ಲಿ ಕೇದಾರಗೌರಿ ಸಿದ್ಧಾರ್ಥನನ್ನು ಭೇಟಿಯಾದಾಗ ನಗುತ್ತ ''ನಿಮ್ಮ ರಹಸ್ಯ ನನಗೆ ಈಗ ಗೊತ್ತಾಗಿದೆ. ಗದ್ದೆ ನಿಮ್ಮದೆ ಆಗಿದ್ದೂ ಆಗದಿರುವುದು ಎಂದರೆ ಹೇಗೆ ಅನ್ನೋದು!''

''ಅದನ್ನು ಯಾರು ಹೇಳಿದರು?''

''ಆಕೆ ಹೇಳಿದಳು!''

''ನನ್ನ ಚಿಕ್ಕಂದಿನಲ್ಲಿಯೇ ತಂದೆ ಹೋದರು. ಅಮ್ಮ ಆ ಎರಡು ಎಕರೆಯನ್ನು ಎರಡು ಸಾವಿರಕ್ಕೆ ಭೋಗ್ಯ ಮಾಡಿದ್ದಳು. ಆ ಹಣದಿಂದ ನನ್ನ ಓದು ಇಂಟರ್‌ಮೀಡಿಯೆಟ್ ತನಕ ಸಾಗಿತು'' ಸಿದ್ಧಾರ್ಥ ವಿವರಿಸಿದ.

''ಈ ಹಣಕ್ಕೆ ಬಡ್ಡಿ ತುಂಬಾ ಹೆಚ್ಚಾಗಿರಬೇಕಲ್ಲವೇ?''

''ಬಡ್ಡಿ ಇಷ್ಟೆಂದೇನು ಇಲ್ಲ. ಹಣ ಕೊಟ್ಟಿರುವಾತನೇ ಗದ್ದೆಯನ್ನು ಗೇಣಗೆ ತೆಗೆದುಕೊಂಡಿದ್ದಾನೆ. ಸಾಲ ಪೂರ್ತಿಯಾಗಿ ಸಂದಾಯವಾಗುವವರೆಗೂ ಇದರಲ್ಲಿ ಬಂದದ್ದೆಲ್ಲಾ ಆತನದೇ! ಅದೇ ಬಡ್ಡಿ...''

ಈ ವಿಷಯ ತಿಳಿದು ಖಿತಿಗೊಂಡು ತುಂಬಾ ಹೊತ್ತು ಮೌನವಾಗಿದ್ದಳು. ನಂತರ ''ಕ್ರಾಂತಿ ಕ್ರಾಂತಿ ಎನ್ನುತ್ತಾರೆ. ಅದು ಅನಿವಾರ್ಯ ಎನ್ನುವುದು. ಈ ಉದಾಹರಣೆಗಳನ್ನೆಲ್ಲಾ ಕೊಟ್ಟು ಏಕೆ ವಿವರಿಸಬಾರದು?'' ಎಂದಳು ತನ್ನಲ್ಲಿ ತಾನೇ ಹೇಳಿಕೊಳ್ಳುವಂತೆ.

ಸಿದ್ಧಾರ್ಥ ಈ ಮಾತಿಗೆ ನಗುತ್ತಾ ''ಬೇರೆಯವರ ಸಂಗತಿ ಹೇಗೋ ನನಗೆ ತಿಳಿದಿಲ್ಲ. ನಮಗೆ ಸಾಲ ಕೊಟ್ಟಿರುವಾತ ಮಾತ್ರ ಒಳ್ಳೆಯವನೇ. ಆತನೇ ಮನಸ್ಸು ಮಾಡಿದ್ದರೆ ಈ ಗದ್ದೆ ಇಂದು ನಮ್ಮದು ಎಂದು ಹೇಳಿಕೊಳ್ಳುವಂತೆಯೂ ಇರುತ್ತಿರಲಿಲ್ಲ'' ಎಂದ./

''ಹೀಗೆ ಎಷ್ಟು ದಿನದಿಂದ ನಡೆಯುತ್ತಿದೆ?''

''ಹದಿನಾರು ವರ್ಷಗಳಿಂದ''

ಗೌರಿಗೆ ಗಾಬರಿಯಾಯಿತು...''ಎರಡು ಸಾವಿರ ತೀರಲು ಹದಿನಾರು ವರ್ಷವೂ ಸಾಲದೆ?''

''ಇಷ್ಟು ವರ್ಷಗಳಿಂದ ಕೇವಲ ಬಡ್ಡಿ ಕಟ್ಟುವುದು ಮಾತ್ರ ಸಾಧ್ಯವಾಗಿದೆ. ಅಸಲನ್ನು ಹಿಂತಿರುಗಿಸಿದ್ದೆಲ್ಲಿ?'' ಎಂದು ಕೇಳಿದ ಸಿದ್ಧಾರ್ಥ.

ಆಕೆಗೆ ಏನೂ ಅನುಮನವಾಯಿತು. ''ಹಾಗಿದ್ದರೆ ಇಷ್ಟು ಕಾಲವೂ

ನಿಮ್ಮ ಜೀವನಕ್ಕೆ ಮಾರ್ಗ?''

''ಅಮ್ಮ ಇದೇ ಗದ್ದೆಯಲ್ಲಿ ಆಳಾಗಿ ದುಡಿಯುತ್ತಾಳೆ. ನಾನು ತಿಂಗಳಿಗೆ ನೂರೋ ಇನ್ನೂರೋ ಕಳುಹಿಸುತ್ತೇನೆ''

''ಹೇಗೆ?''

''ಟ್ಯೂಷನ್ ಹೇಳಿ''

ಕೇದಾರಗೌರಿ ಸ್ಥಬ್ಧಳಾದಳು. ಅದನ್ನು ಸಿದ್ಧಾರ್ಥ ಗಮನಿಸಲಿಲ್ಲ. ತಲೆತಗ್ಗಿಸಿಕೊಂಡು ತನ್ನ ಮಾತನ್ನು ಮುಂದುವರಿಸುತ್ತಿದ್ದ ''ನಾನೆಷ್ಟು ಪ್ರಯತ್ನಿಸಿದರೂ ಅದಕ್ಕಿಂತಲೂ ಹೆಚ್ಚು ಗಳಿಸುವುದು ಸಾಧ್ಯವಾಗುತ್ತಿಲ್ಲ. ಬೇಗ ಕೆಲಸ ಸಿಕ್ಕರೆ ತಿಂಗಳಲ್ಲಿ ಅಸಲನ್ನು ತೀರಿಸಬಹುದು. ಅದುರವೆವಿಗೂ ಕೆಲಸ ಮಾಡಬೇಡಿ ಎಂದರೆ ಅಮ್ಮ ನನ್ನ ಮಾತು ಕಿವಿಗೇ ಹಾಕಿಕೊಳ್ಳುವುದಿಲ್ಲ. ಮಗ ಅಗ್ರಿಕಲ್ಚರಲ್ ಬಿಎಸ್ಸಿ, ತಾಯಿ ಕೂಲಿ...''

ಅವನ ಮಾತು ಅವಳ ಕಿವಿಗೆ ಬೀಳುತ್ತಿಲ್ಲ. ಆಗ ಆಕೆಯ ಮನಸ್ಸು ವಿಕಲಗೊಂಡಿತ್ತು.

★★★

ತುಂಬಾ ಸಾಧಾರಣವಾಗಿ ಮಾತನಾಡುತ್ತಿದ್ದರೂ ಅದರಲ್ಲಿ ಯಾವುದಾದರೂ ಒಳ್ಳೆಯದಿದ್ದರೆ, ತುಂಬಾ ಸಾಧಾರಣ ಸಂಗತಿ ಎನ್ನುವಂತೆ ಆಗ ಅದನ್ನು ಕೇಳಿದ್ದರೂ ಅದನ್ನು ತುಂಬಾ ಜಾಗರೂಕತೆಯಿಂದ ನೆನಪಿನಲ್ಲಿರಿಸಿಕೊಳ್ಳುವುದು ಕೇದಾರಗೌರಿಯ ಅಭ್ಯಾಸ. ತಾನು ಅಂದಗಾತಿಯಲ್ಲವೆಂದು, ತೀರಾ ಸಾಧಾರಣವಾದ ಸೌಂದರ್ಯವೂ ತನ್ನದಾಗಿಲ್ಲವೆಂಬುದನ್ನು ಆಕೆ ಬಲ್ಲಳು. ಇದಕ್ಕೆ ಜೊತೆಯಾಗಿ ಕುಂಟು. ತಾನು ಓದಿನಲ್ಲಿ ಚುರುಕಾದವಳೂ ಅಲ್ಲ. ಹಿರಿಯರು ಅವಳ ಪಕ್ಕದಲ್ಲಿಯ ಮಕ್ಕಳನ್ನು ಮೆಚ್ಚಿ ಮುದ್ದಿಸುವುದನ್ನು ತನ್ನ ಎಳೆತನದಿಂದಲೇ 'ತೀರಾ ಸಾಧಾರಣವಾಗಿ' ಗುರ್ತಿಸಿದ್ದಳು. ತನ್ನಲ್ಲಿ ಯಾವುದೇ 'ಕಾಂಪ್ಲೇಕ್ಸ್' ಮನೆ ಮಾಡದೆ ಇರಲು ಆಕೆ ಪುಸ್ತಕಗಳನ್ನು ಆಶ್ರಯಿಸಿದಳು.

ಈ ಎರಡು ಅಭ್ಯಾಸಗಳನ್ನು ರೂಢಿಸಿಕೊಂಡ ಒಡನೆಯೇ ಹಿರಿಯರೇ ಆಗಲಿ, ಗೇಲಿ ಮಾಡುವ ತರುಣರೇ ಆಗಲಿ ಜಾಣರಾಗಿರುವ ಹೆಣ್ಣು ಮಕ್ಕಳನ್ನೇ ಮೆಚ್ಚುತ್ತಾರೆ. ಅವರೊಂದಿಗೆ ಸ್ನೇಹ ಬೆಳೆಸುತ್ತಾರೆ ಎಂಬುದನ್ನು ಗುರ್ತಿಸಿದಳು. ಆದರೆ ಅವರು ಅಂತರಂಗಿಕವಾಗಿ ಪ್ರೇಮಿಸಬೇಕಾದಾಗ, ಗೌರವವನ್ನು ತೋರಬೇಕಾದಾಗ ಅವರೆಲ್ಲರೂ ಗಂಭೀರವಾಗಿರುವುದನ್ನೇ ಬಯಸುತ್ತಾರೆ ಎಂಬುದನ್ನೂ ಕಂಡುಕೊಂಡಳು. ಗಾಂಭೀರ್ಯದ ಅವಕಂಠನದಲ್ಲಿ ಚೈತನ್ಯಶೂನ್ಯಳಂತೆ, ಸದಾ ಮ್ಲಾನಮುಖಿಯಾಗಿ ಇರುವುದಿಲ್ಲ. ಯಾರು ಮಾತನಾಡಿದರೂ ಕಿರುನಗೆಯೊಂದಿಗೆ ಮಾತನಾಡುತ್ತಿದ್ದಳು. ಆದರೆ ತಾನೆಂದೂ ಯಾವುದನ್ನು 'ಅತಿ'ಯ ಸೀಮೆಗೆ ಒಧ್ಯವಳಲ್ಲ. ಅವಳ ನಡೆ-ನುಡಿ ಅವಳಿಗೊಂದು ಸ್ಥಾನವನ್ನು ಸೃಷ್ಟಿಸಿಕೊಟ್ಟಿತ್ತು. ಇದರಿಂದ

ಶೀಘ್ರದಲ್ಲಿಯೇ ತನ್ನ ಅಂಗವೈಕಲ್ಯದ ಲೋಪವನ್ನೂ ಮರೆಯುವಂತಾಯಿತು.

ತನ್ನ ವ್ಯಕ್ತಿತ್ವವನ್ನು ಆಕೆ ವೃದ್ಧಿಪಡಿಸಿಕೊಳ್ಳಲು ಪರೋಕ್ಷವಾಗಿ ನೆರವಾದವರು ಆಕೆಯ ತಂದೆ. ಇಪ್ಪತ್ತೈದನ್ನು ಮೀರದವರು ಅಷ್ಟನ್ನು ಮೀರಿದವರೊಂದಿಗೆ ಸ್ನೇಹ ಬೆಳೆಸಿದರೆ ಅವರಲ್ಲಿ ಕೇವಲ ಸಾಹಸ ಪ್ರವೃತ್ತಿ ಮಾತ್ರವೇ ಬೆಳೆಯುತ್ತದೆ. ಇಬ್ಬರ ತಿಳಿವು ಸಮಾನ ಸ್ಥಾಯಿಯಲ್ಲಿಯೇ ಇರುವುದರಿಂದ ಪರಸ್ಪರ ಕಲಿಯುವುದೇನೂ ಇರುವುದಿಲ್ಲ. ಲವಲವಿಕೆಯ ಮಾತು, ಅಲ್ಲಿ-ಇಲ್ಲಿಯ ಕಥೆಗಳು- ಹೀಗೇ ಕಾಲವನ್ನು ಕಾಲಸರ್ಪನಾಗಿ ನುಂಗುವುದು ಮಾತ್ರವೇ ಸಾಧ್ಯ.

ಈ ವಯಸ್ಸಿನಲ್ಲಿ ಮನವು ಮೇಣದಂತೆ ಸೆಳೆದೆಡೆಗೆ ಬಗ್ಗುತ್ತದೆ. ಅದೇ ಸಮಯದಲ್ಲಿ ಅವರಿಗೆ 'ಆದರ್ಶ ಪುರುಷ'ರೊಬ್ಬರು ದೊರಕಿದರೆ ಅದೃಷ್ಟವೇ ಹಾಗೆ ದೊರೆಯದೆಯೇ ಅನೇಕರು ಸಿನಿಮಾ ನಟರನ್ನು, ಕ್ರಿಕೆಟ್ ಆಟಗಾರರನ್ನು 'ಆದರ್ಶ ಪುರುಷ'ನಾಗಿ ಮಾಡಿಕೊಂಡು ತಮ್ಮ ಸಹಪಾಠಿಗಳಲ್ಲಿ ಅವರನ್ನು ಕಂಡುಕೊಂಡು ಜಾರುಬಂಡೆಗೆ ಬೀಳುತಾತ್ರೆ. ಅವಳಿಗೆ ಆ4ದರ್ಶಪುರುಷ' ತಂದೆ.

ತಂದೆಯ ಪ್ರಭಾವವು ಅವಳ ಮೇಲೆಷ್ಟಿತ್ತೆಂಬುದನ್ನು ತಿಳಿಸಲು ಈ ಸಣ್ಣ ಘಟನೆಯ ಉಲ್ಲೇಖವೇ ಸಾಕು-

ಹತ್ತನೆಯ ತರಗತಿಯಲ್ಲಿ ಓದುತ್ತಿದ್ದಾಗ ಒಮ್ಮೆ ರಾತ್ರಿ ಹನ್ನೆರಡು ಗಂಟೆಗೆ ದೀಪ ಬೆಳಗುತ್ತಿದ್ದುದನ್ನು ಬಂದು ನೋಡಿ ''ಇನ್ನೂ ಓದ್ತಾ ಕೂತಿದೀಯಲ್ಲಮ್ಮಾ?'' ಎಂದು ಕೇಳಿದ ಆತ.

''ಪರೀಕ್ಷೆಗೆ ಮೂರು ದಿನಗಳೇ ಇದೆ!''

''ಈ ಮೂರು ದಿನಗಳು ಎಷ್ಟು ಗಂಟೆ ತಾನೆ ಹೀಗೆ ಓದಬಲ್ಲೆ?'' ಆತನ ಪ್ರಶ್ನೆ.

ಈ ಪ್ರಶ್ನೆಯಿಂದ ಚಲಿತಳಾಗಿ ''ಪೋರ್ಷನ್ ತುಂಬಾ ಇದೆ ಡ್ಯಾಡಿ'' ಎಂದಳು.

''ನನ್ನ ಪ್ರಶ್ನೆ ಅದಲ್ಲ. ಹೆಚ್ಚುವರಿ ಓದಿನ ಸಮಯ''

''ಇಪ್ಪತ್ತು ಮೂವತ್ತು ಗಂಟೆ''

''ಇಷ್ಟು ಓದಲು ಮಾರ್ಚಿಯಲ್ಲಿ ಅಲ್ಲದೆ ಜನವರಿಯಿಂದಲೇ ಪ್ರಾರಂಭಿಸಿದ್ದರೆ ದಿನಕ್ಕೆ ಅರ್ಧಗಂಟೆ ಹೆಚ್ಚು ಓದಿದರೂ ಸಾಕಾಗುತ್ತಿತ್ತು. ಈಗ ಈ ತೊಂದರೆ ಇರುತ್ತಿರಲಿಲ್ಲ ಅಲ್ಲವೇ?''

''ಪರೀಕ್ಷೆ ಎಂದ ಮೇಲೆ ಈ ಮುಜುಗರ ಇದ್ದೇ ಇರುತ್ತೆ''

''ನಾನು ಹೇಳ್ತಾಇರೋದು ಲೆಕ್ಕ. ನನಗೆ ಓದಿನ, ಮುಜುಗರ ಗೊತ್ತಿಲ್ಲ. ಗೊತ್ತಿರೋದು ಲೆಕ್ಕ ಮಾತ್ರವೇ ಎಷ್ಟೇ ಆಗಲಿ ವರ್ತಕನಲ್ಲವೇ?'' ಎಂದ ನಗುತ್ತಾ.

ಮುಂದಿನ ವರ್ಷದಿಂದ ಪ್ರಾರಂಭದಲ್ಲಿಯೇ ಅರ್ಧಗಂಟೆ ಹೆಚ್ಚಾಗಿ ಓದಲು ಪ್ರಾರಂಭಿಸಿದಳು. ಅಂದಿನಿಂದ ಪರೀಕ್ಷೆಯಲ್ಲಿ ಯಾವ ವಿಧವಾದ ಮುಜುಗರವೂ

ಕಾಡಲಿಲ್ಲ. ಪರೀಕ್ಷೆ ಕಾಲದಲ್ಲಿ ಚಹ ಸೇವಿಸಿ, ಮಾತ್ರೆಗಳನ್ನು ನುಂಗಿ, ತಣ್ಣೀರು ಸುರಿದುಕೊಂಡು ಓದುವವರನ್ನು ಕಂಡಾಗ "ಇಂಥಾ ಸಣ್ಣ ವಿಷಯವನ್ನೂ ಇವರ ತಂದೆ, ತಾಯಿಗಳು ಹೇಳಲಿಲ್ಲವೆ? ಏಕೆ?" ಎಂದು ತನ್ನಲ್ಲಿಯೇ ಪ್ರಶ್ನಿಸಿಕೊಳ್ಳುತ್ತಿದ್ದಳು.

ಈ ರೀತಿಯ ತನ್ನಡತೆಯೇ ಆಕೆಯನ್ನು ತೀರಾ ಬ್ರಿಲಿಯಂಟ್ ಮಾಡದಿದ್ದರೂ ಅಗ್ರಿಕಲ್ಚರಲ್ ಬಿಎಸ್ಸಿಯಲ್ಲಿ ಸೀಟನ್ನು ಪಡೆಯಲು ಸಾಧ್ಯವಾಯಿತು. ಕೃಷ್ಣಾಪುರದ ಹಿರಿಯರು ಆಕೆಯನ್ನು ಗೌರವದಿಂದ ನೋಡುತ್ತಾರೆ. ಹಿರಿಯರು ಎಂದರೆ ಶ್ಯಾನುಭೋಗರು. ಗೌರೀನಾಥಂತಹವರು. ತನ್ನನ್ನು ನೋಡಲು ತಂದೆ ಬಂದಾಗ ಅವರೆಲ್ಲರ ಪರಿಚಯ ಮಾಡಿಸಿದಳು.

"ನಿಮ್ಮ ಬಗ್ಗೆ ಪ್ರತಿ ಕಾಗದದಲ್ಲೂ ಬರೆಯುತ್ತಲೇ ಇರುತ್ತಾಳೆ" ಎಂದರು ಭವಾನಿಶಂಕರ್ ಅವರೊಂದಿಗೆ ಕೈಕುಲುಕುತ್ತಾ. ಪರಸ್ಪರ ಪರಿಚಯದ ಮಾತುಗಳನ್ನು ಮುಗಿಸಿದ ನಂತರ ಕೊನೆಗೆ ಮಗಳತ್ತ ತಿರುಗಿ "ನಿನ್ನನ್ನು ಕರೆದೊಯ್ಯೋಣವೆಂದು ಬಂದೆ. ನಿಮ್ಮ ಪ್ರೋಗ್ರಾಂ ಮುಗಿದಿದೆಯಲ್ಲವೇ?"

ತಂದೆಯ ಈ ಮಾತು ಆಕೆಗೆ ಅರ್ಥವಾಗಲಿಲ್ಲ. "ಅದೇನು ಡ್ಯಾಡಿ, ಬೇಡವೆಂದರೂ ನೀವೇ ಕಾರು ಕಳುಹಿಸಿದಿರಿ. ಡ್ರೈವ್ ಮಾಡಲು ರಾಕೇಶ್ ಇದ್ದಾನೆ. ನಾಳಿದ್ದು ಹೇಗಿದ್ದರೂ ನಾನೇ ಬರುತ್ತಿದ್ದೆ. ಅಷ್ಟರಲ್ಲಿ ನೀವೇ ಏಕೆ ಬರಬೇಕಾಯ್ತು?" ಎಂದಳು.

ಭವಾನಿಶಂಕರ್ ಮಾತಿಗೆ ನೇರವಾದ ಉತ್ತರವನ್ನು ನೀಡಲಾರದೆ "ಇದು ನಿನಗೆ ಅರ್ಥವಾಗೊಲ್ಲ ಬಿಡು" ಎಂದರು.

ಶ್ಯಾನುಭೋಗರು ಮಧ್ಯೆ ಬಾಯಿಹಾಕಿ "ಮದುವೆಯಾಗಿ, ನೀವೂ ತಾಯಿಯಾಗಿ ಆಗ ಅರ್ಥವಾಗುತ್ತದೆ" ಎಂದು ನಕ್ಕರು.

ಆ ನಗುವಿನೊಂದಿಗೆ ಎಲ್ಲರೂ ಸೇರಿ ನಕ್ಕರು.

ಆ ರಾತ್ರಿ ಬೆಳ್ದಿಂಗಳಲ್ಲಿ ಅಂಗಳದಲ್ಲಿದ್ದ ಮರದಡಿಯಲ್ಲಿ ಕುಳಿತಿದ್ದಾಗ ಮತ್ತೆ ಈ ಮಾತು ಬಂತು. "ಈ ಬೇಸಿಗೆಯಲ್ಲಿ ಮಗಳಿಗೆ ಮದುವೆ ಮಾಡಬೇಕೆಂದಿದ್ದೇನೆ. ಅವರ ಭಾವ ಗೊತ್ತಲ್ಲ ರಾಕೇಶ್..." ಎಂದರು ಭವಾನಿಶಂಕರ್.

"ನೋಡಿದ್ದೇನೆ" ಎಂದ ಗೌರೀನಾಥ್.

"ನಮ್ಮನೆಯಲ್ಲೇ ಇದ್ದು ನೋಡದೆ ಇರೋದು ಹ್ಯಾಗೇ? ಒಳ್ಳೆ ಜೋಡಿ" ಎಂದರು ಶ್ಯಾನುಭೋಗರು. ಆಗತಾನೇ ರಾಕೇಶ್, ಗೌರಿ ಒಳಕ್ಕೆ ಬಂದರು.

"ಇಲ್ಲಿ ಎಷ್ಟು ಚೆನ್ನಾಗಿದೆ ನೋಡಿ ಡ್ಯಾಡಿ. ಮತ್ತೆ ಸಿಟಿಗೆ ಹೋದರೆ ಎಲ್ಲ ಮೆಕ್ಯಾನಿಕಲ್!" ಎಂದಳು ಕೇದಾರಗೌರಿ ಬಂದು ತಂದೆಯ ಪಕ್ಕದಲ್ಲೇ ಕುಳಿತುಕೊಳ್ಳುತ್ತಾ.

''ನಿಮ್ಮವರನ್ನು ಸ್ವಲ್ಪ ಗದ್ದೆ ಕೊಳ್ಳಲು ಹೇಳಿದರೆ ಸಾಕು. ನಮ್ಮೂರ ಹೆಣ್ಣುಮಗಳಾಗಿ ಇಲ್ಲೇ ಇರಬಹುದು'' ಎಂದು ಶ್ಯಾನುಭೋಗರು ಸೂಚಿಸಿದರು.

ಕೇದಾರಗೌರಿ ಆ ಮಾತು ಅರ್ಥವಾಗದವಳಂತೆ ತಂದೆಯತ್ತ ನೋಡಿದಳು.

''ಈ ಬೇಸಿಗೆಯಲ್ಲಿ ನಿಮ್ಮ ಮದುವೆ ಮಾಡಬೇಕೆಂದಿದ್ದೇನೆ ಅಂತ ಈಗ ತಾನೇ ಹೇಳ್ತಿದ್ದೆ...'' ತಂದೆ ವಿವರಣೆ ನೀಡಿದರು.

ರಾಕೇಶನ ಮುಖ ಅರಳಿತು. ಈ ಬಗ್ಗೆ ಮಾವನನ್ನು ಮನೆಗೆ ಹೋಗುತ್ತಲೇ ಕೇಳಬೇಕೆಂದುಕೊಂಡಿದ್ದ. ಈ ವರ್ಷಕ್ಕೆ ಓದು ಮುಗಿಯುವುದಲ್ಲಾ ಇನ್ನೇಕೆ ನಿಧಾನಿಸಬೇಕು? ಕೇದಾರಗೌರಿ ಮನಃಪೂರ್ವಕವಾಗಿ ತನ್ನ ಬಗ್ಗೆ ಪ್ರೇಮವಿರಿಸಿಕೊಂಡಿದ್ದಾಳೆ ಎಂದು ಹೇಳುವುದಿಲ್ಲ ಎಂಬುದನ್ನೂ ರಾಕೇಶ ಅರಿತಿದ್ದ. ಹಾಗೆಂದು ತನ್ನ ವಿರೋಧವನ್ನೂ ಹೇಳುವ ಸ್ವಭಾವ ಅವಳದಲ್ಲ. ಗೌರಿಯಲ್ಲದೆ ಬೇರೆಯವರಾಗಿದ್ದರೆ ಅದನ್ನು ನಿರ್ಲಿಪ್ತತೆ ಎಂದು ಅರ್ಥೈಸಿ ಭಯಕ್ಕೆ ಕಾರಣವಾಗುವ ಸಾಧ್ಯವಿತ್ತು. ಆದರೆ ಆಕೆ ತೀರಾ ಗಹನವಾದ ವ್ಯಕ್ತಿತ್ವವುಳ್ಳವಳು. ನಾಚಿಕೆಯಿಂದ ಮುಖ ಮುಚ್ಚಿಕೊಂಡು ಒಳಕ್ಕೆ ಓಡಿ ಹೋಗುವವಳೂ ಅಲ್ಲ. ಆದ್ದರಿಂದಲೇ ರಾಕೇಶ ಇನ್ನೂ ಆಸೆ ಇರಿಸಿಕೊಂಡೇ ಇದ್ದಾನೆ, ಇನ್ನೇನು ಆಕೆ ಕೈಗೂಡುವ ಕಾಲ ಸನ್ನಿಹಿತವಾಯಿತು. ಇನ್ನು ಚಿಂತೆಯಿಲ್ಲ.

''ನಮ್ಮೂರಿನಲ್ಲೇ ಪುರೋಹಿತರಿದ್ದಾರೆ. ಅವರು ನಿರ್ಣಯಿಸಿದರೆ ಮುಹೂರ್ತ ಅದ್ಭುತವಾಗಿರುತ್ತೆ ಅಂತ ಎಲ್ರೂ ಹೇಳ್ತಾರೆ ಹೊರ ಊರಿನವರೆಲ್ಲಾ ಬಂದು ಅವರಲ್ಲಿ ಮುಹೂರ್ತ ನಿರ್ಣಯಿಸುತ್ತಾರೆ. ಹ್ಯಾಗಿದ್ರೂ ಬಂದಿದೀರಿ ಅದನ್ನೂ ನಿರ್ಣಯಿಸಿಕೊಂಡರೆ ಒಳ್ಳೆಯದು'' ಶ್ಯಾನುಭೋಗರು ಸೂಚಿಸಿದರು.

''ಹೌದು ಹಾಗೆ ಮಾಡಿ. ನಮಗೆ ಎರಡು ತಿಂಗಳು ಮೊದಲೇ ಗೊತ್ತಾದರೆ ಒಳ್ಳೆಯದು! ಇಲ್ದಿದ್ರೆ ರಜಾ ಸಿಗೋಲ್ಲ'' ಎಂದ ಗೌರೀನಾಥ.

''ಎರಡು ದಿನದ ರಜೆಗೆ ಎರಡು ತಿಂಗಳ ಮೊದಲೇ ಹೇಳಬೇಕಂತೆ!'' ಎಂದು ಶ್ಯಾನುಭಿಗರು ತಮಾಷೆ ಮಾಡಿದರು.

''ಎರಡು ದಿನಗಳಂತೆ. ನಮ್ಮ ಗೌರಮ್ಮನ ಮದುವೆಗೆ ಒಂದು ತಿಂಗಳಾದರೂ ನಾವಿರಬೇಡವೇ?''

''ಹೌದು ಇರಲೇಬೇಕು''

ಕೇದಾರಗೌರಿ ತಲೆತಗ್ಗಿಸಿಕೊಂಡು ಮೌನವಾಗಿ ಕುಳಿತಿದ್ದಳು.

''ನಿಮ್ಮ ಸಿಟಿಗಳಲ್ಲಿ ಏನು ಸಿಗುತ್ತೆ? ಮದುವೆ ಇಲ್ಲೇ ಮಾಡಿದರೆ ನಿಮಗೆ ಹೆಚ್ಚು ತೊಂದರೆ ಇರದು. ನಾವೆಲ್ಲಾ ನಿಮ್ಮ ಸಹಾಯಕ್ಕೆ ಇರ್ತೇವೆ'' ಎಂದರು ಶ್ಯಾನುಭೋಗರು.

''ಗೌರಮ್ಮ ನಮ್ಮೂರಲ್ಲೇ ಇರಬೇಕು ಅಂತ ನಾನು ಕೇಳ್ಕೊಂಡ್ರೆ, ಮದುವೆ ಮಾತ್ರ

ಇಲ್ಲಾಗಲಿ ಅಂತೀರಲ್ಲಾ'' ಎಂದ ಗೌರೀನಾಥ್.

ಭವಾನಿಶಂಕರ್ ನಗುತ್ತಾ, ''ನಮ್ಮ ರಾಕೇಶ್ ಈ ಹಳ್ಳಿಯಲ್ಲಿ ಖಂಡಿತ ಇರೋದಕ್ಕೆ ಇಷ್ಟಪಡೋಲ್ಲ. ಏನು ರಾಕೇಶ್? ಕ್ಲಬ್ಬು ಫ್ರೆಂಡ್ಸ್ ಇಲ್ದೆ ಇರೋದು ಸಾಧ್ಯವಾಗುತ್ತದೆಯಾ?'' ಎಂದರು.

ರಾಕೇಶ್ ಸಂದಿಗ್ಧವಾಗಿ ನೋಡುತ್ತಾ ''ಇರಬಹುದು...ಆದರೆ ಅಲ್ಲಿಯ ವ್ಯಾಪಾರ?''

''ಏನೋ ವ್ಯಾಪಾರವೆಲ್ಲಾ ನೀವೇ ನೋಡ್ಕೊಳ್ತಾ ಇರೋ ಹಾಗೆ... ಅದೊಂದು ನೆಪ ಅಷ್ಟೆ! ಹನಿಮೂನಿಗೆ ಇಲ್ಲಿಗೇ ಬರ್‍ತೀರಿ ಬಿಡಿ...'' ಎಂದರು ಶ್ಯಾನುಭೋಗರು.

ಕೇದಾರಗೌರಿ ''ನನಗೆ ನಿದ್ರೆ ಬರುತ್ತಿದೆ...'' ಎನ್ನುತ್ತಾ ಎದ್ದುಹೋದಳು.

ಆಕೆ ಎದ್ದು ಹೋದತ್ತಲೇ ನೋಡುತ್ತಾ ''ಇಂಥಾ ಹೆಣ್ಣುಮಗಳು ಮನೆಯಲ್ಲಿದ್ದರೆ ಮನೆಗೇ ಶೋಭೆ. ಇಷ್ಟೊಂದು ಒಳ್ಳೆತನ, ಹೊಂದಿಕೊಳ್ಳುವ ಸ್ವಭಾವ ಈಗಿನ ಮಕ್ಕಳಲ್ಲಿ ಕಾಣುವುದು ವಿರಳ'' ಎಂದರು ಶ್ಯಾನುಭಿಗರು.

ಮಗಳಿಗೆ ಎಲ್ಲಿ ಇವರೆಲ್ಲರ ದೃಷ್ಟಿ ತಾಕುವುದೋ ಎಂದು ಭಯವಾಯಿತು ಭವಾನಿಶಂಕರ್‌ಗೆ. ಮಾತನ್ನು ಬದಲಾಯಿಸುತ್ತಾ ''ಇನ್ನು ಮಲಗೋಣವೇ? ಆ ಪುರೋಹಿತರ ಬಳಿಗೆ ನಾಳಲ ಹೋಗೋಣ'' ಎಂದರು.

''ನಾಳೆ ಒಳ್ಳೆದಿನವೇ. ಆಲಸ್ಯಂ ಅಮೃತಂ ವಿಷ. ನಾಳೆ ಬೆಳಗ್ಗೆ ನೀನೂ ಬಾ ಗೌರೀನಾಥ್'' ಎಂದರು ಶ್ಯಾನುಭೋಗರು.

''ಖಂಡಿತವಾಗಿಯೂ ಬರ್‍ತೀನಿ'' ಎನ್ನುತ್ತಾ ಗೌರಿನಾಥ ಎದ್ದ.

''ಹಾಗಾದರೆ ಜಾತಕಗಳು...?''

''ನೀನೆಂಥಾ ಶಾನುಭೋಗನಯ್ಯಾ. ಸಂಬಂಧಗಳು ತಾಳೆ ನೋಡಲು ಜಾತಕ ಬೇಕು. ಮುಹೂರ್ತ ನೋದಕ್ಕೆ ಜಾತಕವೇತಕ್ಕೆ?''

''ನನ್ನ ಮಗಳ ನಕ್ಷತ್ರ ಜನ್ಮ ಲಗ್ನ ನನಗೆ ಗೊತ್ತಿದೆ. ಇನ್ನು ರಾಕೇಶನದು ಬೇಕಾಗಿದ್ದರೆ ಡ್ರೈವರನ್ನು ಕಳುಹಿಸಿ ಈ ರಾತ್ರಿಗೇ ತರಿಸಬೋಕು''

''ಅದೆಲ್ಲಾ ಬೇಕಾಗಿಲ್ಲ'' ಎಂದ ಗೌರಿನಾಥ ''ನಾಳೆ ಬೆಳಗ್ಗೆ ನಾನು ಬರುವ ವೇಳೆಗೆ ನೀವು ಸಿದ್ಧವಾಗಿರಬೇಕು'' ಎಂದು ಎದ್ದು ಹೊರಟವನು ಒಂದು ಕ್ಷಣ ನಿಂತು ''ನಿಮ್ಮನ್ನು ಎಲ್ಲೋ ಪೇಪರಿನಲ್ಲಿ ನೋಡಿದಂತೆ ಅನಿಸುತ್ತಿದೆ!...'' ಎಂದ.

''ಯಾವುದೋ ವರ್ಕರ್ಸ್ ಫೋರಂ ಫೋಟೋ ನೋಡಿರ್ತೀರಿ...''

''ನೀವು ಕಮ್ಯುನಿಸ್ಟೇ?''

''ಹಾಗೇ ಅಂದ್ಕೊಳ್ಳಿ''

''ಅಲ್ಲ ಜಾತಕ, ಮುಹೂರ್ತ ಅಂತ ಕೇಳ್ತಿದೀರಲ್ಲಾ!''

ಅದೇ ರಾತ್ರಿ. ರಾಕೇಶ್ ರೆಡ್‌ಸ್ಕೆಲಿಟನ್ನನ್ನು ಕಂಡ ಹನ್ನೆರಡು ಗಂಟೆ ಕಳೆದಿತ್ತು.

''ನನಗೊಂದು ಸಂಶಯವಿದೆ...''

''ಅದೇನು?''

''ಉಸ್ಲೋಕ್‌ನಲ್ಲಿ ಸೇರಿರುವ ನಾನು ಮದುವೆ ಮಾಡಿಕೊಳ್ಳಬಹುದೇ?''

''ಸಾಮಾನ್ಯರಾದರೆ ಅದಕ್ಕೆ ಅಭ್ಯಂತರವೇನೂ ಇಲ್ಲ. ಆದರೆ ನೀನು ಸಾಮಾನ್ಯನಲ್ಲ...''

''ಅದೇನು ಸ್ಪೆಷಾಲಿಟಿ?''

ಆತನು ಒಡನೆಯೇ ಉತ್ತರ ಹೇಳಲಿಲ್ಲ. ಸ್ವಲ್ಪ ಯೋಚಿಸಿ ''ನೀನು ಮಹಾದ್ರಷ್ಟನನ್ನು ಕಾಣುವುದೇ ಒಳ್ಳೆಯದು'' ಎಂದು ಸೂಚಿಸಿದ.

ಈ ಸಲಹೆಗೆ ರಾಕೇಶ್ ಬಲಚ್ಚಿದ.

''ನಾನು...ಮಹಾದ್ರಷ್ಟನನ್ನು...ನೋಡ...ಬೇಕೇ?...''

ಅವನ ಅಚ್ಚರಿಯಲ್ಲಿ ತನಗೆ ಅಂತಹ ಸೌಭಾಗ್ಯ ಲಭಿಸೀತೇ ಎಂಬ ಆತಂಕವೂ ಅಡಗಿತ್ತು.

ಅವನನ್ನೇ ನೋಡುತ್ತಾ ಆ ರೆಏತ ಗಂಭೀರವಾಗಿ ನುಡಿದ ''ನಿನ್ನ ಬಗ್ಗೆ ನೀನು ಏನೆಂದು ತಿಳಿದಿದ್ದೀಯೆ? ಈಗ ನೀನು ಯಾರು ಎಂದುಕೊಂಡಿರುವೆ?''

''ನಾನೇನು?''

''ಅತ್ತ ನೋಡು''

ಸ್ಮಶಾನದ ಪಕ್ಕದಲ್ಲಿದ್ದ ನೀರಿನ ಮಡು, ಅದರಲ್ಲಿ ಕಾಣಸುತ್ತಿದ್ದ ತನ್ನ ಬಿಂಬವನ್ನು ನಿಡಿಕೊಂಡ. ಭೂಮಿ ನಿಂತಹಾಗೆ, ಆಕಾಶ ಪರಿಭ್ರಮಿಸುತ್ತಿರುವಂತೆ, ನಕ್ಷತ್ರಗಳೆಲ್ಲಾ ಉದುರಿಹೋದಂತೆ ಭ್ರಮೆ. ನೀರಿನಲ್ಲಿ ತನ್ನಸೊಂಟ ಸ್ಪಷ್ಟವಾಗಿ ಕಾಣಸುತ್ತಿದೆ. ಅದರಲ್ಲಿ ತಾನು ರೆಡ್‌ಸ್ಕೆಲಿಟನ್!

ದಿಗ್ಭ್ರಮೆಯಿಂದ ಎಚ್ಚರಗೊಳ್ಳುವುದಕ್ಕೂ ಮೊದಲೇ ವೃದ್ಧನ ಕಂಠ ಕೇಳಿಸಿತು ''ಅಷ್ಟಾವಕ್ರನ ಜನನಕ್ಕೆ ಕಾರಣವಾಗುವ ಬೂದಿಯನ್ನು ಗದ್ದೆಯಲ್ಲಿ ಚೆಲ್ಲಲು ಸೂಕ್ತನಾದ ವ್ಯಕ್ತಿಗಾಗಿ ಉಸ್ಲೋಕ್ ಶೋಧಿಸುತ್ತಿದ್ದಾಗ ನೀನು ಸೇರಿದೆ. ಆ ಕಾರ್ಯವನ್ನು ಮಾಡಬಲ್ಲವನು ಸಾಮಾನ್ಯನಲ್ಲ. ವಿವರಗಳು ನಿನಗೇ ಗೊತ್ತಿವೆ. ಆದ್ದರಿಂದಲೇ ನಿನ್ನನ್ನು ಸಾಮಾನ್ಯ ಸದಸ್ಯನಿಗಿಂತಲೂ ಮೂರು-ನಾಲ್ಕು ಹಂತಗಳು ಮೇಲೇರಿಸಬೇಕಾಯಿತು. ಇದುವರೆವಿಗಿನವರಲ್ಲಿ ಅತ್ಯಂತ ಕಿರಿಯ ವಯಸ್ಸಿನ ರೆಡ್‌ಸ್ಕೆಲಿಟನ್ ನೀನೇ.

ಆದ್ದರಿಂದಲೇ ಈ ರೀತಿಯ ಸಮಸ್ಯೆ ಈ ಮೊದಲು ಯಾರಿಗೂ ಇರಲಿಲ್ಲ. ಮುಂದಿನ ಮಾರ್ಗವನ್ನು ಮಹಾದ್ರಷ್ಟನಿಂದಲೇ ತಿಳಿಯೋಣ ನಡಿ...''

ಬೆಳಗಾಗುವ ವೇಳೆಗೆ ಇಬ್ಬರೂ ಉಸ್ಲೋಕ್ ಕಚೇರಿಯನ್ನು ಸೇರಿದರು. ಕ್ಲೋಸ್ಡ್ ಸರ್‌ಕ್ಯೂಟ್ ಟಿ.ವಿ.ಯಲ್ಲಿ ಪ್ರಯತ್ನಿಸುತ್ತಿರುವಾಗ ರಾಕೇಶ್ ಕೇಳಿದ, ''ಈಗ ಮಹಾದ್ರಷ್ಟ ಎಲ್ಲಿದ್ದಾರೆ?''

''ಹಿಮಾಲಯಕ್ಕೆ ಹೋಗಿದ್ದಾರೆ. ಇನ್ನೆರಡು ದಿನಗಳಲ್ಲಿ ಬರುತ್ತಾರೆ''

''ಅಲ್ಲಿಗೇಕೆ?''

''ಅಷ್ಟಾವಕ್ರನ ಜನ್ಮವನ್ನು ತಡೆಹಿಡಿಯುವ ಯಜ್ಞವನ್ನು ನಡೆಸಲು ಸನ್ನದ್ಧನಾಗುತ್ತಿರುವ ಶಿವಯೋಗಿಯೊಬ್ಬನನ್ನು ಕೊಲ್ಲಲು...''

ಅಷ್ಟರಲ್ಲಿ ಸ್ಕ್ರೀನ್ ಮೇಲೆ ಮಹಾದ್ರಷ್ಟ ಕಾಣಿಸಿಕೊಂಡ.

''ಅತ್ಯುತ್ತಮ ಸ್ಥಾನವನ್ನು ತುಂಬಾ ಶೀಘ್ರವಾಗಿ ಗಳಿಸಿದ ರಾಕೇಶ್ ನನ್ನ ಅಭಿನಂದನೆಗಳನ್ನು ಸ್ವೀಕರಿಸು, ಎಂದ''

''ರಾಕೇಶ್ ತನ್ನ ಒಂದು ಸಂಶಯ ನಿವಾರಣೆಗಾಗಿ ಬಂದಿದ್ದಾನೆ''

''ಅದೇನು?''

ರಾಕೇಶ್ ಒಂದಡಿ ಮುಂದಿರಿಸಿ. 'ನಾನೊಂದು ಹೆಣ್ಣನ್ನು ಪ್ರೀತಿಸಿದ್ದೇನೆ. ಆಕೆಯನ್ನು ಮದುವೆಯಾಗಬಹುದೇ?' ಎಂದು ಕೇಳಿದ.

ಅಪರೂಪವಾಗಿ ಕಾಣಿಸಿಕೊಳ್ಳುವ ಕಿರುನಗೆ ಮಹಾದ್ರಷ್ಟನ ಮುಖದಲ್ಲಿ ಕಾಣಿಸಿಕೊಂಡಿತು. 'ನೀನು ಆಕೆಯನ್ನು ಪ್ರೀತಿಸಿಲ್ಲ ರಾಕೇಶ್. ಪ್ರೀತಿಸುತ್ತಿರುವಂತೆ ನಟಿಸುತ್ತಿದ್ದೀ. ಆಕೆಯ ತಂದೆಯ ಕೋಟ್ಯಂತರದ ಆಸ್ತಿ ನಿನಗೆ ಬೇಕಾಗಿದೆ ಅಲ್ಲವೇ?'

ರಾಕೇಶ್ ಅಚ್ಚರಿಗೊಂಡ. ಸತ್ಯ ಆತನಿಗೆ ತಿಳಿಯಿತಲ್ಲ ಎಂದಲ್ಲ; ಅಷ್ಟು ಸಾವಿರ ಮೈಲುಗಳ ದೂರದಲ್ಲಿದ್ದುಕೊಂಡು ಸತ್ಯವನ್ನು ಅರಿತುಕೊಂಡಿದ್ದಕ್ಕಾಗಿ ಅಷ್ಟರಲ್ಲಿ ಮಹಾದ್ರಷ್ಟನ ನುಡಿ ಕಟುವಾಗಿ ಕೇಳಿಸಿತು

'ಉಸ್ಲೋಕ್‌ನಲ್ಲಿ ಅತ್ಯುನ್ನತ ಸ್ಥಾನವಾದ ರೆಡ್ ಸ್ಕೆಲಿಟನ್ ಹಂತವನ್ನೇರಿದವರು ಪ್ರಪಂಚದ ಎಲ್ಲಾ ಸೌಭಾಗ್ಯಗಳನ್ನೂ ಅನುಭವಿಸಲು ಅರ್ಹರು ಆದರೆ ಅವರು ಯಾವುದೇ ಬಂಧನಕ್ಕೆ ಸಿಲುಕಬಾರದು. ಗೊತ್ತಾಯಿತೇ ರಾಕೇಶ್?''

ರಾಕೇಶ್ ಉತ್ತರಿಸಲಿಲ್ಲ.

'ಹಣ-ಹೆಣ್ಣು ಎಲ್ಲವನ್ನೂ ಅನುಭವಿಸು. ಆದರೆ ಹೆಂಡತಿ ಮಕ್ಕಳು ಎನ್ನುವ ಬಾಂಧವ್ಯ ಕೂಡದು. ಇದನ್ನು ಉಳಿಸಿಕೊಂಡವನು ಸದಾ ಹೇಡಿಯಾಗುತ್ತಾನೆ. ಕೆಡುಕನ್ನು ಮಾಡುವ ಧೈರ್ಯವನ್ನು ಕಳೆದುಕೊಳ್ಳುತ್ತಾನೆ. ಉಸ್ಲೋಕ್‌ಗೆ ಯಾವುದೇ ರೀತಿಯಲ್ಲಿ ಪ್ರಯೋಜನಕ್ಕೆ ಬರದವನಾಗುತ್ತಾನೆ'

'ಕೇದಾರಗೌರಿಯನ್ನು ಮದುವೆಯಾಗದಿದ್ದರೆ ಆ ಸಂಪತ್ತು ನನಗೆ ಬರುವುದಿಲ್ಲ'

ಮಹಾದ್ರಷ್ಟ ಒಡನೆಯೇ ಉತ್ತರಿಸಲಿಲ್ಲ. ಸ್ವಲ್ಪ ಕಾಲದ ನಂತರ 'ನಿನಗೆ ಕೇದಾರ ಗೌರಿಯೊಂದಿಗೆ ಸಂಸಾರ ಸಾಗಿಸಬೇಕೆಂಬ ಆಸೆ ಇದೆಯೇ?' ಎಂದು ಕೇಳಿದ.

ಮಹಾದ್ರಷ್ಟನ ಬಳಿ ಸುಳ್ಳು ಹೇಳುವುದು ಅನಾವಶ್ಯಕ ಮಾತ್ರವಲ್ಲ ಅವಿವೇಕ ಕೂಡ. 'ಅವಳೊಂದಿಗೆ ಸಂಸಾರದ ಆಸೆ ನನಗಿಲ್ಲ. ಅವಳನ್ನು ಯಾವ ಗಂಡೂ ತಾನಾಗಿಯೇ ಮೆಚ್ಚಿ ಮದುವೆಯಾಗುವಂತಹ ಸೌಂದರ್ಯವೇನೂ ಇಲ್ಲ ನಾನೂ...'

'ಹಾಗಿದ್ದರೆ ಅವಳನ್ನು ಮದುವೆಯಾಗು ರಾಕೇಶ್' ಮಾತು ಪೂರ್ಣವಾಗುವುದಕ್ಕೂ ಮೊದಲೇ ಸಲಹೆ ಕೇಳಿಸಿತು. 'ನಿಮ್ಮ ಮದುವೆಯಾದ ನಂತರದ ನಾಲ್ಕನೆಯ ದಿನ ಕೇದಾರಗೌರಿ ಸಾಯುತ್ತಾಳೆ. ಆ ಸಾವು ತೀರಾ ಸಹಜವಾಗಿರುವಂತೆ ಉಸ್ಸೋಕ್ ಯೋಜಿಸುತ್ತದೆ. ನಿನ್ನ ಮೇಲೂ ಯಾರು ಅನುಮಾನಿಸಲು ಸಾಧ್ಯವಾಗದು. ಮದುವೆ ಮುಗಿಯುತ್ತಲೇ ನೀನು ಯಾವುದೋ ಕಾರಣ ಹೇಳಿ ನಾಲ್ಕು ದಿನ ಊರಲ್ಲಿ ಇರಬೇಡ. ನೀನು ಬರುವವೇಳೆಗೆ ಕೆಲಸ ಪೂರ್ಣವಾಗಿರುತ್ತದೆ. ನಂತರ ಆಸ್ತಿ ನಿನ್ನದೇ!'

ಈ ಮಾತುಗಳಿಂದ ಆನಂದತುಂದಿಲನಾದ ರಾಕೇಶ್ 'ನಿಮಗೆ ತುಂಬಾ ಕೃತಜ್ಞತೆಗಳು' ಎಂದ.

'ಉಸ್ಸೋಕ್‌ನಲ್ಲಿ ಈ ರೀತಿ ಕೃತಜ್ಞತೆ ಹೇಳುವ ಪದ್ಧತಿ ಇಲ್ಲ. ಮಹಾಮಾಂತ್ರಿಕರಾದ ವಿಷಾಚಿ ಕಾದ್ರಾರ ಶಲ್ಯಭಸ್ಮವನ್ನು ವ್ಯಾಪಕಗೊಳಿಸಿದ್ದಕ್ಕಾಗಿ ಈ ನೆರವು ಉಸ್ಸೋಕ್ ನೀಡುತ್ತದೆ. ಮದುವೆಯ ನಂತರ ನಾಲ್ಕು ದಿನಗಳಲ್ಲಿ ಅವಳು ಖಂಡಿತ ಸಾಯುತ್ತಾಳೆ'

ದೃಶ್ಯ ಕರಗಿತು.

★★★

ಅದೇ ಸಮಯಕ್ಕೆ ಹಳ್ಳಿಯಲ್ಲಿ ಪುರೋಹಿತ ಲೆಕ್ಕವನ್ನು ಮತ್ತೆ ಪರಿಶೀಲಿಸಿ 'ಎಂಥ ದಿವ್ಯವಾದ ಮುಹೂರ್ತ ಇದು! ಮತ್ತೆ ಮುಂದಿನ ವರ್ಷವೇ ಈ ರೀತಿ ಮುಹೂರ್ತ ಬರೋದು!' ಎಂದು ಉದ್ಗರಿಸಿದ.

'ಮಾರ್ಚ್ ಅಂದ್ರೆ ತೀರಾ ಸಮೀಪವಾಯಿತು' ಭವಾನೀಶಂಕರ್ ತನ್ನ ಅನುಮಾನವನ್ನು ಹೊರಹಾಕಿದ.

'ಮಾಮೂಲು ಮುಹೂರ್ತವಾಗಿದ್ದರೆ ಬದಲಿಸುತ್ತಿದ್ದೆನೇನೋ. ನಿಮ್ಮ ಮಗಳ ಜನ್ಮನಕ್ಷತ್ರ, ಲಗ್ನಗಳನ್ನು ಹೇಳಿದ್ದರಿಂದ ಕುಂಡಲಿಯನ್ನು ನಿಷ್ಕರ್ಷಿಸಿದ್ದೇನೆ. ಮಾರ್ಚ್ ಆರನೆಯ ತಾರೀಖು ಸಂಜೆ ಆರು ಗಂಟೆ ಹತ್ತು ನಿಮಿಷಕ್ಕೆ ಕೇದಾರಗೌರಿಯ ಮದುವೆ ಸಾಂಗವಾಗಿ ಅದ್ದೂರಿಯಿಂದ ನಡೆಯದಿದ್ದರೆ ನಾನು ಮತ್ತೆ ಪಂಚಾಂಗವನ್ನೇ ಮುಟ್ಟುವುದಿಲ್ಲ'

ಉದಯಭಾಸ್ಕರನ ಬಾಲ ಕಿರಣಗಳು ಆ ಬ್ರಾಹ್ಮಣನ ಮುಖದ ಮೇಲೆ ಬಿದ್ದು ಆತನಲ್ಲಿಯ ಆವೇಶಕ್ಕೆ ರಂಗನ್ನು ಮೆತ್ತಿತ್ತು.

'ಆ ಮಾತೆಲ್ಲಾ ಯಾಕೆ ಬಿಡಿ' ಎಂದರು ಶ್ಯಾನುಭೋಗರು.

'ತುಂಬಾ ಲಕ್ಷಣವಂತ ಜಾತಕ. ಇಂತಹ ಜಾತಕ ನಾನು ಇದುವರೆವಿಗೂ ನೋಡಿರಲಿಲ್ಲ. ನಾನು ಹೇಳಿದೆ ಮುಹೂರ್ತಕ್ಕೆ ಮದುವೆ ನಡೆಸಿ. ನಂತರ ಪುತ್ರ ಪೌತ್ರಾಭಿವೃದ್ಧಿಯೊಂದಿಗೆ ಹೇಗೆ ಸಂಸಾರ ಶೋಭಾಯಮಾನವಾಗುತ್ತದೆಯೋ ನೀವೇ ನೋಡಿ'

ಭವಾನೀಶಂಕರ್ ಯೋಚಿಸುತ್ತಿದ್ದರು 'ಕನಿಷ್ಠ ಐದು ಸಾವಿರ ಆಹ್ವಾನ ಪತ್ರಗಳನ್ನಾದರೂ ಮುದ್ರಿಸಬೇಕು. ಮದುವೆ 'ನ ಭೂತೋ ನ ಭವಿಷ್ಯತಿ' ಎನ್ನುವಂತಿರಬೇಕು. ಒಂದು ತಿಂಗಳಲ್ಲಿ ಎಲ್ಲಾ ಸಿದ್ಧತೆಯನ್ನೂ ಮುಗಿಸಲು ಸಾಧ್ಯವೇ?...ತಾನು ಮನಸ್ಸು ಮಾಡಿದರೆ ಯಾವುದು ತಾನೇ ಸಾಧ್ಯವಾಗದು?'

ತಲೆಯಾಡಿಸಿ 'ಹಾಗಿದ್ದರೆ ಅದೇ ಮುಹೂರ್ತವೇ ಆಗಲಿ' ಎಂದರು.

ಶಾಸ್ತ್ರ ನಿರ್ಣಯಿಸಿದ ಮುಹೂರ್ತಕ್ಕೂ, ಯುಹೂರ್ತವೇ ಇಲ್ಲದ ಹುಟ್ಟಿಗೂ ಹುಟ್ಟಿನ ಮುಹೂರ್ತದ ಮೇಲೆ ನಿರ್ಧಾರವಾಗುವ ಜಾತಕಕ್ಕೂ, ಜಾತಕದೊಂದಿಗೆ ಸಂಬಂಧವಿಲ್ಲದ ಕ್ಷುದ್ರಶಕ್ತಿಗೂ. ಕ್ಷುದ್ರ ಶಕ್ತಿಯನ್ನೇ ನಂಬಿರುವ ಉಸ್ಲೋಕ್‌ಗೂ ನಡುವೆ ಏರ್ಪಟ್ಟ ಈ ಘರ್ಷಣೆಯಲ್ಲಿ ಯಾರು ಗೆಲ್ಲುತ್ತಾರೋ ಯಾರು ಸೋಲುತ್ತಾರೋ ಕಾಲವೇ ನಿರ್ಣಯಿಸಬೇಕು.

★★★

ಪ್ರೋಗ್ರಾಂ ಪೂರ್ಣವಾಗುವ ಕೊನೆಯ ದಿನ. ಆ ಗ್ರಾಮಸ್ಥರಿಗೆ, ಅದುವರೆವಿಗೂ ತಮ್ಮ ಆತಿಥ್ಯ ನಡೆಸಿದವರಿಗೆ ವಿದ್ಯಾರ್ಥಿಗಳು ತಮ್ಮ ಕೃತಜ್ಞತೆಗಳನ್ನು ತಿಳಿಸಿ ಅವರಿಂದ ಬೀಳ್ಕೊಳ್ಳುತ್ತಿದ್ದರು.

ಸಿದ್ಧಾರ್ಥನ ತಾಯಿಗೆ ಹೇಳಿಬರಲೆಂದು ಕೇದಾರಗೌರಿ ಅವನ ಮನೆಗೆ ಹೋದಳು. ಆಗ್ಗ ರಾತ್ರಿ ಎಂಟು ಗಂಟೆ. ಗುಡಿಸಲನ್ನು ಪ್ರವೇಶಿಸುವ ವೇಳೆಗೆ ಅಲ್ಲಿಯ ಕುರುಡು ಬೆಳಕಿನಲ್ಲಿ ನಾಲ್ವರು ಹುಡುಗರು ಊಟ ಮಾಡುತ್ತಿದ್ದರು. ಸಿದ್ಧಾರ್ಥ ಹೊರಗೆ ಹಗ್ಗದ ಮಂಚದ ಮೇಲೆ ಕುಳಿತಿದ್ದ. ಕೇದಾರಗೌರಿಯನ್ನು ನೋಡುತ್ತಲೇ ಸಂಭ್ರಮದಿಂದೆದ್ದು ಒಳಕ್ಕೆ ಮುಖಮಾಡಿ 'ಅಮ್ಮಾ...ಽ...ಽ' ಎಂದು ಕರೆದ. ಊಟ ಬಡಿಸುತ್ತಿದ್ದ ತಾಯಿ ಸೌಟನ್ನು ಕೈಯಲ್ಲಿ ಹಿಡಿದು ಹೊರಬಂದಳು.

'ಬಾಮ್ಮಾ...ಬಾ...' ಎಂದು ಕೇದಾರಗೌರಿಯನ್ನು ತುಂಬಾ ವಿಶ್ವಾಸದಿಂದ ಒಳಕ್ಕೆ ಕರೆದೊಯ್ದಳು. ಒಳಗೆ ಅವರು ಊಟ ಮಾಡುತ್ತಿರುವಾಗ ತಾನೇಕೆ ಅಲ್ಲಿ ಎಂದುಕೊಂಡು ಹೊರಬಂದಳು ಗೌರಿದ

ಅಷ್ಟರಲ್ಲಿ ಊಟವನ್ನು ಮುಗಿಸಿದ ಹುಡುಗರು ಹೊರಕ್ಕೆ ಬಂದರು. ಸಿದ್ಧಾರ್ಥನ ತಾಯಿಯೂ ಹೊರಕ್ಕೆ ಬಂದು ನಗುತ್ತಾ 'ಒಳ ಎಲೆತೆಗೆದು ಗೋಮಯ ಮುಗಿಸುತ್ತೇನಮ್ಮಾ ಹಾಗೇ ಕೂತಿರು...' ಎಂದು ಹೇಳಿ ಮತ್ತೆ ಒಳಕ್ಕೆ ಹೋದಳು.

ಕೇದಾರಗೌರಿಗೆ ಏನು ಮಾತನಾಡಲು ಹೊಳೆಯಲೇ ಇಲ್ಲ. ಊಟ ಮುಗಿಸಿ ಆಗತಾನೆ ಹೊರಬಂದು ಮನೆಯ ಮುಂದಣ ತೋಟದಲ್ಲಿ ತಿಂಗಳ ಬೆಳಕಿನಲ್ಲಿ ಪಾತಿಗಳನ್ನು ಸರಿಪಡಿಸುತ್ತಿದ್ದವರನ್ನು ತೋರಿ 'ಅವರು ಯಾರು?' ಎಂದು ಕೇಳಿದಳು.

'ನಮ್ಮವರೇ'

'ಹಾಗೆಂದರೆ?' ಎಂದು ಮತ್ತೆ ಕೇಳಿದಳು ಅರ್ಥವಾಗದವಳಂತೆ.

'ನಮ್ಮ ಮನೆಯಲ್ಲಿಯೇ ಇದ್ದಾರೆ. ಅವರಿಗೆ ತಮ್ಮವರು ಯಾರೂ ಇಲ್ಲ. ಇಲ್ಲೇ ಊಟಮಾಡಿ ಓದಿಕೊಳ್ಳುತ್ತಾರೆ. ಬಿಡುವಿನಲ್ಲಿ ಈ ಕೆಲಸದಲ್ಲಿ ನೆರವಾಗುತ್ತಾರೆ...'

'ಹಾಗಾದರೆ ಅದಕ್ಕೆ ಹಣ?'

'ನಾನು ಅಲ್ಲಿಂದ ಕಳುಹಿಸುತ್ತೇನಲ್ಲಾ?'

ಸಿದ್ಧಾರ್ಥ ವಿದ್ಯಾರ್ಥಿಗಳಿಗೆ ಪಾಠ ಹೇಳಿ ಹಣವನ್ನು ಗಳಿಸುವುದು ಅವಳಿಗೆ ಗೊತ್ತಿತ್ತು. ಆದರೂ ಈ ರೀತಿ ಅಧಿಕ ಖರ್ಚು ಏಕೆ ಎಂಬುದು ಅರ್ಥವಾಗಲಿಲ್ಲ. 'ನಿಮ್ಮ ತೋಟ ಈಗಾಗಲೇ ಭಿಗ್ಯದಲ್ಲಿದೆ ಅಲ್ಲವೇ?' ಎಂದು ಕೇಳಿದಳು.

'ಹೌದು'

'ಅದನ್ನು ಬಿಡಿಸಿಕೊಳ್ಳುವ ವ್ಯವಸ್ಥೆ ಮೊದಲು ಮಾಡಬೇಕಲ್ಲವೇ? ಅದನ್ನು ಬಿಟ್ಟು ಹೀಗೇಕೆ ಅವರಿವರನ್ನು ಸಾಕುತ್ತಿದ್ದೀರಿ?' ಎಂದಳು. ನುಡಿದ ಮೇಲೆ 'ಸಾಕು'ತ್ತಿರುವುದು ಎಂದು ಹೇಳಬಾರದಾಗಿತ್ತೇನೋ ಎಂದು ಒಡನೆಯೇ ಅನಿಸಿತು. ಆದರೆ ಸಿದ್ಧಾರ್ಥ ಈ ಮಾತೇ ಕೇಳಿಸದವನಂತೆ ಸುಮ್ಮನಿದ್ದ. ತನ್ನ ಮಾತನ್ನು ತಿದ್ದಿಕೊಳ್ಳುವವಳಂತೆ 'ಇವರ ಹೊಣೆ ನೀವೇಕೆ ಹೊತ್ತಿದ್ದೀರಿ?' ಎಂದಳು.

'ಇನ್ನೂ ನಾಲ್ಕು ಮಂದಿ ಸಿದ್ಧಾರ್ಥರು ರೂಪುಗೊಳ್ಳದೆ ಇರಲಿ' ಎಂದು ಗಂಭೀರವಾಗಿ ಉತ್ತರಿಸಿದ.

ಉತ್ತರ ಅನಿರೀಕ್ಷಿತವಾಗಿತ್ತು. ಸ್ತಬ್ಧವಾಗಿ ಅವನನ್ನೇ ನೋಡುತ್ತಿದ್ದಳು. ಸಿದ್ಧಾರ್ಥ ಇದನ್ನು ಗುರ್ತಿಸಿ ಕಿರುನಗೆ ಬೀರಿದ. 'ಇಷ್ಟು ಮಾತ್ರ ನೆರವಾಗಬಲ್ಲವರೂ ನನಗೆ

ಕೂಲಿಯಾಗಿ ದುಡಿಯಬೇಕಾಗಿದ್ದು ಈಗ ಏನೋ ಅದೃಷ್ಟವಶಾತ್ ನಾಲ್ಕು ಕಾಸು ಸಂಪಾದಿಸುತ್ತಿದ್ದೇನೆ. ಅದರಿಂದ ನಾಲ್ಕು ಮಂದಿಗೆ ನೆರವಾಗುವಂತಿದ್ದರೆ ಒಳ್ಳೆಯದು ತಾನೇ?'

ಕಣ್ಣವೆ ಜ,ಹಾಕದೆಯೇ ಅವನನ್ನು ದಿಟ್ಟಿಸಿದಳು ಕೇದಾರಗೌರಿ. ವಿಕಾರ ಎನಿಸುವಂತೆ ಇರುವ ಮುಖ ಮನೋಹರವಾದ ಬೆಳದಿಂಗಳಲ್ಲೂ ಆಪ್ಯಾಯತೆಯನ್ನು ಗಳಿಸಿಕೊಂಡಿರಲಿಲ್ಲ. ಆದರೂ ಅವನ ವ್ಯಕ್ತಿತ್ವವು ತೇಜೋದೀಪ್ತಿಯಾಗಿ ಅವನನ್ನು ಆವರಿಸಿಕೊಂಡು ಕಾಂತಿಪೂರ್ಣವಾಗಿಸಿತ್ತು. ಇನ್ನೂ ವಿದ್ಯಾರ್ಥಿಯೇ ಆಗಿದ್ದ ಅವನು ಹಲವಾರು ವಿದ್ಯಾರ್ಥಿಗಳಿಗೆ ಪಾಠ ಹೇಳಿಕೊಡುತ್ತಿದ್ದಾನೆ. ಅದರಿಂದ ಅರ್ಜಿತವಾಗುತ್ತಿರುವ ಹಣದಿಂದ ಕೆಲವು ವಿದ್ಯಾರ್ಥಿಗಳನ್ನು ಸಾಕುತ್ತಿದ್ದಾನೆ! ಎಲ್ಲಾ ವಿದ್ಯಾರ್ಥಿಗಳಲ್ಲಿ ಸಾಮಾನ್ಯನಂತೆ ಬೆರೆತು ಒಂದಾಗಿ ತನ್ನ ಬಗ್ಗೆ ಎಂದೂ ಒಂದೆರಡು ನುಡಿಗಳನ್ನೂ ಹೇಳಿಕೊಳ್ಳದ ಸಿದ್ಧಾರ್ಥನನ್ನು, ಸಾಸಿವೆಯನ್ನೇ ಕುಂಬಳವೆಂದು ಹೇಳಿಕೊಳ್ಳುತ್ತಾ ನಾನಾ ರಂಗುರಂಗಿನ ಸಂಗತಿಗಳ ಜನಕರಾಗಿ ಓಡಾಡುವ ಇತರ 'ವಿಶೇಷ' ವಿದ್ಯಾರ್ಥಿಗಳೊಂದಿಗೆ ಹೋಲಿಸಿದಾಗ ಈತನಲಷ್ಟು ಪಾಲು ಹಿರಿಯನೆನಿಸಿಕೊಳ್ಳುತ್ತಾನೆ? 950180 CR

'ನಾವೆಲ್ಲಾ ಒಮಲ+ಮ ನಿಮ್ಮಲ್ಲಿಗೆ ಊಟಕ್ಕೆ ಬರುತ್ತೇವೆ' ಎಂದು ಹೇಳಿದಾಗ ಕಿರುನಗೆಯಿಂದಲೇ ಆ ಮಾತನ್ನೇಕೆ ತಪ್ಪಿಸಿದನೆಂಬುದು ಆಗ ಅರ್ಥವಾಗಿರಲಿಲ್ಲ; ಈಗ ಸ್ಪಷ್ಟವಾಗಿತ್ತು. ಆದರೂ ಸಿದ್ಧಾರ್ಥನ ಬಗ್ಗೆ ಪೂರ್ಣ ತಿಳಿದಂತೆ ಅನಿಸುತ್ತಿರಲಿಲ್ಲ. ಎಲ್ಲೋ ಒಂದು ಕೊಂಡಿ ಕಳಚಿಕೊಂಡಿರುವಂತೆಯೇ ಭಾಸವಾಗುತ್ತಿತ್ತು.

'ಇನ್ನೂ ಸ್ವಲ್ಪ ಕಾಲದ ನಂತರ ಈ ಕೆಲಸವನ್ನು ನಿರ್ವಹಿಸಿದ್ದರೆ ಚೆನ್ನಾಗಿರುತ್ತಿತ್ತು ಅಲ್ಲವೇ?' ಎಂದಳು.

'ಯಾವ ಕೆಲಸ?' ಸಿದ್ಧಾರ್ಥ ಕೇಳಿದ.

'ಇದೇ...ಈ ವಿದ್ಯಾರ್ಥಿಗಳ ಪೋಷಣೆ...'

'ಏಕೆ?'

'ಕಳೆದ ನಾಲ್ಕೈದು ವರ್ಷಗಳಿಂದ ನೀವು ಕಷ್ಟದಿಂದ ಗಳಿಸಿ ತಿಂಗಳಿಗೆ ಎರಡು ನೂರು ಕಳುಹಿಸುವುದು. ಅದರಿಂದ ಇವರನ್ನು ಓದಿಸುವುದು ಒಳ್ಳೆಯದೇ. ಆದರೆ ಅದೇ ಹಣವನ್ನು ನಿಮ್ಮ ಸಾಲಕ್ಕೆ ಹಾಕಿದ್ದರೆ ಸಾಲ ಬೇಗ ತೀರುತ್ತಿತ್ತಲ್ಲ. ಬಡ್ಡಿಯೂ ಉಳಿಯುತ್ತಿತ್ತು. ಗದ್ದೆ ನಿಮ್ಮದಾದ ನಂತರ ಸಂಪಾದನೆ ಸ್ವಂತದ್ದಾಗುತ್ತದೆ. ಆಗ ನಾಲ್ವರ ಬದಲು ಆರು ಮಂದಿಯನ್ನಾದರೂ ಪೋಷಿಸುವ ಚೈತನ್ಯವಿರುತ್ತದೆ' ತನ್ನ ತರ್ಕ ಸರ್ವತೋಭದ್ರವಾಗಿದ್ದು ಆಕೆಯ ಮುಖ ಪ್ರಶಾಂತವಾಗಿತ್ತು. ಧ್ವನಿ ಗಂಭೀರವಾಗಿತ್ತು.

ನಿಮ್ಮ ಈ ಕೆಲಸದಲ್ಲಿ ನನಗೆ ಲಾಜಿಕ್ ಕಾಣಿಸುತ್ತಿಲ್ಲ'

ಸಿದ್ಧಾರ್ಥ ಮುಗುಳ್ನಕ್ಕು 'ನಿಮ್ಮ ಮಾತು ನಿಜವೇ. ನಾಲ್ಕು ವರ್ಷ ತಡೆದಿದ್ದರೆ ಅಮ್ಮನ ಕೂಲಿ ಕೆಲಸವೂ ತಪ್ಪುತ್ತಿತ್ತು. ಆದರೆ ಆ ವೇಳೆಗೆ ಈ ನಾಲ್ವರೂ ಸಿದ್ಧಾರ್ಥರೇ ಆಗುತ್ತಿದ್ದರು. ಬದುಕಿನಲ್ಲಿ ಲಾಜಿಕ್‌ಗಿಂತಲೂ ಹೆಚ್ಚು ಮೌಲ್ಯವುಳ್ಳವು ಬಹುವಾಗಿವೆ. ಎಲ್ಲಕ್ಕಿಂತಲೂ ಮುಖ್ಯವಾದದ್ದು ಸಂತೃಪ್ತಿ' ಎಂದ.

ಅವನ ಉತ್ತರದಿಂದ ಆಕೆಯ ಕಣ್ಣು ಅರಳಿತು. ಅದೇ ಕ್ಷಣದಲ್ಲಿ ಅವನ ತಾಯಿ ಒಳಗಿನಿಂದ ಎರಡು ಮೋಸಂಬಿಗಳನ್ನು ತೆಗೆದುಕೊಂಡು ಬಂದಳು.

## 8

ಮದುವೆಯ ಸಿದ್ಧತೆಗಳು ಆರಂಭವಾದವು.

ನಿಜಕ್ಕೂ ಅಷ್ಟು ಬೇಕ ಸಿದ್ಧತೆಗಳ ಅವಶ್ಯಕತೆ ಇರಲಿಲ್ಲ. ಆದರೆ ಅವರ ಆತುರವನ್ನು ಯಾರು ತಡೆಯಬಲ್ಲರು ಹಲವು ಕೋಟಿಗಳ ವ್ಯವಹಾರವನ್ನೂ ಅಂಗೈಯಲ್ಲಿ ಮಾಡಬಲ್ಲ ಚತುರ ಮದುವೆ ಹತ್ತಿರವಾಗುತ್ತಿರುವಂತೆಲ್ಲಾ ಗಾಬರಿಗೊಳ್ಳುತ್ತಿದ್ದಾನೆ. ಮದುವೆಯ ಆಹ್ವಾನಪತ್ರಿಕೆಯ ಡಿಸೈನ್ ತೀರ್ಮಾನಿಸಲು ನಾಲ್ಕು ದಿನ ಚರ್ಚಿಸಿ ಹುಡುಕಿದರೂ ಒಂದು ತೀರ್ಮಾನಕ್ಕೆ ಬರಲು ಸಾಧ್ಯವಾಗಿರಲಿಲ್ಲ.

ಆತನ ಇಬ್ಬರು ಸೆಕ್ರೆಟರಿಗಳು, ಪಿ.ಎ.ಗಳ ಕಾಲವೆಲ್ಲಾ ಆಹ್ವಾನಿತರ ಪಟ್ಟಿ ಸಿದ್ಧಗೊಳಿಸುವುದರಲ್ಲಿಯೇ ವ್ಯಯವಾಗುತ್ತಿದೆ.

ಮನೆಯ ಅಂಗಳದಲ್ಲಿ ಡಿಸೈನ್‌ಗಳನ್ನು ನೋಡುತ್ತಾ ಕುಳಿತಿದ್ದರು ಭವಾನೀಶಂಕರ್. ಆತನ ಭುಜದ ಮೇಲೆ ಕೈ ಹಾಕಿ ಹಿಂದೆ ನಿಂತಿದ್ದಾಳೆ ಕೇದಾರಗೌರಿ.

''ಇವುಗಳಲ್ಲೆಲ್ಲಾ ಇದು ನನಗೆ ಚೆನ್ನಾಗಿ ಕಾಣಿಸುತ್ತೆ''

ಈ ಮಾತೇ ಕೇಳಿಸಿಕೊಳ್ಳದವಳಂತೆ ''ಇದೇನು? ಆಗಲೇ ಬಿಳಿ ಕೂದಲು ಬಂದಿದೆಯಲ್ಲಾ ಡ್ಯಾಡಿ!'' ಎಂದಳು ಆತನ ತಲೆಯತ್ತ ನೋಡುತ್ತಾ.

''ವಯಸ್ಸೇನು ಕಡಿಮೆಯಾಗುತ್ತೇನು?''

ಬಿಳಿ ಕೂದಲನ್ನು ಒಂದೊಂದಾಗಿ ಪಕ್ಕಕ್ಕೆ ಸರಿಸುತ್ತಾ, ''ಈಗ ನಿಮ್ಮ ವಯಸ್ಸೆಷ್ಟು ಡ್ಯಾಡಿ?'' ಎಂದು ಕೇಳಿದಳು.

''ಇನ್ನೇನು ಐವತ್ತಾಯ್ತು''

''ಇದುವರೆಗೂ ಬಿಳಿ ಕೂದಲು ಬರಲಿಲ್ಲವೆಂದರೆ ಅದೃಷ್ಟವೇ!''

ಭವಾನೀಶಂಕರ್ ಗಹಗಹಿಸಿ ನಕ್ಕು, ''ನನ್ನ ಇಪ್ಪತ್ತೈದು ವರ್ಷದಲ್ಲೇ ಬಿಳಿ

ಕೂದಲಿತ್ತು. ಡೈ ಮಾಡಿಕೊಂಡೇ ನಿಮ್ಮ ತಾಯಿಯನ್ನು ನೋಡಲು ಹೋಗಿದ್ದೆ. ಮದುವೆಯಾದ ಎರಡು ಮೂರು ವರ್ಷಗಳ ತನಕ ನಿಮ್ಮಮ್ಮನಿಗೂ ಈ ರಹಸ್ಯ ಗೊತ್ತಿರಲಿಲ್ಲ!..." ಎಂದ.

ಕೇದಾರಗೌರಿಯೂ ನಗುತ್ತಾ, "ಮದುವೆಗೆ ಮೊದಲು ಅಮ್ಮನ ಪರಿಚಯ ಇರಲಿಲ್ಲವೇ?" ಎಂದು ಕೇಳಿದಳು.

"ಪರಿಚಯವೇ! ನಿಮ್ಮ ತಾತ ಹೆಸರಿಗೆ ಮಾತ್ರವೇ ಕಮ್ಯುನಿಸ್ಟ್. ಆಧುನಿಕ ಭಾವನೆಗಳನ್ನು ಹೊಂದಿದ್ದವ. ಆದರೆ ಮದುವೆಗೆ ಮೊದಲೇ ಹುಡುಗಿಯೊಂದಿಗೆ ಮಾತನಾಡುತ್ತಾ ಸ್ನೇಹದಿಂದಿರುವುದು ಎಂದರೆ ಖಂಡಿತ ಬೆತ್ತ ಕೈಗೆತ್ತಿಕೊಳ್ಳುತ್ತಿದ್ದ. ನಿಮ್ಮಮ್ಮ ನಾನು ಮದುವೆಯಾದ ಎರಡು ತಿಂಗಳು ಮಾತು ಕೂಡ ಆಡುತ್ತಿರಲಿಲ್ಲ. ಅಷ್ಟೊಂದು ನಾಚಿಕೆ ನಮಗೆ!"

ಹಿಂದಣ ಸ್ಮೃತಿಗಳನ್ನು ಮೆಲುಕು ಹಾಕುತ್ತಾ ಅದೇ ಕನಸಿಗೆ ಜಾರಿದ್ದ ತಂದೆಯನ್ನು ಮಮತೆಯಿಂದ ನೋಡುತ್ತಾ, "ಅಮ್ಮ ನಿಮ್ಮನ್ನು ತುಂಬಾ ಚೆನ್ನಾಗಿ ನೋಡಿಕೊಳ್ಳುತ್ತಿದ್ದರು ಅಲ್ಲವೇ ಡ್ಯಾಡಿ?" ಎಂದು ಕೇಳಿದಳು.

ಆತ ಕಣ್ತೆರೆಯದೆಯೇ ನಿಧಾನವಾಗಿ ಹೇಳಿದ; "ದುರದೃಷ್ಟದ ಕಾಟವೇ ನನಗಿಲ್ಲ ಎಂದುಕೊಂಡಿದ್ದೆ. ಹಾಗೆಂದು ತುಂಬಾ ಗರ್ವಿತನಾಗಿದ್ದೆ. ಆದರೆ ಎಲ್ಲವನ್ನೂ ಒಂದೇ ಡೋಸ್‌ನಲ್ಲಿ ನಿಮ್ಮಮ್ಮನನ್ನು ಕೊಂದು ನುಂಗಿತ್ತು"

ಸ್ವಲ್ಪ ಹೊತ್ತು ಮೌನ.

"ನೀವಾರೆಂಬುದು ಅಮ್ಮನಿಗಾಗಿ, ಅಮ್ಮನಾರೆಂದಬುದು ನಿನಗಾಗಲಿ, ಮದುವೆಯಾದ ಎರಡು ತಿಂಗಳಿಗೂ ಗೊತ್ತಾಗಿರಲಿಲ್ಲ. ನೀವೂ ಮಾತು ಆಡುತ್ತಿರಲಿಲ್ಲ. ಆದರೂ ಪರಸ್ಪರ ನೆರವಾಗಿ ಪ್ರೇಮದಿಂದ ಹೇಗೆ ಜೀವನ ಸಾಗಿಸುವುದು ಸಾಧ್ಯವಾಯಿತು ಡ್ಯಾಡಿ?"

"ಇಬ್ಬರೂ ಒಂದಾಗಿ ಬದುಕುತ್ತಿದ್ದುದರಿಂದ ಹಾಗೆ ಒಂದಾಗಲು ಇದ್ದ ಹಿನ್ನೆಲೆ ಪವಿತ್ರವಾದ ವಿವಾಹಬಂಧ...ಇದೆಲ್ಲಾ ಈಗೇಕೆ ಕೇಳುತ್ತಿದ್ದೀಯಮ್ಮಾ?"

ಆ ಪ್ರಶ್ನೆಗೆ ಉತ್ತರಿಸದೆಯೇ "ವಿವಾಹಬಂಧವಲ್ಲ ಡ್ಯಾಡಿ" ಎಂದಳು. "ಪರಸ್ಪರ ಅರ್ಥ ಮಾಡಿಕೊಳ್ಳುವುದರಿಂದಲೇ ಅದು ಸಾಧ್ಯವಾಗುತ್ತದೆ ಎಂದುಕೊಳ್ಳುತ್ತೇನೆ".

ಸ್ವಲ್ಪ ಯೋಚಿಸಿ "ಹೌದು, ನೀನು ಹೇಳುವುದೂ ನಿಜವೇ" ಎಂದರು.

"ಹಾಗಿದ್ದರೆ ಮದುವೆಯಾಗಿ ಕನ್ಯಾಪರೀಕ್ಷೆ ಇವೆಲ್ಲಾ ಯಾಕೆ? ಆ ಸಮಯದಲ್ಲಿ ಯಾರನ್ನು ಯಾರೂ ಅರ್ಥಮಾಡಿಕೊಳ್ಳುವುದು ಸಾಧ್ಯವಾಗದು"

ಇಂಥಾ ಪ್ರಶ್ನೆಗಳನ್ನು ಕೇಳಿ ಆತನನ್ನು ಇಬ್ಬಂದಿಯನ್ನಾಗಿಸಿ ಮಾಡಿಕಾಡಿಸುವುದು ಕೇದಾರಗೌರಿಗೆ ಚಿಕ್ಕಂದಿನಿಂದಲೂ ಬಂದಿರುವ ರೂಢಿ. "ಆದ್ದರಿಂದ ನಕ್ಕು ಇಬ್ಬರು

ಬೆರೆತು ಬಾಳಿಲ್ಲಾ ಒಂದಾಗಿಯೇ ಇರಲು ಸಾಧ್ಯವಾಗಲು ಪರಸ್ಪರ ನೋಟ ಅವಶ್ಯಕವಾದದ್ದು. ಕೆಲವರು ಮೊದಲ ನೋಟದಲ್ಲಿಯೇ 'ಇವರ ಸ್ನೇಹ ಎಷ್ಟು ಚೆನ್ನ' ಎನಿಸುತ್ತಾರೆ. ಇನ್ನು ಕೆಲಸವರನ್ನು ನೋಡುತ್ತಲೇ ಅವರಿಂದ ದೂರವಿರಬೇಕೆಂಬ ಬಯಕೆ ಮೂಡುತ್ತದೆ. ಒಮ್ಮೆ ಆ ಸ್ನೇಹ ಭಾವಮೂಡಿದರೆ ಮದುವೆ ಅವರನ್ನು ಸನಿಹಕ್ಕೆ ಸೆಳೆಯುತ್ತದೆ. ಕಣ್ಣು ಮೋಸಮಾಡಿದ್ದರೆ ಮಾತ್ರವೇ ಮದುವೆ ಸೋಲುತ್ತದೆ!''

''ಅಂದರೆ ನಿಮ್ಮ ಪ್ರಕಾರ ಕಣ್ಣು ಹೇಳುವ ನಿರ್ಣಯ ತಪ್ಪಾಗುವುದಿಲ್ಲ ಎಂದೇ? ಕೆಲವರೊಂದಿಗೆ ಎಷ್ಟು ಕಾಲ ಒಂದಾಗಿದ್ದರೂ ಪ್ರತ್ಯೇಕತಾಭಾವ ಹಾಗೇ ಉಳಿದಿರುತ್ತದೆ. ಮತ್ತೆ ಕೆಲವರನ್ನು ಕಂಡಕೂಡಲೇ ಸ್ನೇಹ ಪಲ್ಲವಿಸುತ್ತದೆ''

''ಹೌದಮ್ಮ ನಿನ್ನ ಮಾತು ಸತ್ಯ. ಆದರೆ ಅದೆಲ್ಲಾ ಈಗೇಕೆ ಕೇಳುತ್ತಿದ್ದೀ?''

''ನನ್ನಲ್ಲಿ ನಾನೇ ಇಷ್ಟು ದಿನಗಳೂ ಪರೀಕ್ಷಿಸುತ್ತಾ ಬರುತ್ತಿದ್ದೇನೆ ಡ್ಯಾಡಿ. ಎಷ್ಟು ಪ್ರಯತ್ನ ಪೂರ್ವಕವಾಗಿ ಬೆರೆತಿರಲು ಬಯಸಿದರೂ ನನ್ನಲ್ಲಿ ಆ ಭಾವನೆಯೇ ಬರುವುದಿಲ್ಲ. ನನ್ನ ಈ ಆಲೋಚನೆಯಲ್ಲಿಯೇ ಏನಾದರೂ ತಪ್ಪಿದೆಯೇನೋ ಎಂದು ನಿಮ್ಮಲ್ಲಿ ತಾಳೆ ನೋಡಲು ಪ್ರಶ್ನಿಸಿದೆ. ನಿಮ್ಮ ಮಾತೂ ನನ್ನ ಭಾವನೆಯನ್ನೇ ಎತ್ತಿಹಿಡಿದಿದೆ! ನನಗೆ ತುಂಬಾ ಸಂತೋಷವಾಗಿದೆ...''

''ಯಾರು ಕೇಳಿದರೂ ಹಾಗೇ ಹೇಳ್ತಾರೆಮ್ಮಾ. ವಿನಾಕಾರಣ ಪ್ರೇಮ ಏಕೆ ರೂಪುಗೊಳ್ಳುತ್ತದೆ ಎಂಬುದು ನಾವು ಹೇಳಲಾರೆವು ಅಲ್ಲವೇ?''

''ನಿಜ ಡ್ಯಾಡಿ, ನಾನೀಗ ಅದೇ ಸ್ಥಿತಿಯಲ್ಲಿದ್ದೇನೆ...''

ಆಕಾಶ ಸಿಡಿದು ಚೂರಾಗುತ್ತಿರುವ ಸದ್ದೇ ಗುಡುಗಾಗಿರುವಂತೆ. ಬಿಸಿಲತಾಪಕ್ಕೆ ಪಲಾಯನ ಮಾಡಿದ್ದ ಮೇಘಗಳು ತಮ್ಮಲ್ಲಿಯ ದ್ವೇಷವನ್ನು ತೀರಿಸಿಕೊಳ್ಳಲು ಒಂದನ್ನೊಂದು ಢೀ ಕೊಡುತ್ತಾ ನಡೆಸುತ್ತಿರುವ ಹೋರಾಟದಿಂದ ಸೃಷ್ಟಿಗೊಂಡ ಬೆಳಕೇ ಮಿಂಚಾದಂತೆ ಇದ್ದಾಗ ಗಾಳಿ ಭೋರ್ಗರೆಯುತ್ತಾ ಬೀಸುತ್ತಿದೆ.

ಕೃಷ್ಣಾಪುರವನ್ನು ಈ ಮೂರು ಸುತ್ತುವರೆದು ಆಶಿಸುತ್ತಿವೆ.

ತಮ್ಮ ಇದುವರೆವಿಗಿನ ಬಾಳಿನಲ್ಲಿ ಇಂತಹ ಕುಂಭದ್ರೋಣ ವರ್ಷಾಘಾತವನ್ನು ಕಾಣಲಿಲ್ಲವೆಂದು ಉದ್ಗರಿಸುತ್ತಾ ಕಿಟಕಿಗಳಿಂದ ಹೊರಗೆ ನೋಡುತ್ತಾ ಇದ್ದರು ಕೆಲವರು ವೃದ್ಧರು. ದೂರದಲ್ಲಿ ಎಲ್ಲೋ ಸಿಡಿಲೆರಗಿ ದೊಡ್ಡ ವಟವೃಕ್ಷವನ್ನೇ ಸುಟ್ಟಂತೆ ಭಾವನೆ ಮೂಡಿಸುವ ವಾತಾವರಣ. ಚಿಕ್ಕ ಮಕ್ಕಳೆಲ್ಲರೂ ತಾಯಂದಿರ ಮಡಿಲನ್ನು ಆಶ್ರಯಿಸಿದ್ದರು. ಬಾಗಿಲನ್ನು ಮುರಿದುಕೊಂಡು ಮನೆಯೊಳಕ್ಕೆ ನುಗ್ಗಲು ಗಾಳಿ ಪ್ರಯತ್ನಿಸುತ್ತಿತ್ತು. ಅದೃಶ್ಯ ಹಸ್ತವೊಂದು ತನ್ನ ಅಂಗೈಯಿಂದ ಆ ಊರನ್ನೇ ಬುಡಸಮೇತ ಕಿತ್ತು ಮೇಲೇರಿಸುತ್ತಿರುವಂಥ ಭಾವನೆ.

ಅದೇ ಗ್ರಾಮದ ಕೆರೆಯ ಪಕ್ಕದ ರಸ್ತೆಯಲ್ಲಿ, ಸಣ್ಣ ಹೆಂಚಿನ ಮನೆಯಲ್ಲಿ

ಫೊಟ್ರೋಮ್ಯಾಕ್ಸ್‌ನ ಬೆಳಕಿನಲ್ಲಿ ಡಾಕ್ಟರ್ ರಂಗಪ್ರಸಾದ್ ಒಬ್ಬ ರೋಗಿಯನ್ನು ಉಳಿಸಲು ನಾನಾ ಅವಸ್ಥೆಗಳನ್ನು ಅನುಭವಿಸುತ್ತಿದ್ದ.

ಡಾಕ್ಟರ್ ರಂಗಪ್ರಸಾದ್, ಎಂ.ಎಸ್ - ಆತನು ಓದಿರುವ ಓದಿಗೆ ತಕ್ಕ ಪ್ರಾಕ್ಟೀಸ್ ನಡೆಯುವ ಊರಲ್ಲ ಅದು. ವ್ಯವಹಾರದ ದೃಷ್ಟಿಯಿಂದ ಲಾಭವೆಂಬುದೇನೆಂದು ತಿಳಿಯಎವುದೂ ಸಾಧ್ಯವಿಲ್ಲದ ಊರು. ಆದರೆ ಒಂದು ಒಳ್ಳೆಯ ಗುರಿಯನ್ನು ನಿಶ್ಚಯಿಸಿಕೊಂಡು, ಹಳ್ಳಿಗರ ಒಳಿತಿಗಾಗಿ ಆ ಗ್ರಾಮದಲ್ಲಿ ಪ್ರಾಕ್ಟೀಸ್ ಪ್ರಾರಂಭಿಸಿದ್ದ. ಇದರಿಂದ ಸುತ್ತಮುತ್ತಲಿನವರೆಲ್ಲಾ ಅಲ್ಲಿಗೆ ಚಿಕಿತ್ಸೆಗಾಗಿ ಬರುತ್ತಿದ್ದರು. ಹಾಗೂ ಹೀಗೂ ಅವರ ಜೀವನ ಸಾಗುತ್ತಿತ್ತು.

ಚಿಕಿತ್ಸೆಗಾಗಿ ಒಬ್ಬ ಕೂಲಿ ಹೆಣ್ಣು ಬಂದಳು. ಮದುವೆಯಾಗಿ ಆರುತಿಂಗಳಾಗಿದೆ. ನಾಲ್ಕು ತಿಂಗಳ ಬಸುರಿ. ಹೊಟ್ಟೆನೋವು, ರಕ್ತಸ್ರಾವಗಳಿಂದ ಅರೆ ಪ್ರಜ್ಞಾವಸ್ಥೆಯಲ್ಲಿ ಆಕೆಯನ್ನು ಹೊತ್ತು ತಂದರು. ನೋಡುತ್ತಲೇ ಗರ್ಭಸ್ರಾವ ನಡೆದಿದೆ ಎಂಬುದು ಸ್ಪಷ್ಟವಾಗಿತ್ತು. ಎವಾಪೊರ್ಟಾನ್ ಕೊಟ್ಟಾಯಿತು ನೋವು ಕಡಿಮೆಯಾಯಿತು. ಆದರೆ ಸ್ರಾವ ನಿಲ್ಲಲಿಲ್ಲ...ಕ್ಲಾಟ್ಸ್ ಬೀಳುತ್ತಲೇ ಇವೆ...ಐದು ನಿಮಿಷ...ಹತ್ತು ನಿಮಿಷ...ಅರ್ಧ ಗಂಟೆ...

ತೀರಾ ಸಾಮಾನ್ಯವಾದ ಕೇಸ್. ಎಂದುಕೊಂಡಿದ್ದದ್ದು ನೋಡುತ್ತಿದ್ದಂತೆಯೇ ತೀರಾ ಸೀರಿಯಸ್ ಕೇಸಾಯಿತು. ಈಗೇನು ಮಾಡಬೇಕೆಂಬುದು ಆತನಿಗೆ ಹೊಳೆಯಲಿಲ್ಲ. ರೋಗಿಯ ಸಂಬಂಧಿಗಳು ನಾಲ್ಕನೆಯ ತಿಂಗಳು ಎಂದರೂ ಅದು ಆರನೆಯ ತಿಂಗಳೇ ಇರಬೇಕೆಂದು ನಿಶ್ಚಯಿಸಿದ. ಕೊನೆಗೆ 'ಹಿಸ್ಟರಾಟಮೀ' ನಡೆಸಬೇಕೆಂದು ತೀರ್ಮಾನಿಸಿದ. ಪಕ್ಕದಲ್ಲಿದ್ದ ನರ್ಸ್ ಅಚ್ಚರಿಗೊಂಡಳು. ಬಲವಂತ ಗರ್ಭಸ್ರಾವ ನಡೆಸುವಾಗ, ಅತ್ಯಂತ ಅವಶ್ಯಕವೆನಿಸಿದಾಗ ಮಾತ್ರವೇ ನಡೆಸುವ ಆಪರೇಷನ್- ಹಿಸ್ಟರಾಟಮೀ (ಹೊಟ್ಟೆಕುಯ್ದು ಗರ್ಭವನ್ನು ತೆಗೆಯುವ ಕ್ರಿಯೆ) ಇಂಥಾ ಸಣ್ಣ ಕೇಸ್‌ಗೆ ಇಷ್ಟು ದೊಡ್ಡ ತೀರ್ಮಾನವೇ?

ಡಾಕ್ಟರ್‌ಗೆ ಯಾವ ಕ್ಷಣದಲ್ಲಿ ಈ ಯೋಜನೆ ಹೊಳೆಯಿತೋ ಅದು ಸತ್ಫಲಿತವನ್ನೇ ನೀಡಿತು- ತಾಯಿ ಉಳಿದುಕೊಂಡಳು.

ಅರ್ಧಗಂಟೆಯ ನಂತರ ಆಪರೇಷನ್ ಪೂರ್ಣಗೊಂಡಿತು. ಮುಖ ತೊಳೆದುಕೊಂಡು ಟೀ ಕುಡಿಯುತ್ತಾ ಮೆಡಿಕಲ್ ಜರ್ನಲ್‌ನ ಹಾಳೆಗಳನ್ನು ಮಗುಚುತ್ತಿದ್ದ. ಲಣ್ಣು ಅಲ್ಲಿದ್ದರೂ ಆತನ ಮನಸ್ಸು ಬೇರೆಲ್ಲೋ ಇತ್ತು- ಸೀಳಿದ ಹೊಟ್ಟೆಯ ಚರ್ಮದ ಅಡಿಯಿಂದ ತನ್ನ ಕೈಬೆರಳು ಹೊರಕ್ಕೆ ತೆಗೆದ ಚಿಕ್ಕ ಕೋತಿಮರಿಯ ಆಕಾರದ ಸಜೀವ ಪಿಂಡ.

ಅದೇ ಮಾತನ್ನು ಅಷ್ಟೊಂದು ಚಿಂತೆಗೀಡುಮಾಡಿದ್ದು.

ನಾಲ್ಕು ತಿಂಗಳಲ್ಲಿ ಭ್ರೂಣ ಅಷ್ಟೊಂದು ಬೆಳವಣಿಗೆ ಪಡೆಯುವುದು ಸಾಧ್ಯವಿಲ್ಲ. ಮದುವೆಗೆ ಮೊದಲೇ ಯಾರೊಂದಿಗಾದರೂ ಸಂಬಂಧವಿತ್ತೇನೊ? ಏಕೋ ಅದು ನಿಜವೆನಿಸುತ್ತಿಲ್ಲ...ಹೊರಬಿದ್ದ ಪಿಂಡಕ್ಕೆ ಒಂದು ಸಣ್ಣ ಬಾಲ! ಇದು ಆತನನ್ನು ಬೆಚ್ಚಿಬೀಳಿಸಿತ್ತು.

ಏನೂ ಅರ್ಥವಾಗದವನಂತೆ ತಲೆಕೊಡವಿಕೊಂಡು ಮತ್ತೆ ಓದುವುದರಲ್ಲಿ ಮುಳುಗಿದ.

ಹೊರಗೆ ಮಳೆ ಸುರಿಯುತ್ತಲೇ ಇದೆ. ಸೂರಿನಿಂದ ಸುರಿಯುತ್ತಿರುವ ಧಾರೆಗಳನ್ನು ನೋಡುತ್ತಾ ಒಬ್ಬ ರೈತ ಕಣ್ಣನ್ನು ಅರೆಮುಚ್ಚಿ ಸುರಟನ್ನು ಹಿಡಿದು ಹೊಗೆಯ ಸವಿಯನ್ನು ಅನುಭವಿಸುತ್ತಿದ್ದಾನೆ. ಅರ್ಧ ಗಂಟೆಯಹಿಂದೆ ಆತ ಕಳುಹಿಸಿದ ಸುದ್ದಿ ಅಲೆ ಅಲೆಯಾಗಿ ಆವರಿಸುತ್ತಾ ಉಸ್ಲೋಕ್ ಸದಸ್ಯರನ್ನು ಸೇರುತ್ತಿತ್ತು-

ಅಷ್ಟಾವಕ್ರನ ಆಗಮವನ್ನು ಸೂಚಿಸಲೆಂದು ಪ್ರಥಮಗರ್ಭನು ಉದ್ಭವಿಸಿದ್ದಾನೆ.

★★★

''ಆತನೇನು ಸ್ಫುರದ್ರೂಪಿಯಲ್ಲ ಡ್ಯಾಡಿ. ಹಣವಿರುವವನೂ ಅಲ್ಲ. ಆದ್ದರಿಂದಲೇ ನನಗೆ ಹತ್ತಿರದವನಾದನೇನೋ! ರಾಕೇಶ್ ಬಳಿಯಲ್ಲಿದ್ದಾಗ ಇದುವರೆವಿಗೂ ನಾನು ಫ್ರೀ ಎನಿಸೇ ಇಲ್ಲ. ನಮ್ಮಿಬ್ಬರ ಅಸ್ಪಷ್ಟವಾದ ಅಂತರ ಇದ್ದೇ ಇರುತ್ತದೆ. ಬಹುಶಃ ಅದು ನನ್ನ ಇನ್‌ಫೀರಿಯಾರಿಟಿ ಕಾಂಪ್ಲೆಕ್ಸ್ (ಕೀಳರಿಮೆ) ಇರಬೇಕು. ಅದು ಹಾಗೆಯೇ ಉಳಿದುಕೊಂಡಿದೆ. ಆದ್ದರಿಂದ ಸಮಾನ ಸ್ಥಾಯಿಯಲ್ಲಿ ಇರುವವನನ್ನು ಬಯಸುವುದು ತಪ್ಪಲ್ಲ ಎಂದುಕೊಂಡಿದ್ದೇನೆ. ನಮ್ಮನ್ನು ಆಶೀರ್ವದಿಸಿ'' ಎಂದಳು ಕೇದಾರಗೌರಿ.

''ಈ ಬಾಂಧವ್ಯ ಕೂಡದು ಎಂದರೆ?''

''ಕ್ಷಮಿಸಿ ಡ್ಯಾಡಿ. ನನ್ನ ನಿರ್ಣಯದ ಬಗ್ಗೆ ನಂಬಿಕೆ ಇದೆ''

''ಗೌರೀ. ಯಾವ ಕ್ಷಣ ನನ್ನನ್ನು ಧಿಕ್ಕರಿಸಿ ನಿನ್ನ ಸ್ವಂತ ನಿರ್ಣಯಕೆಎಗೊಂಡೆಯೋ ಅದೇ ಕ್ಷಣದಿಂದ ಈ ಮನೆಯ ಬಾಗಿಲು ನಿನ್ನ ಪಾಲಿಗೆ ಮುಚ್ಚಿದಂತೆ. ಈಗ ನೀನು ನನ್ನ ಮಗಳಲ್ಲ, ನಾನು ನಿನ್ನ ತಂದೆಯಲ್ಲ'' ಎಂದರು ಭವಾನಿ ಶಂಕರ್.

''ಡ್ಯಾಡೀ...''

''ಇನ್ನೇನಮ್ಮ ನಿನ್ನ ಡೈಲಾಗು? ಆಶೀರ್ವದಿಸು...ಕ್ಷಮಿಸು...ಹೀಗಾ ನೀನು ಮಾತನಾಡುವುದು? ನಾನು ಒಬ್ಬನನ್ನು ಇಷ್ಟಪಟ್ಟಿದ್ದೇನೆ. ನಿಮಗೆ ಈ ವಿಷಯ ತಿಳಿಸುತ್ತಿದ್ದೇನೆ ಎಂದು ಹೇಳಬೇಕಷ್ಟೇ. ನಾನು ಸಿದ್ದಾರ್ಥನನ್ನು ನೋಡಬೇಕಾದ ಅವಶ್ಯಕತೆಯೂ ಇಲ್ಲ. ನನ್ನ ಮಗಳ ತೀರ್ಮಾನದ ಬಗ್ಗೆ ಅಷ್ಟೊಂದು ನಂಬಿಕೆ ಇದೆ. ಮುಹೂರ್ತವನ್ನು ಬದಲಿಸಬೇಕಾದ ಅವಶ್ಯಕತೆಯೂ ಇಲ್ಲ!''

ತಂದೆಯ ಅಭಿಮಾನಕ್ಕೆ ಕೇದಾರಗೌರಿ ಕರಗಿದಳು. ಕಣ್ಣಲ್ಲಿ ನೀರು ತುಂಬಿಕೊಂಡು ''ತುಂಬಾ ಥ್ಯಾಂಕ್ಸ್ ಡ್ಯಾಡಿ'' ಎಂದಳು.

''ರಾಕೇಶ್‌ಗೆ ಈ ವಿಷಯ ಹೇಗೆ ಹೇಳುತ್ತಿಯೋ ಅದು ನಿನಗೇ ಬಿಟ್ಟಿದ್ದೇನೆ. ನಿನ್ನ ಬಗ್ಗೆ ತುಂಬಾ ಆಸೆ ಬೆಳೆಸಿಕೊಂಡಿದ್ದಾನೆ. ಇದು ದೊಡ್ಡ ಷಾಕ್ ನೀನೇ ಸಂತೈಸಬೇಕು...''

ಆಕೆ ತಲೆ ತಗ್ಗಿಸಿ ''ಆಗಲಿ ಡ್ಯಾಡಿ...'' ಎಂದಳು.

ರಾಕೇಶನಿಗೆ ಈ ಸಂಗತಿ ತಿಳಿಸಿದಾಗ-

''ನಿನ್ನನ್ನು ಬಿಟ್ಟು ನಾನು ಬದುಕಲಾರೆ ಗೌರೀ! ವಿಷ ಕುಡಿದು ಸಾಯುತ್ತೇನೆ, ಪ್ರೇಮದಲ್ಲಿ ವಿಫಲವಾದ ಪ್ರೇಮಿಗಳೆಲ್ಲಾ ಏನಾಗಿದ್ದಾರೆ. ಆತ್ಮಹತ್ಯೆ ಮಾಡಿಕೊಂಡಿದ್ದಾರೆ, ಇಲ್ಲವೆ ದೇವದಾಸರಾಗಿದ್ದಾರೆ. ನಾನೂ ಯಾವುದಾದರೂ ದಾರಿ ಹುಡುಕಿಕೊಳ್ಳುತ್ತೇನೆ...''

''ರಾಕೇಶ್!''

''...ಎಂದು ಹೇಳುತ್ತೇನೆ ಎಂದು ಹೇಗೆ ಭಾವಿಸಿದೆಯೊ ಗೌರೀ? ನಿನ್ನ ಒಳ್ಳೆಯ ಮಿತ್ರನಾದ ನನಗೆ ನೀನೇನು ಮಾಡಿದರೂ ಸುಖವೇ. ಸಿದ್ಧಾರ್ಥನೂ ತುಂಬಾ ಒಳ್ಳೆಯವನು. ನಿನ್ನ ಸೆಲೆಕ್ಷನ್ ಚೆನ್ನಾಗಿದೆ!''

ಕೇದಾರಗೌರಿ ಅವನನ್ನು ಸಮೀಪಿಸಿ ''ನೀನೇನು ಯೋಚಿಸುವುದಿಲ್ಲ ತಾನೇ?'' ಎಂದು ಕೇಳಿದಳು.

ಅವನು ನಕ್ಕ. ''ನನಗೇನು ಯೋಚನೆ? ನೀನು ಸಂತೋಷದಿಂದ ಇರುವುದಾದರೆ ನನಗೆ ಅದಕ್ಕಿಂತಲೂ ಬೇರೇನು ಬೇಕು?''

ಈ ಮಾತು ಕೇಳಿ ಅವಳ ಮುಖ ಅರಳಿತು. ''ನನಗೆ ಗೊತ್ತು ರಾಕೇಶ್. ನಾನು ಯಾವ ರೀತಿಯಲ್ಲೂ ನಿನಗೆ ಸರಿಯಾದ ಜೋಡಿಯಲ್ಲ ಎಂದು. ಸುಂದರಕಾಯನಾದ ನಿನಗೆ ಅಪಾಂಗಳಾದ ನಾನು ಯಾವ ಜೋಡಿ. ಏನೋ ಕಂತೆಗೆ ತಕ್ಕ ಬೊಂತೆಯಂತೆ...''

ಅವಳ ಮಾತನ್ನು ತಡೆಯುತ್ತಾ ''ಸಾಕು ಸಾಕು ಹಾಗೆಲ್ಲಾ ಮಾತಾಡಬೇಡ. ನಿತ್ಯವೂ ನಿನ್ನನ್ನು ನೋಡುತ್ತಾ ನೀನೇ ನನ್ನ ಹೆಂಡತಿ ಎಂದು ಮನಸಾ ಭಾವಿಸಿಯೇ ವ್ಯವಹರಿಸುತ್ತಿದ್ದ ನಾನು ಒಡನೆಯೇ ಬದಲಾಗಿರುವ ಪರಿಸ್ಥಿತಿಯೊಂದಿಗೆ ಹೊಂದಿಕೊಳ್ಳುವುದು ಕಷ್ಟವಾಗುತ್ತಿದೆ. ಮನೆಯಿಂದ ಹೊರಹೋಗಲು ಸ್ವಲ್ಪ ಸಮಯದ ಅವಕಾಶ ಕೊಡುತ್ತೀಯ ತಾನೇ?'' ಎಂದು ಕೇಳಿದ.

''ಅದೇಕೆ? ಮನೆಯಿಂದ ಹೊರಹೋಗುವುದು ಎಂದರೇನು?'' ಎಂದು ಆಶ್ಚರ್ಯದಿಂದ ಕೇಳಿದಳು.

ಈ ಮನೆಯೊಂದಿಗೆ ನನ್ನ ಸಂಬಂಧವೇನೂ ಇಲ್ಲ ಎಂಬುದು ನನಗೆ ಗೊತ್ತು, ಆದರೆ ಮನಸ್ಸು ಸ್ಥಿಮಿತಕ್ಕೆ ತಂದುಕೊಳ್ಳಲು ಸ್ವಲ್ಪ ಸಮಯ ಬೇಕಾಗುತ್ತದೆ, ಕನಿಷ್ಠ ನಿಮ್ಮ ಮದುವೆ ಮುಗಿಯುವವರೆಗಾದರೂ ನಿಮ್ಮೊಂದಿಗೆ ಇರಲು ಅವಕಾಶ ಕೊಡು''

ರಾಕೇಶನ ಈ ಮಾತು ಅವಳ ಕಣ್ಣಲ್ಲಿ ನೀರೂರಿತು.

''ಹಾಗೆಲ್ಲಾ ಮಾತನಾಡಿದರೆ ನನ್ನಾಣೆ'' ಎಂದಳು ಪ್ರಯತ್ನಪೂರ್ವಕವಾಗಿ ಅಳುವನ್ನು ತಡೆಹಿಡಿಯುತ್ತಾ. ''ನಿನ್ನ ಮನಸ್ಸಿಗೆ ನಾನೇನಾದರೂ ಘಾಸಿಯುಂಟು ಮಾಡಿದ್ದರೆ ನನ್ನನ್ನು ಬೈಯ್ಯಬಹುದು. ಅದು ಬಿಟ್ಟುಹೃದಯವನ್ನೇ ಚುಚ್ಚಿ ಗಾಯಗೊಳಿಸುವ ಮಾತುಗಳು ಬೇಡ. ಹೋಗ್ತೀನಿ ಅಂತೀಯ ಎಲ್ಲಿಗೆ? ನಿನ್ನ ಹೋಗು ಅಂತ ಹೇಳ್ದೋರು ಯಾರು?...ನೀನು ಇಲ್ಲೇ ನಮ್ಜೊತೆಯಲ್ಲೇ ಇರ್ತೀಯ. ನನಗಿಂತಲೂ ತುಂಬಾ ಸುಂದರಿಯಾದವಳನ್ನೇ ಮದುವೆಯಾಗ್ತೀಯ...ಎಲ್ಲಿ, ಹಾಗಾಗುತ್ತೆ ಅಂತ ಮಾತು ಕೊಡು'' ಎಂದಳು ಕೈಚಾಚಿ.

ನಿಧಾನವಾಗಿ ಅವಳನ್ನು ಸಮೀಪಿಸಿ ಅವಳ ಮುಖವನ್ನೇ ದಿಟ್ಟಿಸಿ ನೋಡುತ್ತಾ ಅವಳ ಕೈಯಲ್ಲಿ ತನ್ನ ಕೈಯಿರಿಸಿ ''ಇಲ್ಲೇ ಇರುತ್ತೇನೆ. ಸರಿತಾನೇ...?'' ಎಂದ.

ಕೇದಾರಗೌರಿಯ ಮುಖ ಸಂತೋಷದಿಂದ ಅರಳಿತು.

ಇದು ನಡೆದ ಎರಡು ಘಂಟೆಗಳಿಗೆ ರಾಕೇಶ್ ಮಹಾದ್ರಷ್ಟನ ಮುಂದೆ ನಿಂತಿದ್ದ. ಅವನು ಮೊದಲಿನ ರಾಕೇಶನಂತಿಲ್ಲ. ಮುಖ ವಿಕೃತವಾಗಿದ್ದು ರಾಕ್ಷಸ ಸತ್ವವನ್ನೆಲ್ಲಾ ತನ್ನಲ್ಲಿಯೇ ತುಂಬಿಕೊಂಡಂತಿದೆ.

''ಇದಕ್ಕೆ ಪ್ರತೀಕಾರ ನಡೆಯಲೇಬೇಕು. ಏನೇ ಆದರೂ ಇದಕ್ಕೆ ಉಪಶಮನವಿಲ್ಲ. ಯಾರೂ ತಡೆಯುವಂತಿಲ್ಲ'' ಎಂದು ಅಬ್ಬರಿಸಿದ.

ಆ ಕೋಣೆಯಲ್ಲೆಲ್ಲಾ ಧೂಪ. ಏನೋ ಸುಟ್ಟ ವಾಸನೆ. ಆಗ ತಾನೇ ಅಷ್ಟದೇವತಾರ್ಚನೆ ನಡೆದಂತೆ ಇತ್ತು. ರೆಡ್‌ಸ್ಕೆಲಿಟನ್ ಆದ್ದರಿಂದ ರಾಕೇಶ್‌ಗೆ ಸುಲಭವಾಗಿ ಪ್ರವೇಶ ದೊರೆತಿತ್ತು. ಹುಚ್ಚನಂತೆ ರಾಕೇಶ್ ಅಬ್ಬರಿಸುತ್ತಿದ್ದ.

''ಈ ರಾಕೇಶ್ ಬಯಸಿದ್ದು ನಡೆಯದೆ ಇರುವುದು ಇದೇ ಮೊದಲು, ಇದೇ ಕೊನೆಯೂ ಆಗಬೇಕು. ನಿಶ್ಚಯಿಸಿದರೆ ರಾಕೇಶ್ ಎಂಥಾ ಕೃತ್ಯಕ್ಕೂ ಹಿಂದಡಿ ಇಡಲಾರ ಎಂಬುದು ಜಗಜ್ಜಾಹೀರಾಗಬೇಕು...ಇದುವರೆಗೂ ಆಸೆ ತೋರುತ್ತಾ ಇದ್ದು ಮದುವೆಯ ಕರೆಯೋಲೆಗಳು ಅಚ್ಚಾಗುವಾಗ ಬೇಡ ಎನ್ನುವುದೇ? ಕೈಗೆ ಸೇರಲಿದ್ದ ಕೋಟ್ಯಂತರ ರೂಪಾಯಿಗಳ ಆಸ್ತಿ ಕೈಜಾರುವುದು ಸಾಧ್ಯವೇ? ಯಾವುದಕ್ಕಾಗಿ ಈ ಕೇದಾರಗೌರಿ ಈ ತಂತ್ರ ಹೂಡಿದ್ದಾಳೆ? ಅವರ ಮಧ್ಯದ ಸ್ನೇಹ-ಸೌಹಾರ್ದಗಳು, ಸುಖ-ಶಾಂತಿಗಳು ತರಗೆಲೆಯಂತೆ ಮುಗಿಲು ಮುಟ್ಟಬೇಕು. ಪ್ರತಿಕ್ಷಣವೂ ಅವಳು ಭಯದಿಂದ ನಡುಗಬೇಕು. ಒಂಬತ್ತು ತಿಂಗಳು ನಾನಾ ಸಂಕಷ್ಟಗಳನ್ನು ಎದುರಿಸಿ,

ಪ್ರಸೂತಿಕಾ ಗೃಹದಲ್ಲಿ ಗಂಡನೊಂದಿಗೆ ಪ್ರಸವದ ಕಾಲದಲ್ಲೇ ಸಾಯಬೇಕು...ಅಷ್ಟಾವಕ್ರ ಆಕೆಯ ಗರ್ಭದಲ್ಲೇ ಜನ್ಮ ತಾಳಬೇಕು..."

"ಅವಳ ಹೊಟ್ಟೆಸೀಳಿಕೊಂಡು ಅಷ್ಟಾವಕ್ರ ಹೊರಬರಬೇಕು. ಹೊರಬರುತ್ತಲೇ ಅವಳ ಗಂಡನನ್ನು ಕೊಲ್ಲಬೇಕು"

"ನನಗೆ ಆಗಿರುವ ಅನ್ಯಾಯಕ್ಕಾಗ ಉಸ್ಲೋಕ್ ಈ ರೀತಿ ಸಹಾಯಮಾಡಬೇಕು ಇದೇ ನನ್ನ ಕೋರಿಕೆ..."

ಅವನ ಧ್ವನಿ ಆ ಗೋಡೆಗಳಿಂದ ಅನುರಣಿತವಾಗುತ್ತಿತ್ತು. ಆವೇಶದಿಂದ ರಾಕೇಶನ ಮುಖವು ಭಯಂಕರವಾಗಿದೆ. ಆ ಕಣದಲ್ಲಿ ನೋಡಿದವರಾರೂ ಆತನು ಕಾಲೇಜಿನಲ್ಲಿ ಓದುವ ವಿದ್ಯಾರ್ಥಿ ಎಂದು ಹೇಳಲು ಸಾಧ್ಯವೇ ಇರಲಿಲ್ಲ. ಕ್ಷುದ್ರ ಗಣಾಧಿಪತಿಗಳ ಮುಖ್ಯ ಸಹಚರಿ ರೆಡ್‌ಸ್ಕೆಲಿಟನ್‌ನಂತೆಯೇ ಇದ್ದ.

"ಅಷ್ಟಾವಕ್ರನ ಹುಟ್ಟಿಗಾಗಿಯೇ ಉಸ್ಲೋಕ್ ಕಾಯುತ್ತಿದೆ ರಾಕೇಶ್. ಅಷ್ಟೇ ಹೊರತು ಬಯಸಿದೆಡೆಯಲ್ಲಿ ಗರ್ಭವನ್ನು ರೂಪಿಸುವುದು ಉಸ್ಲೋಕ್‌ಗೆ ಗೊತ್ತಿಲ್ಲ"

"ಕಾಷ್ಮೋರಾದ ಅನುಚರರಿಗೆ ತಿಳಿಯದ ಅಂಶವೊಂದು ಇರಬಲ್ಲದು ಎಂದರೆ ನಾನು ನಂಬುವುದಿಲ್ಲ..."

"ಆದರೆ ನಿನ್ನ ಬಯಕೆ ತೀರಾ ದೊಡ್ಡದು"

"ನಿಜವೇ. ನನ್ನ ಹಗೆ ಎಂತಹುದೆಂಬುದೂ ಉಸ್ಲೋಕ್‌ಗೆ ಗೊತ್ತು"

ಮಹಾದ್ರಷ್ಟ ಅವನತ್ತ ನೋಡುತ್ತಾ ಯೋಚಿಸದ. ಅವನ ಹಠ ಸಡಿಲಗೊಳ್ಳದೆಂಬುದನ್ನು ಅರಿತ ನಂತರ ತಲೆಯಾಡಿಸುತ್ತಾ "ಸರಿ ರಾಕೇಶ್! ಕೃಷ್ಣಾಪುರದ ಗದ್ದೆಯಲ್ಲಿ ಭಸ್ಮವನ್ನು ಚೆಲ್ಲಿದ್ದ ಉಪಕಾರಕ್ಕೆ ನಾವು ನಿನಗೆ ಸಹಾಯಮಾಡುತ್ತೇನೆ. ಆದರೆ ಸತ್ಯವನ್ನು ನೀನೂ ತಿಳಿದಿರಬೇಕು. ನಮಗೆ ಬೇಕೆನಿಸಿದಗರ್ಭದಲ್ಲಿ ಅಷ್ಟಾವಕ್ರನನ್ನು ಪ್ರತಿಷ್ಠಾಪಿಸುವುದು ಹೇಗೆಂಬುದು ನನಗೆ ಗೊತ್ತಿಲ್ಲ. ಅದನ್ನು ಬಲ್ಲವ ಒಬ್ಬನೇ..."

"ಯಾರು?"

"ವಿಷಾಚಿ"

ರಾಕೇಶ್ ತಟ್ಟನೆ ತಲೆ ಎತ್ತಿದ. ಮಹಾದ್ರಷ್ಟ ಮಾತನ್ನು ಮುಂದುವರಿಸಿದ "ಕಾಲಗರ್ಭದಲ್ಲಿ ಬೆರೆತು ಹೋಗಿರುವ ಮಹಾಯಾಂತ್ರಿಕ ವಿಷಾಚಿ. ಆತನಿಗೆ ಮಾತ್ರವೇ ಈ ರಹಸ್ಯ ಗೊತ್ತಿದ್ದದ್ದು, ದಾರ್ಕಾಗೆ ಕೂಡ ಈ ವಿಷಯ ಗೊತ್ತಿರಲಿಲ್ಲ. ಕಾದ್ರಾ, ದಾರ್ಕಾ, ವಿಷಾಚಿ ಈ ಮೂವರೂ ಒಂದೇ ಗುರಿಗಾಗಿಸಾವನ್ನು ಅಪ್ಪಿದರು. ಕಾಷ್ಮೋರಾ ಒಬ್ಬ ಬಾಲೆಯನ್ನು ಆಹುತಿಯಾಗಿ ಸ್ವೀಕರಿಸಿ ವಿಜೃಂಭಿಸುತ್ತಾ ವಿಶ್ವವ್ಯಾಪ್ತವಾಗಲಿದ್ದಾಗ ಅದನ್ನು ತಡೆಯುತ್ತಾ ಶ್ರೀಧರ್ ಎಂಬುವನಿಂದ ವಿಷಾಚಿ

ಬೀಜಾಕ್ಷರಗಳನ್ನು ಬರೆದಿದ್ದ ಕೋಲಿನಿಂದ ಬಡಿದುಕೊಲ್ಲಲ್ಪಟ್ಟ.

ಎರಡನೆಯ ಬಾರಿ ನಮ್ಮ ವಂಶೀಯನೇ ಆದ ದಾರ್ಕಾ ತಾನೇ ಕಾಷ್ಮೋರಾವನ್ನು ಬಂಧಿಸಿ ಅದರಿಂದ ರಕ್ತ ಕಕ್ಕುತ್ತಾ ಸತ್ತ.

ಈಗ ಮೂರನೆಯ ಬಾರಿ ಕಾಷ್ಮೋರಾದ ಆಗಮುವನ್ನು ಯಾರೂ ತಡೆಯಲಾರರು. ಆಗಲೇ ಪ್ರಥಮ ಗರ್ಭವು ಜನ್ಮಿಸಿದ್ದೂ ಆಗಿದೆ''

''ನಿಜವೇ? ಎಲ್ಲಿ?'' ರಾಕೇಶ್ ವಿಸ್ಮಿತನಾಗಿ ಕೇಳಿದ.

''ಡಾ|| ರಂಗಪ್ರಸಾದ್ ಆಸ್ಪತ್ರೆಯಲ್ಲಿ''

''ಹಾಗಿದ್ದರೆ ನಾವು ಶೀಘ್ರವಾಗಿ ಕಾರ್ಯಪ್ರವೃತ್ತರಾಗಬೇಕು''

''ಮತ್ತೆ ನಾವು ಬಿಸ್ತಾಗೆ ಹೋಗಬೇಕು ರಾಕೆಶ್. ಮಂತ್ರಗಾರರು ತಮ್ಮ ರಹಸ್ಯಗಳನ್ನು ತಮ್ಮೊಂದಿಗೆ ಭದ್ರಗೊಳಿಸಲು ತಮ್ಮ ಅಂತ್ಯಕ್ಕೆ ಕೆಲವು ದಿನ ಮೊದಲೇ ತಾವು ತಾವು ನದ್ರಿಸುವ ಪ್ರದೇಶದಲ್ಲಿ ತಲೆಯತ್ತ ಭದ್ರಪಡಿಸುತ್ತಾರೆ. ವಿಷಾಚಿ ವಾಸವಾಗಿದ್ದ ಸ್ಥಳವು ಈಗ ಹೇಗಿದೆಯೋ ನಮಗೆಗೊತ್ತಿಲ್ಲ. ಬಿಸ್ತಾ ಕೂಡ ಮೊದಲಿನ ಬಿಸ್ತಾದಂತಿಲ್ಲ, ಅಲ್ಲೂ ಈಗ ನಾಗರಿಕತೆ ತನ್ನ ಪ್ರಭಾವ ತೋರುತ್ತಿದೆ. ದೇವತಾ ಉಪಾಸಕರು ಮಾತ್ರ ಊರಿನಿಂದ ದೂರವಾಗಿ ಬೇರೆಯಾಗಿರುವ ಸ್ಮಶಾನದಿಂದಲೂ ಹೊರಭಾಗಕ್ಕೆ ಬಂದು ರಹಸ್ಯವಾಗಿ ಉಪಾಸನೆ ಸಾಗಿಸುತ್ತಿರುತ್ತಾರೆ. ಅವರನ್ನು ಕಂಡು ಅವರಿಂದ ವಿಷಾಚಿಯ ನಿವಾಸದ ವಿವರ ತಿಳಿದು ಆ ಸ್ಥಳವನ್ನು ಗುರ್ತಿಸಬೇಕು. ನಾಗರಿಕತೆಯ ಹೆಸರಲ್ಲಿ ಅಲ್ಲಿ ಯಾರಾದರೂ ಹೊಸ ಕಟ್ಟಡಗಳಿಗೆ ಬುನಾದಿ ಅಗೆದಿದ್ದರೆ. ಕಟ್ಟಡ ಕಟ್ಟಿದ್ದರೆ ಆ ರಹಸ್ಯ ಶಿಥಿಲವಾಗುತ್ತದೆ. ನಾವೇನೂ ಮಾಡಲು ಸಾಧ್ಯವಿಲ್ಲ...''

ಅಂದೇ ಸಂಜೆ ಅವರು ಬಿಸ್ತಾಕ್ಕೆ ಹೊರಟರು.

★★★

ಮಹಾದ್ರಷ್ಟನ ಮಾತು ನಿಜವೇ ಆಗಿತ್ತು. ಬಿಸ್ತಾ ಬಹುವಾಗಿ ಬದಲಾಗಿತ್ತು. ಆದರೆ ಸ್ಮಶಾನಕ್ಕೆ ಇತ್ತ ಇದ್ದ ಗುಡಿಸಿಲುಗಳು ಮಾತ್ರ ಅಂತೆಯೇ ಇದ್ದವು. ಪೂರ್ವ ಕಾಲದ ವೈಭವವಿಲ್ಲ, ಎಲ್ಲವೂ ವಾಣಿಜ್ಯರೂಪ ಪಡೆದಿವೆ. ಕೆಡಕುಗಳನ್ನು-ಶೂನ್ಯಗಳನ್ನು ಇಲ್ಲಿ ಗ್ಯಾರಂಟಿಯಾಗಿ ಗುಣಪಡಿಸಲಾಗುವುದೆಂದು ಬೋರ್ಡ್ ಹಾಕಿಕೊಂಡಿದ್ದವರೇ ತುಂಬಾ ಮಂದಿ. ದೂರದಲ್ಲಿ ಸರ್ಕಾರಿಸಾರಾಯಿ ಅಂಗಡಿಯೂ ಇದೆ. ಇದು ಬಿಸ್ತಾನೇ ಎಂಬ ಅನುಮಾನಕ್ಕೆ ಅವಕಾಶವಾಗುವಂತಿತ್ತು.

''ನಿಜವಾದ ಮಂತ್ರಗಾರರೆಲ್ಲಾ ಈಗ ಉಸ್ತೋಕ್‌ನಲ್ಲಿ ಸೇರಿದ್ದಾರೆ. ಅವರ‍್ಯಾರೂ ಹೀಗೆ ಬಹಿರಂಗವಾಗಿ ಪೂಜೆಗಳು ಮುಂತಾದವು ಮಾಡುವುದಿಲ್ಲ, ತುಂಬಾ ನಾಗರಿಕರಂತೆ ಕಾಣಸುತ್ತಿರುತ್ತಾರೆ. ಆದರೆ ಪ್ರತ್ಯೇಕವಾಗಿ ಸ್ವಂತ ಜೀವನದಲ್ಲಿ ಬಿಸಿ ನೆತ್ತರ ಪಾನ ಮಾಡುತ್ತಾರಲ!'' ಎಂದ ಮಹಾದ್ರಷ್ಟ.

ಎಲ್ಲಿದ್ದ ಎಂಬುದನ್ನು ವಿಚಾರಿಸುತ್ತಾ ಹೊರಟರು.

''ಮಂತ್ರಾಗಾರ ಅಡಗಿಸಿರುವುದನ್ನು ಅಗೆಯುವ ಮುನ್ನ ಹೋಮ ಮಾಡಬೇಕು. ನಿಧಿ ಬಲಿ ಕೋರುತ್ತದೆ ಅರ್ಪಿಸಬೇಕು''

ರಾಕೇಶ್ ಮಾತನಾಡಲಿಲ್ಲ.

''ಇಲ್ಲಿಯವರನ್ನು ನೋಡುತ್ತಿದ್ದರೆ ಈ ನೆಲದಲ್ಲಿ ಒಂದು ಕಾಲದಲ್ಲಿ ಮಹಾಮಾಂತ್ರಿಕರು ಹುಟ್ಟಿದ್ದರು ಎಂಬ ಸಂಗತಿ ಇವರಿಗೆ ಗೊತ್ತಿರುವಂತೆಯೂ ಇಲ್ಲ'' ಎಂದ.

ಅರ್ಧಗಂಟೆಗೂ ಹೆಚ್ಚು ಸಮಯ ಸುತ್ತಾಡಿದ ಮೇಲೆ ಒಬ್ಬ ವ್ಯಕ್ತಿ ಸ್ವಲ್ಪ ವಿವರ ಒದಗಿಸಿದ. ಅದನ್ನನುಸರಿಸಿ ಬಿಸ್ತಾದಿಂದ ಐದು ಕಿಲೋಮೀಟರ್ ದೂರದಲ್ಲಿದ್ದ ನಾರಾಯಣ್‌ಗಡ್ ಸೇರಿದರು. ಅಲ್ಲಿ ಭೇಟಿಯಾದವನು ಒಬ್ಬ ವೃದ್ಧ-ರಾಂ ಸಾಹು.

ಅವನಿಗೆ ಅರವತ್ತಕ್ಕೂ ಹೆಚ್ಚು ವಯಸ್ಸಾಗಿದೆ. ಅತಿಯಾಗಿ ಎಲೆ-ಅಡಿಕೆ ಜಗಿಯುತ್ತಿದ್ದರಿಂದ ಹಲ್ಲು ಗಾರೆ ಕಟ್ಟಿದೆ. ಆ ಹಲ್ಲು ತೋರಿ ವಿಶಾಲವಾಗಿ ಬಾಯ್ತೆರೆದು ನಗುತ್ತಾ, ''ವಿಷಾಚಿ ಇದ್ದ ಸ್ಥಳ ನಿಮಗೇಕೆ?'' ಎಂದು ಕೇಳಿದ.

''ಕುಟ್ಟಿಸ್ಸೈತಾನನ ಬಗ್ಗೆ ನಂಬಿಕೆ ಇರಿಸಿಕೊಂಡಿರುವವು ನಾವು. ಆ ಸ್ಥಳದಲ್ಲಿ ಕೆಲವು ಪೂಜೆಗಳನ್ನು ನಡೆಸಬೇಕು. ಅದರಿಂದ ವಿಷಾಚಿ ಆತ್ಮಶಾಂತಗೊಳ್ಳುತ್ತದೆ ಎಂದು ನಮ್ಮ ನಂಬಿಕೆ''

ರಾಂ ಸಾಹು ಗಹಗಹಿಸಿ ನಗುತ್ತಾ, ''ಮಂತ್ರಾಗಾರರ ಆತ್ಮಕ್ಕೆ ಶಾಂತಿ ಇರುತ್ತದೆಯೇ? ಅದು ಸದಾ ಭ್ರಮಿಸುತ್ತಲೇ ಇರುತ್ತದೆ'' ಎಂದ.

ರಾಕೇಶ್ ಏನೋ ಹೇಳಲು ಬಾಯ್ತೆರೆಯುತ್ತಿರುವಾಗಲೇ ಮಹಾದ್ರಷ್ಟ; ''ಏನೋ, ನಮ್ಮ ನಂಬಿಕೆ ನಮ್ಮದು'' ಎಂದು ಹಣ ಅವನ ಕೈಯಲ್ಲಿರಿಸಿದ. ಹಣ ನೋಡುತ್ತಲೇ ಆ ಮುದುಕನ ಮುಖ ಅರಳಿತು.

''ನೀವೇಕೆ ಬಂದಿದ್ದೀರಿ ಎಂಬುದು ನನಗೆ ಗೊತ್ತು! ಮಾಂತ್ರಿಕನ ಮಂಚದ ಬಳಿ ಅಗೆದು ತಂತ್ರ ರಹಸ್ಯಗಳನ್ನು ಕೊಂಡೊಯ್ಯಲು, ಹೌದು ತಾನೇ?'' ಎಂದು ಕೇಳಿದ.

ಈ ಅನಾವಶ್ಯಕ ಪ್ರಶ್ನೆಗೆ ರಾಕೇಶ್ ಹೌಹಾರಿದ. ಮಹಾದ್ರಷ್ಟ ಮಾತನಾಡಲಿಲ್ಲ.

''ಆ ಕೆಲಸಕ್ಕೆ ಈ ಹಣ ಸಾಲದು'' ರಾಂ ಸಾಹು ನಿರ್ದಾಕ್ಷಿಣ್ಯವಾಗಿ ಹೇಳಿದ.

''ಇನ್ನೂ ಬೇಕೇ?''

''ಬಿಸ್ತಾದ ಮಂತ್ರಾಗಾರರ ಸಂಪ್ರದಾಯದ ಪ್ರಕಾರ ಯಾರಿಗೂ ಇದನ್ನು ಹೇಳಬಾರದು. ಹೇಳಿದವರು ರಕ್ತ ಕಕ್ಕಿ ಸಾಯುತ್ತಾರೆ''

''ಆದರೆ ಇದನ್ನು ಈಗ ಯಾರೂ ನಂಬುವುದಿಲ್ಲ. ಎಲ್ಲಿಯವರೋ ಏಕೆ ನಿಮ್ಮ ಬಿಸ್ತಾದ ಜನರೇ ನಂಬೊಲ್ಲ...''

''ಅದಕ್ಕೆ ಇನ್ನೂ ಸ್ವಲ್ಪ ಹಣ ಕೊಟ್ಟರೆ...'' ಎಂದು ರಾಗ ಎಳೆದ.

ರಾಕೇಶ್ ಏನೋ ಹೇಳಲು ಸಿದ್ಧನಾದವನು ಮಹಾದ್ರಷ್ಟನ ಮುಖನೋಡಿ, ರಾಂ ಸಾಹು ಕೈಯಲ್ಲಿ ಮತ್ತಷ್ಟು ಹಣವನ್ನು ಇರಿಸದ.

ಸಾಹು ಮುಖ ತಾವರೆಯಂತೆ ಅರಳಿತು; ''ಈ ರಾತ್ರಿಗೇ ಹೋಗೋಣ, ಅರ್ಧರಾತ್ರಿಯ ನಂತರವೇ ಅಗೆಯಬೇಕು...''

''ಅದು ನಮಗೂ ಗೊತ್ತು'' ಎಂದ ಸಂಕ್ಷಿಪ್ತವಾಗಿ.

ರಾತ್ರಿ ಹನ್ನೊಂದು ಗಂಟೆಯಾಗಿತ್ತು. ಅವರು ಆ ಪ್ರದೇಶವನ್ನು ಸೇರಿಕೊಂಡರು. ಅಲ್ಲೇನೂ ಇಲ್ಲ. ಎಲೆಕ್ಟ್ರಿಸಿಟಿ ಡಿಪಾರ್ಟ್‌ಮೆಂಟಿನವರು ಅಲ್ಲಿಯ ಪ್ರದೇಶವನ್ನು ಸಮತಲ ಮಾಡಿ ಕಂಬಗಳನ್ನು ಹೂತಿದ್ದರು. ರಾಂ ಸಾಹು ತೋರಿದ ಪ್ರದೇಶದಲ್ಲಿಯೇ ಹತ್ತು ಅಡಿ ದೂರದಲ್ಲಿ ದೊಡ್ಡ ಕಂಬವಿತ್ತು. ಅದು ಥರ್ಮಲ್ ಸ್ಟೇಷನ್ನಿನಿಂದ ಬರುವ ಲೈನಿನಂತೆ ಕಾಣುತ್ತಿತ್ತು. ಅದರಲ್ಲಿ ಸುಮಾರು ಹದಿನಾರು ಕಂಬಿಗಳಿದ್ದವು.

''ಅದೋ ಅದೇ ಗುಳಿ ಅದೇ ಗುರ್ತು. ಹಿಂದೆ ಅದು ಬಾವಿಯಾಗಿತ್ತು. ಅದರ ಎದುರೇ ಪಿಷಾಚಿ ಗುಡಿಸಲಿದ್ದದ್ದು''

ಮಹಾದ್ರಷ್ಟ ಆ ಸಣ್ಣ ಕಲ್ಲುಗಳ ಮೇಲೆ ಕುಳಿತು ಹೋಮಕ್ಕೆ ತಯಾರಿನಡೆಸಿದ. ರಾಕೇಶ್ ಸ್ವಲ್ಪ ದೂರದಲ್ಲಿ ನಿಂತು ಅತ್ತ ಯಾರಾದರೂ ಬರುತ್ತಾರೇನೋ ಎಂಬುದನ್ನು ಗಮನಿಸತೊಡಗಿದ. ಪೌರ್ಣಮಿ ಕಳೆದು ತುಂಬಾ ದಿನಗಳಾಗಿದ್ದರಿಂದ ಅಲ್ಲೆಲ್ಲಾ ಕತ್ತಲೆ ಹರಡಿತ್ತು. ಹೋಮಾಗ್ನಿಯ ಬೆಳಕಿನಲ್ಲಿ ಅವರ ಮುಖಗಳು ಕೆಂಪಾಗಿ ಕಂಗೊಳಿಸುತ್ತಿವೆ. ಗಾಳಿಯಲ್ಲಿ ಮಾತು ತೇಲಿಬರುತ್ತಿದೆ. ಸಾಹು ಏನೊ ವಟವಟನೆ ವದರುತ್ತಲೇ ಇದ್ದಾನೆ. ಮಹಾದ್ರಷ್ಟ ಮಾತ್ರ ತನ್ನ ಕಾರ್ಯವನ್ನು ತಾನು ಸಾಗಿಸುತ್ತಿದ್ದಾನೆ.

ಅಗ್ನಿಕಾರ್ಯ ಮುಗಿಯುವ ವೇಳೆಗೆ ಹನ್ನೆರಡಾಗಿತ್ತು. ಅಗ್ನಿ ಶಮನಗೊಳ್ಳುತ್ತಲೇ ರಾಕೇಶ್ ಅವರನ್ನು ಸೇರಿದ. ನೆಲ ಅಗೆಯುವಾಗ ಯಾರು ನೋಡಿದರೂ ಅಂತಹ ಅಪಾಯವೇನೂ ಇಲ್ಲ.

ಹಾರೆಯಿಂದ ಭೂಮಿಗೆ ಮೊದಲ ಪೆಟ್ಟು ರಾಕೇಶ್ ಹಾಕಿದ. ಆ ಪೆಟ್ಟಿಗೆ ಭೂಮಿಯೆಲ್ಲಾ ಕಂಪಿಸಿತು. ಆ ಪೆಟ್ಟಿಗೆ ಭೂಮಿ ಅಷ್ಟೊಂದು ಕಂಪಿಸಬೇಕಾಗಿರಲಿಲ್ಲ. ಆದರೆ ಗಾಢನಿದ್ರೆಯಲ್ಲಿರುವ ಗರ್ಭಿಣಿ ಸ್ತ್ರೀಯ ಹೊಟ್ಟೆಯನ್ನು ಬಡಿದಂತೆ ಭೂಮಿ ನಡುಗಿತ್ತು. ದೂರದಲ್ಲಿ ತೋಳವೊಂದು ವಿಕಾರವಾಗಿ ಅರಚಿತು. ಗಮನಿಸಿದರೆ ಅದು ಅವರ ಕಡೆಗೇ ಬರುವಂತೆನಿಸುತ್ತಿತ್ತು. ಅದನ್ನು ಒಂದು ತೋಳದ ಹಿಂದೇ ಅನುಸರಿಸುತ್ತಿರುವಂತೆ ಸದ್ದು...ರಾಕೇಶ್ ಭಯದಿಂದ ನಡುಗಿದ. ಮತ್ತೆ ಇದೆಲ್ಲಾ

ತನ್ನ ಭ್ರಮೆ ಮಾತ್ರವೆಂಬ ಭಾವನೆ. ಏನೇ ಆದರೂ ಹಾರೆಯನ್ನು ಹಿಡಿದಿದ್ದ ಕೈ ಅಂತೆಯೇ ನಿಂತಿತ್ತು. ಅಷ್ಟರಲ್ಲಿ ಎರಡನೆಯ ಪೆಟ್ಟನ್ನು ಮಹಾದ್ರಷ್ಟ ಹಾಕಿದ.

ರಾಂ ಸಾಹು ಇದನ್ನೆಲ್ಲಾ ನೋಡುತ್ತಾ ನಿಂತಿದ್ದ. ವಿಷಾಚಿಯಂಥ ಮಹಾಮಾಂತ್ರಿಕನ ನಿವಾಸವನ್ನು ಅಗೆಯಲು ಘೋರವಾದ ನರಬಲಿಯನ್ನು ಅರ್ಪಿಸಬೇಕೆಂದು ಅವನಿಗೆ ಗೊತ್ತು. ಅದಕ್ಕೆಂದೇ ಈ ಕೆಲಸದಲ್ಲಿ ದೂರವಾಗಿದ್ದಾನೆ. ಅವರಿಬ್ಬರಲ್ಲಿ ಯಾರು ಇದಕ್ಕೆ ಬಲಿಯಾಗುತ್ತಾರೋ ತಾನು ನೋಡಬೇಕೆಂದು ಕಾಯುತ್ತಿದ್ದಾನೆ.

ಅವರು ಅಗೆಯುತ್ತಿದ್ದರೆ ಕರೆಂಟಿನ ಕಂಬ ತೂಗಾಡುತ್ತಿದೆ. ಆ ದೃಶ್ಯ, ಆ ಅನುಭವವೇ ತೀರಾ ವಿಚಿತ್ರವಾಗಿದೆ. ಭೂಮಿಯಲ್ಲಿ ಒಂದೊಂದು ಪೆಟ್ಟು ಬೀಳುತ್ತಿದ್ದಂತೆಲ್ಲಾ ಪ್ರಕೃತಿಯೇ ಕಲ್ಲೋಲಗೊಳ್ಳುತ್ತಿದೆ.

ಸುಮಾರು ಎರಡು ಗಂಟೆಗಳ ಅಗೆತದ ನಂತರ ಒಂದು ಪೆಟ್ಟಿಗೆ ಕಾಣಿಸಿಕೊಂಡಿತು. ಆಯಾಸದಿಂದ ಎದುರಿಸಿಡುತ್ತಿದ್ದ ರಾಕೇಶ್, ಬೆವರಿನಿಂದ ಒದ್ದೆಯಾಗಿದ್ದ ಕೈಗಳಲ್ಲಿ ಆತುರದಿಂದ ಹೊರಕ್ಕೆ ಎತ್ತಿದ...ಆ ಸಮಯದಲ್ಲೂ ಸ್ವಲ್ಪವೂ ಆಯಾಸಗೊಳ್ಳದೆ ಇದ್ದ ಮಹಾದ್ರಷ್ಟನನ್ನು ಕಂಡು ರಾಕೇಶ್ ಅಚ್ಚರಿಗೊಂಡ.

''ಪೆಟ್ಟಿಗೆಯ ಮುಚ್ಚಳ ತೆಗಿ ರಾಕೇಶ್'' ಎಂದು ಆಜ್ಞಾಪಿಸಿದ ಮಹಾದ್ರಷ್ಟ. ಆತನ ಮುಖದಲ್ಲಿ ವಿಜಯದ ಹರ್ಷದ ಗೆರೆಯೊಂದೂ ಇಲ್ಲ. ಏನೋ ನಡೆಯಬೇಕಾದದ್ದು ಸಾಧಾರಣವಾಗಿ ನಡೆಯುತ್ತಿದೆ ಎನ್ನುವಭಾವನೆ. ರಾಕೇಶ್ ಪೆಟ್ಟಿಗೆಯ ಮುಚ್ಚಳ ತಲರೆಯುತ್ತಿದ್ದಾಗ ತದ್ದಕ್ಕಿದ್ದಂತೆಯೇ ''ನಿಲ್ಲು'' ಎಂಬ ಕಂಠ, ಅದರೊಂದಿಗೇ ತುಂಬಾ ಸಮೀಪದಲ್ಲಿ ಒಂದು ತೋಳ ಅಳುತ್ತಿರುವ ಸದ್ದು...ಇಬ್ಬರೂ ಅತ್ತ ನೋಡಿದರು.

ರಾಂ ಸಾಹು ಬಳಿಗೆ ಬರುತ್ತಾ ''ಇದು ಬಿಸ್ತಾ ಗ್ರಾಮಸ್ಥರ ಆಸ್ತಿ. ಇದನ್ನು ನೀವು ತೆಗೆದುಕೊಳ್ಳುವಂತಿಲ್ಲ'' ಎಂದ.

ರಾಕೇಶನ ಕೈ ಹಾರೆಯನ್ನು ಬಿಗಿಯಾಗಿ ಹಿಡಿಯಿತು. ಮಹಾದ್ರಷ್ಟಮಾತ್ರ ನಿಶ್ಚಲ ಧ್ವನಿಯಲ್ಲಿ ''ಇದಕ್ಕಾಗಿ ಸಾಕಷ್ಟು ಹಣವನ್ನು ನಿನಗೆ ಕೊಟ್ಟಿದ್ದೇವೆ ರಾಂ ಸಾಹು. ಹಣದಾಸೆಗೆ ತನ್ನ ವಂಶೀಕರ ರಹಸ್ಯಗಳನ್ನು ಬಯಲುಮಾಡಿದವರು ಅತ್ಯಂತ ನೀಚರು. ಗೌರವಕ್ಕೆ ಅನರ್ಹರು. ಆಸ್ತಿ, ವಾರಸಿನ ಹಕ್ಕು ಮುಂತಾದವುಗಳ ಬಗ್ಗೆ ಮಾತನಾಡುವ ಹಕ್ಕು ನಿನಗಿಲ್ಲ'' ಎಂದ.

ರಾಂ ಸಾಹು ಗಟ್ಟಿಯಾಗಿ ಏನೋ ವದರಿದ. ದೂರದ ಪೊದೆಗಳಿಂದ ಏನೋ ಅಸ್ಪಷ್ಟ ಆಕಾರಗಳು ಚಲಿಸಿದವು. ರಾಕೇಶನ ಮೈ ಕಂಪಿಸಿತು. ಸ್ವಲ್ಪ ಹೊತ್ತಿಗೆಲ್ಲಾ ಪೊದೆಗಳಿಂದ ಹತ್ತು ಮಂದಿ ಯುವಕರು ಹೊರಬಂದು ಅವರನ್ನು ಆವರಿಸಿ ನಿಂತರು.

ಅವರು ಬಿಸ್ತಾ ಗ್ರಾಮದವರಂತೆ ಕಾಣುತ್ತಿದ್ದರು.

ರಾಂ ಸಾಹು ಅಡಿಮುಂದಿರಿಸಿ ಹಗುರವಾಗಿ ನಗುತ್ತಾ ''ಈ ಕೆಲಸವನ್ನು ಯಾರು ಬಂದು ಮಾಡುತ್ತಾರೋ ಎಂದು ಕಾಯುತ್ತಿದ್ದೆವು! ಇದನ್ನು ಅಗೆದು ಹೊರತೆಗೆದ ಪಾಪಕ್ಕೆ ನರನ ನಲತ್ತರನ್ನು ಕೊಡಬೇಕಾಗುತ್ತದೆ ಎಂಬುದೂ ಗೊತ್ತು. ಆದ್ದರಿಂದ ಆ ಪೆಟ್ಟಿಗೆಯನ್ನು ನಮಗೆ ಒಪ್ಪಿಸಿ ಜೀವದೊಂದಿಗೆ ಹೊರಡು. ಬಿಸ್ತಾ ಗಣಾಧಿಪತಿಗಳಾದ ನಮಗೆ ಇದರ ಮೇಲೆ ಸಂಪೂರ್ಣ ಹಕ್ಕಿದೆ...'' ಎಂದ ಹೆಮ್ಮೆಯಿಂದ.

ತುಂಬಾ ಕಾಲದ ನಂತರ ಮಹಾದ್ರಷ್ಟನ ಮುಖದಲ್ಲಿ ಕಿರುನಗೆ ಕಾಣಿಸಿಕೊಂಡಿತು- ಕಾದ್ರಾ, ವಿಷಾಚಿಗಳ ವಾರಸುದಾರರೆಂದು ಬೀಗುತ್ತಿರುವ ಈ ನಾಯಿ ಕೊಡೆಗಳನ್ನು ಕಂಡೇ ನಗುಬಂತೇನೋ?! ಇದ್ದಕ್ಕಿದ್ದಂತೆಯೇ. ಗಾಳಿಯ ವೇಗ ಹೆಚ್ಚಿತು. ಮಹಾದ್ರಷ್ಟನ ಮುಖ ಕಠಿಣವಾಗಿ ಬಿಗಿಯಿತು. ಕಟುವಾದ ಧ್ವನಿಯಲ್ಲಿ ''ರಾಂ ಸಾಹೂ, ನಿಮ್ಮವರನ್ನು ಕರೆದುಕೊಂಡು ಹಿಂದೆ ಹೋಗು, ಇದು ಕೊನೆಯ ಎಚ್ಚರಿಕೆ'' ಎಂದ.

ರಾಂ ಸಾಹು ಪೆಟ್ಟಿಗೆಯನ್ನು ತೆಗೆದುಕೊಳ್ಳಲು ಕೈಹಾಕಿದ.

''ಪೆಟ್ಟಿಗೆ ಅಲ್ಲೇ ಬಿಡು''

ಅವನು ಆ ಮಾತು ಕೇಳಲಿಲ್ಲ.

''ರಾಂ ಸಾಹೂ...'' ಈ ಅಬ್ಬರಕ್ಕೆ ಕಾಡೇ ಕಂಪಿಸಿತು. ''ಇದುವರೆಗೂ ಹೇಳಲಿಲ್ಲ, ಈಗ ಕೇಳು. ವಿಷಾಚಿ, ಕಾದ್ರಾ, ದಾರ್ಕಾರ ತಲೆಮಾರಿನವರಲ್ಲಿ ಕೊನೆಯವನು ನಾನು. ನನ್ನಿಂದಲೇ ಈ ಕಾರ್ಯ ನಡೆಯಬೇಕು! ಅಷ್ಟಾವಕ್ರನು ಉದ್ಭವಿಸುವ ಯೋಗ ಸನ್ನಿಹಿತವಾಗುತ್ತಿದೆ. ಮೂರ್ಖಾ ಇದಕ್ಕೆತಡೆಹಾಕಬೇಡ...''

ಅವನು ಈ ಮಾತು ಕೇಳಲಿಲ್ಲ. ಕೈಯಲ್ಲಿ ಪೆಟ್ಟಿಗೆ ಹಿಡಿದು ಹಿಂತಿರುಗಿ ನೋಡಿದ- ಏನು ಮಾಡಬೇಕು ಎನ್ನುವಂತೆ ರಾಕೇಶ್ ಮಹಾದ್ರಷ್ಟನತ್ತ ನೋಡಿದ. ಮಹಾದ್ರಷ್ಟ ನಿಶ್ಚಲವಾಗಿದ್ದು ಯಾವ ಸೂಚನೆಯನ್ನೂ ಕೊಡಲಿಲ್ಲ. ರಾಕೇಶ್ ಹಾರೆಯಿಂದ ಅವನನ್ನು ಎದುರಿಸಲು ನಿಂತ. ಇದನ್ನು ಕಂಡ ಯುವಕರು ಅವರನ್ನು ಸಮೀಪಿಸಲು ಬಂದರು. ತಮ್ಮನ್ನು ಉಳಿಸುವುದಿಲ್ಲ ಎಂಬುದು ರಾಕೇಶ್‌ಗೆ ನಿರ್ಧಾರವಾಯಿತು.

ರಾಂ ಸಾಹು ಬಲಶಾಲಿ. ನೆರವಿಗೆ ಯುವಕರು ಬೇರೆ. ರಾಕೇಶನ ಹಾರೆಯನ್ನು ತಡೆಯಲು ಪೆಟ್ಟಿಗೆಯನ್ನು ಅಡ್ಡಲಾಗಿರಿಸಿದ. ಮೊದಲೇ ಹಳೆಯದಾದ ಶಿಥಿಲವಾದ ಪೆಟ್ಟಿಗೆ. ಹಾರೆ ನೇರವಾಗಿ ಅದರಲ್ಲಿ ಇಳಿಯಿತು. ರಾಂ ಸಾಹು ಬಲವಾಗಿ ಎಳೆಯುತ್ತಲೇ ಹಾರೆ ರಾಕೇಶನ ಕೈಯಿಂದ ಪೆಟ್ಟಿಗೆಯೊಂದಿಗೆ ಅವನ ಕೈಗೆ ಬಂತು. ಇದರಿಂದ ಗಹಗಹಿಸಿ ನಗುತ್ತಾ ಪೆಟ್ಟಿಗೆಯೊಂದಿಗೆ ಹಾರೆಯನ್ನೂ ದೂರಕ್ಕೆಸೆದ.

ಅದು ನೇರವಾಗಿ ಎಲೆಕ್ಟ್ರಿಕ್ ಪೋಲ್ ಬಳಿ ಬಿತ್ತು. ಬಿದ್ದದ್ದು ಸಾಧಾರಣವಾಗಿ ಬೀಳಲಿಲ್ಲ- ಷಡ್ವಿಧ ಶಕ್ತಿ ಸಂಪನ್ನವಾದ ಒತ್ತಡವನ್ನು ಆ ಪೆಟ್ಟಿಗೆಯಲ್ಲಿ ಕೂಡಿಕೊಂಡಿರುವಂತೆ ವೇಗವಾಗಿ ಹೋಗಿ ಆ ಸ್ಥಳನವ್ನು ತಾಕುತ್ತಲೇ ಸ್ಫೋಟಗೊಂಡಂತಾಯಿತು. ಅದುವರೆವಿಗೂ ಗಾಳಿಗೆ ಭೂದೇವಿ ಗರ್ಭದಿಂದ ಹೊರಬೀಳಲು ಕಾತರದಿಂದ ತೂಗಾಡುತ್ತಿದ್ದ ಎಲೆಕ್ಟ್ರಿಕ್ ಕಂಬವು ಬಿರುಗಾಳಿಗೆ ಸಿಕ್ಕ ತಾಳೆಮರದಂತೆ ಮುಂದಕ್ಕೆ ಮುಗುಚಿಕೊಂಡಿತು. ರಾಕೇಶ್ ದಿಗ್ಭ್ರಾಂತಿಗೊಂಡು, ತನ್ನ ಕಣ್ಣನ್ನು ತಾನೇ ನಂಬಲಾರದೆ ನೋಡುತ್ತಿದ್ದ. ಎಲ್ಲಾ ತಂತಿಗಳು ಎಲ್ಲಾ ಕಡೆಗಳಿಂದಲೂ ಬಿಗಿಯಾಗಿ ಹಿಡಿದಿದ್ದರೂ ಅವೆಲ್ಲಕ್ಕಿಂತಲೂ ಬಲವತ್ತರವಾದ ಯಾವುದೋ ಶಕ್ತಿ ಅದನ್ನು ತಳ್ಳುತ್ತಿರುವಂತೆ, ಆ ಎಲ್ಲಾ ಬಂಧನಗಳಿಂದಲೂ ಮುಕ್ತಿ ಪಡೆದುಕೊಂಡು ಮುಂದಕ್ಕೆ ಬಿತ್ತು ಆ ಕಂಬ.

ರಾಂ ಸಾಹು ಅದನ್ನು ಒಂದು ಕ್ಷಣ ತಡವಾಗಿ ನೋಡಿದ. ಭಯದಿಂದ ಅವನ ಧ್ವನಿ ಗಂಟಲಿನಲ್ಲಿಯೇ ಅಡಗಿತು. ಕೊಡಲಿಯೊಂದು ಬಂದು ಬಿದ್ದಂತೆ ವಿಶೇಷ ವೇಗದಿಂದ, ಕಣ್ಣವೆ ಮುಚ್ಚುವಷ್ಟರಲ್ಲಿ- ಅವನ ಮೇಲೆ ಎರಗಿತು ಆ ಕಂಬ ಬೆನ್ನು ಮೂಳೆ ಪೂರ್ಣವಾಗಿ ಪಚ್ಚಡಿಯಾಗಿ ಕೊರಳು ತಲೆಯನ್ನು ಮೈಎಯಿಂದ ಬೇರ್ಪಡಿಸಿತು. ತಲೆ ಚೆಂಡಿನಂತೆ ಉರುಳುತ್ತಾ ಪಿಶಾಚಿಯ ಪೆಟ್ಟಿಗೆಗಾಗಿ ಅಗೆದಿದ್ದ ಗುಣಿಯಲ್ಲಿ ಬಿತ್ತು. ಕಾರಂಜಿಯಿಂದ ನೀರು ಚಿಮ್ಮುವಂತೆ ನೆತ್ತರು ಆ ದೇಹದಿಂದ ಚಿಮ್ಮುತ್ತಾ ಸುತ್ತಣ ನೆಲವನ್ನೆಲ್ಲಾ ಅಭಿಷೇಕಮಾಡಿ ಬಲಿಯನ್ನು ತೀರಿಸಿತ್ತು.

ದೂರದಿಂದ ನೋಡುತ್ತಿದ್ದವರೂ ಕೂಡ ಈ ದೃಶ್ಯವನ್ನು ಕಂಡು ಒಂದು ಕ್ಷಣ ಭಯಗ್ರಸ್ತರಾದರೂ ಒಡನೆಯೇ ಎಚ್ಚೆತ್ತು ವೇಗವಾಗಿ ಮುಂದೆ ಬರತೊಡಗಿದರು.

ಅಷ್ಟರಲ್ಲಿ ಆ ಕೂಗು ಕೇಳಿಸಿತು; ಸನಿಹದಿಂದ- ಎದೆ ನಡುಗಿಸುವಷ್ಟು ಸಮೀಪದಿಂದ! ಕಾಡಿನಿಂದ ದಾರಿತಪ್ಪಿ ಬರುತ್ತಿದ್ದ ತೋಳಗಳ ಗುಂಪು. ಕೋಪ, ಅಸಹನೆಗಳಿಂದ ಅರಚುತ್ತಾ ಗುಂಪುಗುಂಪಾಗಿ ಬರುತ್ತಾ ಮನುಷ್ಯರನ್ನು ಕಂಡು ಮತ್ತೂ ಕೋಪಗೊಂಡು ಅವರ ಮೇಲೆರಗಲು ಹಾರಿದವು.

ಒಂದು ಕ್ಷಣ ಅಲ್ಲಿ ನಿಶ್ಯಬ್ದ. ಮರುಕ್ಷಣದಲ್ಲಿಯೇ ಭಯದ ಚೀತ್ಕಾರ, ನೋವಿನ ರೋದನೆ ಅಪಾಯದಿಂದ ಚದುರಿ ಪಾರಾಗಲು ನಡೆಸುವ ಹಾಹಾಕಾರಗಳಿಂದ ಆ ಪ್ರದೇಶ ಅನುರಣಗೊಂಡಿತು. ತನ್ನ ಪಂಜಾದಿಂದ ಎದೆಯನ್ನು ಸೀಳುವಂತೆ ತೋಳವು ಒಬ್ಬನ ಮೇಲೆರಗಿದ್ದರೆ, ಇನ್ನೊಬ್ಬನ ಕಣ್ಣಲ್ಲಿ ತನ್ನ ಕೋರೆಯನ್ನು ಚುಚ್ಚುವ ತೋಳ ಇನ್ನೊಂದು...

ರಾಕೇಶ್ ಭಯಗೊಂಡು ಅಲ್ಲಿಂದ ಓಡಲು ಸಿದ್ಧನಾಗಿ ಮಹಾದ್ರಷ್ಟನತ್ತ ನೋಡಿದ. ಆ ದೃಶ್ಯ ಅವನನ್ನು ಮತ್ತಷ್ಟು ಭಯಗ್ರಸ್ತನನ್ನಾಗಿ ಮಾಡಿತು. ರಕ್ತಸಿಕ್ತವಾಗಿದ್ದೆಡೆಯಲ್ಲಿ

ಮಹಾದ್ರಷ್ಟ ಶಿಲಾಪ್ರತಿಮೆಯಂತೆ ನಿಂತಿದ್ದ. ಆತನ ಕಣ್ಣು ಮೇಲಕ್ಕೆ ತಿರುಗಿ ಬಿಳಿಯ ಗುಡ್ಡೆಗಳು ಮಾತ್ರವೇ ಕಾಣಿಸುತ್ತಿವೆ. ನಾಲಿಗೆ ಖೇಚರಿ ಮುದ್ರೆ ತೋರುತ್ತಿದೆ.

ರಾಕೇಶನಿಗೆ ಮಿಂಚಿನಂತೆ ಆಕಾಶವಾಣಿಯಲ್ಲಿ ಬಂದ ವಿವರ ನೆನಪಾಯಿತು.

ರಾಜಾಧಿರಾಜ ಕ್ಷುದ್ರಗಣಾಧಿನಾಯಕನಾದ ಕಾಷ್ಮೋರಾ ಅಂಶದಿಂದ ಹುಟ್ಟಿದವನಿಗೆ ನಾಯಿಗಳು, ತೋಳಗಳು, ನರಿಗಳು ನೆರವಾಗುತ್ತವೆ. ಅವುಗಳ ನೆರವಿನಿಂದ ಅವನು ರಾಜ್ಯಭಾರ ನಡೆಸುತ್ತಾನೆ.

-ಎಂದರೆ ಈಗಲೇ ಅದರ ಪ್ರಭಾವ ಪ್ರಾರಂಭವಾಗಿದೆ!

★★★

ಪೆಟ್ಟಿಗೆಯೊಳಗಿನ ಒಂದೊಂದನ್ನೂ ನೋಡಿ ಪಕ್ಕದಲ್ಲಿರಿಸುತ್ತಿದ್ದಾನೆ ಮಹಾದ್ರಷ್ಟ. ಎಲ್ಲಾ ಶಿಥಿಲವಾಗಿರುವ ತಾಳೆಗರಿಗಳು. ಕಾಲಗತಿಯಿಂದ ಪುಡಿಯಾಗುತ್ತಾ ಬರುತ್ತಿವೆ. ಹಾರೆಯ ಹೊಡೆತಕ್ಕೆ ಮುರಿದಿರುವವು ಕೆಲವು.

ರಾಕೇಶ ಹೃದಯ ವೇಗವಾಗಿ ಬಡಿದುಕೊಳ್ಳುತ್ತಿದೆ.

ಮಹಾದ್ರಷ್ಟ ಕೊನೆಗೆ ಒಂದು ಪತ್ರವನ್ನು ತೆಗೆದು ಅದೇ ಪತ್ರವೇ ಬೇಕಾದದ್ದು ಎನ್ನುವಂತೆ ಓದತೊಡಗಿದ. ರಾಕೇಶ್ ಆತನನ್ನೇ ದಿಟ್ಟಿಸುತ್ತಿದ್ದಾನೆ.

ಇದ್ದಕ್ಕಿದ್ದಂತೆಯೇ ಮಹಾದ್ರಷ್ಟನ ಮುಖಕವಳಿಕೆಗಳು ಬದಲಾಗತೊಡಗಿತು. ಮತ್ತಷ್ಟು ಹತ್ತಿರಕಲ್ಕ ಅದನ್ನು ಹಿಡಿದು ಓದಿದ. ರಾಕೇಶನಿಗೆ ದೂರಕ್ಕೆ ಅದು ಸಂಸ್ಕೃತವೋ, ಒರಿಯಾ ಲಿಪಿಯೋ ಅರ್ಥವಾಗಲಿಲ್ಲ.

ಪೂರ್ಣವಾಗಿ ಓದಿ, ಅದನ್ನು ಮಡಲಿನಲ್ಲಿರಿಸಿಕೊಂಡು ಕಣ್ಮುಚ್ಚಿದ ಮಹಾದ್ರಷ್ಟ.

ರಾಕೇಶನ ಕಾತರ ಮತ್ತಷ್ಟು ಉಲ್ಬಣಿಸಿತು. ''ಏನು?'' ಎಂದು ಕೇಳಿದ.

''ರಾಕೇಶ್, ಅಷ್ಟಾವಕ್ರನ ಜನನ ಸಹಜವಾದದ್ದು, ಅದರ ಪ್ರತೀಕ್ಷೆ ಮಾತ್ರವೇ ಉಸ್ಲೋಕ್‌ನ ಕೆಲಸ ಎಂದು ಇಷ್ಟು ದಿನವೂ ನಾವು ಭಾವಿಸಿದ್ದೆವು. ಯಾವ ಕ್ಷಣದಲ್ಲಿ ನಿನ್ನಲ್ಲಿ ಈ ಕೋರಿಕೆಯನ್ನು ಕುಟ್ಟಿ ಸೈತಾನ್ ಬಡಿದೆಬ್ಬಿಸಿ, ನಮ್ಮನ್ನು ಬಿಸ್ತಾ ತನಕ ಎಳೆದು ತಂದನೋ ನಮಗೆ ಗೊತ್ತಿಲ್ಲ. ಆದರೆ ನಾವು ನಿರ್ವಹಿಸಬೇಕಾದ ಕಾರ್ಯಗಳು ಬಹಳ ಇವೆ! ಆಕೆಯ ಹೆಸರೇನು?''

''...ಕೇದಾರಗೌರೀ...''

''ಆ್ಞ, ಕೇದಾರಗೌರಿ ಬಗ್ಗೆ ನಡೆಸಬೇಕಾದ ಕೆಲವು ತಾಂತ್ರಿಕ ಕ್ರಿಯೆಗಳೂ ಇವೆ! ಅವೆಲ್ಲಕ್ಕೂ ಮೊದಲು ದಶವಿಧ ಮೂಲಿಕೆಗಳನ್ನು ಸಮಾವಿಷ್ಟಗೊಳಿಸಿಕೊಂಡು ಸಿದ್ಧವಾದ ಉಂಗುರವನ್ನು ಆಕೆಯ ಬೆರಳಿಗೆ ತೊಡಿಸಬೇಕು. ಉಳಿದವನ್ನು ನಂತರದಲ್ಲಿ ಹೇಳುತ್ತೇನೆ...''

ಇಷ್ಟು ಹೇಳಿ ಮಹಾದ್ರಷ್ಟ ಮತ್ತೆ ಕಣ್ಮುಚ್ಚಿದ.

ರೈಲು ವೇಗವಾಗಿ ಸಾಗುತ್ತಿದೆ. ಡಬ್ಬಿಯಲ್ಲಿ ಅವರಿಬ್ಬರೇ ಇದ್ದರು. ಕಿಟಕಿಯೊಳಗಿಂದ ಬರುತ್ತಿರುವ ಗಾಳಿಯ ವೇಗಕ್ಕೆ ತಾಳೆಗರಿಗಳು ಹಾರುತ್ತಿವೆ. ಆದರೂ ಇನ್ನು ಚಿಂತೆಯಿಲ್ಲ. ಆ ವಿವರಗಳೆಲ್ಲಾ ಕಂಠಪಾಠವಾಗಿವೆ. ಗರ್ಭದಲ್ಲಿ ವೃದ್ಧಿ ಹೊಂದುವ ಶಿಶು...ಒಂಬತ್ತು ತಿಂಗಳ ನಂತರ ಹೊಟ್ಟೆಯನ್ನು ಉಗುರುಗಳಿಂದ ಸೀಳಿಕೊಂಡು ಹೊರಕ್ಕೆ ಬರುವ ಶಿಶು...

ಆಕೆಯನ್ನು ನೆನೆಸಿಕೊಂಡಾಗ 'ಅಯ್ಯೋ' ಎನಿಸಿತು. ಹುಟ್ಟಲಿರುವ ಮಗುವಿನ ಮುದ್ದು ಮುಖವನ್ನು ನೋಡಬೇಕೆಂಬ ತವಕದಿಂದ ಎಲ್ಲಾ ನೋವನ್ನೂ ಸಹಿಸುವ ಆಕೆ ಯಾರೋ!?...

ಎಲ್ಲಾ ವಿವರಗಳನ್ನೂ ರಾಕೇಶನಿಗೆ ಮಹಾದ್ರಷ್ಟ ಹೇಳಲು ಬಯಸಲಿಲ್ಲ. ಅವನು ಸಾಧಾರಣ ಮನುಷ್ಯ. ಎಲ್ಲಾ ವಿವರಗಳನ್ನೂ ತಿಳಿದ ನಂತರ ಅವನು ಬೇರೆಯಾಗುವುದೂ ಸಾಧ್ಯವಿದೆ.

ಆದರೆ ಮಹಾದ್ರಷ್ಟನಿಗೂ ತಿಳಿಯದ ವಿಷಯವೊಂದಿದೆ- ರಾಕೇಶ್ ಆತನಿಗಿಂತಲೂ ದೊಡ್ಡ ನರರೂಪಿರಾಕ್ಷಸ ಎಂಬುದು; ಕೇದಾರಗೌರಿ- ಸಿದ್ಧಾರ್ಥ ಇವರು ಎಷ್ಟು ಹೆಚ್ಚು ನೋವು ಅನುಭವಿಸಿದರೆ ಅಷ್ಟು ಹೆಚ್ಚುಸುಖ ಅನುಭವಿಸುತ್ತಾನೆ ಎಂಬುದು.

ಅಂದಿನ ಸಂಜೆಯೇ ಗೌರಿಯನ್ನು ಕಂಡ ರಾಕೇಶ್ ಆಗಲೇ ಮದುವೆಯ ಸಿದ್ಧತೆಗಳು ನಡೆಯುತ್ತಿದ್ದವು. ಮನೆಗೆ ಬಣ್ಣ ಬಳಿಯುತ್ತಿದ್ದಾರೆ. ಕೇದಾರಗೌರಿಯನ್ನು ಮದುವೆಯ ಶೋಭೆ ಆವರಿಸಿದೆ. ಅರಸಿನ ಲೇಪಿತ ವದನಾರವಿಂದಕ್ಕೆ ನಾಚಿಕೆಯ ಅವಕುಂಠನ ಬೆಳ್ದಿಂಗಳಾಗಿದೆ.

ರಾಕೇಶನನ್ನು ನೋಡುತ್ತಲೇ ''ಇಷ್ಟೊಂದು ಕೆಲಸಗಳಿರುವಾಗಲೂ ಎಲ್ಲಿಗೆ ಹೋಗಿದ್ದೆ ಭಾವ?'' ಎಂದು ಕೇಳಿಮದಳು ಕೇದಾರಗೌರಿ.

ನಕ್ಕು ''ಎಲ್ಲೂ ಇಲ್ಲ'' ಎಂದ ರಾಕೇಶ್.

''ಎಲ್ಲೂ ಇಲ್ಲ ಅಂದ್ರೆ ಹೇಗೆ? ಜೇಬಿನಲ್ಲಿ ರೈಲು ಟಿಕೇಟ್ ಇದೆಯಲ್ಲ!'' ಎನ್ನುತ್ತಾ ಬಳಿಗೆ ಬಂದಳು.

ರಾಕೇಶ್ ಬೆಚ್ಚಿದ. ಅಷ್ಟರಲ್ಲಿ ಎಚ್ಚರಗೊಂಡು ಜೇಬಿನಲ್ಲಿದ್ದ ಟಿಕೆಟ್ಟನ್ನು ತೆಗೆದು ವೇಸ್ಟ್ ಪೇಪರ್ ಬ್ಯಾಸ್ಕೆಟ್ಟಿಗೆ ಎಸೆಯುತ್ತಾ ''ಸ್ನೇಹಿತನ ಮದುವೆಗೆ ಹೋಗಿದ್ದೆ'' ಎಂದ ಆ ವಿಷಯವನ್ನು ಅಲ್ಲಿಗೇ ಸಾಕುಮಾಡುವವನಂತೆ.

ಎಸೆದ ಟಿಕೆಟ್ ಬ್ಯಾಸ್ಕೆಟ್ಟಿನಲ್ಲಿ ಬೀಳದೆ ಪಕ್ಕದಲ್ಲಿ ಬಿತ್ತು. ಗೌರಿ ಅದನ್ನು ಎತ್ತಿಕೊಂಡು ಒಳಕ್ಕೆ ಹಾಕುತ್ತಾ ಟಿಕೆಟ್ಟಿನಲ್ಲಿದ್ದ ಊರ ಹೆಸರು ನೋಡಿ, ''ಅಷ್ಟು ದೂರದ ಒರಿಸ್ಸಾದಲ್ಲಿರುವ ಸ್ನೇಹಿತ ಯಾರಪ್ಪಾ?'' ಎಂದಳು.

ಇಬ್ಬರೂ ಒಂದೇ ಕಾಲೇಜಾದ್ದರಿಂದ ಸಾಮಾನ್ಯ ಪರಿಚಯವಾದರೂ ಇದ್ದೇ ಇರಬೇಕು.

ರಾಕೇಶ್ ಮಾತನಾಡಲಿಲ್ಲ. ಕಿಟಕಿಯಿಂದ ಹೊರಕ್ಕೆ ನೋಡುತ್ತಾ ನಿಂತಿದ್ದ. ಇದ್ದಕ್ಕಿದ್ದಂತೆಯೇ ಅವನಲ್ಲಾದ ಬದಲಾವಣೆ ಗಮನಿಸಿ, ಅವನ ಹಿಂದೆ ನಿಂತು ''ಏನಾಯಿತು ಭಾವಾ?ಐ'' ಎಂದು ಕೇಳಿದಳು. ರಾಕೇಶ್ ಕತ್ತಿ ತಿರುಗಿಸಿ ನೋಡಿದ. ನೋವನ್ನು ಮರೆಯಲ್ಲಿರಿಸಲು ಪ್ರಯತ್ನ ನಡೆಸುತ್ತಿರುವುದು ಗೌರಿಗೆ ಅರ್ಥವಾಯಿತು. ''ಗೌರೀ...ನಿಜ ಹೇಳಲೇನು?'' ಎಂದು ಕೇಳಿದ.

ಅವನಲ್ಲಿ ತೋರಿಬಂದ ಬದಲಾವಣೆಗೆ ಅಚ್ಚರಿಗೊಂಡು ''ಅದೇನು ಹೇಳು'' ಎಂದಳು.

''ನೀನೇನೂ ಹೇಳಬಾರದು. ನೋವೂ ಪಡಬಾರದು''

''ಅದೇನು ಭಾವಾ, ನಿಜ ಹೇಳಿ''

''ಮೊದಲು ಪ್ರಾಮಿಸ್ ಮಾಡಿ ಆಮೇಲೆ ಮಾತು... ಪ್ರಾಮಿಸ್''

''...ಪ್ರಾಮಿಸ್''

ರಾಕೇಶ್ ನಿಟ್ಟುಸಿರಿಟ್ಟು ಹೇಳಿದ ''ನಾನು ಇಲ್ಲಿರಲಾರದಾದೆ ಗೌರೀ...ಹೇಳಿದರೆ ನೀನು ನಗುತ್ತೀ ಎಂಬ ಭಯವಿದ್ದರೂ, ನೀನು ನನ್ನ ಸ್ಥಿತಿಯನ್ನು ಅರ್ಥಮಾಡಿಕೊಳ್ಳುತ್ತೀ ಎಂದೇ ನಂಬಿದ್ದೇನೆ. ಎಷ್ಟೇ ಸಾಧಾರಣವಾಗಿರೋಣವೆಂದುಕೊಂಡರೂ, ಇಲ್ಲಿಯ ಸಿದ್ಧತೆಗಳು ನನ್ನನ್ನು ಬಡಿದೆಚ್ಚರಿಸುತ್ತಿದ್ದವು. ಆದ್ದರಿಂದ ಬೇರೆಲ್ಲಿಯಾದರೂ ಕೆಲವು ದಿನ ಹೋಗಿಬರೋಣವೆಂದು ಹೊರಟೆ. ಕೋಣಾರ್ಕದ ದೇವಾಲಯ ನೋಡಿದೆ. ದೇವಾಲಯದೊಳಗಿನ ದೇವರನ್ನು ಕಂಡರೂ, ಹೊರಗಿನ ಚಿತ್ರಾಲಂಕಾರವನ್ನು ನೋಡಿದರೂ ನೀನೇ ಕಾಣಿಸುತ್ತಿದ್ದೆ. ದೂರ ಹೋಗಿ ಸಾಧಿಸಬೇಕಾದ್ದೇನೂ ಇಲ್ಲವೆಂದು ಹಿಂತಿರುಗಿಬಂದೆ...'' ಮಾತು ನಿಲ್ಲಿಸಿದವನು ಒಡನೆಯೇ ಸೇರಿಸಿದ ''ಇದೆಲ್ಲಾ ನನ್ನ ಸ್ವಂತ ವಿಷಯ. ಇದನ್ನು ಮರೆಯುವುದೇ ಒಳ್ಳೆಯದು. ನಿನಗೆ ಈ ವಿಷಯ ಹೇಳಲೇಬಾರದಾಗಿತ್ತು...''

ತನ್ನ ನಿರ್ಣಯದಿಂದ ಅವನಿಗಾಗಿರುವ ವೇದನೆ ಅವಳ ಕಣ್ಣಲ್ಲಿ ನೀರೂರಿಸಿತು. ಮೊದಲೇ ಈ ತೀರ್ಮಾನ ಅವನಿಗೆ ಆಘಾತ ಉಂಟುಮಾಡಬಹುದು ಎಂಬುದನ್ನು ನಿರೀಕ್ಷಿಸಿ 'ರಾಕೇಶ್' ಎಂದು ಸಂಭೋದಿಸುವುದನ್ನು ಬಿಟ್ಟು 'ಭಾವಾ' ಎಂದೇ ಕರೆಯಲು ಪ್ರಾರಂಭಿಸಿದ್ದಳು. ಸಾಧ್ಯವಿರುವಷ್ಟೂ ಅಭಿಮಾನದಿಂದಲೇ ಅವನನ್ನು ನೋಡಿಕೊಳ್ಳುತ್ತಿದ್ದಳು.

ಮದುವೆಗೆ ಮೊದಲೇ ಅರ್ಧ ಸಂಪತ್ತನ್ನು ರಾಕೇಶನಿಗೆ ಕೊಡಬಹುದಲ್ಲಾ ಎಂದೂ ತಂದೆಯನ್ನು ಕೇಳಿದ್ದಳು. ಭವಾನಿಶಂಕರ್ ಈ ಬಗ್ಗೆ ಉತ್ಸಾಹ ತೋರಿರಲಿಲ್ಲ. ಅವರದು

ತುಂಬಾ ಗಂಭೀರ ಸ್ವಭಾವ. ಅಷ್ಟು ಬೇಗ ತಮ್ಮ ಅಂತರಂಗವನ್ನು ಬಿಟ್ಟುಕೊಡುವಂತಹವರಲ್ಲ. ತನ್ನ ತಂದೆಯ ಆಸ್ತಿಗೆ ರಾಕೇಶ್ ತಾನು ಇಬ್ಬರೂ ಸಮಾನ ಹಕ್ಕುದಾರರು ಎಂದೇ ಆಕೆ ಭಾವಿಸಿದ್ದಳು. ಆತನು ಪ್ರತ್ಯೇಕ ಎಂಬ ಭಾವನೆಯೇ ಅವಳಲ್ಲಿ ಇರಲಿಲ್ಲ.

'ಸಾಧ್ಯವಿರುವಷ್ಟು ಶೀಘ್ರವಾಗಿ ರಾಕೇಶನ ಮದುವೆ ನಡೆಸಬೇಕು. ಅದುವರೆವಿಗೂ ತನಗೆ ಶಾಂತಿ ದೊರೆಯದು'- ಎಂದು ಅನೇಕ ಬಾರಿ ತನ್ನಲ್ಲಿ ತಾನೇ ಹೇಳಿಕೊಂಡಿದ್ದಳು. ಆ ಮುಗ್ಧೆ ನಿಜವಾಗಿಯೂ ರಾಕೇಶ್ ಚಿಂತಾಕ್ರಾಂತನಾಗಿದ್ದಾನೆ ಎಂದೇ ನಂಬಿದ್ದಳು.

ಅವನಿಗಾಗಿ ಕೊಂಡುತಂದಿದ್ದ ಸೂಟಿಂಗ್ ಬಟ್ಟೆಗಳನ್ನು ಅವನ ಮುಂದೆ ಹರಡುತ್ತಾ ''ಹೇಗಿವೆ ಇವು?'' ಎಂದು ಕೇಳಿದಳು.

''ಚೆನ್ನಾಗಿವೆ ಸಿದ್ಧಾರ್ಥನಿಗೇನು?''

''ಅಲ್ಲ ನಿನಗೆ!''

''ಈ ತಮಾಷೆ ಬೇಡ, ಮದುವೆ ಸಿದ್ಧಾರ್ಥನಿಗೆ ತಾನೇ? ಹೊಸ ಬಟ್ಟೆ ನನಗೇಕೆ?'' ನಗುತ್ತಾ ರಾಕೇಶ್ ಕೇಳಿದ.

''ಮದುವೆ ಯಾರದಾದರೇನು? ಮದುವೆಗೆ ಹಿರಿಯ ನೀನು ತಾನೇ? ಸಂಭ್ರಮದಿಂದ ಎಲ್ಲಾ ಏರ್ಪಾಟುಗಳಿಗೂ ಓಡಾಡುವ ನೀನು ಒಳ್ಳೆ ಹೊಸ ಬಟ್ಟೆಯಲ್ಲಿ ಇರದಿದ್ದರೆ ಹೇಗೆ?'' ಎಂದಳು ಕೇದಾರಗೌರಿ ನಗುತ್ತಾ. ರಾಕೇಶನ ನಗು ಅವಳಿಗೆ ತುಂಬಾ ಸಂತೋಷವನ್ನುಂಟು ಮಾಡಿತ್ತು. ''ಸಾದ್ಧಾರ್ಥನಿಗೆ ಸೂಟು ಬೂಟು ಹಿಡಿಸುವುದಿಲ್ಲ ಎಂದು ಸ್ಪಷ್ಟವಾಗಿ ಹೇಳಿದ. ಹಳ್ಳಿಯಲ್ಲಿ ಇಂಥಾ ಬಟ್ಟೆಗಳ ಅವಶ್ಯಕವೇನು ಎಂದು ನಾನೂ ಒಪ್ಪಿದೆ''

''ಅಂದ್ರೆ. ನೀನೂ ಕೃಷ್ಣಾಪುರಕ್ಕೆ ಹೋಗ್ತಿದ್ದೀಯಾ?''

''ಇಲ್ಲದಿದ್ದರೆ ಸಿದ್ಧಾರ್ಥ ಇಲ್ಲಿ ಬಂದಿರುತ್ತಾನೇನು?''

ಈ ಮಾತು ಕೇಳಿದೊಡನೆಯೇ ಸಂತೋಷವಾಯಿತು ಅವನಿಗೆ.

ಕೃಷ್ಣಾಪುರ...ಭಸ್ಮದಿಂದ ಸಿಂಹಚನಗೊಳಿಸಿದ ಗದ್ದೆಗಳ ಊರು! ಕಾದ್ರಾ, ದಾರ್ಕಾರ ಭಸ್ಮ ಹೊಂದಿರುವ ನೀರಿನ ಊರು!

★★★

ಅದೆಲ್ಲಾ ಕಣ್ಣವೆ ಹಾಕುವಷ್ಟರಲ್ಲಿ ನಡೆದಿತ್ತು.

ಕೃಷ್ಣಾಪುರ ಗ್ರಾಮಕ್ಕೆ ಸೇರಿದಂತೆ ಪಕ್ಕದಲ್ಲಿಯೇ ಇದ್ದ ಹರಿಜನರ ಕೇರಿಯಲ್ಲಿ, ರಾತ್ರಿ ಎರಡು ಗಂಟೆ ಸುಮಾರಿಗೆ ಒಂದು ಬಡಗುಡಿಸಲಲ್ಲಿ...

ಗಾಢ ನಿದ್ರೆಯಿಂದ ಎಚ್ಚೆತ್ತಳು ಗಂಗಿ. ಗಂಗಿ ಇಪ್ಪತ್ತೆರಡು ವಯಸ್ಸಿನ ಹೊಣ್ಣು. ಮದುವೆಯಾಗಿ ನಾಲ್ಕು ವರ್ಷವಾಗಿತ್ತು. ತುಂಬಾ ಕಾಲ ಗರ್ಭಿಣಿಯಾಗಿರಲಿಲ್ಲ.

ಬಂಜೆ ಎಂಬ ಅಪವಾದ ಹೊರಿಸಿ ಗಂಡ ಮರುಮದುವೆಯ ಸಿದ್ಧತೆ ಮಾಡುತ್ತೇನೆ ಎಂಬವ ಬೆದರಿಕೆಯೂ ಹಾಕಿದ್ದ. ಅಮ್ಮನಿಗೆ ಬಲಿ ಅರ್ಪಿಸಿದ್ದಳು. ಕಣ್ತೆರೆದು ನೋಡಿದ್ದಳು ಅಮ್ಮ- ಈಗ ಎಂಟು ತಿಂಗಳು! ಅವಳು ಎಚ್ಚರಾದದ್ದನ್ನು ಗಮನಿಸಿದ ಗಂಡ 'ಯಾಕ್ಲೇ?' ಎಂದು ಕೇಳಿದ.

'ಮೊಟ್ಟೇ ಯಾಕೋ ಸುಳಿಸುಳಿ ಅಂತೈತೆ'' ಎಂದು ಹೇಳುತ್ತಾ ಎದ್ದು ಹೊರಕ್ಕೆ ಬಂದಳು. ಬಾಗಿಲನ್ನು ಮುಚ್ಚಿಕೊಂಡು ಗುಡಿಸಲ ಹಿಂಭಾಗದಲ್ಲಿ ಕಟ್ಟಿದ್ದ ತಡಿಕೆಯ ಬಳಿಗೆ ಹೋದಳು. ಆಗತಾನೇ ಮಳೆ ನಿಂತಿತ್ತು. ತಣ್ಣನೆಯ ಗಾಳಿ ಬೀಸುತ್ತಿತ್ತು. ''ಹಾಳಾದ್ಮಳೆ...ಇದ್ರೆಕ್ಕುಟ್ಟೋಗ...'' ಎಂದು ಗೊಣಗಿದಳು.

ಮೂರು ಕಡೆ ತಡಿಕೆಗಳಿವೆ. ನಾಲ್ಕನೆಯ ಕಡೆ ಕಾಡಿನಂತೆ ಹರಡಿಕೊಂಡ ಗಿಡ. ಗಾಳಿಯಿಂದ ಅವು ಭಯ ಹುಟ್ಟಿಸುವಂತೆ ತೂಗಾಡುತ್ತಿವೆ. ನೆಲವೆಲ್ಲಾ ತೇವದಿಂದ ಕೆಸರಾಗಿದೆ. ಅಡಿ ಇಟ್ಟಾಗಲೆಲ್ಲಾ ಒಂದು ರೀತಿಯ ಸಪ್ಪಳ. ಆದರೂ ಅಭ್ಯಾಸವಾಗಿದ್ದ ಸ್ಥಳವಾದ್ದರಿಂದ ಮಾಮೂಲಿನಂತೆಯೇಹೋದಳು. ಐದು ನಿಮಿಷಗಳ ನಂತರ ಹೊರಕ್ಕೆ ಬರುವಾಗ ಏನೋ ಅನುಮಾನವಾಯಿತು.

ಅದುವರೆವಿಗೂ ಒಂದೇ ಸಮನೆ ಸದ್ದುಮಾಡುತ್ತಿದ್ದ ಕತ್ತಲ ಕೀಟಗಳೂ ಆ ಸದ್ದನ್ನು ಕೋಳಿದೊಡನೆಯೇ ಭಯದಿಂದ ಮೌನ ವಹಿಸಿದಂತೆ ಸುಮ್ಮನಾದವು. ಅವ್ಯಕ್ತ ಭಯದಿಂದ ಗಂಗಿಯ ಮೈ ನಡುಗಿತು.

''ಯಾರದು?'' ಎಂದಳು ಅನುಮಾನದಿಂದ ನಿಂತು ಕತ್ತಲಲ್ಲಿ ನೋಡುತ್ತಾ ಯತ್ತರವಿಲ್ಲ. ಅವಳು ಮುಂದಡಿ ಇಡುವಷ್ಟರಲ್ಲಿ ದೂರದಲ್ಲಿದ್ದ ಪೊದೆಯೊಂದು ಅಲುಗಿ ಅದರಿಂದ ಒಂದು ಆಕೃತಿ ಹೊರಬಂತು. ಗಂಗಿ ಪ್ರತಿಮೆಯಂತೆ ನಿಂತಳು.

ಸುಮಾರು ಮೂರು ಅಡಿ ಎತ್ತರವಿರುವ ಬೇಟೆನಾಯಿ ಅದು. ಕತ್ತಲಲ್ಲಿ ಅದರ ಕಣ್ಣು ಹೊಳೆಯುತ್ತಿದೆ. ಬಾಯಿಂದ ಬಾಲೀಗೆ ಹೊರಗೆ ಚಾಚಿದೆ. ಎರಡು ಕೋರೆ ಹಲ್ಲುಗಳು ಕಾಣಿಸುತ್ತಿವೆ. ಅದು ಚಲಿಸಲಿಲ್ಲ. ಆದರೂ ಅದು ನಿಂತ ಭಂಗಿ ಭಯಾನಕವಾಗಿತ್ತು.

ಗಂಡನನ್ನು ಕರೆಯೋಣವೆಂದರೂ ಬಾಯ್ತೆರೆಯಲಾರದೆ ಮೌನವಹಿಸಿದಳು. ಆ ಪ್ರದೇಶದಲ್ಲಿ ಅಂಥಾ ನಾಯಿಯನ್ನು ನೋಡುತ್ತಿರುವುದು ಮೊದಲಬಾರಿ. ಆದರೂ ತನ್ನ ಮನೆಯ ಹಿತ್ತಲಲ್ಲಿ ಎಂಥಾ ಭಯ! ಮಾತಿಲ್ಲದೆ ಮನೆಯ ಬಾಗಿಲತ್ತ ಅಡಿಯಿರಿಸಿದಳು.

ಅದೇ ಕ್ಷಣವೇ ಹಿಂದಿನಿಂದ ಬಿತ್ತು ಪೆಟ್ಟು.

ಸದ್ದಿಲ್ಲದೆ, ಚೀರದಂತೆ ಕುಸಿದು ನೆಲದ ಮೇಲೆ ಬಿದ್ದಳು ಗಂಗಿ. ಆಯುಧ ಅದೇ ವೇಗದಲ್ಲಿ ಬೇಟೆ ನಾಯಿ ಮುಂದೆ ಬಿತ್ತು. ಒಡನೆಯೇ ಆಜ್ಞಾಪಾಲಕ ಸೇವಕನಂತೆ

ಆಯುಧವನ್ನು ಬಾಯಲ್ಲಿ ಎತ್ತಿಕೊಂಡು ಹಿಂದಕ್ಕೋಡಿತು ಅದು.

ಗುಡಿಸಲ ಒಳಗೆ ಗಂಗಿಯ ಗಂಡ ನಿದ್ರೆಗೆ ಬಿದ್ದಿದ್ದ. ಬೆಳಗಾಗುವ ತನಕಗಂಗಿಯ ಸಾವಿನ ಬಗ್ಗೆ ಅವನಿಗೆ ಗೊತ್ತಿರಲಿಲ್ಲ!

ಅದುವರೆವಿಗೂ ಮಳೆ ಹನಿಯುತ್ತಲೇ ಇತ್ತು.

ಅಷ್ಟಾವಕ್ರನ ಮೊದಲು ಹುಟ್ಟಬೇಕಾದ ಏಳು ಶಿಶುಗಳಲ್ಲಿ ಎರಡನೆಯವನು ತಾಯಗರ್ಭದಲ್ಲಿ ಏಕೆ ಕೊಲ್ಲಲ್ಪಟ್ಟನೆಂಬುದು ಉಸ್ಲೋಕ್ ಸದಸ್ಯರಾರಿಗೂ ಗೊತ್ತಿಲ್ಲ. ಕೊನೆಗೆ ರೆಡ್‌ಸ್ಕೆಲಿಟನ್ನಿಗೂ ಈ ಸಂಗತಿ ತಿಳಿಯದು ಇದು ಮಹಾದ್ರಷ್ಟ ಒಬ್ಬನಿಗೆ ಮಾತ್ರವೇ ಗೊತ್ತಿತ್ತು!

ಎತ್ತರವಾದ ಬೆಟ್ಟ, ಅಲ್ಲೊಂದು ದೇವಾಲಯ. ದೇವಾಲಯದ ಹೊರಗೆ, ಎಲ್ಲಕ್ಕಿಂತಲೂ ಕೊನೆಯ ಮೆಟ್ಟಿಲಲ್ಲಿ ಕುಳಿತು ನೋಡುತ್ತಿದ್ದ ಸಿದ್ಧಾರ್ಥ- ಕೆಳಗೆ ಊರು ಹಚ್ಚ ಹಸುರಾಗಿ ಕಾಣಿಸುತ್ತಿದೆ. ಮನದಲ್ಲಿ ಮಧುರವಾದ ಭಾವನೆ ತುಂಬಿದೆ. ಬಾಳು ಎಷ್ಟು ಅನಿರೀಕ್ಷಿತವಾಗಿ ತನ್ನೆಲ್ಲಾ ಊಹೆಗಳನ್ನೂ ಮೀರಿ ಬೆಳೆದಿದೆ! ಕೇದಾರಗೌರಿ ನೆನಪಾಗಿ- ತುಟಿಯ ಮೇಲೆ ಕಿರುನಗೆ ಅರಳಿತು.

ನಾಟಕೀಯವಾಗಿ ಯಾವ ಘಟನೆಯೂ ನಡೆಯಲಿಲ್ಲ. ಕೇದಾರಗೌರಿ ತಾನಾಗಿ ಏನೂ ಹೇಳಲಿಲ್ಲ. ತುಂಬಾ ಗೌರವದಿಂದ ತನ್ನ ತಂದೆಯನ್ನೇ ಕಳುಹಿಸಿದ್ದಳು.

ಸಿದ್ಧಾರ್ಥ ಮೊದಲು ಈ ಮಾತು ಕೇಳುತ್ತಲೇ ಆಶ್ಚರ್ಯಗೊಂಡಿದ್ದ. ಆದರೂ ಅದನ್ನು ತೋರಿಸಿಕೊಳ್ಳದೆ ಗಾಂಭೀರ್ಯ ವಹಿಸಿದ್ದ. ಭವಾನಿಶಂಕರ್ ಅವರೂ ಕೂಡ ಹೆಚ್ಚೇನು ಮಾತಾನಾಡಲಿಲ್ಲ.

''ತುಂಬಾ ಮುದ್ದಿನಿಂದ ಜಾಗರೂಕಳಾಗಿ ಬೆಳೆದಾಕೆ. ಇಲ್ಲಿ ಬಂದು ನಮ್ಮೊಂದಿಗೆ ಇರುವುದು ಸಾಧ್ಯವಾಗುತ್ತದೆಯೇ?'' ಸಿದ್ಧಾರ್ಥ ತನ್ನ ಅನುಮಾನವನ್ನು ಅವರ ಮುಂದಿರಿಸಿದ್ದ.

''ನನ್ನ ಮಗಳ ತೀರ್ಮಾನದ ಮೇಲೆ ನನಗೆ ಪೂರ್ಣ ವಿಶ್ವಾಸವಿದೆ''- ಅಷ್ಟೇ ಅವರ ಮಾತು. ಮಾತು ಅಷ್ಟೊಂದು ಸಂಕ್ಷಿಪ್ತ ಸೂಕ್ಷ್ಮ.

''ನನ್ನನ್ನು ಮದುವೆಯಾಗುವುದು ಎಂದರೆ ನನಗೆ ಆಕೆಯ ಸಂಪತ್ತಿನ ಬಗ್ಗೆ ಆಸೆಯಿಲ್ಲ. ಆಕೆ ಇಲ್ಲಿಯೇ ಬಂದು ಬಾಳಬೇಕು'' ಸಿದ್ಧಾರ್ಥನ ಎಚ್ಚರಿಕೆ.

''ಇಷ್ಟೊಂದು ಸಣ್ಣ ವಿಷಯದ ಬಗ್ಗೆ ಯೋಚಿಸದೆ ನನ್ನ ಮಗಳು ಹೇಗೆ ತಾನೇ ತೀರ್ಮಾನ ಕೈಗೊಂಡಿರಲು ಸಾಧ್ಯ? ನನ್ನ ಮಗಳು ಅಷ್ಟೂ ಯೋಚಿಸದೆ ಇರ್ತಾಳೆಯೇ?'' ಇದು ಭವಾನೀಶಂಕರ್ ಅವರ ವಾದ.

ಈ ಮಾತಿನ ನಂತರ ತಾಂಬೂಲವನ್ನು ಬದಲಿಸಿಕೊಂಡಿದ್ದಾಯಿತು.

ಅದೆಲ್ಲಾ ನೆನಪಾಗಿ ಈಗ ನಗು ಬರುತ್ತದೆ.

ಸಿದ್ಧಾರ್ಥ- ಐದು ಅಡಿ ಎರಡು ಅಂಗುಲ ಎತ್ತರ. ಹೊಳಪಿಲ್ಲದ ಮುಖ. ಕಾಂತಿಹೀನ ಕಣ್ಣು...ಅವನನ್ನು ಕಂಡ ಯಾರಾದರೂ ಅವನ ಬಗ್ಗೆ ಹಗುರವಾದ ಅಭಿಪ್ರಾಯವನ್ನು ಇರಿಸಿಕೊಂಡರೆ ಅದಟ ತಪ್ಪೇ? ತನ್ನ ರೂಪಹೀನತೆಯಿಂದ ಇತರರೊಂದಿಗೆ ಅವನು ಬೆರೆಯುತ್ತಿರಲಿಲ್ಲ. ಆದರೆ ತನ್ನಲ್ಲಿ ಮನೋಸ್ಥೈರ್ಯವನ್ನು ವೃದ್ಧಿಗೊಳಿಸಿಕೊಳ್ಳುತ್ತಿದ್ದ. ಅದಕ್ಕೆ ಕಾರಣ ಶ್ರೀರಾಮ.

ಬಾಲ್ಯದಿಂದಲೂ ಅವನ ತಾಯಿ ರಾಮಕತೆಯನ್ನು ರಾಗವಾಗಿ ಹಾಡುತ್ತಿದ್ದುದನ್ನು ಕೇಳುತ್ತಾ ಕೇಳುತ್ತಾ ಶ್ರೀರಾಮನೆಂದರೆ ಒಂದು ರೀತಿಯ ವಿಶ್ವಾಸವನ್ನು ಬೆಳೆಸಿಕೊಂಡಿದ್ದ. ತಾನು ದೊಡ್ಡವನಾದಂತೆಲ್ಲಾ ತನ್ನಲ್ಲಿ ಏನೋ ಕೊರತೆಯನ್ನು ಅನುಭವಿಸುತ್ತಲೂ ಇದ್ದ. ಅವನ ಸುತ್ತಮುತ್ತಲಿನವರು ಅಂದದ ಕೊರತೆಯೆಂದು ಅದನ್ನೇ ಎತ್ತಿ ಹೇಳುತ್ತಲಿದ್ದರೂ, ಎಡಬಿಡದೆ ಅವನನ್ನು ಕಾಡುತ್ತಿದ್ದ ಕುರೂಪಿ ಎನ್ನುವ ಭಾವ ಕೊರತೆಯಾಗಿ ನಿಖರಗೊಂಡಿತು. ಇದರಿಂದ ಅವನು ಹೆಚ್ಚಾಗಿ ಅಂತಮುಖಿಯಾದ. ಅದೃಷ್ಟವಶಾತ್ ಆ ವಯಸ್ಸಿನಲ್ಲಿ ದೇವಾಲಯಕ್ಕೆ ಹೋಗುವ ಪರಿಪಾಠ ಬೆಳೆದಿತ್ತು. ದೇವಾಲಯ ಅವನ ದುಮ್ಮಾನ ಕಳೆದುಕೊಳ್ಳುವ ಒಂದು ತಾಣವಾಯಿತು.

ದೊಡ್ಡ ದೊಡ್ಡ ಮನಶ್ಶಾಸ್ತ್ರಜ್ಞರು ಎಷ್ಟೋ ಇಂಗ್ಲೀಷ್ ಪದಗಳನ್ನು ಬಳಸಿ ನಡೆಸುತ್ತಿದ್ದ ಚಿಕಿತ್ಸೆ ಅವನ ತಾಯಿ ಅರಿತೋ ಅರಿಯದೆಯೋ ಅವನನ್ನು ಎಳೆವಯಸ್ಸಿನಲ್ಲಿ ದೇವಾಲಯಕ್ಕೆ ಕರೆದುಕೊಂಡು ಹೋಗುವುದರ ಮೂಲಕ ನಡೆಸಿದ್ದಳು. ಹಾಗೆ ಕರೆದೊಯ್ಯದಿದ್ದರೆ ಅವನ ಬಾಳೇಬೇರೊಂದು ರೀತಿಯಲ್ಲಿ ಅನಿವಾರ್ಯವಾಗಿ ರೂಪುಗೊಳ್ಳುತ್ತಿತ್ತು.

ತಾನು ನಿತ್ಯವೂ ನಮಸ್ಕರಿಸುತ್ತಿದ್ದ ಶ್ರೀರಾಮನನ್ನು ಆದರ್ಶ ಪುರುಷನನ್ನಾಗಿ ಸ್ವೀಕರಿಸಿದ ನಂತರ ಗುಂಪಿನಲ್ಲಿ ಬೆರೆಯದೆ ಪ್ರತ್ಯೇಕವಾಗಿ ಉಳಿಯುವ ತನ್ನ ಗುಣವನ್ನು ಮೊದಲು ಕಳೆದುಕೊಂಡ. ಹಾಗೆಂದ ಮಾತ್ರಕ್ಕೆ ಈ ರೀತಿ ಕೊರತೆಗಳ ವ್ಯಕ್ತಿಗೆ ಸಹಜವಾಗಿರುವ ತೀರಾ ಸಂಯಮ ಮಾತುಕತೆಯನ್ನು ಕೈಬಿಟ್ಟನೆಂದಲ್ಲ. ಅದಕ್ಕೆ ಗಾಂಭೀರ್ಯ ಸೇರಿಸಿಕೊಂಡು ತನ್ನ ಅಂತರಂಗದಲ್ಲಿ ತಾನೇ ವೃದ್ಧಿಗೊಳ್ಳೊಡಗಿದ. ಇದಕ್ಕೆ ಗೊಬ್ಬರವಾದದ್ದು ಅವನ ಭಕ್ತಿಭಾವ. ಅದು ಅವನೊಂದಿಗೆ ಚಿಕ್ಕಂದಿನಿಂದಲೂ ಬಳ್ಳಿಯಾಗಿ ವೃದ್ಧಿಗೊಳ್ಳತೊಡಗಿತ್ತು.

ಅವನು ಕಾಲೇಜಿನಲ್ಲೂ ಇತರರೊಂದಿಗೆ ಬೆರೆಯುತ್ತಿರಲಿಲ್ಲ. ಹಾಗೆ ಬೆರೆತರೂ ಅವರು ತನ್ನಲ್ಲಿಯ ಕೊರತೆಗಳನ್ನೇ ನೋಡುತ್ತಾರೆ ಎಂಬುದು ಅವನಿಗೆ ಗೊತ್ತಿತ್ತು.

ದೇವಾಲಯದ ವಿಗ್ರಹದಂತೆ ಕಿರುನಗೆ ಬೀರಿ ಸ್ಫೂರ್ತಿಯ ಸೆಲೆಯಾಗುವವರು ಯಾರೂ ಅಲ್ಲಿ ದೊರೆಯುವುದಿಲ್ಲ ಎಂಬುದೂ ಅವನಿಗೆ ಗೊತ್ತಿತ್ತು.

ಈ ಸ್ಫೂರ್ತಿ ಅವನಿಗೆ ಎರಡು ರೀತಿಗಳಲ್ಲಿ ನೆರವಾಗಿತ್ತು. ಮೊದಲನೆಯದಾಗಿ ಅಪರೂಪವಾದ ಜ್ಞಾಪಕಶಕ್ತಿಯನ್ನು ಬೆಳೆಸಿದ್ದು, ಎರಡನೆಯದಾಗಿ ಮಿಂಚಿನ ವೇಗದ ಚುರುಕುತನ ತಂದುಕೊಟ್ಟಿದ್ದು. ಯಾರೊಂದಿಗೂ ಬೆರೆಯದೆ ಪ್ರತ್ಯೇಕವಾಗಿ ಕುಳಿತಿರುತ್ತಿದ್ದ ಅವನು ಅವಶ್ಯಕತೆ ಬಂದಾಗ ತುಂಬಾ ಶೀಘ್ರವಾಗಿ ಕರ್ತವ್ಯಮುಖಿನಾಗಿ ವರ್ತಿಸುತ್ತಾ ಓಡಾಡಬಲ್ಲನೆಂಬುದು ಕೇದಾರಗೌರಿ ಪಾದವನ್ನು ಜಿಗಣೆ ಹಿಡಿದಾಗ ತೋರಿಸಿದ್ದ. ಬೇರೆ ಯಾರಾದರೂ ಆ ಸ್ಥಿತಿಯಲ್ಲಿದಿದ್ದದ್ದರೆ ಸಾಕಷ್ಟು ಗೊಂದಲಕ್ಕೆ ಕಾರಣರಾಗುತ್ತಿದ್ದರು. ನಂತರ ತಮ್ಮ ಸಾಹಸವನ್ನು ಎಲ್ಲರ ಕಿವಿಗೂ ಬೀಳುವಂತೆ ಮಾಡುತ್ತಿದ್ದರು.

ಆ ಸಮಯದಲ್ಲಿ ಸಿದ್ದಾರ್ಥ ಎಷ್ಟು ಚುರುಕಾಗಿ ಕಾರ್ಯ ನಿರ್ವಹಿಸಿದನೋ, ನಂತರದಲ್ಲಿ ಅಷ್ಟೇ ಸಾಧಾರಣವಾಗಿದ್ದು ಹಿಂದಿನ ಸಿದ್ಧಾರ್ಥನಂತೆ ಏನೂ ಆಗಿಲ್ಲವೆಂಬಂತೆ ವರ್ತಿಸಿದ್ದ.

ಇಂತಹುದೇ ಒಂದು ಘಟನೆ ನಾಲ್ಕು ವರ್ಷಗಳ ಹಿಂದೆ ನಡೆದಿತ್ತು. ಕಾಲೇಜಿಗೆ ಸೇರಿದ ಹೊಸತರಲ್ಲಿ ಒಬ್ಬ ಮಿತ್ರನೊಂದಿಗೆ ಸಿನಿಮಾಕ್ಕೆ ಹೋದ. ಮಿಡಲ್ ಕ್ಲಾಸಿನಲ್ಲಿ ಕುಳಿತಿದ್ದರು. ಅವರು ಕುಳಿತಿದ್ದ ಮುಂದಿನ ಸಾಲಿನಲ್ಲಿ ಯಾರೋ ವೃದ್ಧೆಯೊಬ್ಬಳು ಕುಳಿತಿದ್ದಳು. ಭಕ್ತಿಪ್ರಧಾನವಾದ ಚಿತ್ರ. ದೇವರು ತೆರೆಯ ಮೇಲೆ ಕಾಣಿಸಿಕೊಂಡಾಗಲೆಲ್ಲಾ ಆಕೆ ಕೈ ಮುಗಿಯುತ್ತಿದ್ದಳು. ಹಿಂದಿದ್ದ ತರುಣರು ಕೆಲವರು ಆಕೆ ಕೈ ಮುಗಿದಾಗ ಕೀಟಲೆಮಾಡಲು ಪ್ರಾರಂಭಿಸಿದರು. ಬರಬರುತ್ತಾ ಇದು ಹದ್ದು ಮೀರಿ ಕೊನೆಗೆ ಒಬ್ಬ ಯುವಕ ಆಕೆ ಹಾಗೆ ಮಾಡಿದಾಗ ಹಿಂದಿನಿಂದ ಆಶೀರ್ವದಿಸುವಂತೆ ಆಕೆಯ ತಲೆಯ ಮೇಲೆ ಕೈಯಿರಿಸಿದ. ಸುತ್ತಲೂ ಇದ್ದವರು ಬಲಿಷ್ಠರಾಗಿದ್ದ ಈ ಯುವಕರ ನಡೆ ಒಪ್ಪಿದರೋ ಇಲ್ಲವೋ ಅಂತೂ ನೋಡಿ ಅವರೂ ನಗುತ್ತಿದ್ದರು.

ಇದನ್ನು ಸಿದ್ಧಾರ್ಥ ಸಹಿಸಲಿಲ್ಲ. ''ಸುಮ್ಮನೆ ಸಿನಿಮಾ ನೋಡದೆ ನೀವೇಕೆ ಆಕೆಯನ್ನು ಹಾಗೆ ಗೋಳಾಡಿಸುತ್ತಿದ್ದೀರಿ?'' ಎಂದ.

ಈ ಮೂದಲಿಕೆಯಿಂದ ಕ್ರುದ್ಧರಾದ ಅವರು ಮಾತಿಗೆ ಮಾತು ಬೆಳೆಸಿದರು.

''ಒಳ್ಳೆ ಡ್ಯಾನ್ಸು ಅಂತ ನೀವು ಸೀಟಿ ಹಾಕೋಲ್ಲೆ. ಹಾಗೇ ದೇವರು ಅಂತ ನಮಸ್ಕಾರ ಹಾಕ್ತಾರೆ. ಇದರಲ್ಲಿ ನೀವು ಹಾಸ್ಯ ಮಾಡೋಂಥಾದ್ದೇನು?'' ಎಂದ ಅವನ ಶೈಲಿ 'ಆಕೆ ಮೂರ್ಖಳಾದರೆ ನೀವು ಆಕೆಗಿಂತಲೂ ಶತಮೂರ್ಖರು' ಎಂದು ಧ್ವನಿಸುತ್ತಿತ್ತು. ಆದರೆ ಅವನ ತರ್ಕವನ್ನು, ಮೊನಚುಮಾತನ್ನು ಅರ್ಥ

ಮಾಡಿಕೊಳ್ಳುವಂತಹವರು ಅಲ್ಲಿ ಯಾರೂ ಇರಲಿಲ್ಲ. ಅಷ್ಟು ಮಂದಿಯ ಎದುರಿನಲ್ಲಿ ಅನಾಮಿಕನಾದವನೊಬ್ಬ ತಮ್ಮನ್ನು ಮೂದಲಿಸಿದ್ದು ಆ ರೌಡಿಗಳಿಗೆ ಸಹಿಸಲು ಸಾಧ್ಯವಾಗಲಿಲ್ಲ. ಸಿನಿಮಾ ಮುಗಿದ ನಂತರ ರಸ್ತೆಯ ಬದಿಯಲ್ಲಿ ಕಾದು ನಿಂತರು.

ನಿಜವಾದ ಸಿದ್ಧಾರ್ಥನನ್ನು ನೋಡುವ ಅವಕಾಶ ಆಗಲೇ ದೊರೆತದ್ದು ಸಿದ್ಧಾರ್ಥನ ಮಿತ್ರನಿಗೆ!

ಹೋರಾಟದಲ್ಲಿ ಚಾಕಚಕ್ಯತೆ, ವೇಗ ಇವುಗಳಿಗಿಂತಲೂ ಮುಖ್ಯವಾದದ್ದು ಧೈರ್ಯ. ಅದು ಸಿದ್ಧಾರ್ಥನಲ್ಲಿದ್ದಷ್ಟು ಅವರಾರಲ್ಲೂ ಕಾಣಲಿಲ್ಲ. ಆಸಿಡ್ ಸೀಸೆಗಳನ್ನು ಹಿಡಿದು ನಿಂತಿದ್ದ ನಗರದ ಆ ರೌಡಿಗಳ ವಿರುದ್ಧ ಯಾವುದನ್ನೂ ನೆಚ್ಚಿಕೊಂಡು ವಿರೋಧಕ್ಕೆ ನಿಂತನೋ ಅದೇ ಧೈರ್ಯ. ಅದನ್ನು ಬೇರೊಂದು ಪದದಿಂದ ನಿರ್ದೇಶಿಸಬೇಕೆಂದರೆ ಆತ್ಮಸ್ಥೈರ್ಯ ಎನ್ನಬಹುದು.

ಇದಕ್ಕಿಂತಲೂ ವಿಚಿತ್ರವಾದುದೆಂದರೆ ಈ ಹೋರಾಟ ಮುಗಿದ ನಂತರ ಮಿತ್ರನೊಂದಿಗೆ, 'ನಡಿ ಹೋಗೋಣ' ಎಂದು ಹೇಳಿದ ತೀರಾ ಸಾಮಾನ್ಯ ಧ್ವನಿಯಲ್ಲಿ. ಪಕ್ಕದಲ್ಲಿ ನಿಂತು ಇದೆಲ್ಲಾ ನೋಡಿ ಬೆದರಿದ್ದ ಮಿತ್ರನಿಗೆ ಇದು ಕನಸೋ ನನಸೋ ಅರ್ಥವಾಗಲಿಲ್ಲ, ತನ್ನೊಡನೆ ಇದ್ದವನು ಸಿದ್ಧಾರ್ಥನೋ ಅಲ್ಲವೋ ಎಂಬ ಅನುಮಾನವೂ ಅವನಲ್ಲಿ ಮೂಡಿತು!

'ಅವರು ನಿನ್ನ ಮುಖವನ್ನು ಬ್ಲೇಡಿನಿಂದ ಕೊಯ್ದಿದ್ದರೆ ನೀನೇನು ಮಾಡ್ತಿದ್ದೆ?' ಎಂದು ಕೇಳಿದ ದಾರಿಯಲ್ಲಿ.

'ನಮಗಿಂತ ಬಲಶಾಲಿಗಳಾದ ರೌಡಿಗಳ ವಿರುದ್ಧ ಜಗಳಕ್ಕೆ ನಿಲ್ಲಬಾದರು ಎಂಬುದನ್ನು ತಿಳಿದುಕೊಳ್ಳುತ್ತಿದ್ದೆ' ಎಂದ ಸಿದ್ಧಾರ್ಥ ನಗುತ್ತಾ. 'ಅದರ ಜೊತೆಗೆ ನಾನು ತುಂನಿದ ಸಿದ್ಧಾಂತಕ್ಕಾಗಿ ಹೋರಾಡಿದೆ ಎಂಬ ತೃಪ್ತಿ ಮುಖದ ಮೇಲೆ ಶಾಶ್ವತವಾಗಿ ನಿಲ್ಲುವ ಕಲೆ ಕೊಡುತ್ತಿತ್ತು'

ಸಿದ್ಧಾರ್ಥನ ಮಿತ್ರನಿಗೆ ಈ ಮಾತು ಅರ್ಥವಾಗಲಿಲ್ಲ.

ಆದರೆ ಮರುದಿನ ಬೆಳಿಗ್ಗೆಯೇ ಈ ಸುದ್ದಿ ಹಾಸ್ಟಲಿನಲ್ಲೆಲ್ಲಾ ವ್ಯಾಪಿಸಿತ್ತು. ಕಾಲೋಜಿನಲ್ಲಿ ಹೊಡೆದಾಟಕ್ಕೆ ಹೆಸರಾಗಿದ್ದವರೆಲ್ಲಾ ಅವನ ಬಳಿ ಬಂದು 'ರಾತ್ರಿ ಏನೋ ನಡೆಯಿತಂತಲ್ಲಾ!?' ಎಂದು ವಿಚಾರಿಸಿಕೊಂಡರು.ಹೆಚ್ಚೇನೂ ಹೇಳದೆ ನಕ್ಕು ಸುಮ್ಮನಾಗಿದ್ದ.

'ಇದೆಲ್ಲಾ ನಿಜವೇನೋ ಅಥವಾ ಯಲೆಕ್ಷನ್ ಸ್ಟಂಟೋ?' ಎಂದೂ ಪ್ರಶ್ನಿಸಿದ. ಅದಕ್ಕೂ ನಗುವೇ ಉತ್ತರ.

'ಇದು ನಿಜವಾದ ಧೆಎರ್ಯವೋ ಅಲ್ಲವೋ ಸ್ಮಶಾನದಲ್ಲಿ ಅರ್ಧರಾತ್ರಿಯಲ್ಲಿ ನಿಲ್ಲಿಸಿದರೆ ಗೊತ್ತಾಗುತ್ತೆ' ಎಂದು ಯಾರೋ ಹಾಸ್ಯಮಾಡಿದರು. ಆ ಸಂಗತಿ ಅಷ್ಟಕ್ಕೇ

ನಿಂತಿತು. ಆದರೂ ಈ ಆಮತುಗಳು ಸಿದ್ಧಾರ್ಥನ ಮನಸ್ಸಿನಲ್ಲಿ ಬೇರು ಬಿಟ್ಟಿದ್ದವು. 'ಸ್ಮಶಾನದಲ್ಲಿ ಒಂದು ದಿನ ಕಳೆಯುವುದೇ ಧೈರ್ಯದ ಗುರ್ತೇನು?' ಎಂಬ ಯೋಚನೆ ಅವನ ಮೆದುಳನ್ನು ಕೊರೆಯಿತು. ಅದೇ ವಾರದಲ್ಲಿ ಯಾರಿಗೂ ಹೇಳದೆ ಒಂದು ರಾತ್ರಿಯೆಲ್ಲಾ ಸ್ಮಶಾನದಲ್ಲಿ ಕಳೆದುಬಂದ. ಅಲ್ಲಿಯ ಅನುಭವ ತೀರಾ ಮಾಮೂಲಿನಂತೆಯೇ ಇತ್ತು. ವಿಶೇಷವೇನೂ ಇಲ್ಲ. ಅರ್ಧರಾತ್ರಿಯಲ್ಲಿ ನರಿಗಳ ಕೂಗು, ಚಿತೆಗಳ ಬೆಂಕಿ, ಗಾಳಿಬೀಸುವ ಸದ್ದು, ಕಪಾಲಗಳ ಮಧ್ಯದಿಂದ ಗಾಳಿ ಸುಳಿದು ಹೋಗುವಾಗ ಉಂಟಾಗುವ ಸದ್ದು ಭಯವನ್ನುಂಟುಮಾಡುವಂತಿದ್ದವು ಅಷ್ಟೆ.

ಈ ಸಂಗತಿಗಳನ್ನು ಸಿದ್ಧಾರ್ಥ ಯಾರಿಗೂ ಹೇಳಲಿಲ್ಲ. ಅವನ್ನು ಹೇಳುವ ಅವಶ್ಯಕತೆಯೂ ಇರಲಿಲ್ಲ. ಬಾಲ್ಯದಿಂದಲೂ ಅವನು ತನಗೆ ತಾನೇ ಹೊಣೆಯಾಗಿದ್ದನೇ ಹೇರತು ಅನ್ಯರಿಗಲ್ಲ. ಅವಶ್ಯಕತೆ ಬಂದಾಗ ಅವನಲಷ್ಟರ ತನಕ ನಿಲ್ಲಬಲ್ಲನೆಂಬುದನ್ನು ಭವಿಷ್ಯವೇ ಹೇಳಬೇಕು.

ಇದೇ ಮಾತು ಒಮ್ಮೆ ಕೇದಾರಗೌರಿಯೊಂದಿಗೂ ಬಂದಿತ್ತು ಕೃಷ್ಣಾಪುರದಲ್ಲಿ 'ರಾವೇ' ಪ್ರೋಗ್ರಾಂ ಅಂತಿಮ ದಿನಗಳಲ್ಲಿ.

ಬೆಟ್ಟದ ಪಕ್ಕದಲ್ಲಿ ನಡೆಯುತ್ತಾ ಹೋಗುತ್ತಿದ್ದವನು ''ಬೆಟ್ಟದ ಮೇಲೆ ಹೋಗೋಣವೇ?'' ಎಂದು ಕೇಳಿದ್ದ.

''ಮೇಲೇನಿದೆ?'' ಎಂದು ಕೇಳಿದ್ದಳು ಕೇದಾರಗೌರಿ.

''ದೇವಾಲಯ...ತುಂಬಾ ಚೆನ್ನಾಗಿದೆ''

ಆಕೆ ನಗುತ್ತಾ ''ದೇವಾಲಯ ನೋಡಲು ಬರುತ್ತೇನೆ. ವಿಗ್ರಹಕ್ಕೆ ನಮಸ್ಕರಿಸುವುದು ಸಾಧ್ಯವಿಲ್ಲ'' ಎಂದಿದ್ದಳು.

''ಅದೇಕೆ?''

''ಏಕೆಂದರೆ ನಾನು ನನ್ನ ತಂದೆಯ ಮಗಳು!'' ಮತ್ತೆ ನಗು.

''ನಿಮ್ಮ ತಂದೆ ಏನು ಹೇಳುತ್ತಾರೆ?''

''ತನ್ನ ಮೇಲೆ ನಂಬಿಕೆ ಇಲ್ಲದವನೇ ಪ್ರತಿಮೆಗಳಿಗೆ, ಕಲ್ಲುಗಳಿಗೆ ಕೈ ಮುಗಿಯುತ್ತಾನೆ ಎಂದು ಹೇಳುತ್ತಾರೆ. ಈ ಮಾತು ನನ್ನ ಎಳೆಯ ವಯಸ್ಸಿನಲ್ಲೇ ಕೇಳಿದ್ದೇನೆ, ಅದನ್ನೇ ಒಪ್ಪಿ ನಂಬಿದ್ದೇನೆ''

''ತನ್ನ ಶಕ್ತಿ ಎಷ್ಟಿದೆ ಎಂಬುದನ್ನು ಅರಿಯದ ಬಾಲಕನಿಗೆ ಒಂದುಕೋತಿಯ ವಿಗ್ರಹ ತೋರಿಸಿ ಎಳೆಯ ವಯಸ್ಸಿನಲ್ಲೇ ಆಂಜನೇಯಸ್ವಾಮಿಯ ಕಥೆ ಸಾಹಸಗಳನ್ನು ವಿವರಿಸಿದ್ದರೆ ಬಿಳಿಯ ಹಾಳೆಯ ಮೇಲೆ ಮುದದಪ್ಪ ಹಾಕಿದಂತೆ ಅದು ಪ್ರಭಾವ ತೋರದೇನು?''

''ನೀವೇನು ಹೇಳುತ್ತಿದ್ದೀರಿ?''

ನಿಮ್ಮ ತಂದೆ ಹೇಳಿದ್ದಕ್ಕೂ ನಾನು ಹೇಳುತ್ತಿರುವುದಕ್ಕೂ ಏನೂ ವ್ಯತ್ಯಾಸವೇ ಇಲ್ಲ ಎಂದು! ತನ್ನ ಮೇಲಿನ ನಂಬಿಕೆ ಬೆಳೆಸಿಕೊಳ್ಳಲು ಕೆಲವರಿಗೆ ದೇವರು ಎಂಬ ಭಾವನೆ ನೆರವಾದರೆ ಅದರಲ್ಲಿ ತಪ್ಪೇನು?''

ತುಂಬಾ ಜಟಿಲವಾದ ಈ ಸಮಸ್ಯೆಯ ಬಗ್ಗೆ ಚರ್ಚೆ ಮುಂದುವರಿಸಲು ಆಕೆ ಇಚ್ಛಿಸಲಿಲ್ಲ. ತುಂಬಾ ಭದ್ರವಾದ ನಂಬಿಕೆಗಳನ್ನು ಉಳ್ಳವಳು ಗೌರಿ ಸಿದ್ಧಾರ್ಥನೂ ಅದೇ ರೀತಿಯವನೇ.

''ಈ ಒಂದು ವಿಷಯದ ಬಗ್ಗೆ ನಾವೆಂದೂ ಚರ್ಚಿಸದಂತೆ ಕೈಬಿಡೋಣ'' ಎಂದಿದ್ದಳು ಆಕೆ. ಆಕೆಯ ಅಭಿಪ್ರಾಯವನ್ನು ಅರ್ಥಮಾಡಿಕೊಂಡು ನಗುತ್ತಾ 'ಸರಿ' ಎಂದು ತಲೆದೂಗಿದ್ದ ಸಿದ್ಧಾರ್ಥ. ವಿಷಯ ಅಂದು ಅಲ್ಲಿಗೆ ಕೈ ಬಿಡಲಾಗಿತ್ತು.

ಕಾಲ ಸಪ್ಪಳವನ್ನು ಕೇಳಿ ತಲೆ ಎತ್ತಿ ನೋಡಿದ ಸಿದ್ಧಾರ್ಥ. ದಂಪತಿಗಳ ಜೋಡಿಯೊಂದು ದೇವಾಲಯದಿಂದ ಹೊರಕ್ಕೆ ಬರುತ್ತಿದೆ. ದೂರದಲ್ಲಿ ಡಾಕ್ಟರ್ ರಂಗಪ್ರಸಾದ್ ಬರುತ್ತಿರುವುದು ಕಾಣಿಸಿತು. ಆ ಊರಿನಲ್ಲಿ ಓದಿದವರು ತೀರಾಕಡಿಮೆ. ಊರಿಗೆ ಬಂದಾಗಲೇ ಸಿದ್ಧಾರ್ಥನಿಗೆ ಡಾಕ್ಟರ್ ಪರಿಚಯವಾಗಿತ್ತು. ತಾನೂ ಮೆಟ್ಟಿಲಿಳಿದು ಕೆಳಕ್ಕೆ ಹೋದ. ಇಬ್ಬರೂ ಜೊತೆಯಲ್ಲಿ ಅಡಿ ಇರಿಸುತ್ತಿದ್ದರು. ಯಾರೂ ಏನೂ ಮಾತನಾಡಲಿಲ್ಲ. ಸ್ವಲ್ಪ ಹೊತ್ತಾದ ನಂತರ ''ಈ ದಿನ ಯಾಕೋ ಒಂದು ಥರಾ ಇದ್ದೀರಲ್ಲಾ?'' ಎಂದ.

''ಏನೂ ಇಲ್ವಲ್ಲಾ!'' ರಂಗಪ್ರಸಾದ್ ಉತ್ತರ.

''ನಿನ್ನೆ ಮೊನ್ನೆ ಕಾಣಿಸಲಿಲ್ಲ''

''ಸಿಟಿಗೆ ಹೋಗಿದ್ದೆ''

ಸಿದ್ಧಾರ್ಥ ಮಾತನಾಡಲಿಲ್ಲ.

''ಮೊನ್ನೆ ರಾತ್ರಿ ಒಂದು ಕೊಲೆ ನಡೆದಿದೆ''

''ಇರಬೇಕು, ನಿನ್ನೆ ಊರಲ್ಲೆಲ್ಲಾ ಪೋಲೀಸರೇ ಇದ್ರಲ್ಲ''

ರಂಗಪ್ರಸಾದ್ ಅದರ ಬಗ್ಗೆ ಅಷ್ಟಾಗಿ ಚಿಂತಿಸದೆ ''ಈ ದಿನ ಬೆಳಿಗ್ಗೆ ಪೋಸ್ಟ್‌ಮಾರ್ಟಮ್ ನಡೆಯಿತು. ಅಲ್ಲಿಂದಲೇ ಬರುತ್ತಿದ್ದೇನೆ. ಈ ದೃಶ್ಯವನ್ನು ನೋಡಿ ಮನಸ್ಸೆಲ್ಲಾ ಕೆಟ್ಟಿದೆ'' ಎಂದ.

''ಏನು ವಿಶೇಷ ಡಾಕ್ಟರ್?''

''ಆ ಹೆಣ್ಣು ತುಂಬು ಗರ್ಭಿಣಿ. ಅದರಲ್ಲಿ ವಿಶೇಷವೇನೂ ಇಲ್ಲ. ಡಾಕ್ಟರಾಗಿ ಆ ರೀತಿಯವನ್ನು ಸಾಕಷ್ಟು ನೋಡಿದ್ದೇನೆ. ಆದರೆ ಆಕೆಯ ಗರ್ಭದಲ್ಲಿದ್ದ ಶಿಶು ಭಯಂಕರವಾಗಿತ್ತು...'' ಹೆಚ್ಚು ವಿವರ ಕೊಡಬಾರದೆಂದು ಅಲ್ಲಿಗೇ ಮಾತು ನಿಲ್ಲಿಸಿದಂತಿತ್ತು.

''ಅದರಲ್ಲೂ ಅಂಥಾ ವಿಚಿತ್ರವೇನು? ನಾನೇನು ಜಲನೆಟಿಕ್ಸ್ ಬಗ್ಗೆ ಕಲ್ತು ..ದವನಲ್ಲ. ಆದರೆ ಡೌನ್‌ಸಿಂಡ್ರೋಮ್ ಮತ್ತು ಕ್ರೋಮೋಜೋಮ್ಸ್‌ನಲ್ಲಿ ಇರುವ ವೈಪರೀತ್ಯಗಳಿಂದ ಇದೂ ಮಾಮೂಲೀ ತಾನೇ?''

''ವೈಪರೀತ್ಯ!'' ಎಂದು ನಗಲು ಪ್ರಯತ್ನಿಸಿದ ಡಾಕ್ಟರ್, ನಗೆಬರಲಿಲ್ಲ. ''ನಾವೂ ಹಾಗೇ ಹೇಳಿಕೊಂಡು ತೃಪ್ತಿಪಡೆಯಬೇಕೆಂದುಕೊಂಡೆವು. ಆದರೆ ಅಷ್ಟುಸುಲಭವಾಗಿ ಕೈಬಿಡುವ ಸಂಗತಿ ಅದಲ್ಲ''

''ಅದೇನಾಯಿತು ಡಾಕ್ಟರ್?''

''ಮನುಷ್ಯ ಸತ್ತ ಸ್ವಲ್ಪ ಕಾಲದ ನಂತರ ರಿಗರ್‌ಮಾರ್ಟಿಸ್ ಪ್ರಾರಂಭಆಗುತ್ತದೆ. ಶರೀರ ತಣ್ಣಗಾಗುತ್ತದೆ. ಉಗುರು ಕಪ್ಪಾಗುತ್ತದೆ. ಈ ಬದಲಾವಣೆಗಳಿಂದಲೇ ಮನುಷ್ಯ ಸತ್ತು ಎಷ್ಟು ಕಾಲವಾಗಿದೆ ಎಂಬುದನ್ನು ಡಾಕ್ಟರ್ ಲೆಕ್ಕಹಾಕುತ್ತಾರೆ. ಮೊನ್ನೆ ರಾತ್ರಿ ಸತ್ತ ಶರೀರವನ್ನು ಈ ದಿನ ಬೆಳಿಗ್ಗೆ ಪೋಸ್ಟ್‌ಮಾರ್ಟಮ್ ಮಾಡಿದ್ದು. ಈ ಮೂವತ್ತಾರು ಗಂಟೆಗಳಲ್ಲಿ ಕಾಲದೊಂದಿಗೆ ಶರೀರವೂ ಬದಲಾವಣೆ ಹೊಂದಬೇಕು. ಹಾಗೇ ಬದಲಾಗಿತ್ತು ಕೂಡ. ಆದರೆ ಒಳಗಿದ್ದ ಮಗು ಮಾತ್ರ ಆಗ ತಾನೇ ಸತ್ತಂತೆ ಬೆಚ್ಚಗಿತ್ತು...''

ಸಿದ್ಧಾರ್ಥ ಡಾಕ್ಟರನ್ನು ದಿಟ್ಟಿಸಿ ನೋಡಿದ. ಆತನ ನೋಟ ಎಲ್ಲೋ ಇತ್ತು. ತನ್ನಲ್ಲಿ ತಾನೇ ಹೇಳಿಕೊಳ್ಳುವಂತೆ ನುಡಿದ ''ಮಗು ಸತ್ತು ಒಂದೆರಡು ಗಂಟೆಗಿಂತಲೂ ಹೆಚ್ಚು ಆಗಿರಲು ಸಾಧ್ಯವಿಲ್ಲ. ಹಾಗೆಂದರೆ ತಾಯಿ ಸತ್ತ ಮೂವತ್ತು ಗಂಟೆಗಳಿಗೂ ಮಿಗಿಲಾಗಿ ಗರ್ಭದಲ್ಲಿ ಶಿಶು ಬದುಕಿತ್ತೇ? ಹೇಗಾದರೂ ಸರಿಯೇ ಭೂಮಿಯಲ್ಲಿ ಬರಬೇಕು ಎಂದು ವಿಶ್ವಪ್ರಯತ್ನ ನಡೆಸುತ್ತಾ ಉಸಿರು ಬಿಗಿಹಿಡಿದೇ ಬದುಕಿತ್ತೇನು?''

''ಸಾಧ್ಯವೇ ಇಲ್ಲ...'' ರಂಗಪ್ರಸಾದ್ ಅವನತ್ತ ನೋಡಿ ಹೇಳಿದ ''ಸಾಧ್ಯವಿಲ್ಲ...ಈಗ ನಾನು ಈ ವಿಷಯವನ್ನು ನಿಜವೆಂದು ಸಾಧಿಸಿದರೂ ಪ್ರಯೋಜನವೇನು? ನಾವು ಕೆಲವು ಗಂಟೆ ಮೊದಲೇ ಆಪರೇಷನ್ ಮಾಡಿದ್ದರೆ ಮಗುವಾದರೂ ಉಳಿಯುತ್ತಿತ್ತು. ಆಗ ವೈಜ್ಞಾನಿಕ ದೃಷ್ಟಿಯಿಂದ ಎಲ್ಲರ ಕಣ್ಣು ಕೃಷ್ಣಾಪುರದ ಮೇಲೆ ಬೀಳುತ್ತಿತ್ತು!''

ಸಿದ್ಧಾರ್ಥ ನಕ್ಕು ''ಏನೋ ತಪ್ಪು ನಡೆದಿರಬೇಕು'' ಎಂದ.

ರಂಗಪ್ರಸಾದ್ ಈ ಮಾತು ಗಮನಿಸಿದವನಂತೆ ತನ್ನ ಯೋಚನೆಯಲ್ಲಿ ಮುಂದುವರಿದ ''ಹೌದು, ಎಲ್ಲೋ ನಡೆದಿದೆ. ಇಲ್ಲದಿದ್ದರೆ ಐದುಸಾವಿರದಲ್ಲಿ ಒಮ್ಮೆ ಬರಬೇಕಾದ ಈ ಜೆನೆಟಿಕ್ಸ್ ಡಿಸಾರ್ಡರ್ ಕೃಷ್ಣಾಪುರದಂತಹ ಚಿಕ್ಕ ಗ್ರಾಮದಲ್ಲಿ ಎರಡು ತಿಂಗಳಲ್ಲಿ ಎರಡು ಕೇಸೇ!''

ಕೋಡ್ ಡಿಫರೆನ್ಸಸ್, ಕನ್‌ಜೇಟಲ್ ಮಾಲ್‌ಫಾರ್ಮೇಷನ್ಸ್, ಡೌನ್ ಸಿಂಡ್ರೋಮ್ ಇವುಗಳ ಬಗ್ಗೆ ಆತ ಯೋಚಿಸುತ್ತಿರಲಿಲ್ಲ. ಸಣ್ಣ ಸೂಜಿಯಂತೆ ಧಾರೆ

ಧಾರೆಯಾಗಿ ಸುರಿಯುತ್ತಿದ್ದ ಮಳೆಯಲ್ಲಿ ವಿಚಾರಿಸುವವರೇ ಇಲ್ಲದೆ ಐದಾರು ಗಂಟೆಗಳ ಕಾಲ ಬಿದ್ದಿದ್ದ ಶವದ ಗರ್ಭದಲ್ಲಿ ಶಿಶು ಬದುಕಿತ್ತು ಎಂದರೆ ಎಂತಹ ವಿಚಿತ್ರ!

ಏನೋ ಹೇಳಲು ಬಾಯ್ತೆರೆಯುತ್ತಿದ್ದಂತೆ ಹಿಂದಿನಿಂದ ಧೂಳೆಬ್ಬಿಸುತ್ತಾ ಕಾರೊಂದು ಬಂದು ನಿಂತಿತು. ತಲೆಯನ್ನು ಕಾರಿನ ಕಿಟಕಿಯಿಂದ ಹೊರಹಾಕಿ 'ಹಲೋ' ಎಂದ ರಾಕೇಶ್.

ಸಿದ್ಧಾರ್ಥ ''ಇದೇನು! ನೀವು ಯಾವಾಗ ಬಂದಿರಿ?'' ಎಂದು ಕೇಳಿದ.

''ಈಗ ತಾನೇ ಬಂದೆ''

''ಮನೆಗೆ ಬರದೆ ಹೋಗುತ್ತಿದ್ದೀರಲ್ಲಾ!''

''ಲಗ್ನಪತ್ರಿಕೆ ಬರೆಸಿ ತರಲು ಮಾವಯ್ಯನವರು ಹೇಳಿ ಕಳುಹಿಸಿದ್ದರು. ನಿಮ್ಮೂರಿನ ಜ್ಯೋತಿಷ್ಯರ ಮೇಲೆ ಅವರಿಗೆ ತುಂಬಾ ನಂಬಿಕೆ ಮೂಡಿದೆ'' ಎನ್ನುತ್ತಾ ರಾಕೇಶ್ ನಕ್ಕ.

''ಎಲ್ಲೆಲ್ಲಿಂದಲೋ ಬಂದು ಮುಹೂರ್ತ ನಿಶ್ಚಯಿಸಿಕೊಂಡು ಹೋಗುತ್ತಾರೆ''

''ಮುಹೂರ್ತ ಎಂದೋ ನಿಶ್ಚಯಿಸಿದ್ದಾರೆ. ಈಗ ಅದನ್ನು ನಿಖರಪಡಿಸಿಕೊಳ್ಳಲು ಬರೆಸಿಕೊಂಡು ಬರಲು ಹೇಳಿದ್ದರು. ಇನ್ವಿಟೇಷನ್‌ನಲ್ಲಿ ಹಾಕಬೇಕಲ್ಲವೇ?'' ಎಂದು ಹೇಳಿ 'ಬರುತ್ತೇನೆ' ಎಂದ.

''ಒಂದು ವಿಷಯ'' ಎಂದು ಡಾಕ್ಟರ್ ಕಡೆ ಇತರುಗಿ ''ಕೇದಾರಗೌರಿ ಕನಸಿನ್ ರಾಕೇಶ್'' ಎಂದು ಪರಿಚಯ ಮಾಡಿಸಿದ.

''ಗೊತ್ತು ಇವರೂ 'ರಾವೇ' ಪ್ರೋಗ್ರಾಂಗೆ ಬಂದಿದ್ದರಲ್ಲಾ!''

ರಾಕ್ಲೇಶ್ ತಲೆಯಾಡಿಸಿ ಕರಚಾಲನೆ ಮಾಡುತ್ತಾ ''ಹೊತ್ತಾಗುತ್ತೆ ಬರ್‍ತೀನಿ'' ಎಂದು ಹೇಳಿ ಕಾರನ್ನು ಸ್ಟಾರ್ಟ್ ಮಾಡಿದ.

ಅವನು ಹೋದ ದಿಕ್ಕನ್ನೇ ನೋಡುತ್ತಾ, ''ಮದುವೆಯ ಹೊಣೆಗಾರಿಕೆಯನ್ನೆಲ್ಲಾ ತಾನೇ ಹೊತ್ತಂತಿದೆ!'' ಎಂದ ಡಾಕ್ಟರ್ ರಂಗಪ್ರಸಾದ್.

''ಹೌದು''

''ಒಳ್ಳೆಯ ಹುಡುಗ''

ಸಿದ್ಧಾರ್ಥ ಮೌನವಾಗಿದ್ದ.

ಕಾರು ಆ ವೇಳೆಗೆ ಊರಿನ ಸರಹದ್ದನ್ನು ದಾಟಿ ಬಂದಿತ್ತು. ನಿರ್ಜನವಾಗಿದ್ದ ಅಲ್ಲಿ ಕಾರನ್ನು ನಿಲ್ಲಿಸಿ ರಾಕೇಶ್ ಲಗ್ನಪತ್ರಿಕೆ ತೆಗೆದ. ಜೇಬಿನಿಂದ ಕರಿಪೆನ್ ತೆಗೆದು ಇತರರಾರಿಗೂ ಅನುಮಾನ ಬರದಂತೆ ಆರು ಗಂಟೆ ಹತ್ತು ನಿಮಿಷವೆಂದಿದ್ದ ಮುಹೂರ್ತವನ್ನು ಎಂಟು ಘಂಟೆ ಹತ್ತು ನಿಮಿಷ ಎಂದು ಬದಲಿಸಿದ. ಉಸ್ನೋಕ್‌ಗೆ ಬೇಕಾಗಿದ್ದ ದುಷ್ಟ ಮುಹೂರ್ತ ಬರಲು ಎರಡು ಗಂಟೆಸಾಕಾಗಿತ್ತು.

ಅಲ್ಲಿಂದ ನೇರವಾಗಿ ರಾಕೇಶ್ ಉಸ್ಲೋಕ್ ಕಾರ್ಯಾಲಯಕ್ಕೆ ಹೋದ. ಮೊದಲು ರೆಡ್‌ಸ್ಕೆಲಿಟನ್ನನನ್ನು ಕಂಡು ಬದಲಿಸಿದ ಲಗ್ನಪತ್ರಿಕೆಯನ್ನು ತೋರಿಸಿದ.

ಕೆಲದಿನಗಳಿಂದ ಉಸ್ಲೋಕ್ ಸದಸ್ಯರೆಲ್ಲಾ ರಾಕೇಶ್ ಎಂದರೆ ಗೌರವತೋರಿಸುತ್ತಿದ್ದರು. ಅಷ್ಟಾವಕ್ರನ ಜನ್ಮದ ಬಗ್ಗೆ ಅಶರೀರವಾಣಿ ಹೇಳಿದ್ದರೂ ಜನ್ಮವಾಗಲು ಅವಶ್ಯಕವಾದ ಪರಿಸ್ಥಿತಿಗಳನ್ನು ಕಲ್ಪಿಸುತ್ತಿರುವುದು ರಾಕೇಶ್. ತಾನು ಬಯಸಿದ ಗರ್ಭದಲ್ಲಿಯೇ ಅಷ್ಟಾವಕ್ರವನ್ನು ನಿಕ್ಷಿಪ್ತಗೊಳಿಸುವ ಬಯಕೆಯನ್ನು ಅವನು ಹೊರಗಿಡದಿದ್ದಲ್ಲಿ ಅವರು ಬಿಸ್ತಾಕ್ಕೆ ಹೋಗುವ ಪ್ರಮೇಯವೇ ಇಲ್ಲದೆ, ಅಷ್ಟಾವಕ್ರನ ಆಗಮನಕ್ಕೆ ಪೂರ್ವ ಸಿದ್ಧತೆಗಳೂ ತಿಳಿಯದೆ ಹೋಗುತ್ತಿತ್ತು. ಅದನ್ನು ತಿಳೀದುಕೊಳ್ಳುವ ಅವಕಾಶವನ್ನು ಕುಟ್ಟಿ ಸೆಎತಾನ್ ರಾಕೇಶ್ ಮೂಲಕ ಸೃಷ್ಟಿಸಿದನೆಂದೇ ರಾಕೇಶನ ಬಗ್ಗೆ ಅವರೆಲ್ಲರಿಗೂ ಅಷ್ಟೊಂದು ವಿಶೇಷ ವಿಶ್ವಾಸ.

ರಾಕೇಶನೂ ಈ ವಿಷಯವನ್ನು ಗಮನಿಸದೆ ಇರಲಿಲ್ಲ. ಅವನ ಯೋಚನೆ ಅಲ್ಲಿಗೇ ನಿಲ್ಲಲಿಲ್ಲ. ಕೇದಾರಗೌರಿ ಸಿದ್ಧಾರ್ಥರು ಅಷ್ಟಾವಕ್ರನು ಹುಟ್ಟಿದ ದಿನವೇ ಸಾಯುತ್ತಾರೆ. ಅಷ್ಟಾವಕ್ರನನ್ನು ತಾನೇ ಬೆಳಲಸಿ ದೊಡ್ಡವನನ್ನಾಗಿ ಮಾಡಬೇಕು. ಅಷ್ಟರಲ್ಲಿ ಮಹಾದ್ರಷ್ಟನನ್ನು ಮುಗಿಸುವುದು ಸಾಧ್ಯವಾದರೆ...ತಾನೇ ಚಕ್ರೇಶನಾಗುತ್ತಾನೆ. ಅಷ್ಟಾವಕ್ರನ ಪ್ರಥಮ ಅನುಚರನೇ ಈ ಪ್ರಪಂಚಾಧೀಶನಾಗುತ್ತಾನಕ್ಷ. ಅದೇ ಅವನ ಬಾಳ ಗುರಿ...ಆದರೆ ಮಹಾದ್ರಸ್ಟ ಎದುರಿದ್ದವರ ಅಂತರಂಗದ ಮಾತನ್ನೂ ಅರಿತುಕೊಳ್ಳಬಲ್ಲ ಎಂಬುದನ್ನು ತಿಳಿದುಕೊಂಡ ನಂತರ ರಾಕೇಶ ಎಚ್ಚರಿಕೆ ವಹಿಸಿದ. ಆ ಯೋಚನೆಗಳಾವುವೂ ಮಾಡುತ್ತಿರಲಿಲ್ಲ.

ರಾಕೇಶನಿಂದ ಲಗ್ನಪತ್ರಿಕೆಯನ್ನು ತೆಗೆದುಕೊಂಡು ಪರಿಶೀಲಿಸಿದ ರೆಡ್‌ಸ್ಕೆಲಿಟನ್ ಉಸ್ಲೋಕ್ ಸಂಸ್ಥೆಗೆ ಸಂಬಂಧಿಸಿದ ಎಲ್ಲಾ ಆಡಳಿತ ನೋಡಿಕೊಳ್ಳುತ್ತಿದ್ದ ಹಿರಿಯ. ಎಲ್ಲಾ ಲೆಕ್ಕಗಳನ್ನೂ ಆತನೇ ಇರಿಸುತ್ತಿದ್ದ. ಮಹಾದ್ರಷ್ಟಸೂಚನೆಗಳನ್ನು ನೀಡುತ್ತಿದ್ದದ್ದೂ ಆತನ ಮುಖಾಂತರವೇ. ಬಿಸ್ತಾದಿಂದ ತಂದಿದ್ದ ತಾಳೇಗರಿಗಳನ್ನು ನಿಡಿ ಅವನ್ನು ಅರ್ಥೈಸಿ ಅನುವಾದಿಸಿ ಕೊಟ್ಟವನೂ ಆತನೇ. ಸುಮಾರು ಎಂಬತ್ತು ವರ್ಷಗಳ ಆತ ಲಗ್ನಪತ್ರಿಕೆಯನ್ನು ಪರೀಕ್ಷೆಯಿಂದ ನೋಡಿ ಸಂತೃಪ್ತಿಯಿಂದ ತಲೆದೂಗಿದ.

''ಆದರೆ ಕೃಷ್ಣಾಪುರದಿಂದ ಆ ಜ್ಯೋತಿಷ್ಕನೇ ಪೌರೋಹಿತ್ಯಕ್ಕೆ ಬರುತ್ತಾನೆ. ನಾನು ಮುಹೂರ್ತ ಬದಲಿಸಿದ ವಿಷಯ ಆತನಿಗೆ ಗೊತ್ತಾಗುವುದಿಲ್ಲವೇ?'' ಎಂದ ರಾಕೇಶ್.

''ಈ ಸಂಗತಿ ಮಹಾದ್ರಷ್ಟರೊಂದಿಗೆ ಹೇಳಲಿಲ್ಲವೆ?''

''ಇಲ್ಲ''

ಆ ವೃದ್ಧ ಒಳಕ್ಕೆ ಹೋದ. ರಾಕೇಶ್ ಒಬ್ಬನೇ ಅಲ್ಲಿ ಉಳಿದ. ಅವನಿಗೆ ಒಂದು ತಾಳೆಗರಿಯು ಕಣ್ಣಿಗೆಬಿತ್ತು. ಬಿಸ್ತಾದಿಂದ ತಂದ ಗರಿ ಅದು. ಅದರಲ್ಲಿ ತೀರಾ ಸಣ್ಣ

ಅಕ್ಷರಗಳು ಬೇರೆಯ ತಾಳೆಗರಿಗಳಿಗೂ ಅದಕ್ಕೂ ಅಂತರವಿತ್ತು.

ಅದರಲ್ಲಿದ್ದದ್ದನ್ನು ಹಾಗೇ ಪ್ರತಿ ಮಾಡಿಕೊಂಡು ಜೇಬಿನಲ್ಲಿರಿಸಿಕೊಂಡ. ಅದೇ ಸಮಯಕ್ಕೆ ಸರಿಯಾಗಿ ವೃದ್ಧ ಒಳಗಿನಿಂದ ಬಂದ.

''ಕೃಷ್ಣಾಪುರದ ಪುರೋಹಿತ ಮದುವೆಗೆ ಬರುವುದಿಲ್ಲ. ಹಾಗೆ ಉಸ್ಲೋಕ್ ವ್ಯವಸ್ಥೆ ಮಾಡುತ್ತದೆ. ಈ ಬಗ್ಗೆ ಮಹಾದ್ರಷ್ಟರು ಮೊದಲೇ ಯೋಚಿಸಿದ್ದಾರಂತೆ...''

ರಾಕೇಶ್ ಎದ್ದು ನಿಂತು ''ಇನ್ನು ನಾನು ನಿರ್ವಹಿಸಬೇಕಾದ ಕೆಲಸಗಳೇನಾದರೂ ಇವೆಯೇ?'' ಎಂದು ಕೇಳಿದ.

ವೃದ್ಧನ ಮುಖದಲ್ಲಿ ಭಯದ ರೇಖೆ ಕಾಣಿಸಿಕೊಂಡಿತು. ''ಅಷ್ಟಾವಕ್ರನ ಜನನಕ್ಕೆ ಮೊದಲು ಐದು ಕ್ರಿಯೆಗಳು ನಡೆಯಬೇಕೆಂದು ಮಾತ್ರ ತಿಳಿದಿದೆ'' ಎನ್ನುತ್ತಾ ಆ ತಾಳೆಗರಿಯನ್ನು ತೋರಿಸುತ್ತಾ ''ಅವನ್ನು ಇದರಲ್ಲಿ ವಿವರಿಸಲಾಗಿದೆ. ಇದನ್ನು ಅರ್ಥವಾಗುವಂತೆ ಅನುವಾದಿಸುವ ಕೆಲಸ ನನಗೆ ವಹಿಸಿದ್ದಾರೆ. ಹತ್ತು ದಿನಗಳಿಂದ ಶ್ರಮವಹಿಸಿದ್ದರ ಫಲವಾಗಿ ಮೊದಲ ಎರಡು ಕ್ರಿಯೆಗಳು ಮಾತ್ರವೇ ತಿಳಿಯಲು ಸಾಧ್ಯವಾಯಿತು. ಈ ಭಾಷೆ ತೀರಾ ಕಷ್ಟವಾಗಿದೆ. ಸರಿಯಾಗಿ ಹೇಳಬೇಕೆಂದರೆ ಇದು ಭಾಷೆಯೇ ಅಲ್ಲ. ಪ್ರಾಚೀನ ಕಾಲದಲ್ಲಿ ಮಂತ್ರಗಾರರು ಸಂದೇಶಗಳನ್ನು ಕಳುಹಿಸಲು ಪ್ರಯೋಗಿಸುತ್ತಿದ್ದ ರಹಸ್ಯ ಸಂಕೇತ ಭಾಷೆ. ಅದು ಅವರೊಂದಿಗೇ ಸೇರಿಹೋಗಿದೆ. ಇದನ್ನು ಬೇಗಸಾಮಾನ್ಯ ಭಾಷೆಗೆ ಡಿಕೋಡ್ ಮಾಡದಿದ್ದರೆ...'' ಎನ್ನುತ್ತಾ ಮಾತು ನಿಲ್ಲಿಸಿದ.

ಮುಂದಿನ ಮಾತು ಹೇಳಬೇಕಾದ ಅವಶ್ಯಕತೆಯೇ ಇರಲಿಲ್ಲ. ಉಸ್ಲೋಕ್‌ನಲ್ಲಿ ವಹಿಸಿದ ಕೆಲಸವನ್ನು ನಿರ್ಧರಿಸಿದ ಸಮಯಕ್ಕೆ ಸರಿಯಾಗಿ ನಿರ್ವಹಿಸದಿದ್ದರೆ ಅವರು ಶೀಘ್ರವಾಗಿ ಇತಿಹಾಸಕ್ಕೆ ಸೇರುತ್ತಾರೆ.

''ನೀವು ತಿಳಿದುಕೊಂಡ ಕ್ರಿಯೆಗಳೇನು?''

''ಮೊದಲಿನದು ಈಗ ಮಾಡಿರುವುದೇ. ಮುಹೂರ್ತವು ನೀಚ ಗಣಾಧಿಪತಿಯ ಉಚ್ಚದಲ್ಲಿರುವಂತಹ ಅಮಂಗಳ ಲಗ್ನಕ್ಕೆ ಬದಲಿಸುವುದು. ಎರಡನೆಯದು ಮಂಗಳ ಸೂತ್ರಾಧಾರಣ ಕಾಲದಲ್ಲಿ ಅರಿಸಿನದೊಂದಿಗೆ ರಕ್ತವನ್ನು ಮೆತ್ತುವುದು ಇವೆರಡೂ ತಿಳಿದಾಯಿತು. ಇನ್ನು ಉಳಿದವು ಗೊತ್ತಾಗಬೇಕು. ಅದಕ್ಕಾಗಿ ಪ್ರಯತ್ನ''

''ಊದುವೆಗೆ ಇನ್ನೂ ಬೇಕಾದಷ್ಟು ಕಾಲವಿದೆ. ಅಷ್ಟರಲ್ಲಿ ಉಳಿದವೂ ಗೊತ್ತಾಗುತ್ತದೆ. ಅದಕ್ಕೆ ಗಾಬರಿಯಾಕೆ? ನಾನು ಬರ್ತೀನಿ''

''ಒಳ್ಳೆಯದು''

ಇಂಟರ್ ನ್ಯಾಷನಲ್ ಇನ್‌ಸ್ಟಿಟ್ಯೂಟ್ ಆಫ್ ಕಂಪ್ಯೂಟರ್ ಟೆಕ್ನಾಲಜಿಯ ಐದನೆಯ ಅಂತಸ್ತಿನಲ್ಲಿ ಒಬ್ಬ ಎಂಜಿನಿಯರ್ ಮುಂದೆ ರಾಕೇಶ್ ಕುಳಿತಿದ್ದಾನೆ.

ಜೇಬಿನಿಂದ ಒಂದು ಕಾಗದವನ್ನು ತೆಗೆದು ಅವನಿಗೆ ಕೊಡುತ್ತಾ ''ಇದನ್ನು ಡಿಕೋಡ್ ಮಾಡಿಕೊಡಬೇಕು'' ಎಂದು ಹೇಳಿದ.

''ಯಾವ ಭಾಷೆ ಇದು?'' ಎಂದು ಕೇಳಿದ.

''ಗೊತ್ತಿಲ್ಲ''

ಎಂಜಿನಿಯರ್ ತಲೆದೂಗುತ್ತಾ, ''ಹದಿನೈದು ಸಾವಿರಗಾಗುತ್ತೆ'' ಎಂದ.

''ಐದು ವಾಕ್ಯಗಳನ್ನು ಡಿಕೋಡ್ ಮಾಡಲು ಹದಿನೈದು ಸಾವಿರವೇ?''

''ತುಂಬಾ ಕಾಂಬಿನೇಷನ್ಸ್ ಉಪಯೋಗಿಸಬೇಕು. ಸಾಧಾರಣ ಕಂಪ್ಯೂಟರ್ ಕೂಡ ಆಗದು. ಫಿಫ್ತ್ ಜನರೇಷನ್ ಕಂಪ್ಯೂಟರ್ ಬಳಸಬೇಕು. ಅಷ್ಟು ಕೊಡದಿದ್ದರೆ ಕೆಲಸ ಸಾಧ್ಯವಾಗದು. ಈ ಭಾಷೆ ಬೇಗ ಬಿಡಿಸಲು ಸಾಧ್ಯ ಎನಿಸುವುದಿಲ್ಲ...''

ರಾಕೇಶ್ ತಲೆದೂಗುತ್ತಾ, ''ಯಾವಾಗ ಕೊಡ್ತೀರಿ?'' ಎಂದು ಕೇಳಿದ.

''ನಾಳೆ ಇದೇ ವೇಳೆಗೆ''

ರಾಕೇಶ್ ಒಪ್ಪಿಕೊಂಡು ಹೊರಟುಹೋದ.

ಅದೇ ಸಂಜೆಗೆ ಕೇದಾರಗೌರಿಯನ್ನು ''ನನಗೆ ಸ್ವಲ್ಪ ಹಣ ಬೇಕಾಗಿತ್ತು'' ಎಂದು ಕೇಳಿದ.

''ಎಷ್ಟು?''

''ಹದಿನೈಧು ಸಾವಿರ''

ಒಳಕ್ಕೆ ಹೋಗಿ ತಂದುಕೊಟ್ಟಳು.

''ಇದೇನು! ಏತಕ್ಕೆ ಎಂದೂ ಕೇಳದೆ ಹಣ ಕೊಡ್ತಿದೀಯಲ್ಲಾ!''

''ಯಾಕೆ ಎಂದು ಕೇಳಿದೆ ಅಂದ್ಕೊಳ್ಳಿ. 'ಹೇಳದಿದ್ರೆ ಕೊಡೋಲ್ವೆ?' ಎಂದು ನೀವು ಕೇಳಿದರೆ ನಾನೇನು ಹೇಳಲಿ?'' ಎನ್ನುತ್ತಾ ನಕ್ಕಳು ಗೌರಿ.

ರಾಕೇಶನೂ ನಗುತ್ತಾ ಹಣವನ್ನು ಜೇಬಿನಲ್ಲಿರಿಸಿಕೊಂಡು ಹೊರಕ್ಕೆ ನಡೆದ.

ಮರುದಿನ ಬೆಳಿಗ್ಗೆ ಕಂಪ್ಯೂಟರ್ ಕೇಂದ್ರದ ಎಂಜಿನಿಯರನನ್ನು ಭೇಟಿಯಾದ. ಹಣವನ್ನು ಕೊಡುತ್ತಾ ''ಆಯಿತೇ?'' ಎಂದು ಕೇಳಿದ.

''ಆಗಿದೆ'' ಎಂದು ಕೇಳಿದಾಗ ತೃಪ್ತಿಯಿಂದ ಕುಳಿತ.

''ತುಂಬಾ ತೊಂದರೆಯಾಯಿತು. ಯಾರಿಗೂ ಗೊತ್ತಾಗದಂತೆ ಮಾಡಬೇಕು. ರಿಪೀಟ್ ವರ್ಡ್ಸ್ ಇಲ್ಲವೇ ಇಲ್ಲ. ಆದ್ದರಿಂದ ಒಂದು ಗಂಟೆ ಎಂದು ಕೊಂಡಿದ್ದು ಮೂರು ಗಂಟೆ ತೆಗೆದುಕೊಂಡಿದೆ!'' ಎಂದ ಹಣವನ್ನು ಜೇಬಿನಲ್ಲಿರಿಸಿಕೊಳ್ಳುತ್ತಾ.

''ಅಂತೂ ಆಯಿತಲ್ಲಾ'' ಎನ್ನುತ್ತಾ ಡಿಕೋಡೆಡ್ ಕಾಗದವನ್ನು ತೆಗೆದುಕೊಳ್ಳುತ್ತಾ ''ಗುಡ್ ಬೈ'' ಎಂದ.

★★★

''ನೀವು ಹೆಚ್ಚು ಕಷ್ಟಪಡುವ ಅವಶ್ಯಕತೆ ಇಲ್ಲ. ಆ ಸಂಕೇತಗಳನ್ನು ಓದುವ ಕ್ರಮ ಗೊತ್ತಾಗಿದೆ''

ಆ ವೃದ್ಧ ಎಲೆ ಎತ್ತಿ ಆಶ್ಚರ್ಯದಿಂದ ''ಹೇಗೆ?'' ಎಂದು ಕೇಳಿದ.

''ಹೇಗೋ ನನಗೂ ಗೊತ್ತಿಲ್ಲ. ರಾತ್ರಿ ಯಾರೋ ಏನೋ ಹೇಳಿದಂತಾಯಿತು. ಅದು ನಿಜವೋ ನನ್ನ ಭ್ರಮೆಯೋ ಹೇಳಲಾರೆ. ಆ ಪತ್ರ ಎಲ್ಲಿದೆ? ಎಂದ.

ವೃದ್ಧ ಆ ಪತ್ರವನ್ನು ತೆಗೆದುಕೊಟ್ಟ.

ರಾಕೇಶ್ ಮೂರನೆಯ ಅಂಶವನ್ನು ತುಂಬಾ ಹೊತ್ತು ನೋಡುತ್ತಾ ಕುಳಿತಿದ್ದು ಒಂದು ಕಾಗದದಲ್ಲಿ ಬೇಗ ಬರೆದ

ಅಮಾವಾಸ್ಯೆ ಅರ್ಧರಾತ್ರಿ.

ದಂಪತಿಗಳ ಪ್ರಥಮ ಸಮಾಗಮ ಬಯಲಿನಲ್ಲಿ ಆಕಾಶದ ಅಡಿಯಲ್ಲಿ ನಡೆಯಬೇಕು. ಇದು ಅತಿ ಮುಖ್ಯ.

ವೃದ್ಧ ಆ ಕಾಗದವನ್ನು ತೆಗೆದುಕೊಂಡು ಮೊದಲ ಎರಡು ಅಂಶಗಳನ್ನು ತಾನು ಯಾವ ರೀತಿ ಓದಿದನೋ ಅದೇ ಪದ್ಧತಿಯಲ್ಲಿ ರಾಕೇಶ್ ಬರೆದುಕೊಟ್ಟದ್ದನ್ನು ಅನ್ವಯಿಸಿದ. ಅವನ ಕಣ್ಣಲ್ಲಿ ಕಾಂತಿ ಕಾಣಿಸಿತು. ರಾಕೇಶನನ್ನು ಅಪ್ಪಿಕೊಂಡು ''ನನ್ನನ್ನು ಕಾಪಾಡಿದೆ'' ಎಂದ.

ಆತನ ಅಪ್ಪುಗೆಯಿಂದ ಬಿಡಿಸಿಕೊಳ್ಳುತ್ತಿರುವಾಗ ಆ ತಾಳೆಗರಿಯಮೇಲೆ ಮಸಿಯ ಪಕ್ಕದಲ್ಲಿದ್ದ ಸೀಸೆ ಚೆಲ್ಲಿತು. 'ಅರೆರೆ' ಎನ್ನುತ್ತಿರುವಂತೆಯೇ ಆ ಅಕ್ಷರಗಳು ಮಸಿಯಲ್ಲಿ ಬಲರೆತು ತಾಳೆಗರಿಯಲ್ಲಿದ್ದುದೇನೂ ಕಾಣದಾಯಿತು.

ವೃದ್ಧ ಗಾಬರಿಗೊಂಡ.

''ಚಿಂತಿಸಬೇಡಿ ಐದು ಕ್ರಿಯೆಗಳೂ ಗೊತ್ತಾಗಿವೆಯಲ್ಲ! ಅದರ ಬಗ್ಗೆ ಗಾಬರಿಯ ಅವಶ-ಯಕತೆ ಇಲ್ಲ'' ಎನ್ನುತ್ತಾ ಉಳಿದ ಕ್ರಿಯೆಗಳನ್ನೂ ಹೇಳಿದ. ''ಇವನ್ನು ಮಹಾದ್ರಷ್ಟರಿಗೆ ನೀವೇ ಬಿಡಿಸಿದಂತೆ ಹೇಳಿ. ಮತ್ತೆ ಅನವಶ್ಯಕವಾಗಿ ನನ್ನ ಹೆಸರೇಕೆ?''

''ಹಾಗೇ ಆಗಲಿ''

ರಾಕೇಶ್ ಅಲ್ಲಿಂದ ಹೇರಬಂದ. ಆ ಪತ್ರವನ್ನು ತಾನೇ ಡಿಕೋಡ್ ಮಾಡಿಸಿದ್ದು ಒಳ್ಳೆಯದೇ ಆಯಿತು. ಅನ್ಯಥಾ ಆ ಸಂಗತಿಯೇ ತನಗೆ ತಿಳಿಯುತ್ತಿರಲಿಲ್ಲ. ಅಂತಿಮ ವಾಕ್ಯವು ಅವನನ್ನು ಆನಂದ ಸಾಗರದಲ್ಲಿ ತೇಲಾಡುವಂತೆ ಮಾಡಿತ್ತು.

''ಅಷ್ಟಾವಕ್ರನ ಜನ್ಮಕ್ಕೆ ಕಾರಣವಾಗುವಂತಹ ಈ ಐದು ಕ್ರಿಯೆಗಳನ್ನು ಯಾರು ಬಳಿಯಲ್ಲಿದ್ದು ನಿರ್ವಹಸುತ್ತಾರೋ ಅವರೇ ಅಷ್ಟಾವಕ್ರನ ಬಲಭುಜವಾಗಿ ಸರ್ವಾಧಿಕಾರಿಯಾಗುತ್ತಾರೆ...''

ಆದ್ದರಿಂದ ಆ ಪಟ್ಟ ತನ್ನದೇ. ಮಹಾದ್ರಷ್ಟನಿಗೆ ಇದು ಸಲ್ಲದು. ಮೊದಲಿನಿಂದ

ಸಂಯೋಗವೆಂಬಂತೆ ಎಲ್ಲಾ ತನಗೇ ಅವಕಾಶ ದೊರೆಯುತ್ತಿದೆ. ಮೊದಲ ಉಂಗುರ ತಾನೇ ತೊಡಿಸಿದ್ದು. ಮುಹೂರ್ತ ತಾನೇ ಬದಲಿಸಿದ್ದು. ರಕ್ತ ಸ್ಪರ್ಶವನ್ನು ತಾನೇ ಮಾಡುತ್ತಾನೆ. ಅವರ ಪ್ರಥಮ ರಾತ್ರಿಯ ವ್ಯವಸ್ಥೆತಾನೇ ಮಾಡುತ್ತಾನೆ. ಎಲ್ಲವೂ ತನ್ನದೇ!

ಆದ್ದರಿಂದ ಕೊನೆಯ ವಾಕ್ಯ ಬೇರಾರಿಗೂ ತಿಳಿಯಲೇಬಾರದು. ಆದ್ದರಿಂದಲೇ ಬೇಕಾಗಿ ಕೈ ಸೋಂಕಿಸಿ ಮಸಿ ಬೀಳುವಂತೆ ಮಾಡಿ ಅದನ್ನು ಶಿಥಿಲಗೊಳಿಸಿದ್ದು.

ರಾಕೇಶ ಮಹಾದ್ರಷ್ಟನಿಗಿಂತಲೂ ಕ್ರೂರಿ. ಮನುಷ್ಯರ ಮಧೆ+ಯ ಪರಸ್ಪರ ಇರಬೇಕಾಗಿದ್ದ ಸಾಮಾನ್ಯ ಬಾಂಧವ್ಯವನ್ನೂ ಗಣಿಸದೆಯೇ ಕೇವಲ ಸ್ವ-ಕಾಮನೆಯನ್ನೇ ಬೃಹತ್ತಾಗಿ ನೆಚ್ಚಿಕೊಂಡು ಶಾರೀರಿಕ ತೀಟೆಗಳನ್ನು ತೀರಿಸಿಕೊಳ್ಳುತ್ತಿದ್ದ. ಚಿತ್ತಸ್ವಾಸ್ಥ್ಯ ಕಳೆದುಕೊಂಡಿದ್ದವನು. ಪ್ರಪಂಚದ ಎಲ್ಲಾ ಸದ್ಭಾವನೆಗಳೂ ಕಪಟವೆಂದು ಅಲ್ಲಗೆಳೆವ ದೋಷ ಭೂಯಿಷ್ಠ ದೃಷ್ಟಿ ಹೊಂದಿರುವ ಈ ಸಿನಿಕ, ತನ್ನ ಸ್ವಾರ್ಥದ ಜ್ವಾಲೆಗೆ ಸುಖ ಸಂಸಾರವೊಂದನ್ನು ಆಹುತಿಯನ್ನಾಗಿ ಅರ್ಪಿಸಲು ಸನ್ನದ್ಧನಾಗುತ್ತಿರುವ ರಾಕ್ಷಸ. ತನ್ನ ಅಂತರಂಗದಲ್ಲಿ ಪ್ರಜ್ವಲಿಸುತ್ತಿರು ಕ್ರೌರ್ಯ, ಕಾಮ ವಿಕಾರಕ್ಕೆ ನಗುವಿನ ತೆರೆಹಾಕಿ, ತಾನೇ ಅಭೌತ ಶಕ್ತಿಯ ಪ್ರಬಾವವನ್ನು ಆಮಂತ್ರಿಸುವ, ಆರೋಪಿಸಿಕೊಂಡು ಎಂಥಾ ನೈಚ್ಯಸ್ಥರವನ್ನಾದರೂ ಸುನಾಯಾಸವಾಗಿ ಸೇರಿ ಎದುರಿನವರನ್ನು ನಿಬ್ಬೆರಗಾಗಿ ಸುತ್ತಿದ್ದ ದುಷ್ಟ.

## 10

ಕಲ್ಯಾಣ ಮಂಟಪ ಶೋಭಾಯಮಾನವಾಗಿ ಜಗಮಗಿಸುತ್ತಿದೆ.

ರೇಷ್ಮೆಯ ಸೀರೆಯನ್ನುಟ್ಟ ಕೇದಾರಗೌರಿ ಆ ಸೀರೆಗೇ ಅಲಂಕಾರವನ್ನು ಆಪಾದಿಸಿದ್ದಳು. ಅವಳ ಕೆನ್ನೆಗಳ ಮೇಲಾಡುತ್ತಿದ್ದ ಬೆಳಕಿನ ಕಿರಣಗಳು ಅವಳ ಕೆನ್ನೆಗಳ ನೈರ್ಮಲ್ಯವನ್ನು ತನ್ನಲ್ಲಿ ಸೇರಿಸಿಕೊಂಡು ಹೆಚ್ಚು ಕಾಂತಿಚೆಲ್ಲುತ್ತಿದ್ದವು.

ಆಕೆ ತಲೆ ತಗ್ಗಿಸಿಕೊಂಡು ಕುಳಿತಿದ್ದಳು.

ಬಹು ದಿನಗಳ ನಂತರ ಅವಳ ಮನಸ್ಸಿನಲ್ಲಿ ವಿಷಾದದ ಮೋಡ ಸ್ವಲ್ಪವಾಗಿ ಸುಳಿದಾಡುತ್ತಿತ್ತು. ಅಮ್ಮ ಅಣ್ಣ ಇಬ್ಬರೂ ಇಲ್ಲ. ಒಬ್ಬರು ಈ ಲೋಕದಿಂದಲೇ ಅಣ್ಣಯ್ಯನಾದರೂ ಈ ವಿಷಯವನ್ನು ಅರಿತು ಎಲ್ಲಿಂದಲಾದರು ಕೊನೆಯ ಘಳಿಗೆಯಲ್ಲಿ ಓಡಿ ಬರುತ್ತಾನೆ ಎಂದು ಆಕೆಯ ಕಣ್ಣು ಹುಡುಕುತ್ತಲೇ ಇತ್ತು. ಬರಲಿಲ್ಲವೆಂದು ತನಗೆ ತಾನೇ ಸಾಂತ್ವನ ಹೇಳಿಕೊಳ್ಳುತ್ತಿದ್ದಳು.

ಮದುವೆಯ ಹಸೆಗೆ ಕರೆದೊಯ್ಯುತ್ತಿದ್ದರೆ ಅವಳ ಕಣ್ಣು ತುಂಬಿಬಂದಿತ್ತು. ಅಡಿಯಿಡುವಾಗ ಕೈಯನ್ನು ಮೊಣಕಾಲ ಬಳಿ ಇರಿಸಿಬತ್ತಾಸೆ ನೀಡದೆ ನಡೆಯುವುದು

ಸಾಧ್ಯವೇ ಇರಲಿಲ್ಲ. ಮದುಮಗಳನ್ನು ಕರೆತರುವಾಗ ಬಳಿಯಲ್ಲಿದ್ದು ನಡೆಸಿಕೊಂಡು ಬರುವುದು ಪದ್ಧತಿ. ಇಬ್ಬರು ಮುತ್ತೈದೆಯರು ಭುಜದ ಮೇಲೆ ಕೈ ಹಾಕಿಕೊಂಡು ಕರೆತಂದರು. ಆಗ ಅಡಿ ಅಡಿಗೂ ಅಮ್ಮನೇ ನೆನಪಾಗುತ್ತಿದ್ದಳು. ಅಡಿ ಇಟ್ಟಾಗಲೆಲ್ಲಾ ಮೊಣಕಾಲಿನ ಬಳಿ ಕಳಕ್ಕನೆ ಹೊರಳಿ ನೋವಾಗುತ್ತಿತ್ತು. ಅಮ್ಮನೇ ಇದ್ದಿದ್ದರೆ ಮಗಳ ಬಗ್ಗೆ ಗೊತ್ತಿರುತ್ತಿತ್ತು. ಈ ನೋವುಂಟಾಗದಂತೆ ಕರೆತರುತ್ತಿದ್ದಳು. ಮನಸ್ಸು 'ಅಮ್ಮಾ...ಅಮ್ಮಾ...' ಎಂದು ಒಂದೇ ಸಮನೆ ಅಳುತ್ತಿತ್ತು.

ವಧ್ವೂವರರ ಮಧ್ಯದ ತೆರೆ ಸರಿದಾಗ ಕೇದಾರಗೌರಿ ಕಣ್ಣೆತ್ತಿ ನೋಡಿದಳು. ಅದೇ ಕ್ಷಣದಲ್ಲಿ ಸಿದ್ಧಾರ್ಥನು ನೋಡಿದ.

ಸಿದ್ಧಾರ್ಥ ತನಗೆಂತು ಮೆಚ್ಚಿಗೆಯಾದನೆಂಬುದು ಆಗ ಅರಿವಾಯಿತು. ಅವಳಿಗೆ ಅವನಲ್ಲಿಯ ಪೌರುಷ ಅದು ದೈಹಿಕವಾದುದಲ್ಲ. ಅವನು ಸುಂದರನಲ್ಲ ಎಂಬುದರಲ್ಲಿ ಸಂಶಯಕ್ಕೆ ಅವಕಾಶವೇ ಇಲ್ಲ. ಆದರೆ ಅವನ ಕಣ್ಣಲ್ಲಿ ಸ್ತ್ರೀಗೆ ಬೇಕಾದ ಸಾಂತ್ವನ ನೀಡುವ ಸೆಲೆಯಿದೆ. ಅದೇ ನಿಜವಾದ ಪೌರುಷದ ಚಿಹ್ನೆ. ನಡೆಯುತ್ತಿದ್ದಾಗ ದೂರದಿಂದಲೇ ಗಮನಿಸಿ ಸಾಂತ್ವನ ಹೇಳಿದ ಕಣ್ಣುಗಳು ಅವು. ಹೆಣ್ಣಿಗೆ ಅದಕ್ಕಿಂತಲೂ ಮಿಗಿಲಾದುದೇನು ಬೇಕು?

ಅವಳೂ ಕಣ್ಣಿಂದಲೇ ತನ್ನ ಸಂತೃಪ್ತಿ ಸೂಚಿಸಿದಳು.

''ಇದೇನೂ ಆಗಲೇ ನಗು ಬದಲಾಯಿಸಿಕೊಳ್ತಿದೀರೀ...''

ಇಬ್ಬರೂ ಬೆಚ್ಚಿ ನೋಡಿದರು- ಭವಾನೀಶಂಕರ್! ಒಡನೆಯೇ ಮದುಮಗಳು ಮುಸುಗನ್ನು ಮುಂದಕ್ಕೆ ಎಳೆದುಕೊಂಡುಳು, ಮದುಮಗ ಅಕ್ಷತೆ ತೆಗೆದುಕೊಳ್ಳುವ ನೆಪದಿಂದ ಕೆಳಕ್ಕೆ ಬಗ್ಗಿದ. ಓಲಗ ಶ್ರಾವ್ಯವಾಗಿ ನುಡಿಸುತ್ತಿದ್ದರು.

ಮಂಗಳ ಸೂತ್ರವನ್ನು ಪುರೋಹಿತ ಜನರ ಮಧ್+ಯ ಕಳುಹಿಸಿದ. ಒಬ್ಬೊಬ್ಬರೇ ಅದನ್ನು ಮುಟ್ಟುತ್ತಿದ್ದಾರೆ. ಹಾಗೆ ಮಾಡುವುದರಿಂದ ದುಷ್ಟಗ್ರಹದ ದುರಾಗ್ರಹ ನಿವಾರಣೆಯಾಗುತ್ತದೆ ಎಂಬ ನಂಬಿಕೆ. ಅದಕ್ಕೆ ಮೊದಲು ಕೇದಾರಗೌರಿ ತಂದೆಯನ್ನು ಕೇಳಿದ್ದಳು ''ದೊಡ್ಡ ಕಮ್ಯೂನಿಸ್ಟ್ ಅಂತೀರಿ ಈ ಮದುವೆ, ಅಕ್ಷತೆ ಇವೆಲ್ಲಾ ಏನು?''

''ಸುಮ್ನಿರಮ್ಮ ಈ ರೀತಿ ಪ್ರಶ್ನೆಗಳನ್ನು ಕೇಳಿ ನನ್ನ ಇಕ್ಕಟ್ಟಿಗೆ ಸಿಲುಕಿಸಬೇಡ'' ಎಂದಿದ್ದರು ತಂದೆ.

ಆಕೆ ನಕ್ಕು ''ನಿಮ್ಮಂತಹ ಹಿರಿಯರನ್ನು ಕಂಡೇ ಯುವಕರಲ್ಲಿ ಕಮ್ಯೂನಿಸಂ ಬಗ್ಗೆ ನಂಬಿಕೆ ಹೋಗುತ್ತೆ'' ಎಂದಿದ್ದಳು.

''ಕಮ್ಯೂನಿಸಂ ಎಂದರೆ ದೇವರು ಇರುವನೇ ಇಲ್ಲವೇ ಎಂಬುದು ಮಾತ್ರವೇ ಅಲ್ಲಮ್ಮಾ'' ಎಂದು ತಮ್ಮ ಕೃತ್ಯಗಳನ್ನು ಸಮರ್ಥಿಸಿಕೊಳ್ಳಲು ಪ್ರಯತ್ನಿಸಿದ್ದರು ಭವಾನಿಶಂಕರ್.

ಅವಳಿಗೆ ಅದು ಒಪ್ಪಿಗೆಯಾಗಲಿಲ್ಲ. ''ಮನುಷ್ಯನಾದವನು ತನ್ನ ಮೇಲೆ ತಾನು ನಂಬಿಕೆಯನ್ನು ಬೆಳೆಸಿಕೊಳ್ಳುವುದು ಮುಖ್ಯ. ಅದಕ್ಕೆ ಪೂರ್ಣವಾದ ಆತ್ಮಸ್ಥೈರ್ಯಬೇಕು. ಹಾಗಿರುವರಾರೂ ದೇವರನ್ನು ನಂಬುವುದಿಲ್ಲ'' ಎಂದಿದ್ದಳು.

''ನೋಡೋಣ, ನೀನೂ ಈ ಸಂಸಾರ ಸಾಗರದಲ್ಲಿ ನಾನಾ ಕಷ್ಟಗಳನ್ನು ಅನುಭವಿಸುವಾಗಲೂ ದೇವರನ್ನು ನೆನೆಸಿಕೊಳ್ಳುದಿಲ್ಲವೇನೋ!'' ಎಂದು ತಟ್ಟನೆ ನುಡಿದವರು ಮಾತು ನಿಲ್ಲಿಸಿ ''ಛೀ, ಎಂಥಾ ಮಾತಾಡಿದೆ'' ಎಂದು ಪಶ್ಚಾತ್ತಾಪ ಪಟ್ಟಿದ್ದರು.

ಕೇದಾರಗೌರಿ ಮಾತ್ರ ಅದೇ ಕಿರುನಗೆಯಿಂದ ''ಬಾಳು ಸುಖವಾಗಿ ಸಾಗುವಾಗ ದೇವರನ್ನು ಮರೆತು, ಸ್ವಲ್ಪ ತೊಂದರೆ ಬರುತ್ತಲೇ ದೇವರನ್ನು ನೆನೆಸಿಕೊಳ್ಳುವವರು ಮನುಷ್ಯರಲ್ಲ ಡ್ಯಾಡಿ. ದೇವರನ್ನು ನಂಬಿ ಬದುಕುವವರು ಪ್ಯಾರಾಸೈಟ್‌ಗಳು (ಪರೋಪ ಜೀವಿಗಳು) ನಿನ್ನ ಮಗಳು ಇಂಥಾ ಪ್ಯಾರಾಸೈಟಲ್ಲ ಎಂದು ನಾನು ಮಾತು ಕೊಡುತ್ತೇನೆ''

''ಈ ಮಾತು ಇಲ್ಲಿಗೇ ಕೈ ಬಿಡೋಣವೇ?''

''ಯಾಕೆ ಇದು ಅಪಶಕುನವೆಂಬ ಭಯವೇ?''

''ಬಾಣಲೆಯಲ್ಲಿ ಹಾಕಿ ಹುರಿದಂತೆ ನನ್ನನ್ನು ಹುರಿಯುತ್ತಿದ್ದೀಯೆ?''

''ನಿಮಗೆ ನೋವುಂಟು ಮಾಡುವುದು ನನ್ನ ಗುರಿಯಲ್ಲ ಡ್ಯಾಡಿ. ಸರಿ, ಯಾವ ಕ್ಷಣದಲ್ಲಿಯೇ ಆಗಲಿ, ಎಷ್ಟು ಕಷ್ಟವೇ ಬಂದಿರಲಿ, ನಾನು ದೇವರನ್ನು ಸ್ಮರಿಸಿದೆ ಎಂದಾಗಲಿ, ಪ್ರಾರ್ಥಿಸಿದಂತಾಗಲಿ ತಿಳಿದುಬಂದರೆ ಆಗ ಕೇಳಿ...'' ಎಂದು ತಾನೇ ವಾದವನ್ನು ಪೂರ್ಣ ಮಾಡಿದ್ದಳು.

ಇದೆಲ್ಲಾ ನೆನಪಾಗಿ ಕೇದಾರಗೌರಿಗೆ ಅಲ್ಲೇ-ಹಸೆಯಲ್ಲೇ-ನಗುಬಂತು. ಅಗರುಬತ್ತಿಗಳ ಕಂಪು, ರೇಷ್ಮೆಯ ನುರುನುರು ಸದ್ದು, ಅರಸಿನದ ಮತ್ತು ಪಕ್ಕದಲ್ಲಿ ಕುಳಿತಿದ್ದ ಭಾಗಸ್ವಾಮಿಯ ಕಿರುನಗೆ ಇವುಗಳ ಅನುಭೂತಿಗೂ ದೇವರಿಗೂ ಯಾವ ಸಂಬಂಧ?

ಮಂಗಳವಾದ್ಯಗಳ ತೀವ್ರತೆ ಹೆಚ್ಚುತ್ತಲೇ ಇವುಗಳಿಂದ ಎಚ್ಚರಗೊಂಡು ನೋಡಿದಳು. ಸಿದ್ಧಾರ್ಥ ಮಂಗಳ ಸೂತ್ರವನ್ನು ಹಿಡಿದು ನಿಲ್ಲುತ್ತಿದ್ದಾನೆ. ಆಕೆಯ ಹೃದಯದ ಬಡಿತ ಹೆಚ್ಚಿದ್ದು ಆಕೆಗೆ ಗೊತ್ತಾಗುತ್ತಿದೆ. ಮಂಗಳ ಸೂತ್ರ ಕಟ್ಟಿಸಿಕೊಂಡ ಘಳಿಗೆಯಿಂದ ತಾನು ಬೇರೊಬ್ಬರ ಮಡದಿ ಶ್ರೀಮತಿ ಕೇದಾರಗೌರಿ! ಈ ಭಾವನೆಯೇ ವಿಶೇಷದ್ದಾಗಿ ತೋರುತ್ತಿತ್ತು.

ತಲೆ ಮತ್ತಷ್ಟು ತಗ್ಗಿತು. ಕಣ್ಣು ಮತ್ತಷ್ಟು ಮೇಲೇರಿಸಿದಳು. ಚಿನ್ನದ ಮಾಂಗಲ್ಯ ಎದೆಯ ಬಳಿಗೆ ಬಂತು. ಕೊರಳ ಹಿಂದೆ ಮುಡಿ ಹಾಕುತ್ತಿದ್ದ ಸಿದ್ಧಾರ್ಥನ ಕೈ ಬೆರಳುಗಳ

ವೀಣೆಯ ತಂತಿಗಳನ್ನು ಮಿಡಿಯುತ್ತಾ ಕಲ್ಯಾಣಿ ರಾಗವನ್ನು ಆಲಾಪಿಸುತ್ತಿರುವಂತೆ ಭಾವನೆ.

ಅವಳಿಗೆ ಆ ಕ್ಷಣದಲ್ಲಿ ಅದ್ಭುತವಾದ ವಿಷಯವೊಂದು ಅರ್ಥವಾಯಿತು- ಅನುಭೂತಿ (ಫೀಲಿಂಗ್)

ಅನುಭೂತಿ ದೇವರಿಗಿಂತಲೂ ಹೆಚ್ಚು ಮೌಲ್ಯವುಳ್ಳದ್ದು. ಎರಡು ಕಾಗದಗಳ ಮೇಲೆ ಸಹಿ ಹಾಕುವಾಗ ಹಸೆಯ ಮೇಲೆ ಪಕ್ಕಪಕ್ಕದಲ್ಲಿ ಕುಳಿತುಕೊಳ್ಳುವ ಅನುಭೂತಿ, ಉತ್ತರೀಯದ ಸೆರಗು ಸೀರೆಯ ಸೆರಗಿನೊಂದಿಗೆ ಮುಡಿ ಹಾಕಿಕೊಂಡು ಕೈ ಕೈ ಹಿಡಿದು ನಡೆಯುವ ಸಪ್ತಪದಿಯಲ್ಲಿ ನೀನು ನನ್ನವಳು ಎನ್ನುವ ಭಾವನೆ ಹೇಗೆ ಬರಲು ಸಾಧ್ಯ. ದಿನನಿತ್ಯದ ಓಡಾಟದಲ್ಲಿ ಎಷ್ಟು ಮಂದಿಯ ಬೆರಳು ಸೋಕಿರದು? ಆದರೆ ಈಗ ಮಾತ್ರವೇ ಈ ಮಾಯಾವೀಣಾಗಾನವೇಕೆ?

ತಾನು ಅರಿತುಕೊಂಡದ್ದನ್ನು ಒಡನೆಯೇ ತನ್ನ ತಂದೆಗೆ ತಿಳಿಸಬೇಕೆಂಬ ಆಸೆ ಅವಳಲ್ಲಿ ಮೂಡಿತು.

''ದೇವರಿಲ್ಲ ಡ್ಯಾಡಿ. ಆದರೆ ದೇವರಿದ್ದಾನೆ ಎಂಬ ಅನುಭೂತಿ ಮನುಷ್ಯನಿಗೆ ತೃಪ್ತಿ ನೀಡುತ್ತದೆ. ಆದ್ದರಿಂದಲೇ ಸ್ವಲ್ಪ ತೊಂದರೆಯಾದರೂ ಪಲಾಯನವಾದಿಯಾಗಿ ದೇವರನ್ನು ಪ್ರಾರ್ಥಿಸುತ್ತಾನೆ. ಆದರೆ ಸಂಪ್ರದಾಯದ ಪದ್ಧತಿಯನ್ನು ದೇವರೊಂದಿಗೆ ಬೆಸೆಯಬಾರದು. ಸ್ವಲ್ಪ ಕಷ್ಟ ಬಂದೊಡನೇ ದೇವರನ್ನು ಆಶ್ರಯಿಸುವವನು ಎಷ್ಟು ಮೂರ್ಖನೋ, ಮೆಲುಗಾಳಿಗೆ ತಲೆಉಡಿಸುತ್ತಾ ಬಳ್ಳಿಯಲ್ಲಿ ಕಿಲಕಿಲನೆ ನಗುತ್ತಾ ಸುತ್ತಲೂ ಪರಿಮಳವನ್ನು ಚೆಲ್ಲುವ ಹೂವಿನ ಸೌಂದರ್ಯವನ್ನು ಆಸ್ವಾದಿಸಲಾರದೆ ಕಾರ್ಯಕಾರಣ ಸಂಬಂಧ ವಿವೇಚನೆಯಲ್ಲಿ ಮೈ ಮರೆಯುವ ನಿರೀಶ್ವರವಾದಿಯೂ ಅಷ್ಟೇ ಮೂರ್ಖನೇ. ನಾನು ನಿಮ್ಮ ಮಗಳು. ಸಾಯುವ ಸಮಯದಲ್ಲೂ ದೇವರ ನೆರವನ್ನು ಕೋರುವುದಿಲ್ಲ. ಆದರೆ ಸಂಪ್ರದಾಯವನ್ನು ಅನುಭವಿಸಬಾರದೆಂದು ಹೇಳುವ ಹಕ್ಕು ಯಾರಿಗೂ ಇಲ್ಲ''

ಎಲ್ಲಾ ಮೂಲೆಗಳಿಂದಲೂ ಹೂಮಳೆಯಂತೆ ಅಕ್ಷತೆಗಳು ಬಂದು ಬಿದ್ದಾಗ ಆಕೆ ಎಚ್ಚೆತ್ತಳು. ಒಂದು ಕ್ಷಣದಲ್ಲಿ ಎಷ್ಟೊಂದು ಯೋಚನೆಗಳು. ಕೊರಳಲ್ಲಿ ಮಂಗಳ ಸೂತ್ರ ಭದ್ರಗೊಳ್ಳುತ್ತಾ ತಾನು ಪರಾಧೀನೆಯಾಗುತ್ತಿರುವ ಕ್ಷಣದಲ್ಲಿ ಇಷ್ಟೊಂದು ಯೋಚನೆಗಳು ಸುಳಿದಿದ್ದು ಅವಳಿಗೇ ಆಶ್ಚರ್ಯವನ್ನುಂಟು ಮಾಡುತ್ತಿತ್ತು. ತಲೆಎತ್ತಿ ತಂದೆಗಾಗಿ ನೋಡಿದಳು. ಅವರು ಬಳಿಯಲ್ಲೇ ನಿಂತಿದ್ದರು. ತಾನು ಅರಿತ ಸಂಗತಿಯನ್ನು ಕಣ್ಣಿಂದಲೇ ಸೂಚಿಸಲು ಕಿರುನಗೆಯಿಂದ ಪ್ರಯತ್ನಿಸಿದ್ದಳು. ಆತನ ಕಣ್ಣಲ್ಲೂ ಅದೇ ಮಮತೆ ಮಡುಗಟ್ಟಿತ್ತು. ಪ್ರೇಮವನ್ನೆಲ್ಲಾ ಸುರಿಸುತ್ತಿರುವವರಂತೆ ಮಗಳನ್ನು ನೋಡುತ್ತಿದ್ದಾರೆ. ಕೇದಾರಗೌರಿ ನಾಚಿ ತಲೆ ತಗ್ಗಿಸಿದಳು.

ಕಣ್ಣಳಿಯುತ್ತಲೇ ಮಂಗಳ ಸೂತ್ರ ಕಾಣಿಸಿತು. ಹೊಸದಾಗಿ ಬಂದು ಎದೆಯ ಮೇಲೆ ಶಾಶ್ವತ ಸ್ಥಾನವನ್ನು ಏರ್ಪಡಿಸಿಕೊಂಡು, ಅಧಿಕಾರ ಚಲಾಯಿಸಲೆಂದೇ ಠೀವಿಯಿಂದ ತೂಗಾಡುತ್ತಿರುವ ಬಂಗಾರದ ಆ ಬಿಲ್ಲೆಗಳ ಮೇಲೆ ರೇಷ್ಮೆ ಸೀರೆಯ ನೀಲಿ ನೆರಳು ಬಿದ್ದಿತ್ತು. ಬ್ಲೌಸಿನ ಅಂಚಿನ ಎಲೆ ಹಸಿರು ಬಣ್ಣವೂ ಬಂಗಾರದಲ್ಲಿ ಪ್ರತಿಫಲಿಸಿತ್ತು. ಮೆತ್ತಿದ್ದ ಅರಸಿನ ದೀಪದ ಬಳಿ ಕಿರಣಗಳು ಬಿದ್ದು ಅದು ಬಂಗಾರದ ಬಣ್ಣವಾಗಿತ್ತು. ಈ ಎಲ್ಲಾ ಬಣ್ಣಗಳ ಮಧೆ+ಯ ಬೇರೊಂದು ಬಣ್ಣವೂ ಇತ್ತು. ಅದು-

ಕೆಂಪು!

ರಾಕೇಶ್ ಉಸಿರು ಬಿಗಿಹಿಡಿದು ನಡೆಯುತ್ತಿದ್ದುದನ್ನು ನೋಡುತ್ತಿದ್ದಾನೆ. ಅವನ ಗುಂಡಿಗೆ ಕೂಡಾ ವೇಗವಾಗಿ ಬಡಿದುಕೊಳ್ಳುತ್ತಿದೆ.

ಮದುವೆಯ ಕಾರ್ಯಭಾರವನ್ನೆಲ್ಲಾ ತಾನೇ ವಹಿಸಿಕೊಂಡಿದ್ದಾನೆ, ಸೂಟು ಧರಿಸಿ ಮದುವೆ ಮನೆಯ ಹಿರಿಯನಂತೆ ಸಡಗರದಿಂದ ಓಡಾಡುತ್ತಿದ್ದಾನೆ. ಭವಾನಿಶಂಕರ್ ಮನೆಯ ಮದುವೆಯಾದ್ದರಿಂದ ಊರಿನಹಿರಿಯರೆಲ್ಲಾ ಬಂದಿದ್ದಾರೆ. ಇಬ್ಬರು ಮಂತ್ರಿಗಳೂ ಬಂದಿದ್ದರು. ಮದುವೆಯ ಚಪ್ಪರದ ತುಂಬಾ ಜನ.

ಮುಹೂರ್ತ ಸಮೀಪಿಸುತ್ತಲೇ ರಾಕೇಶ್ ಬಂದು ವಿವಾಹ ಮಂಟಪದ ಬಳಿ ಮೊದಲ ಸಾಲಿನಲ್ಲಿ ಕುಳಿತ. ಪುರೋಹಿತ ಮಂಗಳ ಸೂತ್ರವನ್ನು ಹಿರಿಯರ ಕೈಯಿಂದ ಮುಟ್ಟಿಸಿದ.

ಪುರೋಹಿತ ಹಾಗೆ ಮಾಡುತ್ತಿರುವಾಗಲೇ ಕೈ ಗಡಿಯಾರದ ಚೈನಿನಸಂದಿಯಿಂದ ಗುಂಡುಸೂಜಿ ತೆಗೆದು ತನ್ನ ಬಲಗೈ ತೋರುಬೆರಳಿಗೆ ಚುಚ್ಚಿಕೊಂಡ ರಕ್ತದ ಹನಿ ಉಕ್ಕಿತು. ಅಷ್ಟರಲ್ಲಿ ಪುರೋಹಿತ ಬಳಿಗೆ ಬಂದ. ರಾಕೇಶ್ ಪಕ್ಕದಲ್ಲಿ ಕುಳಿತಿದ್ದುದು ಅವರ ಪರಿಚಿತರೇ, ರಾಕೇಶ್ ಮಾಂಗಲ್ಯವನ್ನು ಮುಟ್ಟುತ್ತಿದ್ದರೆ ''ಮದುವೆಯಾಗದವರು ಅದನ್ನು ಮುಟ್ಟಬಾರದು'' ಎಂದು ಹಾಸ್ಯ ಮಾಡಿದರು. ರಾಕೇಶ್ ಕೂಡಾ ನಗುತ್ತಾ ಅದನ್ನು ಮುಟ್ಟಿದೂರ ಸರಿದ. ಪುರೋಹಿತ ಮುಂದಕ್ಕೆ ಸಾಗಿದ.

ಅವನ ಬೆರಳ ರಕ್ತದ ಬಿಂದು ಮಾಂಗಲ್ಯಕ್ಕೆ ಅಂಟಿತ್ತು.

ವಿಷಾಚಿ ರಹಸ್ಯಪತ್ರದ ಎರಡನೆಯ ಸೂಚನೆ ಪೂರ್ಣವಾಯಿತು.

ಅಷ್ಟಾವಕ್ರನ ಆಗಮನಕ್ಕೆ ಮೂರನೆಯ ಅಂಕ ಸಿದ್ಧವಾಯಿತು.

ಆ ಕ್ಷಣದಿಂದ ಸೂತ್ರಧಾರಣಾ ಸಮಯದ ತನಕ ರಾಕೇಶ್ ಮುಳ್ಳಿನ ಮೇಲೆ ಕುಳಿತಂತಿದ್ದ. ಮದುಮಗ ಮಂಗಳಸೂತ್ರಧಾರಣೆ ನಡೆಸುತ್ತಲೇ ಸರಾಗವಾಗಿ ಉಸಿರಾಡಿದ. ಎದ್ದು ತಾನೂ ಅಕ್ಷತೆ ಚೆಲ್ಲಿ ಹಿಂತಿರುಗಿದ.

ಶ್ರೀಮಂತ ವಿವಾಹಗಳಲ್ಲಿ ಮಂಗಳತ್ರೂಧಾರಣೆಯಾಗುತ್ತಲೇ ಯಾರೂ

ಇರುವುದಿಲ್ಲ, ಎಲ್ಲಾ ಆತುರಾತುರವಾಗಿ ಹೊರಟುಹೋಗುತ್ತಾರೆ. ಆದ್ದರಿಂದ ಬಾಗಿಲಬಳಿ ನಿಂತು ಸಗೌರವದಿಂದ ಕಳುಹಿಸಿಕೊಡುವ ಹೊಣಲಗಾರಿಕೆ ಅವನದು.

ತನ್ನ ಕೆಲಸವಾದವನಂತೆ ಮುಖ್ಯದ್ವಾರದತ್ತ ನಡೆದ. ಅಕ್ಷತೆ ಹಾಕಿದವರು ಕೆಲವರು ಇನ್ನೂ ಹಾಗೇ ನಿಂತಿದ್ದಾರೆ.

ನಡೆಯುತ್ತಿದ್ದವನು ಯಾವುದೋ ಸುಪರಿಚಿತವಾದ ಗಾಳಿ, ಚಿರಪರಿಚಿತ ಸ್ಪರ್ಶಕ್ಕೆ ಹಠಾತ್ತನೆ ನಿಂತು ನಿಡಿದ. ಕುರ್ಚಿಗಳ ಸಾಲು ಅದರ ಮುಂದೆ ನಿಂತ ಜನ.

ತನ್ನ ಹಿಂದಣ ಕುರ್ಚಿಗಳಲ್ಲಿ ಅರ್ಧಜನಕ್ಕೆ ಮಿಗಿಲಾಗಿ ಉಸ್ಕೋಕ್ ಸದಸ್ಯರು! ಮದುವೆಗೆ ಬಂದವರಲ್ಲಿ ಬೆರೆತು ಅಲ್ಲಿ ನಡೆಯುತ್ತಿರುವುದನ್ನು ಮೌನವಾಗಿ ಗಮನಿಸುತ್ತಿದ್ದಾರೆ.

ಎಲ್ಲೆಲ್ಲಿಂದಲೋ ಬಂದು ಅಲ್ಲಿಸೇರಿ ತಮ್ಮ ಭಾವೀನಾಯಕನ ಆಗಮನಾರ್ಥವಾಗಿ ತುಟಿಯಲುಗಿಸದೇ ಮೌನ ಪ್ರಾರ್ಥನೆ ಸಲ್ಲಿಸುತ್ತಿದ್ದಾರೆ! ಅದು ಮದುವೆ ಮನೆಯಂತಿಲ್ಲ ಉಸ್ಕೋಕ್ ಕಾರ್ಯಕಾರಿ ಸಮಿತಿಯ ಸಮಾವೇಶದಂತಿದೆ!!

ಪ್ರಾರ್ಥನೆ ಮುಗಿದಂತೆಯೇ ಅವರು ಚಲಿಸಿದರು. ಹಾಲ್ ನಿಧಾನವಾಗಿ ಖಾಲಿಯಾಗುತ್ತಿದೆ. ಭವಾನಿಶಂಕರ್ ಗೇಟಿನ ಬಳಿ ನಿಂತು ಕರಚಾಲನೆಮಾಡುತ್ತಿದ್ದಾರೆ.

ಪುರೋಹಿತ ವಧೂವರರನ್ನು ಹೊರಗೆ ಕರೆತಂದು ಅರುಂಧತಿ ನಕ್ಷತ್ರವನ್ನು ತೋರಿಸುತ್ತಿದ್ದಾನೆ.

ಅವರತ್ತ ನೋಡಿದ ರಾಕೇಶ್ ಬೆಚ್ಚಿದ.

ಗೌರಿ ಎಡಗಡೆ ನಿಂತಿದ್ದಾಳೆ. ಮಧ್ಯೆ ಸಿದ್ಧಾರ್ಥ ಬಲಗಡೆಗೆ ಪುರೋಹಿತನಿಂತಿದ್ದಾನೆ. ಪುರೋಹಿತ ರಾಕೇಶ್‌ಗೆ ಸ್ಪಷ್ಟವಾಗಿ ಕಾಣಿಸುತ್ತಿದ್ದಾನೆ. ಆತ ರಾಕೇಶ್‌ನನ್ನು ಕಂಡೂ ಗಮನಿಸದವನಂತೆ ಮುಂದಡಿ ಇರಿಸುತ್ತಿದ್ದಾನೆ. ಉಸ್ಕೋಕ್ ಆಡಳಿತದಲ್ಲಿ ನಾಲ್ಕನೆಯವನಾದ ರೆಡ್ ಸ್ಕೆಲಿಟನ್ ಅವನು!

ಅಲ್ಲಿಂದ ಹಿಂತರುಗಿದ ವಧೂವರರು ಹಿರಿಯರಿಗೆಲ್ಲಾ ನಮಸ್ಕಾರ ಮಾಡುತ್ತಿದ್ದಾರೆ. ಭವಾನಿಶಂಕರ್ ಗೌರಿಯನ್ನು ಹತ್ತಿರಕ್ಕೆ ಸೆಳೆದು ಕಣ್ಣೊರೆಸಿಕೊಳ್ಳುತ್ತಿದ್ದಾರೆ.

ದಂಪತಿಗಳು ಅಲ್ಲಿಂದ ರಾಕೇಶ್ ಬಳಿಗೆ ಬಂದರು. ಕೇದಾರಗೌರಿ ರಾಕೇಶನ ಪಾದಕ್ಕೆ ನಮಸ್ಕರಿಸಬಂದಾಗ ''ನನಗಿನ್ನೂ ಮದುವೆಯಾಗಿಲ್ಲ'' ಎಂದು ತಡೆದ.

ಸಿದ್ಧಾರ್ಥ ಈ ಮಾತಿಗೆ ನಕ್ಕ.

ಗೌರಿಯೂ ನಕ್ಕಳು. ಹೊಸ ಮದುಮಗಳ ನಗುವಿಗೆ ಹೊಸದಾಗಿ ಬಂದ ಆಭರಣಗಳು ಹೊಸ ಅಂದವನ್ನು ಕೊಡುತ್ತಿವೆ. ರಾಕೇಶ್ ಕೈಚಾಚಿ, ''ಕಂಗ್ರಾಜುಲೇಶನ್ಸ್'' ಎಂದ ಸಿದ್ಧಾರ್ಥನೊಂದಿಗೆ.

''ಅದೇನು?'' ಎಂದ ಸಿದ್ಧಾರ್ಥ ಕೈ ನೋಡುತ್ತಾ.

ದ್ಧಾರ್ಥನ ನೋಟ ತನ್ನ ತೋರು ಬೆರಳ ಮೇಲಿದ್ದುದನ್ನು ಗಮನಿಸಿ "ಏನೂ ಇಲ್ಲ, ಬೆಳಿಗ್ಗೆ ಸ್ವಲ್ಪ ಬ್ಲೇಡ್ ತಗುಲಿತು" ಎಂದ.

ಸಿದ್ಧಾರ್ಥ ಪರೀಕ್ಷಾ ನೋಟ ಬೀರಿದ ರಾಕೇಶನತ್ತ.

ಮಾಂಗಲ್ಯಧಾರಣಾ ಸಮಯಕ್ಕೆ ಸ್ವಲ್ಪ ಮುನ್ನ ಏಕೋ ಸಿದ್ಧಾರ್ಥನ ನೋಟಕ್ಕೆ ರಾಕೇಶ್ ಬಿದ್ದಿದ್ದ. ಆಗ ಅವನು ತನ್ನ ತೋರುಬೆರಳಿಗೆ ಸೂಜಿಚುಚ್ಚಿ ರಕ್ತ ತರಿಸುತ್ತಿದ್ದುದನ್ನು ನೋಡಿದ್ದ.

ಮದುವೆ ಸಾಮಗ್ರಿಗಳನ್ನು ತುರವಾಗ ಮುಳ್ಳು ಚುಚ್ಚಿರಬಹುದು ಅದನ್ನು ತೆಗೆದುಕೊಳ್ಳುತ್ತಿದ್ದಾನೆ ಎಂದೇ ಭಾವಸಿದ್ದ. ಈಗ ಬಂದ ಉತ್ತರ ಅದಕ್ಕೆ ವಿರೋಧವಾಗಿದೆ. ಬೇರಾರಾಗಿದ್ದರೂ ಅದನ್ನು ಅಲ್ಲೇ ಮರೆಯುತ್ತಿದ್ದರು. ಆದರೆ ಸಿದ್ಧಾರ್ಥ ಆ ರೀತಿಯವನಲ್ಲ.

ಪೆಸಿಫಿಕ್ ಮಹಾಸಾಗರದ ಗರ್ಭದಲ್ಲಿ ಅಡಗಿರುವ ಪರ್ವತಗಳ ತಳದಂಚಿನಲ್ಲಿರುವ ಸಣ್ಣ ಗುಂಡುಗಳ ಮಧ್ಯೆ ಒಂದು ಜಾತಿಯ ಮೀನು ವಾಸವಾಗಿರುತ್ತದೆ. ಅದನ್ನು ಈಸ್ಟರ್ ಎನ್ನುತ್ತಾರೆ. ಎಲೆ ಹಸಿರ ಚೂರುಗಳನ್ನು ತಿನ್ನುತ್ತಾ ಅಲ್ಲೇ ನಿದ್ರಿಸುತ್ತಿರುತ್ತದೆ. ತೀರಾ ಚಿಕ್ಕ ಮೀನುಗಳು ಹೆಚ್ಚಾಗಿ ಈಜಾಡುವುದಿಲ್ಲ. ಅವುಗಳ ಈಜೂ ಆಕರ್ಷಕವಾಗಿರದು. ಆದರೆ ಯಾರಾದರೂ ಅವನ್ನು ಅಲ್ಲಿಂದ ಓಡಿಸಲು ತೊಂದರೆಯುಂಟು ಮಾಡಿದರೆ ಸುಮ್ಮನಿರವು. ವೇಲ್, ಷಾರ್ಕ್ ಅಥವಾ ಇನ್ನೂ ಎಂಥಾ ದೊಡ್ಡ ಮೀನಾದರೂ ಸರಿ ಅವುಗಳೊಂದಿಗೆ ಈ ಮೀನುಗಳು ಹೋರಾಡುತ್ತವೆ. ಸಾವೋ ಗೆಲುವೋ ತೀರ್ಮಾನವಾಗಲೇಬೇಕು. ಹೋರಾಟದ ನಂತರ ಮತ್ತೆ ಮಾಮೂಲಿನಂತೇ ಇರುತ್ತವೆ.

ತನ್ನ ಮುಂದೆ ಅತಿ ಸಾಮಾನ್ಯವಾಗಿ ಯಾವ ವಿಶೇಷವೂ ಇಲ್ಲದೆ ಇದ್ದ ಸಿದ್ಧಾರ್ಥನ ಕಣ್ಣಲ್ಲಿ ತನ್ನನ್ನು ಪರಿಶೀಲಿಸುವ ನೋಟದಲ್ಲಿ ಈಸ್ಟರ್ ಮೀನಿನ ಲಕ್ಷಣವಿದೆಯೆಂದೂ, ಅವಶ್ಯಕತೆ ಬಂದಾಗ ಆಕಾಶವೇ ನೆತ್ತಿಯ ಮೇಲುರುಳಿದರೂ ಲೆಕ್ಕಿಸುವುದಿಲ್ಲವೆಂದೂ ರಾಕೇಶ್ ಅರಿತಿರಲಿಲ್ಲ. ತನ್ನ ಕಾರ್ಯವೆಲ್ಲಾ ಪೂರೆಐಸಿದ ಆನಂದದಲ್ಲಿ ಕರಚಾಲನೆ ನಡೆಸಿ ಅಲ್ಲಿಂದ ಹೊರಕ್ಕೆ ನಡೆದ.

## 11

ಮದುವೆಯ ಮರುದಿನ ಅದ್ಧೂರಿಯಾದ ಪಾರ್ಟಿಯ ವ್ಯವಸ್ಥೆ ಮಾಡಿದ್ದರು ಭವಾನಿಶಂಕರ್. ಮನೆಯ ಹೊರಗೆ ತೋಟದಲ್ಲಿ ರಂಗು ರಂಗಿನ ದೀಪಗಳ ಕಾಂತಿಯಲ್ಲಿ ಡಿನ್ನರ್ ಏರ್ಪಾಟಾಗಿತ್ತು.

ರಾತ್ರಿ ಒಂಬತ್ತುವರೆಯಾಗುತ್ತಿದ್ದಂತೆ ಸೇವಕನನ್ನು ಕರೆದು ಏನೋ ಹೇಳಿದರು

ಭವಾನಿಶಂಕರ್. ರಾಕೇಶ್ ದೂರದಿಂದ ನೋಡುತ್ತಿದ್ದಾನೆ. ಸೇವಕ ನೇರವಾಗಿ ಹಿಗಿ ಕೇದಾರಗೌರಿಯ ಗೆಳತಿಯನ್ನು ಕರೆದುಕೊಂಡು ಬಂದ. ಆಕೆಯೊಂದಿಗೆ ಏನೋ ಹೇಳಿದರು. ಆಕೆ ಕಿರುನಗೆಯಿಂದ ಗೌರಿಯನ್ನು ಸಮೀಪಿಸಿ ಕಿವಿಯಲ್ಲಿ ಏನೋ ಹೇಳಿದಳು. ಆ ಮಾತಿಗೆ ಗೌರಿಯ ಮುಖ ಕೆಂಪಾಯಿತು. ಗೌರಿಯ ಕೈಹಿಡಿದು ಆಕೆ ಒಳಕ್ಕೆ ಎಳೆದೊಯ್ದಳು. ರಾಕೇಶ್ ಇವೆಲ್ಲವನ್ನೂ ನೋಡುತ್ತಿದ್ದಾನೆ.

ಕೇದಾರಗೌರಿ ಕೋಣೆಯಲ್ಲಿ ಡ್ರೆಸಿಂಗ್ ಟೇಬಲ್ ಪಕ್ಕದಲ್ಲಿಯೇ ಎರಡು ಬುಟ್ಟಿಗಳಲ್ಲಿ ಹೂಗಳಿವೆ. ಇನ್ನಿಬ್ಬರು ಗೆಳತಿಯರಿದ್ದಾರೆ.

ಸಿದ್ಧಾರ್ಥನ ತಾಯಿ ಅಲ್ಲಿಗೆ ಬಂದರು. ಆಕೆಯನ್ನು ನೋಡುತ್ತಲೇ ಗೌರವ ಸೂಚಕವಾಗಿ ಎದ್ದುನಿಂತಳು ಗೌರಿ. ಅದುವರೆಗೂ ಜೋಕ್‌ಗಳನ್ನು ಹೇಳುತ್ತಾ ನಗುತ್ತಿದ್ದ ಗೆಳತಿಯರೂ ಮೌನವಾದರು.

ಆಕೆಯಲ್ಲಿದ್ದ ಒಂದು ರೀತಿಯ ಗಾಂಭೀರ್ಯ, ಗೌರಿಗೆ ಆಕೆಯನ್ನು ನೋಡಿಮದ ಮೊದಲ ದಿನವೇ ವಿಶ್ವಾಸ ಮೂಡಿಸಿತ್ತು. ಕಷ್ಟಗಳಿಲ್ಲದೆ ಇರುವವರು ಯಾರು? ಆದರೆ ಆ ಕಷ್ಟವನ್ನು ಹಗುರವಾಗಿ ಪರಿಗಣಿಸುವವರು ವಿರಳ. ಅಷ್ಟು ವರ್ಷಗಳಿಂದ ತೋಟದಲ್ಲಿ ಕೂಲಿಯಾಳಾಗಿ ಕೆಲಸ ಮಾಡುತ್ತಿದ್ದರೂ ಆಕೆಯ ಮುಖದಲ್ಲಿ ಬಳಲಿಕೆಯ ನೆರಳೂ ಇಲ್ಲ. ಆತ್ಮಸ್ಥೈರ್ಯದಿಂದ ಮೂಡಿದ ಗಾಂಭೀರ್ಯವೇ ಇರಬೇಕು ಅದು. ಅನ್ಯಥಾ ಅಷ್ಟೊಂದು ತೃಪ್ತಿ ಇರಲು ಸಾಧ್ಯವೇ ಇಲ್ಲ.

ಮದುವೆ ಬಗ್ಗೆ ಮಾತನಾಡಿದಾಗ ಭವಾನಿಶಂಕರ್ ವರದಕ್ಷಿಣೆ ಬಗ್ಗೆ ಪ್ರಸ್ತಾಪಿಸಿದ್ದರು. ''ನನ್ನ ಆಸ್ತಿಯೆಲ್ಲಾ ಕೊನೆಗೆ ನನ್ನ ಮಗಳಿಗೇ ಸಿಗುವುದು ಎನ್ನುವುದರಲ್ಲಿ ಸಂಶಯವಿಲ್ಲ. ಆದರೆ ಮದುವೆ ಸಮಯದಲ್ಲಿ ಕೊಟ್ಟರೆ ಇನ್ನೂ ಹೆಚ್ಚು ಓದಲು, ಅವಕಾಶ ದೊರೆತರೆ ರಿಸರ್ಚ್ ಮಾಡಲು ಉಪಯಿಗಕ್ಕೆ ಬರುವುದಲ್ಲವೇ?'' ಎಂದು ಬೇರಾರಿಗೊ ಹೇಳುವಂತೆ ಹೇಳಿದ್ದರು.

ಇದೆಲ್ಲವನ್ನೂ ಕೇಳಿದ ಆಕೆ ಕೊನೆಗೆ ಹೇಳಿದ್ದರು:

''ನೀವು ಹೇಳವುದೆಲ್ಲಾ ಸರಿಯೇನಣ್ಣಾ, ನೀವು ಕೊಡುವ ಹಣದಿಂದ ಇನ್ನೂ ಹೆಚ್ಚು ಓದಲು ಸಾಧ್ಯವಿದೆ. ಈಗ ಭೋಗ್ಯವಾಗಿರುವ ತೋಟವನ್ನೂ ಬಿಡಿಸಿಕೊಳ್ಳಬಹುದು. ನೀವು ಮನಸ್ಸು ಮಾಡಿದರೆ ನಮ್ಮಂತಹ ನೂರು ಸಂಸಾರಗಳನ್ನಾದರೂ ಸುಲಭವಾಗಿ ಸಕಲ ಭೋಗಭಾಗ್ಯಗಳಿಂದ ಪೋಷಿಸುವುದು ಸಾಧ್ಯವಿದೆ. ಆದರೆ ಈ ಮದುವೆಯಿಂದಲೇ ತನ್ನ ಅಂತಸ್ತು ಬೆಳೆಯಿತು ಎಂಬ ಭಾವನೆಯನ್ನು ನನ್ನ ಮಗನು ಸ್ವೀಕರಿಸಲಾರ ಅವನ ಬುದ್ಧಿ ನನಗೆ ಚೆನ್ನಾಗಿ ಗೊತ್ತಿದೆ. ನಿಮ್ಮ ಮಗಳ ಮೌಲ್ಯವನ್ನು ಕಡಿಮೆಯಾಗಿ ತೂಗುತ್ತಿದ್ದೀರಿ ಎಂದು ಭಾವಿಸಿದಿದ್ದರೆ, ಅವನಲ್ಲಿ ಎಂದಾದರೂ ಈ ರೀತಿಯ ಭಾವನೆ ಬಂದರೆ ಅವರ ಬಾಳು ನರಕವೇ

ಆಗುತ್ತದೆ. ನಿಮ್ಮ ಮಗಳನ್ನು ನಮ್ಮೊಂದಿಗೆ ಕಳುಹಿಸಿ. ನಮ್ಮೊಂದಿಗೇ ಇದ್ದು ನಮ್ಮ ಊಟವನ್ನೇ ಹಂಚಿಕೊಳ್ಳುತ್ತಾಳೆ''

ಮಾತಿನಲ್ಲಿ ತುಂಬಾ ಮರ್ಯಾದೆ ಇದ್ದರೂ ಅದೇ ಒಂದು ಷರತ್ತೆಂಬ ಕಾಠಿಣ್ಯದ ಧ್ವನಿಯೂ ಇತ್ತು.

ಭವಾನಿಶಂಕರ್ ಈ ಮಾತಿಗೆ ಅಪ್ರತಿಭರಾಗಿದ್ದರು. ತಮ್ಮ ಮೂವತ್ತು ವರ್ಷಗಳ ವ್ಯವಹಾರ ಜೀವನದಲ್ಲಿ ತಮ್ಮ ಎದುರಿದ್ದವರು ಯಾರೂ ತಮ್ಮ ಮಾತನ್ನು ಇಷ್ಟು ನೇರವಾಗಿ, ನಿಷ್ಕರ್ಷವಾಗಿ ಹೇಳಿರಲಿಲ್ಲ. ಆಕೆಯ ಮಾತಿನಲ್ಲಿ ತರ್ಕಬದ್ಧ ವಿಚಾರವಿತ್ತು. ನಗುವೂ ಬಂತು. ಮದುವೆ ಮುಗಿಯಲಿ, ಸಿದ್ಧಾರ್ಥ ಪಾಸಾಗುತ್ತಲೇ ಅವನಿಗೊಂದು ಕೆಲಸ ಕೊಡಿಸಿ ಮೇಲೆತ್ತುವುದು ತಮಗೇನೂ ಅಸಾಧ್ಯದ ಕೆಲಸವಲ್ಲ ಎಂದು ಸುಮ್ಮನಾದರು.

ಇದೇ ಮಾತು ಕೇದಾರಗಜರಿ ಬಳಿ ಪ್ರಸ್ತಾಪಿಸಿದಾಗ ತೀರ ತೀಕ್ಷ್ಣವಾಗಿ ಪ್ರತಿಕ್ರಿಯಿಸಿದ್ದಳು. ''ಸಿದ್ಧಾರ್ಥ ನಮ್ಮೊಂದಿಗೆ ಬಂದು ಮನೆವಾಳ್ತನಕ್ಕೆ ಸಿದ್ಧವಾಗಿದ್ದಾನೆಂದು ನೀವು ಹೇಗೆ ತೀರ್ಮಾನಿಸಿದಿರಿ ಡ್ಯಾಡಿ? ನಾನು ಮದುವೆ ಮಾಡಿಕೊಳ್ಳುತ್ತಿರುವುದು ಅವರ ಮನೆಗೆ ಹೋಗಲು, ಅವರು ನಮ್ಮ ಮನೆಗೆ ಬರಲಿ ಎಂದಲ್ಲ!''

ಈ ವಿಷಯ ಅಲ್ಲಿಗೇ ನಿಂತಿತ್ತು.

ತನ್ನ ತಂದೆಯೊಂದಿಗೆ ಹೀಗೆ ಹೇಳಿದಳೆಂದು ಗೊತ್ತಾದ ಕ್ಷಣದಿಂದಲೇ ಗೌರೀ ಎಂದರೆ ಮತ್ತಷ್ಟು ಹೆಚ್ಚಿತ್ತು ಸಿದ್ಧಾರ್ಥನಿಗೆ.

ಆ ಮಾತು ಅಲ್ಲಿಗೇ ನಿಂತಿತ್ತು.

ಬಾಗಿಲ ಬಳಿ ನಿಂತಿದ್ದ ಸೊಸೆಯತ್ತ ಮಮತೆಯಿಂದ ನೋಡಿದಳು. ನಂತರ ಪಕ್ಕದಲ್ಲಿದ್ದ ಹೂಗಳು, ನಿಲುವುಗನ್ನಡಿಗಳನ್ನು ನೋಡಿ ಮುಗುಳ್ನಕ್ಕು ಅಲ್ಲಿಂದ ಹೋದಳು.

ಅದುವರೆವಿಗೂ ಉಸಿರು ಬಿಗಿಹಿಡಿದು ನೀರಿನಡಿಯಲ್ಲಿ ಅಡಗಿಕೊಂಡಂತಿದ್ದ ಗೆಳತಿಯರು ಒಡನೆಯೇ ನೀರಿನ ಮೇಲೆ ಬಂದಂತೆ ''ಇನ್ನು ಪ್ರಾರಂಭಿಸೋಣವೇ?'' ಎಂದು ಕೇಳಿದರು.

ಅದೇ ಸಮಯಕ್ಕೆ ಕೋಣೆಯಲ್ಲಿ ಊದುಬತ್ತಿಗಳನ್ನು ಇಡಲು ಹೋಗಿದ್ದ ವೃದ್ಧ ಸೇವಕಿಯು ಮೆಲುವಾಗಿ ಕಿರಿಚಿದ್ದು ಕೇಳಿಸಿತು.

ಮಲ್ಲಿಗೆಯ ಮಾಲೆಗಳಿಂದ ಅಲಂಕೃತವಾಗಿದ್ದ ಮಂಚದ ಬಿಳಿಯಹಾಸಿನಮೇಲೆ ಒಂದು ಬೆಕ್ಕು ಸತ್ತು ಬಿದ್ದಿತ್ತು. ಹಾಸಿನ ಮೇಲೆ ರಕ್ತ. ಹೊದಿಕೆ ರಕ್ತವಾಗಿತ್ತು. ಪ್ರಾಣ ಹೋಗಲು ತುಂಬ ತಪಿಸಿದಂತೆ ಹೊದಿಕೆ ಅಸ್ತವ್ಯಸ್ತವಾಗಿತ್ತು.

ಮರು ನಿಮಿಷದಲ್ಲಿ ನಾಲ್ವರೂ ಅಲ್ಲಿ ಸೇರಿದರು.

ಹಾಲಿಗಾಗಿ ಮೇಜನ್ನು ಹತ್ತಿ ಅಲ್ಲಿದ್ದ ಗ್ಲಾಸನ್ನು ಉರುಳಿಸಿದೆ. ಒಡೆದಗಾಜಿನ ಮೇಲೆ ಕಾಲುಜಾರಿ ಬಿದ್ದುದರಿಂದ ಗಾಜಿನ ಚೂರು ಕುತ್ತಿಗೆಯಲ್ಲಿ ಚುಚ್ಚಿಕೊಂಡು ಯಾತನೆಯಿಂದ ಹಾರುತ್ತ ಹಾಸಿಗೆಯ ಮೇಲೆ ಬಿದ್ದು ಸತ್ತಿದೆ.

ಎಲ್ಲರಿಗಿಂತಲೂ ಮೊದಲು ಎಚ್ಚೆತ್ತವರು ಭವಾನಿಶಂಕರ್ ಒಡನೆಯೇ ಹಾಸಿಗೆ ಹೊದಿಕೆ ಬದಲಿಸಲು ಅಪ್ಪಣೆಯಾಯಿತು. ಅಷ್ಟರಲ್ಲಿ ಪುರೋಹಿತರು ಬಂದು ಅವರನ್ನು ಪಕ್ಕಕ್ಕೆ ಕರೆದೊಯ್ದು

''ಇದು ಅಪಶಕುನ, ಈಗ ಬೇಡ''

''ಕೋಣೆ ಬದಲಿಸಿದರೆ''

''ಇದು ಸ್ಥಳದ ಪ್ರಶ್ನೆಯಲ್ಲ, ಸಮಯದ ಪ್ರಶ್ನೆ. ಇನ್ನೊಂದು ನಾಲ್ಕುದಿನಗಳ ನಂತರ ನೋಡಿ ಏರ್ಪಾಟು ಮಾಡಿ''

''ಇದು ಒಳ್ಳೆಯದಲ್ಲ ಎನ್ನುತ್ತೀರಾ?'' ಎಂದು ಕೇಳಿದಾಗ ಭವಾನಿಶಂಕರ ತೀರಾ ಚಿಂತಿಸುತ್ತಿದ್ದ.

''ಹೇಗಾದರೂ ಆಗಲಿ, ನಮ್ಮ ಎಚ್ಚರಿಕೆ ನಮಗಿರಬೇಕು''

''ಗೌರಿಗೆ ಈ ವಿಷಯ ಹೇಳುವುದು ಹೇಗೆ?''

''ಅದು ನನಗೆ ಬಿಡಿ ಮಾವ''

ಪಕ್ಕದಲ್ಲಿ ಕೇಳಿಬಂದ ಮಾತಿನಿಂದ ಇಬ್ಬರೂ ಅತ್ತ ನೋಡಿದರು- ರಾಕೇಶನಿಂತಿದ್ದ.

''ನಿಜ ಸಂಗತಿ ತಿಳಿಸದೆ ಗೌರಿಯನ್ನು ಒಪ್ಪಿಸುವ ಹೊಣೆಗಾರಿಕೆ ನನಗೆಬಿಡಿ. ನಾನು ನಿರ್ವಹಿಸುತ್ತೇನೆ''

''ಹೇಗೆ?''

''ನಾನು ಅದನ್ನು ಹೇಳಿಕೊಳ್ತೇನೆ'' ಎನ್ನುತ್ತಾ ಕೇದಾರಗೌರಿಯ ಬಳಿಗೆ ಹೋದ ರಾಕೇಶ ''ನಿನಗೆ ನಾನೇನೂ ಉಡುಗೊರೆ ಕೊಡಲಿಲ್ಲ. ಏಕೆ ಎಂದು ಕೇಳಲಿಲ್ಲವೇಕೆ?''

''ಉಡುಗೊರೆಯೇ! ಏಕೆ?''

''ನಿನ್ನ ಮದುವೆಯ ಶುಭ ಸಂದರ್ಭದಲ್ಲಿ''

''ನೀವು ನನಗೆ ಕೊಡೋದೇನು ಬಿಡಿ''

''ಅದು ಸರಿಯೇ, ಅಷ್ಟೊಂದು ಹಣ ನನ್ನಲ್ಲಿ ಎಲ್ಲಿದೆ?''

ಈ ಮಾತಿಗೆ ಖತಿಗೊಂಡು ''ಛೇ ನನ್ನ ಮಾತು ಅದಲ್ಲ ಭಾವಾ. ಏನೇ ಆಗಲಿ ಉಡುಗೊರೆ ಗೋಗರೆದು ಯಾರೂ ತಗೊಳ್ಳಲ್ಲ ಹೌದು ತಾನೇ?'' ಎಂದಳು.

ರಾಕೇಶ ಒಂದಡಿ ಅವಳ ಕಡೆಗೆ ಇರಿಸಿ ''ನನ್ನಲ್ಲಿ ಒಂದು ಆಸೆಯಿದೆ...'' ಎಂದ. 'ಅದೇನು?' ಎನ್ನುವಂತೆ ಅವನತ್ತ ಗೌರಿ ನೋಡಿದಳು. ರಾಕೇಶ ತನ್ನ ಮಾತನ್ನು ಮುಂದುವರಿಸಿದ ''ನಾನು ವಿದ್ಯಾರ್ಥಿ. ನನಗೆ ಪಿತ್ರಾರ್ಜಿತ ಆಸ್ತಿ ಯಾವುದೂ

ಇಲ್ಲ. ಮಾವನನ್ನು ಹಣ ಕೇಳಿದರೆ ಕೊಡುತ್ತಾರೆ. ಆದರೆ ಅದು ನಿನ್ನ ಹಣವನ್ನು ನಿನಗೇ ಕೊಟ್ಟಂತೆ, ನಿನಗೆ ಕೊಡಲು ನನ್ನ ಸಂಪಾದನೆಬೇಕು. ಅದು ಹೇಗೆ ಎಂದುಕೊಂಡೆ. ಇದ್ದಕ್ಕಿದ್ದಂತೆಯೇ ನಿಮ್ಮ ಮದುವೆ ನಡೆಯುತ್ತಿರುವಾಗ ಒಂದು ಮಾರ್ಗ ಗೋಚರಿಸಿತು...''

''ಅದೇನು ಭಾವಾ? ಹೇಳಿ'' ಎಂದಳು ಕೇದಾರಗೌರಿ.

''ಹಣವೇನೂ ಸಂಪಾದಿಸಲು ಸಾಧ್ಯವಿಲ್ಲವಾದರೂ ಶ್ರಮಪಡಬಲ್ಲ ದೇಹವಿದೆಯಲ್ಲಾ. ನಿಮ್ಮ ಫಸ್ಟ್‌ನೈಟಿಗೆ ನಾನೇ ಎಲ್ಲಾ ಸಿದ್ಧಮಾಡಿದರೆ ಹೇಗೆ?...ನಾನೇ ಹೂಗಳನ್ನು ತಂದು ಎಲ್ಲಾ ಅಲಂಕಾರಗಳನ್ನು ನಡೆಸಿದರೆ...''

ಕೇದಾರಗೌರಿಯ ಮುಖ ಕೆಂಪೇರಿತು.

''ಮೊದಲು ಮಾವಯ್ಯ ನಿಮ್ಮನ್ನು ಸಿಮ್ಲಾಕ್ಕೆ ಕಳುಹಿಸಬೇಕೆಂದುಕೊಂಡಿದ್ದರು. ಅದಕ್ಕಿಂತಲೂ ನಮ್ಮ ತೋಟವೇ ಚೆನ್ನಾಗಿದೆ'' ಎಂದೆ. ಗೌರಿ ನಿಲ್ಲುಹೋಗಬೇಡ. ಈಗ ನಿನ್ನ ಮದುವೆಗೆ ಉಡುಗೊರೆ ಸ್ವೀಕರಿಸು. ಆದರೆ ನಾಲ್ಕುದಿನ ಮಾತ್ರ ಟೈಂ ಕೊಡು, ಎಲ್ಲಾ ಏರ್ಪಾಡೂ ಆದ ನಂತರ ಈಗ 'ಟೈಂ' ಕೇಳಿದರೆ ತನ್ನ ಮಗಳೇನು ಭಾವಿಸುತ್ತಾಳೋ ಎಂದು ಮಾವಯ್ಯ...''

''ಇದೇನು ತಮಾಷೆ ಭಾವ, ಸಾಕು ನಿಲ್ಲಿಸಿ''

''ಎಂದರೆ ನಿನ್ನ ಒಪ್ಪಿಗೆ ಇದೆ ತಾನೇ?''

ಏನೂ ಉತ್ತರಿಸದೆ ನಾಚಿಕೆಯಿಂದ ತಲೆ ತಗ್ಗಿಸಿಕೊಂಡಳು.

''ಥ್ಯಾಕ್ಯೂ'' ಎನ್ನುತ್ತಾ ರಾಕೇಶ್ ಹೊರಟುಹೋದ.

ಅವಳ ಕಣ್ಣು ತೇವಗೊಂಡಿತ್ತು- ತಾನು ಆತನನ್ನು ಮದುವೆಯಾಗದಿದ್ದರೂ ತನ್ನ ಮೇಲಿನ ಮಮತೆ ಅವನಲ್ಲಿ ಕಡಿಮೆಯಾಗದೆ ಇದ್ದುದಕ್ಕಾಗಿ. 'ನಾನು ಹಣದಿಂದ ಏನೂ ಕೊಂಡುಕೊಡಲು ಸಾಧ್ಯವಿಲ್ಲ ನಾಲ್ಕು ದಿನಗಳಲ್ಲಿ ನಾನೇ ನಿಮ್ಮ 'ಫಸ್ಟ್‌ನೈಟ್'ಗೆ ಸಕಲ ಸಿದ್ಧತೆಗಳನ್ನು ತೋಟದಲ್ಲಿ ಮಾಡಿಕೊಡುತ್ತೇನೆ'. ಅದೇ ಮಾತು ಅವಳ ಕಿವಿಯಲ್ಲಿ ಗುಂಯ್‌ಗುಟ್ಟುತ್ತಿತ್ತು. ಅವನು ಹೋದ ಕಡೆಯೇ ನೋಡುತ್ತಾ ''ಎಷ್ಟು ಒಳ್ಳೆಯವನು'' ಎಂದುಕೊಂಡಳು.

ರಾಕೇಶ್ ಹೋಗುವವೇಳೆಗೆ ಭವಾನಿಶಂಕರ್ ಮತ್ತು ಇತರರು ಅಲ್ಲಿಯೇ ಇದ್ದರು.

''ಹೇಳಿದೆ. ನಕ್ಕು ಸುಮ್ಮನಿದ್ದಳು'' ಎಂದ ರಾಕೇಶ್.

ಈ ಮಾತಿಗೆ ತೃಪ್ತಿಯ ಉಸಿರಿಟ್ಟರು ಬವಾನಿಶಂಕರ್.

''ನಾಲ್ಕು ದಿನಗಳ ನಂತರ ಇಲ್ಲಲ್ಲ ತೋಟದಲ್ಲಿ ವ್ಯವಸ್ಥೆ ಮಾಡುತ್ತೇನೆ'' ಎಂದ ಸಮಸ್ಯೆ ಸುಲಭವಾಗಿ ಬಗೆಹರಿದಂತೆ.

ಆ ಮಾತನ್ನು ಅಷ್ಟಾಗಿ ಗಮನಿಸದವರಂತೆ ''ಅದಕ್ಕೇನು ಆಗಬಹುದು...'' ಎನ್ನುತ್ತಾ

ಹೊರಕ್ಕೆ ನಡೆದರು ಭವಾನಿಶಂಕರ್ ಆತನ ಹಿಂದೆ ರಾಕೇಶ್ ಮತ್ತು ಉಳಿದವರು ಹೊರಕ್ಕೆ ಹೋದರು.

ಕೊನೆಗೆ ಉಳಿದದ್ದು ಸಿದ್ಧಾರ್ಥ ಮಾತ್ರ.

ಒಮ್ಮೆ ಮೇಜಿನತ್ತ ಪರೀಕ್ಷಾ ನೋಟದಿಂದ ನೋಡಿದ.

ಬೆಕ್ಕು ಎಂತಹ ಸ್ಥಳದಲ್ಲಿಯೇ ಆದರೂ ತುಂಬಾ ಸುಲಭವಾಗಿ ನಡೆಯಬಲ್ಲ ಪ್ರಾಣಿ. ಅಂತಹದು ಹಾಲಿನ ಮೇಲೆ ಅಡಿಯಿರಿಸಿ ಜಾರುವುದು, ಜಾರುತ್ತಲೇ ಕುತ್ತಿಗೆಗೆ ಗಾಜಿನ ಚೂರು ಚುಚ್ಚುವುದು, ನೆಲದಿಂದ ಮಂಚದ ಮೇಲಕ್ಕೆ ಹಾರುವುದು, ಅಲ್ಲಿ ವಿಲಪಿಸಿ ಸಾಯುವುದು...

-ಇವಾವೂ ನಂಬಿಕೆಗೆ ಅರ್ಹ ಎನಿಸಲೇ ಇಲ್ಲ ಆತನಿಗೆ.

★★★

ಕಾರು ತೋಟದಲ್ಲಿ ಬಂದು ನಿಂತಿತು.

ಸಿದ್ಧಾರ್ಥ ಕಾರಿಂದಿಳಿದ, ಪಕ್ಕದಲ್ಲಿಯೇ ಇದ್ದ ಕೇದಾರಗೌರಿಯೂ ಇಳಿದಳು.

ರಾಕೇಶ್ ಒಂದು ಕ್ಷಣವೂ ಕಾರು ನಿಲ್ಲಿಸಲಿಲ್ಲ- "ಗುಡ್ ನೈಟ್ ಅಂಡ್ ಆಲ್ ದಿ ಬೆಸ್ಟ್" ಎಂದ.

ಧೂಳನ್ನೇಬ್ಬಿಸುತ್ತಾ ಕಾರು ಹೋಯಿತು.

ಅವರಿಬ್ಬರೇ ತೋಟದಲ್ಲಿ ಉಳಿದರು. ಇದ್ದಕ್ಕಿದ್ದಂತೆಯೇ ಇಬ್ಬರೇ ಉಳಿದಿದ್ದರಿಂದ ಅವರಿಗೇನೂ ತೋಚಲಿಲ್ಲ. ಕೇದಾರಗೌರಿಗೆ ಆ ತೋಟದಲ್ಲೂ ಹಣೆಯಿಂದ ಬಲವರು ಹನಿಯುತ್ತಿತ್ತು. ಅದನ್ನು ಗಮನಿಸಿದ ಸಿದ್ಧಾರ್ಥ "ಸ್ವಲ್ಪ ಹೊತ್ತು ಒಳಗೆ ಕುಳಿತುಕೊಳ್ಳೋಣವೇ?" ಎಂದು ಕೇಳಿದಾಗ ಸ್ಪಷ್ಟವಾಗಿ ತಲೆಯಾಡಿಸಿ ಒಪ್ಪಿಗೆ ಸೂಚಿಸಿದಳು.

ಪಂಪ್‌ಹೌಸ್ ಪಕ್ಕದಲ್ಲೇ ಒಂದು ಗೆಸ್ಟ್‌ರೂಂ ಇತ್ತು. ಅಲ್ಲಿಗೆಹೋಗಲು ಮೆಟ್ಟಿಲೇರಿದರು. ಆದರೆ ಅದಕ್ಕೆ ಬೀಗ ಹಾಕಿದ್ದರು!

ಇಬ್ಬರೂ ಅಪ್ರಯತ್ನವಾಗಿ ಪರಸ್ಪರ ಮುಖ ನೋಡಿಕೊಂಡರು.

ರಾಕೇಶ್ ಆ ಕೋಣೆಯ ಬೀಗದ ಕೈ ಕೊಡಲು ಮರೆತಿದ್ದಾನೆ ಎಂದು ಭಾವಿಸಿದರು.

ಸಿದ್ಧಾರ್ಥ ಬೇಸರದಿಂದ ಮೆಟ್ಟಿಲಿಳಿದು ಬಂದ. ಕೇದಾರಗೌರಿ ಅವನನ್ನು ಅನುಸರಿಸಿದಳು. ಪಂಪ್‌ರೂಂ ಪಕ್ಕದಲ್ಲಿಯೇ ಸಣ್ಣ ಕಾಲುವೆ ಹರಿಯುತ್ತಿತ್ತು. ಅದನ್ನು ದಾಟಿ ಇಬ್ಬರೂ ಹಿಂಭಾಗಕ್ಕೆ ಬಂದರು. ಅಲ್ಲಿಯ ದೃಶ್ಯ ಅವರನ್ನು ಚಕಿತಗೊಳಿಸಿತು. ಮಾತನಾಡಲಾರದೆ ಇಬ್ಬರೂ ಸ್ತಬ್ಧರಾಗಿ ನಿಂತರು.

ಭೂಮಿಗೆ ಎರಡು ಅಡಿ ಎತ್ತರದಲ್ಲಿ ಒಂದು ಮಂಚ. ಎಲ್ಲಾ ಹೂಗಳಿಂದಲೇ

ಸಿದ್ಧವಾಗಿದೆ- ಅದರ ಸ್ಥಂಬಗಳು, ಅಂಚುಗಳು, ಮಧ್ಯಭಾಗ ಎಲ್ಲವೂ ಹೂಗಳಿಂದಲೇ ಅಲಂಕೃತವಾಗಿದೆ. ಆ ಋತುವಿನಲ್ಲಿ ದೊರೆಯುವ ಎಲ್ಲಾ ಹೂಗಳೂ ಅಲ್ಲಿವೆ. ದೊರೆಯದವೂ ಎಲ್ಲಿಂದಲೋ ಕಣ್ತಪ್ಪಿಸಿ ಅಲ್ಲಿಗೆ ಬಂದಿವೆ...

ಅಲ್ಲಿಯ ನೋಟವೇ ಚೇತೋಹಾರಿಯಾಗಿದೆ.

ಮೆಲುಗಾಳಿಗೆ ಗುಲಾಬಿಗಳು ತಲೆದೂಗುತ್ತಿವೆ. ಅದರ ದಳಗಳು ಒಂದೊಂದಾಗಿ ಬೇರ್ಪಟ್ಟು ಕೆಳಕ್ಕೆ ಉದುರುತ್ತಿವೆ. ಮಂಚದ ಮಧ್ಯದಲ್ಲಿ ಹೃದಯಾಕಾರದಲ್ಲಿ ಜೋಡಿಸಲಾಗಿದ್ದ ಮಲ್ಲಿಗೆಗಳಿಂದ ಹೊಮ್ಮುತ್ತಿದ್ದ ನರುಗಂಪು ಅವರನ್ನು ಉಲ್ಲಾಸಗೊಳಿಸುತ್ತಿದೆ.

ಅದುವರೆಗೂ ಇದ್ದ ಬೇಸರವನ್ನು ಯಾರೋ ಕಸಿದು ದೂರ ಎಸೆದಂತಾಯಿತು. ಸಿದ್ಧಾರ್ಥ ನಸುನಗೆಯಿಂದ ಗೌರಿಯತ್ತ ನೋಡಿದ. ಅಲ್ಲಿಯ ಆರ್ಚ್‌ನ ಅಲಂಕಾರವನ್ನು ಕಣ್ಣಟ್ಟು ನೋಡುತ್ತಿದ್ದಳು ಗೌರಿ. ಅವನ ನೋಟದಲ್ಲಿ ಬೇರೆಯ ಅರ್ಥವನ್ನು ಗಮನಿಸಿ ನಾಚಿಕೆಯಿಂದ ತಲೆ ತಗ್ಗಿಸಿದಳು. ಸಿದ್ಧಾರ್ಥ ಅವಳ ಕೈಯನ್ನು ತನ್ನ ಕೈಯೊಳಕ್ಕೆ ತೆಗೆದುಕೊಂಡ. ಅವರ್ಣನೀಯವಾದ ಭಾವವೊಂದು ಆಕೆಯ ಮೈಯಲ್ಲೆಲ್ಲಾ ಹರಡಿತು- ಅದು ನಾಚಿಕೆಯೂ ಅಲ್ಲ; ಬಯಕೆಯೂ ಅಲ್ಲ. ಯುವಕರಲಿ,ಲ ಬಯಕೆ ಬಾಂಬಿನಂತೆ ಸಿಡಿಯುತ್ತದೆ. ಯುವತಿಯರಲ್ಲಿ ಪುರುಷನಾದವನು ಎಚ್ಚರಿಸುವ ತನಕ ಆ ಬಯಕೆ ಹಾಗೇ ನಿದ್ರಿಸುತ್ತಿರುತ್ತದೆ. ಆದರೆ ಈಗ ಇವೆಲ್ಲಕ್ಕಿಂತಲೂ ಬೇರೆಯೇ ಆದ, ಇವೆಲ್ಲಕ್ಕಿಂತಲೂ ಅತೀವವಾದ ಅನುಭೂತಿ. ಬೇರೆ ಯಾರಾದರೂ ಆಗಿದ್ದರೆ ದಿಕ್ಕುಗಾಣದಂತೆ ಭ್ರಮೆಗೆ ಬಲಿಯಾಗಿ ಅಚೇತರಾಗುತ್ತಿದ್ದರು. ಏನು ನಡೆಯಿತೆಂಬುದನ್ನೇ ಗುರುತಿಸಲಾರದಂತಹ ಹೊಸ ಮತ್ತಿನಲ್ಲಿ ಐಕ್ಯವಾಗುತ್ತಿದ್ದರು. ಆದರೆ ಆಕೆ ಆ ಅನುಭೂತಿಯ ಪ್ರತಿ ಕ್ಷಣವನ್ನೂ ಆಸ್ವಾದಿಸುತ್ತಿದ್ದಳು.

ಈ ರೀತಿ ಆಕೆಯನ್ನು ಸನ್ನದ್ಧಗೊಳಿಸಿದ್ದು ಆಕೆಯ ತಂದೆ.

ಹದಿನೆಂಟನೆಯ ಶತಮಾನದಲ್ಲಿ ಮನುಷ್ಯ ಹೆಚ್ಚಾಗಿ ನಂಬಿಕೆಗೆ ಪ್ರಾಶಸ್ತ್ಯವನ್ನು ನೀಡಿದ್ದ. ಹತ್ತೊಂಬತ್ತರಲ್ಲಿ ಪ್ರಕೃತಿಯ ಮೇಲೆ ವಿಜಯ ಸಾಧಿಸಲು ಪ್ರಯತ್ನಿಸಿದ. ಇಪ್ಪತ್ತನೆಯ ಶತಮಾನದಲ್ಲಿ ಯೋಜನಾ ಬದ್ಧವಾಗಿ ತನ್ನ ಜೀವನವನ್ನು ಸುಖಕರವಾಗಿಸಿಕೊಳ್ಳಲು ಪ್ರಯತ್ನಿಸುತ್ತಿದ್ದಾನೆ. ಅಂತಹ ಪ್ರಯತ್ನಗಳಲ್ಲಿ 'ಸೆಕ್ಸ್ ಎಜುಕೇಷನ್' ಒಂದು ಮಕ್ಕಳನ್ನು, ಹೆಂಗಸರನ್ನು ಅಜ್ಞಾನದ ಕತ್ತಲಲ್ಲಿ ಇರಿಸಿ ಸೆಕ್ಸ್ ಬಗ್ಗೆ ತಿಳಿಯದಂತೆ ತಡೆದು ಅದರಿಂದ ನೈತಿಕತೆಗೆ ನ್ಯಾಯವನ್ನು ದೊರಕಿಸಿದ್ದೇವೆ ಎಂಬ ಭ್ರಮೆಯಲ್ಲಿರುವ ಹಿರಿಯರು ತಮ್ಮ ಅಭಿಪ್ರಾಯವನ್ನು ಆಕೆ ಸ್ವಲ್ಪ

ಬದಲಿಸಿಕೊಳ್ಳುವುದರಿಂದ ಮಾನವಕುಲಕ್ಕೆ ದೊಡ್ಡ ನ್ಯಾಯ ದೊರಕಿಸಿಕೊಟ್ಟಂತಾಗುತ್ತದೆ.

ಮನುಷ್ಯನ ಯೋಚನೆಯಲ್ಲಿ ಕ್ರಮಕ್ರಮವಾಗಿ ಬದಲಾವಣೆ ಬರುತ್ತಿದೆ. ಹಾಗೆ ಬದಲಾದವರ ಸಾಲಿನಲ್ಲಿ ಆಕೆಯ ತಂದೆ ಒಬ್ಬರು. ಏನೋ ಇದೆ ಎನ್ನುವ ಕುತೂಹಲಕ್ಕಿಂತಲೂ, ಇರುವುದು ಇದೇ ಎಂಬ ವಿಜ್ಞಾನ 14-20ರ ವಯಸ್ಸಿನಲ್ಲಿ ನೆರವಾಗುತ್ತದೆ ಎಂದು ನಂಬಿದ್ದವರು ಅವರು.

ಯಾವ ಸಮಾಜದಲ್ಲಾದರೂ ಮನುಷ್ಯನು 'ಪ್ರೊಡಕ್ಟೀವ್' ಆಗಿ ಕೆಲಸ ಮಾಡದೆ ಹೋದರೆ ಅದಕ್ಕೆ ಕಾರಣ ಆ ಮನುಷ್ಯನಿಗೆ ದೊರೆಯಬೇಕಾದ ಆನಂದ ದೊರೆಯದೆ ಹೋಗುವುದೇ ಎಂದು, ಆ ರೀತಿ ಆನಂದ ನೀಡಲಾರದೇ ಹೋಗಲು ಕಾರಣ ತನ್ನ ಬಾಲ್ಯದಲ್ಲಿ ಆ ಸಂಗತಿಗಳ ಬಗ್ಗೆ ಅರಿವು ಬೆಳೆಸಿಕೊಳ್ಳದಿರುವುದು. ಬಯಕೆ ಬಲಿಯದೆ ಇರುವಿಕೆ, ತನ್ನ 'ಬಯಕೆ' ತಿಳಿಸದೆ ಒಳಗೆ ಅಡಗಿಸಿಕೊಂಡಿರುವಿಕೆ...ಇದೇ ಮುಂತಾದವೆಂಬುದನ್ನು ಮನುಷ್ಯ ತಿಳಿಯಲು ಕ್ರಿಸ್ತನು ಹುಟ್ಟಿದ ನಂತರ 1990 ವರ್ಷಗಳೇ ಬೇಕಾಗಿ ಬಂತು!

ತಮ್ಮ 12-19ರ ವಯಸ್ಸಿನಲ್ಲಿ ಅರಿವಿಲ್ಲದೆ ತಾವೆಷ್ಟು ನೋವಿಗೆ ತುತ್ತಾಗಿದ್ದೇವೆಂಬುದನ್ನು ಈ ಹಿರಿಯರು ಮರೆಯುತ್ತಾರೆ. ತಮ್ಮ ಮಕ್ಕಳು ಈ ಹಂತಕ್ಕೆ ಬರುತ್ತಲೇ ಅವರು ತಮ್ಮಷ್ಟಕ್ಕೆ ತಾವೇ ಈ ಸ್ಥಿತಿಯಿಂದ ಹೊರಬರಬೇಕೆಂದೂ ಬಯಸುತ್ತಾರೆ. ಇದ್ದೆ ಪ್ರಕೃತಿ ಸಿದ್ಧವೆಂದೂ, ಪ್ರಕೃತಿಯೇ ಎಲ್ಲವನ್ನೂ ಕಲಿಸುತ್ತದೆ ಎಂದು ಭಾವಿಸುತ್ತಾರೆ. ತಾವು ಹೇಳದಿದ್ದರೆ ಈ ಎಳೆಯರು ಬೇರೆಲ್ಲಿಯಾದರೂ, ಹೇಗಾದರೂ ತಿಳಿಯುತ್ತಾರೆ ಅದು ನಿಶ್ಚಯವಾಗಿ ತೀರಾ ಹಾನಿಕರ ಮಾರ್ಗ ಎಂಬುದನ್ನು ಅರಿಯುವುದಿಲ್ಲ. ತಿಳಿದಿದೆ ಎನ್ನುವುದಕ್ಕಿಂತಲೂ ತಿಳಿಯದು ಎನ್ನುವುದರಿಂದಲೇ ಅವರ ಯೋಚನೆಗಳು ಅದರ ಸುತ್ತ ಸುತ್ತಲು ಪ್ರಾರಂಭಿಸುತ್ತವೆ.

ಬವಾನಿಶಂಕರ್ ಬಳಿ ಇದೇ ರೀತಿಯ ಸಮಸ್ಯೆ ಕೆಲವು ವರ್ಷಗಳ ಹಿಂದೆ ಬಂದಿತ್ತು.

ಕೇದಾರಗೌರಿ ಸೈನ್ಸ್ ಪುಸ್ತಕದಲ್ಲಿ ಇಂತಿತ್ತು: 'ಸ್ವಪರಾಗ ಸಂಪರ್ಕ ಕೇವಲ ವೃಕ್ಷ ಜಾತಿಯಲ್ಲಿ ಮಾತ್ರವೇ ಸಾಧ್ಯ. ಮನುಷ್ಯರಲ್ಲಿ ಇದು ಸಾಧ್ಯವಿಲ್ಲ...''

ಯಾವುದಾದರೂ ಅನುಮಾನವೆಂದರೆ ತಂದೆಯನ್ನು ಕೇಳುವುದು ಪದ್ಧತಿ. ಈ ಪ್ರಶ್ನೆ ಕೇಳಿದಾಗ ಒಂದು ಕ್ಷಣ ಮಗಳತ್ತ ದಿಟ್ಟಿಸಿದ. ಹೇಳಬೇಕಾದ ವಯಸ್ಸು ಬಂದಿದೆ ಎಂದು ತೀರ್ಮಾನಿಸಿಕೊಂಡರು.

ಋತುಸ್ರಾವದ ಚಕ್ರೀಯ ಕ್ರಿಯೆ, ಅಂಡಾಶಯದ ಕಾರ್ಯ ಇವನ್ನೆಲ್ಲಾ ತಿಳಿಸಿ, ''ಹೆಣ್ಣು-ಗಂಡುಗಳ ಮಧೆ+ಯ ಇರುವ ಮೂಲಭೂತ ವ್ಯತ್ಯಾಸಗೊತ್ತಿದೆಯೇ ಮಗೂ?'' ಎಂದು ಕೇಳಿದ್ದರು.

ಹಿಂದುಮುಂದು ನೋಡಿ ಗೊತ್ತೆನ್ನುವಂತೆ ತಲೆಯಾಡಿಸಿದಳು.

''ಈಗ ನಾನು ಗಂಡಿನ ದೇಹಸ್ಥಿತಿ ಬಗ್ಗೆ ಹೇಳುತ್ತೇನೆ'' ಎಂದು ಸ್ವಲ್ಪ ತಡೆದು ಮಾತು ಮುಂದುವರಿಸಿದ...''ಹದಿನೈದು, ಹದಿನಾರು ವರ್ಷಗಳು ದಾಟಿದ ಗಂಡಿಗೆ ಸ್ತ್ರೀ ಬಗ್ಗೆ ಯೋಚನೆ ಬಂದಾಗ ಅವನ ಮೈಯಲ್ಲಿ ಸ್ವಲ್ಪ ಬದಲಾವಣೆ ಬರುತ್ತದೆ. ಅದು ಕೆಲವು ನಿಮೋಷಗಳು ಮಾತ್ರವೇ ಇರುತ್ತದೆ. ನಂತರ ಮಾಮೂಲಿನಂತಾಗುತ್ತಾನೆ. ಮಿದುಳಿನಲ್ಲಿ ಹೆಣ್ಣನ್ನು ಕುರಿತ ಯೋಚನೆಗಳು ಬರುತ್ತಿದ್ದಂತೆ ಅವನ ಮೈಯಲ್ಲಿ ರಕ್ತ ಚಲನೆ ಹೆಚ್ಚು ತೀವ್ರವಾಗುತ್ತದೆ. ಮುಖ್ಯವಾಗಿ ಇದು ಅವನ ಜನನೇಂದ್ರಿಯದಲ್ಲುಂಟಾಗುತ್ತದೆ...ಯಾವಾಗಲೂ ಮಾಮೂಲಾಗಿರುವ ಈ ಅಂಗ ಕೆಲಕಾಲ ಬದಲಾವಣೆ ಹೊಂದುವುದನ್ನು ಉದ್ರೇಕ ಎನ್ನುತ್ತಾರೆ...''

ಈ ಮಾತುಗಳನ್ನು ಕೇದಾರಗೌರಿ ಕೇಳುತ್ತಿದ್ದಳಾದರೂ ತಂದೆಯತ್ತ ನೋಡಲು ನಾಚಬೇಕೇನೋ ಎಂದುಕೊಂಡಳಾದರೂ ವಿಚಿತ್ರವಾಗಿ ಆ ರೀತಿಯ ಭಾವನೆಗಳೇನೂ ಉಂಟಾಗಲಿಲ್ಲ.

''ಆ ರೀತಿ ಉದ್ರೇಕಗೊಂಡ ಅವಯವವನ್ನು ಪುರುಷನು ಸ್ತ್ರೀಯ ಯೋನಿಯಲ್ಲಿರಿಸುವುದನ್ನೇ 'ಸಂಪರ್ಕ' ಅನ್ನುತ್ತಾರೆ. ಅದನ್ನು ರತಿ, ಮೇಟಿಂಗ್ ಎಂದೂ ಕರೆಯುತ್ತಾರೆ. ಗಂಡು ಹೆಣ್ಣುಗಳಿಗೆ ಪ್ರತ್ಯೇಕ ಅಂಗಗಳೇ ಇರುವುದರಿಂದ ಮನುಷ್ಯರಲ್ಲಿ ಸ್ವ-ಪರಾಗ ಸಂಪರ್ಕ ಸಾಧ್ಯವಾಗದು. ಈ ಸಂಪರ್ಕ ಮೂರು-ನಾಲ್ಕು ನಿಮಿಷಗಳಕಾಲ ನಡೆಯುತ್ತದೆ. ಮಾಮೂಲಿ ಸಮಯದಲ್ಲಿ ಮೂತ್ರವನ್ನು ಹೊರಚೆಲ್ಲುವ ಮುರುಷ್ಯೇಂದ್ರಿಯವು ಈ ಸಂದರ್ಭದಲ್ಲಿ ಬಿಡುಗಡೆ ಮಾಡುವ ದ್ರವವೇ ವೀರ್ಯ ಎನ್ನುತ್ತಾರೆ. ವೀರ್ಯದ ಬಿಡುಗಡೆ ನಂತರ ಅದು ಮಾಮೂಲಿಯಾಗುತ್ತದೆ ಎನ್ನುವುದು ಬೇರೆ ಸಂಗತಿ. ಆ ವೀರ್ಯದಲ್ಲಿ ಕೋಟ್ಯಂತರ ಜೀವಕಣಗಳಿರುತ್ತವೆ...'' ಎಂದು ಹೇಳಿ ಸ್ವಲ್ಪನಿಲ್ಲಿಸಿದರು.

''ಈ ಜೀವ ಕಣಗಳಲ್ಲಿ ಯಾವುದೇ ಒಂದು ಸ್ತ್ರೀಯ ಅಂಡಾಶಯ ಅಥವಾ ಗರ್ಭವನ್ನು ಸೂಕ್ತ ಸಮಯದಲ್ಲಿ ಸೇರಿದರೆ ಆ ಸ್ತ್ರೀ ಗರ್ಭವತಿಯಾಗುತ್ತಾಳೆ. ಒಂದೊಂದು ಕಣದಲ್ಲಿ ಇಪ್ಪತ್ಮೂರು ಕ್ರೋಮೋಜೋಮ್ಸ್ ಇರುತ್ತವೆ. ಎರಡೂ ಬೆರೆತು ಜತೆಗಳಾಗುವುದೇ ಸೃಷ್ಟಿ'' ಎಂದು ಹೇಳಿ ನಕ್ಕರು... ''ಎಂದೋ ಓದಿದ ವಿಷಯ. ನಂತರ ಪೂರ್ತಿಯಾಗಿ ಮಱತಿದ್ದೇನೆ. ಆದರೆ ಜೆನೆಟಿಕ್ ಎಂಜನಿಯರಿಂಗ್ ತುಂಬಾ ಒಳ್ಳೆಯ ವಿಷಯ. ಇದಕ್ಕೆ ಸಂಬಂಧಿಸಿದಂತೆ ಇನ್ನೂ ಬಹಳ ಸಂಗತಿಗಳು ತಿಳಿಯಬೇಕಾಗಿದೆ. ಅನೇಕವು ಇನ್ನೂ ರಹಸ್ಯಗಳೇ ಆಗಿವೆ. ನೀನೆನಾದರೂ ಈ ಬಗ್ಗೆ ಓದಿದರೆ ತಪ್ಪದೆ ಈ ಬಗ್ಗೆ ಸಂಶೋಧನೆ ನಡಲಸು. ನೀನೇ ಒಂದು ಹೊಸ ಸಂಗತಿಯನ್ನು ಹೊರತರಲೂಬಹುದು...''

ಆಕೆ ಆ ವಿಷಯ ಓದಲಿಲ್ಲ. ಬದಲಾಗಿ ವ್ಯವಸಾಯದ ಬಗ್ಗೆ ಓದಿದಳು. ಅದೂ ಡಿಗ್ರಿಗಾಗಿಯೇ. ಒಡನೆಯೇ ಗೃಹಿಣಿಯಾದಳು. ಇದೆಲ್ಲಾ ನಂತರದ ಸಂಗತಿಗಳು. ಆಗ ಮಾತ್ರ ಆಕೆಯ ಕಿರು ಪ್ರಪಂಚದಲ್ಲಿ ಹೊಸ ಮಾರ್ಗವನ್ನು ಕಂಡಾಂತಾಗಿತ್ತು. ಆದುವರೆವಿಗೂ ಅಂತಹುದೊಂದು ಇದೆ ಎಂಬ ಸಂಗತಿಯೇ ತಿಳಿದಿರಲಿಲ್ಲ.

ಏಕೋ ತಾಯಿಯ ನೆನಪಾಯಿತು. ಎಲ್ಲಾ ಕೇಳಿದ ಮೇಲೆ ಇದೆಲ್ಲಾ ಸಂಗತಿಗಳು ತನ್ನ ತಾಯಿ ಹೇಳಿದ್ದರೆ ಎಷ್ಟು ಚೆನ್ನಾಗಿರುತ್ತಿತ್ತು ಎನಿಸಿತ್ತು. ಆದರೂ ತೋರಿಕೆಯ ಭ್ರಾಂತಿ ಮೌಲ್ಯಗಳಿಗೆ ಮಾರು ಹೋಗಿರುವ ಸಮಾಜದಲ್ಲಿ ತಾಯಿಯೂ ಈ ವಿಷಯಗಳನ್ನೆಲ್ಲಾ ಹೇಳುವುದಿಲ್ಲ ಎಂಬುದು ಅವಳಿಗೆ ಗೊತ್ತಿರಲಿಲ್ಲ.

''ಡ್ಯಾಡಿ, ನೀವು ಸೆಕ್ಸ್ ಎಜುಕೇಷನ್‌ಗೆ ಕ್ಯಾನ್‌ವಾಸ್ ಮಾಡ್ತಿದೀರಾ?''ಎಂದು ಕೇಳಿದಳು.

''ಕೆಲವು ಮೂಲಭೂತವೂ, ಪ್ರಾಥಮಿಕವೂ ಆದ ಸಂಗತಿಗಳನ್ನು ಸೂಕ್ತರಾದವರಿಂದ ಸರಿಯಾಗಿ ಒಳ್ಳೆಯ ಮಾರ್ಗದಿಂದ ತಿಳಿದುಕೊಳ್ಳಬೇಕಾಗಿದದ್ದು ತೀರಾ ಅವಶ್ಯಕ. ಈ ದ:ಭಾಗ್ಯದ ದೇಶದಲ್ಲಿ ಈ ವಿಜ್ಞಾನದ ಅರಿವಿಲ್ಲದೆ. ಮದುವೆಯಾಗುವ ತನಕ ಅರ್ಧ ಮಂದಿಗೆ ತಾನು ಹೊಟ್ಟೆಯನ್ನು ಸೀಳಿಕೊಂಡು ಹುಟ್ಟಿದೆವು ಎಂಬುದೂ ತಿಳಿದಿರದು. ಅನೇಕ ಹೆಂಗಸರಿಗೆ ತಮ್ಮ ತಮ್ಮ ದೇಹದಲ್ಲಿ ಮೂತ್ರಕ್ಕಾಗಿ ಬೇರೆ ದಾರಿ; ಮಕ್ಕಳು ಹುಟ್ಟುವುದಕ್ಕಾಗಿ ಬೇರೆ ದಾರಿ ಇದೆ ಎಂಬುದು ಗೊತ್ತಿಲ್ಲದೆ ಇರುವುದೂ ಉಂಟು!...''

ತಂದೆಗೆ ಕೋಪ ಬಂದಿದೆ ಎಂಬುದು ಗೌರಿಗೆ ಗೊತ್ತಾಯಿತು. ಕೋಪ ಯಾರ ಮೇಲೋ...?

''ಇದೆಲ್ಲಾ ತಿಳಿದುಕೊಳ್ಳಬೇಕಾದುದು ಅವಶ್ಯಕವೇ ಡ್ಯಾಡೀ?'' ಎಂದು ಕೇಳಿದಳು.

ಸ್ವಲ್ಪ ಕಾಲ ಮೌನವಹಿಸಿ ನಂತರ ಹೇಳಿದರು: ''ನನಗೆ ಗೊತ್ತಿರುವ ಹದಿನಾಲ್ಕು ವರ್ಷದ ಒಬ್ಬ ಹುಡುಗಿಯನ್ನು ಅವಳ ಮಾವಯ್ಯ ಹತ್ತಿರಕ್ಕೆ ಸೆಳೆದುಕೊಂಡು ವೈಜ್ಞಾನಿಕವಾಗಿ ಅಲ್ಲದೆ ಇದನ್ನು ರಹಸ್ಯವಾಗಿ ಹೇಳುತ್ತಾ ಆ ಅವಕಾಶವನ್ನು ಬಳಸಿಕೊಳ್ಳಲು ಪ್ರಯತ್ನಿಸಿದ. ಆ ವೇಳೆಗೆ ಆ ಹುಡುಗಿಯ ಅಂತರಾತ್ಮ ನೋವು ಅನುಭವಿಸಿದಳು. ಈಗ ಹೇಳು ಇದು ಹೇಗೆ ನಡೆಯುತ್ತದೆ. ನಿಮ್ಮ ನಿಮ್ಮ ಜೀವನದ ಹಾದಿ ನೀವೇ ತೀರ್ಮಾನಿಸಿಕೊಳ್ಳಿ ಎಂದು ವಿದ್ಯಾರ್ಥಿ ಜೀವನದಲ್ಲೇ ಹೇಳುವುದು ತಪ್ಪೇ? ಇದರಿಂದ ಕನಿಷ್ಠ ಮುಗ್ಧತೆಯಿಂದ ಅನ್ಯಾಯವಾಗುವವರಾದರೂ ಉಳಿದುಕೊಳ್ಳುತ್ತಾರೆ...''

ಈ ಮಾತಿಗೆ ಏನು ಹೇಳಲಾದರೆ ನಗುತ್ತಾ ಮಾತು ಬದಲಿಸಲು ''ಆ ಹುಡುಗಿ ಯಾರು ಡ್ಯಾಡಿ?'' ಎಂದು ಕೇಳಿದಳು.

ಶಾಂತನಾಗಿ ಸ್ಪಷ್ಟವಾಗಿ ಹೇಳಿದ- ''ನಿಮ್ಮಮ್ಮ''

ಷಾಕ್ ಎಂದರೆ ಏನು ಎಂಬುದು ಅವಳಿಗೆ ಅನುಭವವಾದದ್ದು ಅಂದೇ!

''ಗೌರೀ, ಏನೋ ಯೋಚಿಸುತ್ತಿರುವಂತಿದೆ'' ಎಂದು ಕೇಳಿದ ಸಿದ್ಧಾರ್ಥ.

ಒಡನೆಯೇ ಎಚ್ಚೆತ್ತು ''ಏನೂ ಇಲ್ಲ'' ಎಂದಳು. ಏನೋ ಮುಜುಗರ ಏನೆಂಬುದು ಗೊತ್ತಾಗುತ್ತಿಲ್ಲ.

ಸಿದ್ಧಾರ್ಥ ಆಕೆಯನ್ನೇ ನೋಡುತ್ತಿದ್ದಾನೆ. ತನ್ನಲ್ಲಿ ಹಣ, ಸಮಾಜದಲ್ಲಿ ಸ್ಥಾನ-ಗೌರವ ಇದೆಲ್ಲಾ ಇಲ್ಲದಿದ್ದರೂ ತನ್ನನ್ನೇ ಬಯಸಿ ಆಕೆ ಮದುವೆಯಾದದ್ದು ಅವನಿಗೆ ಅತ್ಯಂತ ಸಂತೃಪ್ತಿ ನೀಡುತ್ತಿತ್ತು. ಸಂತೃಪ್ತಿಯೇ ಬಯಕೆಯಾಗಿ ಸೆಟೆದು ನಿಲ್ಲುವ ಸಮಯ. ಬಯಕೆಯ ಬೆಂಕಿಗೆ ಹೂಗಳ ಮೇಲಿಂದ ಬೀಸಿ ಬರುತ್ತಿದ್ದ ಗಾಳಿ ಮುಂಗುರುಳನ್ನು ಚಲಿಸುತ್ತಾ ಆಜ್ಯವನ್ನು ಸುರಿಯುತ್ತಿತ್ತು.

ಅವಳನ್ನು ಬಳಿಗೆ ಸೆಳೆದುಕೊಂಡ.

ಅವಳು ಕಣ್ಮುಚ್ಚಿದಳು.

ಅವಳು ಬಗ್ಗಿ ಅವಳ ತುಟಿಗಳಿಗೆ ಮುತ್ತನಿಟ್ಟ-ಬಾಳಿನ ಮೊದಲ ಮುತ್ತು.

ಮನಸ್ಸು-ಶರೀರವನ್ನು ಗಂಡನಿಗೇ ಕೊಡುವುದು ಒಂದು ಪದ್ಧತಿ. ರತಿಗೆ ಯಾವ ಮೌಲ್ಯವೂ ಕೊಡದೆ ಅದೊಂದು ದೈಹಿಕ ಅವಶ್ಯಕತೆಯೆಂದು ಭಾವಿಸಿ ಅನುಭವಿಸಿ ಉಳಿದ ವಿಷಯಗಳ ಬಗ್ಗೆ ಏಕಾಗ್ರತೆಯನ್ನುಳಿಸಿಕೊಳ್ಳುವುದು ಎರಡನೆಯ ಪದ್ಧತಿ. ಶಾರೀರಿಕವಾಗಿ ಹಾಳಾಗದೆ, ಮಾನಸಿಕವಾಗಿ ಹಾಳಾಗುತ್ತಾ ಎಂದರೆ ಮದುವೆಯಾಗದೆ ಗಂಟೆಗಟ್ಟಲೆ ಮಾತನಾಡುತ್ತಾ ನಿಲ್ಲುವುದು, ಗಾಳಿಯಲ್ಲಿ ಮುತ್ತು ಹಾರಿಸುವುದು ಗಂಟೆಗಟ್ಟಲೆ ಮಾತನಾಡುತ್ತಾ ನಿಲ್ಲುವುದು, ಗಾಳಿಯಲ್ಲಿ ಮುತ್ತು ಹಾರಿಸುವುದು ಮುಂತಾದವು ಮೂರನೆಯ ಪದ್ಧತಿ. ನನ್ನ ಮಗಳು ಮೊದಲ ಎರಡರಲ್ಲಿ ಯಾವುದು ಆರಿಸಿಕೊಂಡರೂ ಸಂತೋಷಿಸುತ್ತೇನೆ. ಆದರೆ ಹೀನವಾದ ಮೂರನೆಯದು ಮಾತ್ರ ಅನುಸರಿಸಬಾರದು.

ಆಕೆ ಮೊದಲ ಪದ್ಧತಿಯನ್ನೇ ಅನುಸರಿಸಿದ್ದಳು. ಆದ್ದರಿಂದಲೇ ಆ ಕ್ಷಣದಲ್ಲಿ ಅಲೌಕಿಕವಾದ ಸ್ಥಿತಿಯಲ್ಲಿ ತಾದಾತ್ಮ್ಯವನ್ನು ಅನುಭವಿಸುತ್ತಿದ್ದಳು. ಮೊದಲಲ್ಲಿ ಬಯಲು ಪ್ರದೇಶದಲ್ಲಿ ಸ್ವಲ್ಪ ಗಾಬರಿಗೊಂಡಿದ್ದಳು. ಆದರೆ ಅವನ ಮಾತುಗಳು ಆ ಅಂಜಿಕೆಯನ್ನು ದೂರ ಮಾಡಿದವು. ನಂತರ ಪರಿಸರವೇ ತಿಳಿಯಲಿಲ್ಲ. ಅಷ್ಟು ಗಾಳಿಯಲ್ಲೂ ಅವಳ ನೊಸಲಲ್ಲಿ ಬೆವರ ಹನಿಹಾಗೇ ನಿಂತಿತ್ತು. ಚಳಿಯಲ್ಲೂ ಅವಳ ತುಟಿಗಳು ಒಣಗಿದ್ದವು. ಆ ಕತ್ತಲಲ್ಲೂ ನಾಚಿ ಕಣ್ಮುಚ್ಚಿದ್ದಳು. ಚಂದ್ರನು ಮೇಘದ ಮರೆಗೆ ಹೋಗುತ್ತಾ ಉಳಿದ ಗಂಧವನ್ನು ಅವಳ ಮೆಎಗೆ ಹಚ್ಚಿದ್ದ. ಅವಳ ಮೈ ಚಂದನದಂತೆ ಹೊಳೆಯುತ್ತಿತ್ತು. ಚಂದ್ರ ಮರೆಯಾಗುತ್ತಲೇ ನಕ್ಷತ್ರಗಳು ಬಾನಿನಲ್ಲೂ

ಆಕೆಯ ಕಣ್ಣಲ್ಲೂ ಬೆಳಗಿದವು. ಇದರಿಂದ ಕೋಪಗೊಂಡ ಮೇಘವು ಆಕೆಯ ಕಣ್ರೆಪ್ಪೆಯಾಗಿ ಕಣ್ಣನ್ನು ಅರೆಮುಚ್ಚಿತು. ಸೋತ ನಕ್ಷತ್ರಗಳು ಆಕೆಯ ಜಡೆಯಿಂದ ಉದುರಿದ ಹೂಗಳಾಗಿ ಹಾಸಿನಲ್ಲೆಲ್ಲಾ ಬಿದ್ದು ದಿಕ್ಕಾಪಾಲಾದವು ಗೆದ್ದ ಮೇಘವು ಮಳೆಗಾಗಿ ಶಾಂತಗೊಂಡಿತು.

ಕಾಡಿನಲ್ಲಿ ಸುರಿಮಳೆ...ಬೆವರಿನಿಂದ ಒದ್ದೆಯಾದ ಪರ್ವತಗಳು...ಮರಳುಗಾಡಿನಲ್ಲಿ ಬತ್ತಿಹೋದ ಓಯಸಿಸ್ಸುಗಳು...ಬಳಲಿ ವಿಶ್ರಾಂತಿ ಅನುಭವಿಸುವ ಪ್ರಕೃತಿ...

ಆ ನಿಶ್ಯಬ್ದದಿಂದ ಒಂದು ಪೊದೆಯಲ್ಲಿ ಏನೋ ಸದ್ದು. ಅದು ತೋಳದ ಮರಿಯೋ, ನರಿಯ ಮರಿಯೋ ಕತ್ತಲಲ್ಲಿ ಕಾಣಸುತ್ತಿಲ್ಲ. ಹೊರಬಂದು ತಾಯಿಗಾಗಿ ಭಯಂಕರವಾಗಿ ಅರಚಿತು. ಒಂದು ಕಾಗೆ, ಬೇರೊಂದು ಪಕ್ಷಿಭಯದಿಂದ 'ಬೇಡ ಬೇಡ' ಎನ್ನುತ್ತಾ ಚೀರಿದವು. ಭೂದೇವಿ ಕೋಪಗೊಂಡಿದ್ದಳು. ಸುತ್ತಲೂ ಇದ್ದ ಗಿಡ-ಮರಗಳು, ಆಕಾಶನಕ್ಷತ್ರಗಳು, ಮೋಡಗಳು ಎಲ್ಲಾ ಅಶಕ್ತ ಪ್ರೇಕ್ಷಕರಾಗಿದ್ದವು.

ಆತನು ತನ್ನಲ್ಲಿಯ ಇಪ್ಪತ್ಮೂರು ಅಂಶಗಳನ್ನು ತೆಗೆದುಕೊಂಡು ಆಕೆಯಲ್ಲಿರುವ ಇಪ್ಪತ್ಮೂರು ಅಂಶಗಳನ್ನು ಸೇರಬೇಕಾದಾಗ...ಪರ್ವತಾಂಶಗರ್ಭದಲ್ಲಿ, ಕಾಡುಗಳಲ್ಲಿ ಸಂಗ್ರಹವಾದ ಕಸದ ಅಡಿಯಲ್ಲಿ ತರಗೆಲೆಗಳ ಮಧ್ಯೆ ಯಾರೋ ನಿಟ್ಟುಸಿರಿಟ್ಟಂತೆ ಧ್ವನಿ...ಮುಂದೆಯಿಂದ ಬೇರ್ಪಟ್ಟ ಕುರಿಮರಿಯನ್ನು ಕಣ್ರೆಪ್ಪೆ ಹಾಕುವಷ್ಟರಲ್ಲಿ ಕಬಳಿಸಿ ಸೋಮಾರಿತನದಿಂದ ಮರಕ್ಕೆ ಸುತ್ತಿಕೊಂಡು ಮಲಗಿದ್ದ ಹೆಬ್ಬಾವನ್ನು ನಿದ್ರೆಯಿಂದ ಯಾರೋ ಎಚ್ಚರಗೊಳಿಸಿದಂತೆ ಎಚ್ಚರಗೊಂಡು ಮತ್ತಷ್ಟು ಮೇಲಕ್ಕೇರಿತು.

ಪ್ರಪಂಚದಲ್ಲೆಲ್ಲಾ ಏನೋ ತೊಂದರೆಯಾಗಿ ಭೂಕಂಪ ನಡೆದ ಕ್ಷಣದಲ್ಲಿ ಕೋವಲ ಕೆಲವರು ಮಾತ್ರವೇ ಆನಂದದಿಂದ ಪೈಶಾಚಿಕ ನೃತ್ಯವನ್ನು ನಡೆಸಿದ ಕ್ಷಣ...ಚಿಕ್ಕ ತಲೆ ದೊಡ್ಡ ಬಾಲದ ಶುಕ್ಲಕಣವು ಒಂದು ಅಂಡವನ್ನು ಚೈತನ್ಯಗೊಳಿಸಲು ಹೊರಟ ಆ ಕ್ಷಣದಲ್ಲಿ...

ಆ ಗರ್ಭದಲ್ಲಿ ಅಡಗಿಕೊಳ್ಳಲು ಸುಷುಪ್ತಿಯಿಂದ ಮೆಲ್ಲನೆ ಕಣ್ತೆರೆಯಿತು:

ಕಾಷ್ಮೋರಾ

ಆ ಪಿಂಡಕ್ಕೆ ಪ್ರಾಣ ಬಂದರೆ, ಉಸ್ರೋಕ್ ಸದಸ್ಯರ ಆಸೆ ನೆರವೇರಲು ಕುಟ್ಟಿ ಸೈತಾನ್ ರಾಜ್ಯವನ್ನು ಸ್ಥಾಪಿಸಲು ಸರಿಯಾಗಿ ಒಂಬತ್ತು ತಿಂಗಳ ನಂತರ ಹುಟ್ಟುತ್ತಾನೆ.

ಅಷ್ಟಾವಕ್ರನ ಆವಿರ್ಭಾವವಾಗುತ್ತದೆ!

## 12

ಡಾಕ್ಟರ್ ರಂಗಪ್ರಸಾದ್ ಕೌಂಟರ್ ಕಡೆ ಬೇಸರದಿಂದ ನೋಡಿದ. ವಿಮಾನಾಶ್ರಯದಲ್ಲಿ ಸೀಟ್ ಬುಕಿಂಗ್ ಕೌಂಟರ್ ಅದು. ಆದರೂ ಜನ ಅಲ್ಲಿ

ಸಂತೆಗಿಂತಲೂ ಹೆಚ್ಚಾಗಿದ್ದಾರೆ. ಆತನದು 'ಓಕೆ' ಟಿಕೆಟ್ ಆದ್ದರಿಂದಲೇ ಶ್ರಮ ತಪ್ಪಿತ್ತು. ಬೋರ್ಡಿಂಗ್ ಸ್ಲಿಪ್ ತೆಗೆದುಕೊಂಡು ಹಿಂತಿರುಗುತ್ತಿದ್ದಾಗ ಜನ ಗಲಾಟೆ ಮಾಡುತ್ತಿದ್ದುದು ಕೇಳಿಸಿತು. ಒಬ್ಬ ವ್ಯಕ್ತಿ ಹಿಂದಿನಿಂದ ಹೋಗಿ ಟಿಕೆಟ್ ತೆಗೆದುಕೊಳ್ಳುತ್ತಿದ್ದರೆ ಹೇರಗಿನಿಂದ ಯಳಿದವರು ಗಲಾಟೆ ಮಾಡುತ್ತಿದ್ದರು.

ಅದ್ಯಾವುದರ ಪರಿವೆಯೂ ಇಲ್ಲದಂತೆ ಕೌಂಟರಿನಲ್ಲಿದ್ದ ವ್ಯಕ್ತಿಯೊಂದಿಗೆ ನಗುತ್ತಾ ಮಾತನಾಡುತ್ತಿದ್ದ; ಅಷ್ಟರಲ್ಲಿ ಬಿಳಿಯ ಸರ್ಟ್ ತೇಟ್ಟ ಯುವಕನೊಬ್ಬ ಜನರ ಮಧ್ಯದಿಂದ ಒಳಕ್ಕೆ ಹಿಗಿ ಆಫೀಸರೊಂದಿಗೆ ಜಗಳಕ್ಕೆ ಪ್ರಾರಂಭಿಸಿದ. ಜನರೆಲ್ಲಾ ಯುವಕನಿಗೆ ಬೆಂಬಲವಾದರು.

ರಂಗಪ್ರಸಾದ್ ತನ್ನ ಬ್ರೀಫ್‌ಕೇಸ್ ತೆಗೆದುಕೊಂಡು ವಿಮಾನದತ್ತ ನಡೆದ. ಮುಂಬೈಯಲ್ಲಿ ಕಾನ್‌ಫರೆನ್ಸ್‌ನಲ್ಲಿ ಭಾಗವಹಿಸಿ ಊರಿಗೆ ಹಿಂತಿರುಗುತ್ತಿದ್ದ. ತನ್ನ ಸೀಟಿನಲ್ಲಿ ಕುಳಿತು ಬೆಲ್ಟ್ ಬಿಗಿಸಿಕೊಂಡು ಸುತ್ತಲೂ ತಿರುಗಿನೋಡಿದ. ವಿಮಾನ ತುಂಬಿತ್ತು. ಅರೇಬಿಯಾ ದೇಶಗಳಿಂದ ಬರುವವರು ಹಲಚ್ಚಾಗಿದ್ದರಿಂದ ವಿಮಾನ ಯಾವಾಗಲೂ ತುಂಬಿಯೇ ಇರುತ್ತದೆ.

ಇನ್ನು ಸ್ವಲ್ಪ ಹೇತಿತ್ತೆ ವಿಮಾನ ಹೊರಡುತ್ತದೆ ಎನ್ನುವಾಗ ಬಿಳಿಷರ್ಟಿನ ಯುವಕ ಆತುರದಿಂದ ಸೀಟ್ ನಂಬರ್ ಹುಡುಕುತ್ತಾ ಬರುವುದನ್ನು ಗಮನಿಸಿದ. ನೇರವಾಗಿ ಬಂದು ರಂಗಪ್ರಸಾದ್ ಪಕ್ಕದಲ್ಲಿಯೇ ಕುಳಿತ.

ವಿಮಾನ ಹೊರಟಿತು.

''ಅಬ್ಬ ಏನು ರಷ್...ಹೆವಿರಷ್'' ಎಂದು ಮಾತು ಪ್ರಾರಂಭಿಸಿದ.

''ಹೌದು''

''ನನಗೆ ಟಿಕೆಟ್ ಸಿಗೋಲ್ಲ ಅಂತ್ಲೇ ಅಂದ್ಕೊಂಡಿದ್ದೆ''

ರಂಗಪ್ರಸಾದ್ ಮಾತನಾಡಲಿಲ್ಲ.

''ಕೌಂಟರ್ ಹಿಂಬಾಗದಿಂದ ಯಾರಿಗೋ ಟಿಕೆಟ್ ಕೊಡುತ್ತಿದ್ದುದನ್ನು ನೋಡಿ ಅವನೊಂದಿಗೆ ಜಗಳಕ್ಕೆ ನಿಂತೆ''

''ಅದನ್ನ ನಾನೂ ನೋಡಿದೆ''

''ಗಲಾಟೆ ಮಾಡಬೇಡಿ ಎಂದು ನನಗೂ ಒಂದು ಟಿಕೆಟ್ ಕೊಟ್ಟ!''

''ನಿಮಗೆ ಸಪೋರ್ಟ್ ಮಾಡಿದವರು ಪಾಪ ಪೆಚ್ಚಾಗಿರಬೇಕು'' ಎಂದು ರಂಗಪ್ರಸಾದ್ ನಕ್ಕ.

''ಅದೇನೋ ನೋಡಲಿಲ್ಲ, ಆ ವೇಳೆಗೆ ಟೈಂ ಆಗಿತ್ತು. ಬೈದಿಬೈ ನೀವು...?''

''ಡಾಕ್ಟರ್ ರಂಗಪ್ರಸಾದ್''

''ನನ್ನ ಹೆಸರು ಷಾಡೋ...ವೈಟ್ ಷಾಡೋ''

ರಂಗಪ್ರಸಾದ್ ಗಾಬರಿಯಿಂದ ನೋಡಿದ.

''ಗಾಬರಿಯಾಗಬೇಡಿ. ನನ್ನ ಹೆಸರು ರವಿ. 'ಸೈನ್ಸ್ ಇಂಡಿಯಾ'ದಲ್ಲಿ ಕೆಲಸ ಮಾಡುತ್ತಿದ್ದೇನೆ. ಸಣ್ಣ ಪುಟ್ಟ ಮ್ಯಾಜಿಕ್ ಕೂಡ ಮಾಡುತ್ತೇನೆ. ಮೆಜಿಷಿಯನ್ನಾಗಿ ನನ್ನ ಹೆಸರು ವೈಟ್ ಷಾಡೋ. ಸರಿಯಾಗಿ ಹೇಳಬೇಕೆಂದರೆ ರವಿ ಎಂದರೆ 'ವೈಟ್ ಷಾಡೋ' ತಾನೇ?''

ರಂಗಪ್ರಸಾದ್‌ಗೆ ಆ ಯುವಕ ಮೆಚ್ಚಿಗೆಯಾದ.

''ನಿಮ್ಮ ಪತ್ರಿಕೆಯನ್ನು ನೋಡುತ್ತಿದ್ದೇವೆ. ಚೆನ್ನಾಗಿದೆ. ಆದರೆ ನೀವು ಇತ್ತೀಚೆಗೆ ಸೈನ್ಸ್ ಜತೆಗೆ ಫೋಕ್ಷನ್ (ಕಲ್ಪನೆ) ಸೇರಿಸುತ್ತಿದ್ದೀರಿ. ಪೂರ್ಣವಾಗಿ ಸೆಂಟಿಫಿಕ್ ಫ್ಯಾಕ್ಟ್ಸ್ (ವೈಜ್ಞಾನಿಕ ವಾಸ್ತವಾಂಶಗಳು) ಕೊಡಬೇಕಾದವರು ಈ ರೀತಿ ಮಾಡುವುದು ಒಳ್ಳೆಯದಲ್ಲ''

ಅನಿರೀಕ್ಷಿತವಾಗಿ ಬಂದ ಈ ವಿಮರ್ಶೆಯಿಂದ ಆ ಯುವಕನ ಮುಖ ಬಿಳಿಚಿಕೊಂಡಿತು. ರಂಗಪ್ರಸಾದ್ ಒಡನೆಯೇ ''ನಾನು ಈ ರೀತಿ ಹೇಳಿದೆನೆಂದು ಬೇಸರಪಡಬೇಡಿ. ನಮ್ಮಲ್ಲಿ ಸೈನ್ಸ್ ಪತ್ರಿಕೆಗಳೇ ಇಲ್ಲ. ನಿಮ್ಮ ಪತ್ರಿಕೆ, ಸೈನ್ಸ್ ಟುಡೇ ಎರಡೇ ಪತ್ರಿಕೆಗಳು. ಉಳಿದವು ಶುದ್ಧ ವಿಜ್ಞಾನವನ್ನು ಪ್ರತಿಪಾದಿಸುವುದಿಲ್ಲ...'' ಎಂದ.

''ನೀವು ನಮ್ಮ ಪತ್ರಿಕೆಯನ್ನು ತಪ್ಪದೆ ಓದುತ್ತೀರಿ ಎನಿಸುತ್ತದೆ''

'4ಆದ್ದರಿಂದಲೇ ಹೊಸ ಬದಲಾವಣೆಯನ್ನು ಗುರ್ತಿಸಲು ಸಾಧ್ಯವಾದದ್ದು!''

ಚಾಕೊಲೆಟ್‌ಗಳನ್ನು ಟ್ರೇನಲ್ಲಿ ಹಿಡಿದು ಬಂದಳು ಏರ್ ಹೋಸ್ಟೆಸ್. ಇವರ ಬಳಿಗೆ ಬರುವ ವೇಳೆಗೆ ಆರು ಚಾಕೊಲೆಟ್ಟುಗಳಿದ್ದವು. ಡಾಕ್ಟರ್ ಎರಡು ಚಾಕೊಲೆಟ್‌ಗಳನ್ನು ತೆಗೆದುಕೊಳ್ಳುತ್ತಾ ''ಕಾಫಿ ಬೇಕು'' ಎಂದ.

''ಸಾರಿ ಸರ್ ಕಾಫಿ ಇಲ್ಲ'' ಎಂದು ಟ್ರೇಯನ್ನು ಷಾಡೋ ಕಡೆ ಹಿಡಿಯುತ್ತಾ ಹೇಳಿದಳು.

''ಎಷ್ಟು ಚಾಕೊಲೆಟ್ಸ್ ತೆಗೆದುಕೊಳ್ಳಬಹುದು ಮೇಡಮ್'' ಎಂದು ನಗುತ್ತಾ ಕೇಳಿದ ಷಾಡೋ.

''ನಾಲ್ಕಿವೆ ಅಷ್ಟೂ ತಗೊಳ್ಳಿ''

''ನಾಲ್ಕೆ?...ಎಲ್ಲಿವೆ?''

ಏರ್ ಹೋಸ್ಟೆಸ್ ನೋಡಿದಳು. ಎರಡೇ ಚಾಕೋಲೆಟ್ಸ್ ಇವೆ! ಕೆಳಗೆ ನೋಡಿದಳು...ಇಲ್ಲ. '4ಆ ಎರಡು ತೆಗೆದುಕೊಳ್ಳಿ ಮತ್ತೆ ತರುತ್ತೇನೆ''

''ಅಂದ್ರೆ ಒಂದು ವಾಪಸ್ಸು ತಗೊಂಡು ಹೋಗ್ತಿರಾ?''

''ಒಂದು!'' ಎಂದು ಟ್ರೇ ನೋಡಿದಳು. ಅಲ್ಲಿ ಮೂರು ಚಾಕೊಲೆಟ್ಸ್ ಇವೆ. ಏನೋ ಹೇಳಲು ಬಾಯ್ತೆರೆಯುತ್ತಿದ್ದಂತೆ ''ಹೋಗಲಿ ಬಿಡಿ ನಾಲ್ಕೂ ನಾನೇ

ತಗೊಳ್ತೀನಿ'' ಎಂದು ಟ್ರೇಗೆ ಕೈಹಾಕಿದ. ಆಕೆ ನೋಡುತ್ತಿರುವಂತೆ ಅಂಗೈ ಬಿಡಿಸಿದರೆ ನಾಲ್ಕು ಚಾಕೊಲೆಟ್‌ಗಳಿವೆ.

ಆಕೆಗೆ ಮತಿಭ್ರಮಣೆಯಾದಂತಾಗಿತ್ತು.

''ಮೇಡಮ್ ಎರಡು ಕಮ್ ಬಿಸಿಬಿಸಿ ಕಾಫಿ ಬೇಕು. ಜ್ಯೂಸ್ ಬೇಡ''

''ಆಗಲಿ ನೋಡ್ತೀನಿ'' ಎನ್ನುತ್ತಾ ಹೋರಡಲು ತಿರುಗಿದ್ದವಳು ಇನ್ನೊಮ್ಮೆ ಹಿಂತಿರುಗಿ ಇದನ್ನು ನಂಬದವಳಂತೆ ಮತ್ತೆ ನೋಡಿಹೋದಳು.

ಷಾಡೋ ನಗುತ್ತಾ ರಂಗಪ್ರಸಾದನನ್ನು ನೋಡುತ್ತಾ ''ನೋಡಿ ಸೈನ್ಸ್‌ಗಿಂತಲೂ ಸೆನ್ಸೇಷನಿಸಂ ಹೆಚ್ಚು ಪ್ರಭಾವಶಾಲಿ. ಕಾಫಿ ಬೇಕಾದರೂ ಇದೇ ಬೇಕಾಯಿತು!...ಬರಹದಲ್ಲೂ ಇದೇ ಗತಿ. ಬರಿ ಸೈನ್ಸ್ ಎಂದರೆ ಯಾರೂ ಓದುವುದಿಲ್ಲ'' ಎಂದ.

''ನನ್ನ ಕಣ್ಣನ್ನು ನಾನೇ ನಂಬಲೂ ಸಾಧ್ಯವಾಗುತ್ತಿಲ್ಲ''

''ನೀವೇ ನೋಡಿದಿರಲ್ಲಾ ಆಕೆಗೆ ಇದೆಷ್ಟು ಥ್ರಿಲ್ ನೀಡಿತು ಎನ್ನುವುದು. ಇದೇ ಚಾಕೊಲೆಟ್ ಬಗ್ಗೆ ವಿವರಿಸುತ್ತಾ ಕಣ್ಣಿಗಿಂತಲೂ ಚುರುಕಾದ ಬೆರಳುಗಳ ಚಲನೆಯಿಂದ ಇದು ಸಾಧ್ಯವೆಂದರೆ ಆ ಥ್ರಿಲ್ ಬರುವುದಿಲ್ಲ ನಮ್ಮ ಪತ್ರಿಕೆಯ ಕಥೆಯೂ ಅದೆ...''

ಪ್ರಸಾದ್ ನಕ್ಕ. ''ಲೂಕೆಮಿಯಾ ಕ್ಯಾನ್ಸರ್‌ನ ಒಂದು ಭಾಗವೇ?'' ಎಂಬ ಶೀರ್ಷಿಕೆ ಯಾರೂ ಓದುವುದಿಲ್ಲ. 'ನಿಮ್ಮ ಮೃತ್ಯುವಿನಿಂದ ನೀವೆಷ್ಟು ದೂರವಿದ್ದೀರಿ' ಎಂದರೆ ಎಲ್ಲರೂ ಓದುತ್ತಾರೆ! ಹಾಗೆ ತಾನೇ?''

''ಮೈ ಗಾಡ್ ನಿಮಗೂ ಜರ್ನಲಿಸಂ ರಕ್ತದಲ್ಲಿದೆ, ನಮ್ಮ ಲೈನ್‌ಗೆ ಬರಬಾರದೇ?''

''ನಿಮ್ಮ ಲೈನೇ! ನನಗೆ ಒಂದು ವಾಕ್ಯವನ್ನೇ ಸರಿಯಾಗಿ ಬರೆಯಲು ಬರೋಲ್ಲ!''

''ನನಗೆ ತಾನೆ ಏನು ಬರುತ್ತೆ? ಏನೋ ಮಧ್ಯೆ ಓದು ನಿಲ್ಲಬೇಕಾಯಿತು. ಆದ್ದರಿಂದ ಬಲವಂತವಾಗಿ ಈ ಲೈನಿಗೆ ಬಂದೆ. ಸರಿಯಾಗಿ ಸೈನ್ಸ್-ಸೆನ್ಸ್ ಸ್ಪೆಲಿಂಗ್ ವ್ಯತ್ಯಾಸ ಕೇಳಿದರೆ ಗೊತ್ತಿಲ್ಲ ನನಗೆ...''

ಈ ಮಾತಿಗೆ ನಗುತ್ತಾ ಅವನನ್ನು ನೋಡಿದ. ತನಗಿಂತಲೂ ನಾಲ್ಕು ವರ್ಷ ಚಿಕ್ಕವನು. ಆದರೆ ಬಾಳಿನ ಏರಿಳಿತಗಳನ್ನು ಆತನ ಮುಖ ಬಿಂಬಿಸುತ್ತಿಲ್ಲ. ಮದುವೆಯಾದಂತೆ ಕಾಣಲಿಲ್ಲ. ಅದಕ್ಕೆಂದೇ ಷಾಡೋ ಕೇರ್‌ಫ್ರೀಯಾಗಿರುವಂತೆ ಕಾಣುತ್ತಾನೆ.

ಅಷ್ಟರಲ್ಲಿ ಏರ್‌ಹೋಸ್ಟೆಸ್ ಕಾಫಿ ತಂದಳು. ಕಾಫೀ ಚೆನ್ನಾಗಿತ್ತು.

''ನೀವು ಡಾಕ್ಟರ್ ಅಲ್ಲವೇ?...ಎಲ್ಲಿ?''

''ಕೃಷ್ಣಾಪುರದಲ್ಲಿ''

''ಪಿಹೆಚ್‌ಸಿಯಲ್ಲೇನು?''

''ಅಲ್ಲ ಪ್ರೈವೇಟ್ ಪ್ರಾಕ್ಟೀಸ್''

''ನೀವು ಎಂಬಿಬಿಎಸ್ಸೇ?''

''ಹೌ, ಎಂಎಸ್ ಮಾಡಿದ್ದೇನೆ''

ರವಿ ಆತನತ್ತ ತಲೆ ತಿರುಗಿಸಿ ''ಎಮ್ಮೆಸ್ ಮಾಡಿ ಕೃಷ್ಣಾಪುರದಂಥಾ ಚಿಕ್ಕ ಊರಿನಲ್ಲಿ ಪ್ರಾಕ್ಟೀಸ್ ಮಾಡ್ತಿದೀರಾ? ಅದೇನು ನಿಮ್ಮ ಸ್ವಂತ ಊರೆ?'' ಎಂದು ಕೇಳಿದ, ಆಶ್ಚರ್ಯದಿಂದ.

''ಅಲ್ಲ ನಮ್ಮವರೆಲ್ಲಾ ತುಂಬಾ ಹಿಂದೆಯೇ ಗುಂಟೂರಿನಲ್ಲಿ ಸೆಟಲ್ ಆಗಿದ್ದಾರೆ''

''ಮತ್ತೆ ನೀವೇಕೆ ಅಷ್ಟು ಚಿಕ್ಕ ಊರಿನಲ್ಲಿ ಪ್ರಾಕ್ಟೀಸ್ ನಡೆಸುತ್ತಿದ್ದೀರಿ?''

''ಪ್ರಶ್ನೆಯೇನೋ ತೀರಾ ಸಣ್ಣದೇ. ಆದರೆ ಉತ್ತರ ಮಾತ್ರ ಬಾಳಿನಷ್ಟೇ ದೊಡ್ಡದು. ಮುಗ್ಧರಾದ ಬಡ ಪ್ರಜೆಗಳ ಸೇವೆಯಲ್ಲಿ ಹಣ ಗಳಿಸುವುದಕ್ಕಿಂತಲೂ ಹೆಚ್ಚು ಆತ್ಮ ಸಂತೃಪ್ತಿ ದೊರೆಯುತ್ತದೆ ಎಂದು ಹೇಳಿದರೆ ಅದು ತನಗೇ ತೀರಾಹೇಯವಾದ ಉತ್ತರವೆನಿಸುತ್ತಿದೆ. ಸುತ್ತಲೂ ಗದ್ದೆಗಳು, ಮಧ್ಯೆ ಊರು-ಊರಿನ ಮಧ್ಯೆ ಎಲ್ಲರೂ ಗೌರವಿಸುವ ಡಾಕ್ಟರ್. ಇದು ತನ್ನ ಅಹಮಿಕೆಗೆ ಸಂತೃಪ್ತಿ ನೀಡುತ್ತದೆ ಎಂದು ಉತ್ತರಿಸಬಹುದೇ? ಬೇರೆಯವರಿಗೆ ಇದೇನೂ ಅರ್ಥವಾಗಲಾರದು. ಚಿಕ್ಕ ಊರಾದರೇನು? ದೊಡ್ಡ ಊರಾದರೇನು? ತೃಪ್ತಿಮುಖ್ಯ ಎಂದರೆ...''

''ಎಕ್ಸ್‌ಕ್ಯೂಜ್‌ಮಿ...''

ಇಬ್ಬರೂ ತಲೆ ಹಿಂದಕ್ಕೆ ತಿರುಗಿಸಿ ನೋಡಿದರು.

ವಿಮಾನ ಇಳಿಯುವಾಗ ಏರ್‌ಹೋಸ್ಟೆಸ್ ಕುಳಿತಿರಬೇಕಾದ ಸೀಟಿನಲ್ಲಿ ಆಕೆ ಕುಳಿತಿದ್ದಳು, ಚಾಕೊಲೆಟ್ ಕೊಟ್ಟಾಕೆ. ಕಣ್ಣುಗಳು ಕಾಂತಿಯಿಂದ ಹೊಳೆಯುತ್ತಿದ್ದುವು. ಬಾಯಿ ಪುಟ್ಟದಾಗಿಯೂ ಗುಂಡಾಗಿಯೂ ಇತ್ತು. ಆಕೆ ಷಾಡೋನ ನೋಡುತ್ತಾ ''ಹೈದರಾಬಾದಿನಲ್ಲಿ ನನಗೆ ಒಂದೆರಡು ಟ್ರಿಕ್ಸ್ ಕಲಿಸಲೇಬೇಕು...ಅನ್ಯಥಾ ಭಾವಿಸಬೇಡಿ'' ಎಂದಳು ನಗುತ್ತಾ. ''ಬೇಗ ಕಲಿಯುವಂತಹವು. ಸ್ನೇಹಿತರ ಮಧ್ಯೆ ಇರುವಾಗ ಥ್ರಿಲ್‌ಗಾಗಿ ಅಷ್ಟೆ''

''ಏರ್‌ಪೋರ್ಟಿನಲ್ಲಿ ನಿಂತು ಕಲಿಸಿಹೋಗು ಎನ್ನುತ್ತೀರಾ?''

''ಐದು-ಹತ್ತು ನಿಮಿಷಗಳಲ್ಲಿ ಕಲಿಯಬಹುದೇ?''

''ಅಷ್ಟೇಕೆ ಅರ್ಧ-ಒಂದು ನಿಮಿಷ ಎಂದು ಕೇಳಬಾರದಾಗಿತ್ತೇ? ಒಂದು ಟ್ರಿಕ್‌ಗೆ ಬೆರಳನ್ನುಬಳಸಲು ಅಭ್ಯಾಸ ಮಾಡಲು ಕನಿಷ್ಠ ಅರ್ಧಗಂಟೆಯಾದರೂ ಬೇಕಾಗುತ್ತದೆ''

''ಹಾಗಿದ್ದರೆ ನಿಮಗೆ ಅಷ್ಟೊಂದು ಸಮಯವಿದೆಯೇ?''

''ಸಂಜೆಯಾದರೆ...''

''ವೆರಿಗುಡ್, ಇಲ್ಲಿಗೆ ನನ್ನ ಡ್ಯೂಟಿ ಮುಗಿಯುತ್ತದೆ. ಸಂಜೆ ಟೀ ಕುಡಿಯುತ್ತಾ ಟ್ರಿಕ್ ಕಲಿಸಿ, ಆಗಬಹುದಲ್ಲ''

''ಏನು Tಯೇ?''

''ಯಾಕೆ?''

''ನನಗೆ ನಂತರದ ಆಲ್ಫಬೆಟ್ ಇಷ್ಟ''

ಐದು ನಿಮಿಷಗಳಾಗುವವರೆಗೂ ಆಕೆಗೆ ಅರ್ಥವಾಗಲಿಲ್ಲ. ಅಷ್ಟರಲ್ಲಿ ಸ್ನ್ಯಾಕ್ಸ್ ಸರ್ವ್ ಮಾಡುವುದಕ್ಕೂ ಹೋಗಬೇಕಾಯಿತು ಆಕೆ.

''ಇಲ್ಲಿಯವರೆಲ್ಲಾ ತುಂಬಾ ಫಾಸ್ಟ್ ಎನಿಸುತ್ತದೆ'' ರಂಗಪ್ರಸಾದ್ ಹೇಳಿದ.

''ವಿಮಾನಗಳಲ್ಲಿ ಎಲ್ಲವೂ ವಿಮಾನದ ಹಾಗೇ ಫಾಸ್ಟ್‌ಸರ್. ರೈಲಿನಲ್ಲಿಕೇಳೋ ಹಾಗೆ 'ಯಾವ ಊರಿಗೆ ಹೋಗ್ತೀರಿ?' ಮುಂತಾದ ಕುಶಲ ಪ್ರಶ್ನೆಗೆ ಕಾಲವೇ ಇಲ್ಲ. ಬೈದಿಬೈ ನನ್ನ ಬಗ್ಗೆ ಅಪಾರ್ಥ ಮಾಡಬೇಡಿ. ಎಲ್ಲವನ್ನೂ ಹಗುರವಾಗಿ ತೆಗೆದುಕೊಳ್ಳುವುದು ನನ್ನ ಸ್ವಭಾವ!''

''ನಿಮ್ಮನ್ನು ನೋಡುತ್ತಿದ್ದರೆ ಹುಡುಗನಂತೆ ಕಂಡರೂ ನಿಮ್ಮ ಫಿಲಾಸಫಿ ನನಗೆ ಹಿಡಿಸದು. ರೋಮಾನ್ಸ್ ಜೀವನವಲ್ಲ; ಅದೇ ಫಿಲಾಸಫಿ ಕೂಡಾ ಅಲ್ಲ. ಜೀವನದಲ್ಲಿ ಸಫಲರಾದವರೆಲ್ಲಾ-ಗಾಂಧಿಯಿಂದ ಸಾಕ್ರಟೀಸನ ತನಕ- ರೊಮ್ಯಾಂಟಿಕ್ ಜೀವನದಲ್ಲಿ ಯಾವುದೋ ಅಪಶ್ರುತಿಯನ್ನು ಕಂಡು ಸಾರಿದವರೇ. ನಿಮ್ಮ ಕಾಮನೆಗೆ ನೀವು ಫಿಲಾಸಫಿ ಅನ್ನೋ ಹೆಸರು ಕೊಟ್ಟರೆ ನನ್ನದೇನೂ ಅಭ್ಯಂತರವಿಲ್ಲ''

''ಸಂಜೆ ಮನೆಗೆ ಹೋಗೋದನ್ನ ಬಿಡಬೇಕು ಅಂತೀರಾ?'' ಮುಗ್ಧಭಾವವನ್ನು ತೋರುತ್ತಾ ಕೇಳಿದ ಅವನನ್ನು ಕಂಡು ರಂಗಪ್ರಸಾದ್‌ಗೆ ನಗುಬಂತು.

''ನನ್ನ ಮಾತು ಅದಲ್ಲ. ಬಾಳನ್ನು ಹಾಯಾಗಿ ಸಂತೋಷವಾಗಿ ಕಳೆಯುವುದನ್ನೇ ಸಿದ್ಧಾಂತವನ್ನಾಗಿ ನಿರೂಪಿಸಬೇಡಿ ಅಂತ ಮಾತ್ರವೇ''

''ನಿಮಗಿನ್ನೂ ಮದುವೆಯಾಗಿಲ್ಲ ಅಲ್ವೇ?''

ರಂಗಪ್ರಸಾದ್ ಆಚ್ಚರಿಗೊಂಡು ''ನಿಮಗೆ ಹೇಗೆ ಗೊತ್ತು?'' ಎಂದು ಕೇಳಿದರು.

ಅದಕ್ಕೆ ಉತ್ತರ ಹೇಳದೆ ''ನೀವು ಗೋಲ್ಡ್ ಮೆಡಲಿಸ್ಟ್ ಅಲ್ಲವೇ?'' ಎಂದು ಮತ್ತೆ ಕೇಳಿದ.

''ಹೌ ಅದು ನಿಮಗೆ ಹೇಗೆ ಗೊತ್ತು?''

''ವೈಟ್‌ಷಾಡೋ ಕೇವಲ ಮ್ಯಜಿಷಿಯನ್ ಅಲ್ಲ, ಜ್ಯೋತಿಷ್ಯ, ಅಂಗಸಾಮುದ್ರಿಕ ಶಾಸ್ತ್ರಗೊತ್ತು'' ಎಂದು ನಕ್ಕು ''ಸುಮ್ನೆ ಹೇಳ್ದೆ ಅಷ್ಟೆ. ಸುಮ್ನೆ ಅಂದಾಜಿನ ವ್ಯವಹಾರ. ನಮ್ಮ ಪತ್ರಿಕೆಯಲ್ಲಿ ಒಂದು ಲೇಖನ ಪ್ರಕಟಿಸಿದರೆ ಹೇಗೆ?'' ನುಡಿದ.

''ಏನು ಲೇಖನ?''

''ಒಬ್ಬ ಗೋಲ್ಡ್ ಮೆಡಲಿಸ್ಟ್ ಎಂಎಸ್ ನಲವತ್ತು ವರ್ಷದ ಡಾಕ್ಟರ್, ಬಡಜನರ ಸೇವೆಗಾಗಿ ಒಂದು ಸಣ್ಣ ಗ್ರಾಮದಲ್ಲಿ ಪ್ರಾಕ್ಟೀಸ್ ನಡೆಸುತ್ತಾ ತನ್ನ ಆದರ್ಶಕ್ಕೆ ಅಡ್ಡಿಯುಂಟಾಗುವುದೇನೋ ಎಂಬ ಭಯದಿಂದ ಮದುವೆಯನ್ನೂ ಮಾಡಿಕೊಳ್ಳದೆ...ಇದೇ ಲೇಖನ...ಹೇಗಿರುತ್ತೆ?''

''ನನ್ನ ಹಾಗೇ ಇದಲ! ನಾನು ಮದುವೆಯಾಗದೆ ಇರುವುದಕ್ಕೆ ಕಾರಣ ಅದಲ್ಲ''

''ಮತ್ತೇನು ಕಾರಣ?''

ರಂಗಪ್ರಸಾದ್ ಮೌನವಾಗಿದ್ದ.

ತುಂಬಾ ಸೂಕ್ಷ್ಮವಾದ ಸಂಗತಿ. ಮನಸ್ಸಿಗೆ ಸಂಬಂಧಿಸಿದ ವಿಷಯ ಹೇಳಿದರೆ ಬೇರೆಯವರು ಅರ್ಥಮಾಡಿಕೊಳ್ಳಲಾರದ, ಅರ್ಥ ಮಾಡಿಕೊಂಡರೂ ನಕ್ಕು ಮರೆಯುವಂತಹ ವಿಷಯ.

''ಯಾಕೆ ಹೆಳೋಲ್ವೇ?''

ಮಾತನ್ನು ಬದಲಿಸುವ ಧಾಟಿಯಲ್ಲಿ ''ನೀವು ಲೇಖನ ಬರೆಯುವಂತಿದ್ದರೆ ಇದಕ್ಕಿಂತಲೂ ಹೆಚ್ಚು ಕುತೂಹಲಕರವಾದ ಬೇರೊಂದು ವಿಷಯವನ್ನು ಹೇಳುತ್ತೇನೆ'' ಎಂದ.

ಲೇಖನಕ್ಕೆ ಸಾಮಗ್ರಿ ಎನ್ನುತ್ತಲೇ ಉತ್ಸಾಹದಿಂದ ಷಾಡೋ ''ಅದೇನು'' ಎಂದು ಕೇಳಿದ.

''ನಮ್ಮೂರು ಕೃಷ್ಣಾಪುರದಲ್ಲಿ ಒಂದೆರಡು ತಿಂಗಳ ಅಂತರದಲ್ಲಿ ಎರಡು ವಿಕೃತಜೀವಿಗಳು ಹುಟ್ಟಿದವು. ಸಾಧಾರಣವಾಗಿ ಹತ್ತು ಸಾವಿರದಲ್ಲಿ ಒಂದು ಎನಿಸಿಕೊಳ್ಳುವಂತಹ ಕೇಸು. ಒಂದೇ ಊರಿನಲ್ಲಿ ಸ್ವಲ್ಪ ಕಾಲದ ಅಂತರದಲ್ಲಿ ಎರಡು ಕೇಸುಗಳು ಎಂದರೆ ವಿಚಿತ್ರವಲ್ಲವೆ?''

ಷಾಡೋಗೆ ತುಂಬಾ ಸಂತೋಷವಾಯಿತು, ''ಸಾಕು ಇಷ್ಟು ವಿಷಯ...ಆ ಮಕ್ಕಳ ಫೋಟೋಗಳು ಬೇಕು. ಸಾಧ್ಯವಾದರೆ ಆ ತಾಯಿಗಳ ಫೋಟೋದೊರೆತರೂ ಸಂತೋಷವೇ'' ಎಂದ.

''ನಾನು ಹೇಳಿದ್ದು ಜೆನೆಟಿಕ್ಸ್ ಬಗ್ಗೆ ಲೇಖನ ಬರೆಯುತ್ತಾ ಈ ಸಂಗತಿಯನ್ನು ಉದಾಹರಿಸಬೇಕೆಂದು ಮಾತ್ರವೇ. ಈ ಫೋಟೋ ಬಳಸಿಕೊಂಡು ನಿಮ್ಮ ಕಲ್ಪನೆ ಬೆಳೆಸಲೆಂದಲ್ಲ!''

''ಜೆನೆಟಿಕ್ಸ್‌ಗೂ ಇದಕ್ಕೂ ಏನು ಸಂಬಂಧ?''

ರಂಗಪ್ರಸಾದ್ ಮುಖ ಬಿಳಿಚಿಕೊಂಡಿತು. ''ಜೆನೆಟಿಕ್ಸ್ ಎಂದರೆ ಗೊತ್ತಿಲ್ಲವೇ?'' ಎಂದು ಕೇಳಿದ.

''ಗೊತ್ತಿಲ್ಲ ಆ ಪದವನ್ನು ನಾಲ್ಕೈದು ಬಾರಿ ಕೇಳಿದ್ದೇನೆ ಅಷ್ಟೆ''

''ಜೆನೆಟಿಕ್ಸ್ ಎಂದರೆ ಗೊತ್ತಿಲ್ಲದೆಯೇ ಸೈನ್ಸ್ ಪತ್ರಿಕೆಯೊಂದರಲ್ಲಿ ಕೆಲಸ ಮಾಡುತ್ತಿದ್ದೀರಾ?!'' ಎಂದು ಆಶ್ಚರ್ಯದಿಂದ ಕೇಳಿದ.

''ಏನೂ ತಿಳಿಯದವನೇ ಆ ವಿಷಯದ ಬಗ್ಗೆ ಚೆನ್ನಾಗಿ ಬರೆಯಬಲ್ಲ. ಅದಕ್ಕೇನು ಅಡ್ಡಿ...ಮಕ್ಕಳು ಹೀಗೆ ವಕ್ರವಾಗಿ ಹುಟ್ಟುವುದಕ್ಕೂ ಜೆನೆಟಿಕ್ಸ್‌ಗೂ ಏನು ಸಂಬಂಧ?''

ರಂಗಪ್ರಸಾದ್ ಬೋರ್ಡಿಂಗ್ ಸ್ಲಿಪ್ ಮೇಲೆ ಗೆರೆಗಳನ್ನು ಎಳೆಯುತ್ತಾ ವಿವರಿಸ ತೊಡಗಿದ: ''ನಮ್ಮಲ್ಲಿ ಹಿರಿಯರು ಆಗಾಗ ಹೇಳುತ್ತಿರುತ್ತಾರೆ 'ಎಲ್ಲಾ ಅವನ ತಂದೆಯದೇ ಹೋಲಿಕೆ' ಎಂದು. ಆದರೆ ಇದು ಹೇಗೆ ಸಾಧ್ಯ ಎಂದು ಬಹುಮಂದಿ ಕಾರ್ಯಕಾರಣ ಸಂಬಂಧದ ವಿವೇಚನೆ ನಡೆಸುವುದಿಲ್ಲ. ಮೂಗು, ಕಣ್ಣು, ಮುಖಗಳು ತಂದೆ ಅಥವ ತಾಯಿಯನ್ನು ಹೋಲುವ ಕಾರಣ ಜೀನ್. ಅದಕ್ಕೆ ಸಂಬಂಧಿಸಿದ ಶಾಸ್ತ್ರವೇ ಜೆನೆಟಿಕ್ಸ್.

''ಒಬ್ಬ ಪುರುಷ ಸ್ತ್ರೀಯನ್ನು ಕೂಡಿದಾಗ ಅವನಿಂದ ಅವಳಲ್ಲಿ ಸೇರುವ ವೀರ್ಯದಲ್ಲಿ ಅನೇಕ ಲಕ್ಷಸೂಕ್ಷ್ಮ ಜೀವಕಣಗಳಿರುತ್ತವೆ. ಅವುಗಳಲ್ಲಿ ಯಾವುದೋ ಒಂದು ಮಾತ್ರ ಯಾವಾಗಲೋ ಸ್ತ್ರೀಯ ಅಂಡವನ್ನು ಸೇರಿ ಗರ್ಭವಾಗುತ್ತದೆ. ಆ ಕಣದಲ್ಲಿ ಆ ಪುರುಷನ ಎಲ್ಲಾ ಅಂಶಗಳನ್ನೂ ಪ್ರತಿನಿಧಿಸುವ ಇಪ್ಪತ್ಮೂರು ಕ್ರೋಮೋಜೋಂಗಳು ಆ ಜೀವಕಣದಲ್ಲಿರುತ್ತವೆ. ಚಂದ್ರಮಂಡಲದ ಮೇಲೆ ಅಡಿಯಿರಿಸಿದ ಮೊದಲ ಮಾನವ ಭೂಮಿಗೆ ಸಂಬಂಧಿಸಿದ ಎಲ್ಲಾ ವುಸ್ತುಗಳನ್ನು ಅಲ್ಲಿ ತನ್ನ ಜ್ಞಾಪಕಾರ್ಥವಾಗಿ ಬಿಟ್ಟು ಬಂದಂತೆ ಪುರುಷನು ತನ್ನ ವಾರಸತ್ವದ ಛಾಯೆಯನ್ನು ಜೀನ್ ರೂಪದಲ್ಲಿ ಸ್ತ್ರೀಯಲ್ಲಿ ಬಿಡುತ್ತಾನೆ. ಎಂದರೆ ತನ್ನ ಮೂಗು, ಕಣ್ಣಿನ ಬಣ್ಣ, ಎತ್ತರ, ಬುದ್ಧಿಶಕ್ತಿ, ಕೂದಲಿನ ಬಣ್ಣ-ಉಂಗುರ, ಮೈಬಣ್ಣ...ಹೀಗೆ ಎಲ್ಲಾ ಅಂಶಗಳೂ ಅದರಲ್ಲಿರುತ್ತವೆ.

''ಈ ಕ್ರೋಮೋಜೋಮ್‌ಗಳೊಂದಿಗೆ ಮತ್ತೊಂದು ಮುಖ್ಯವಾದ ಅಂಶವಿದೆ. ಅದರಲ್ಲಿ ಎರಡು ವಿಧ. ಮೊದಲಿನದು x ಎರಡನೆಯದುy ಇವನ್ನು ಸೆಕ್ಸ್‌ಕ್ರೋಮೋಜೋಮ್ಸ್ ಎನ್ನುತ್ತಾರೆ. ಸ್ತ್ರೀಯ ಅಂಡದಲ್ಲಿ ಕೇವಲ x ಕ್ರೋಮೋಜೋಮ್ ಮಾತ್ರವೇ ಇರುತ್ತವೆ. ಪುರುಷನ ಕೆಲವು ವೀರ್ಯಕಣಗಳಲ್ಲಿ x ಮತ್ತೆ ಕೆಲವಲ್ಲಿ y ಕ್ರೋಮೋಜೋಮ್‌ಗಳು ಇರುತ್ತವೆ. ಸಂಪರ್ಕ ಸಮಯದಲ್ಲಿ ಪುರುಷನ x ಕ್ರೋಮೋಜೋಮ್ ವೀರ್ಯಕಣಗಳು ಸ್ತ್ರೀ ಅಂಡವನ್ನು ಸೇರಿದರೆ ಸ್ತ್ರೀಯಲ್ಲಿರುವ xನೊಂದಿಗೆ ಬೆರೆತುxx ಆಗುತ್ತದೆ ಆಗ ಆ ದಂಪತಿಗಳಿಗೆ ಹೆಣ್ಣು ಮಗುವಾಗುತ್ತದೆ.

ಹಾಗಾಗದೆ ಪುರುಷನ ವಿಲರ್ಯಕಣದಲ್ಲಿಯ y ಕ್ರೋಮೋಜೋಮ್‌ಸ್ತ್ರೀಯನ್ನು

ಸೇರಿದರೆ ಅದು xy ಆಗುತ್ತದೆ. ಆಗ ಗಂಡುಮಗು ಹುಟ್ಟುತ್ತದೆ. ಇದುವರೆವಿಗೂ ಇವೆಲ್ಲಾ ಸ್ವಭಾವಸಿದ್ಧವಾದ, ಪ್ರಕೃತಿಯಲ್ಲಿ ಸುಸಂಗತವಾದ ಕ್ರಿಯೆ. ಇದರ ನಂತರ ಪ್ರಕೃತಿಯ ವೈಪರೀತ್ಯಗಳು ಪ್ರಾರಂಭವಾಗುತ್ತವೆ. ಒಮ್ಮೊಮ್ಮೆ ಎರಡು ಮೂರು x ಕ್ರೋಮೋಜೋಮ್‌ಗಳಾಗಲಿ, ಎರಡು y ಕ್ರೋಮೋಜೋಮ್‌ಗಳಾಗಲಿ ಗರ್ಭೀಕರಣದಲ್ಲೇ ಸೇರುತ್ತವೆ. ಆಗಲೇ ಈ ಸಮಸ್ಯೆಗಳುಂಟಾಗುವುದು...

yy- ಸುಂದರವಾದ ಹೆಣ್ಣು ಮಗು.

xy - ಅಂದವಾದ ಗಂಡು ಮಗು.

xxy- ಕ್ಲಯಿನ್ ಫೆಲ್ಟರ್ ಸಿಂಡ್ರೋಮ್. ಸ್ತ್ರೀ ಅಂಶ ಇರುವ ಗಂಡು (ಹೆಣ್ಣಿನಂತೆ ಎದೆ ಇರುವವನು...)

xxxxx- ಪೆಂಟಾ ಎಕ್ಸ್ ಸಿಂಡ್ರೋಮ್.

21 ಕ್ರೋಮೋಜೋಮ್ ಹೆಚ್ಚಾಗಿದ್ದರೆ-ಡೌನ್ ಸಿಂಡ್ರೋಮ್ ಮಂಗೋಲಿಯಸ್ ಜಾತಿ ಆಕಾರಗಳು. ತೀರಾ ಕುಳ್ಳಾಗಿ ವಿಕಾರವಾಗಿರುವ ಹುಟ್ಟಿದ ಕೆಲಕಾಲದಲ್ಲೇ ಬ್ಲಡ್‌ಕ್ಯಾನ್ಸರಿಂದ ಸಾಯುವ ಮಕ್ಕಳು''

ಬರೆಯುವುದನ್ನು ನಿಲ್ಲಿಸಿ ತಲೆ ಎತ್ತಿ ಹೇಳಿದ: ''ಇದೆಲ್ಲಾ ಜೀನ್ಸ್‌ಗೆ ಸಂಬಂಧಿಸಿದ ಸಂಗತಿಗಳು. ಇವಲ್ಲದೆ ಮ್ಯುಟೇಷನ್ಸ್ ಎಂದು ಬೇರೆಯಾಗಿ ಇರುತ್ತವೆ. ಇಪ್ಪತ್ಮೂರು ಕ್ರೋಮೋಜೋಮ್ಸ್‌ಗಳಲ್ಲಿ ಯಾವುದಾದರೂ ಹಾಳಾದರೆ...''

ಮುಂದಿನ ಮಾತನ್ನು ತಡೆಯುತ್ತಾ ''ಒಂದು ನಿಮಿಷ. ಸೈನ್ಸ್ ಬಗ್ಗೆ ಬರೆಯಲು ನಮ್ಮಲ್ಲಿ ಜನರಿದ್ದಾರೆ ನಮಗೆ ಬೇಕಾದ್ದು ರೋಮಾಂಚಕ ವಾರ್ತೆಗಳು ಮಾತ್ರವೇ, ಅದು ಕೊಡಿ ಸಾಕು'' ಎಂದ.

''ಹಾಗಿದ್ದರೆ ಇನ್ನು ಸ್ವಲ್ಪ ಕಾಲ ನೀವು ನಿಧಾನಿಸಬೇಕು'' ಎಂದ ರಂಗಪ್ರಸಾದ್, ''ಎರಡೇ ಕೇಸುಗಳಿಂದ ಇದನ್ನು ಪ್ರಮುಖ ವಾರ್ತೆಯನ್ನಾಗಿ ಪ್ರಕಟಿಸುವುದು ತೀರಾ ಹಾಸ್ಯಾಸ್ಪದವಾಗಿರುತ್ತದೆ ಇನ್ನೂ ಎರಡು ಡೆಲಿವರಿಕೇಸುಗಳು ಶೀಘ್ರದಲ್ಲಿಯೇ ಬರುತ್ತವೆ. ಅವನ್ನೂ ನೋಡೋಣ. ಆಗ ನಿಮಗೆ ಫೋಟೋ ಕೂಡ ದೊರೆಯುತ್ತಧೆ''

''ಎಂದರೆ ಮುಂದಿನ ಎರಡೂ ಇದೇ ರೀತಿಯದೇ ಆಗಿರುತ್ತದೆ ಎಂದು ಊಹಿಸುತ್ತಿದ್ದೀರಾ?''

''ಹಾಗಾಗಬಾರದು ಎಂದು ನಿರೀಕ್ಷಿಸುತ್ತೇನೆ. ಆದರೆ ಮಾತ್ರ ಅದು ಚರಿತ್ರೆಯನ್ನು ಸೃಷ್ಟಿಸುತ್ತದೆ. ಗಿನ್ನೆಸ್ ವರ್ಲ್ಡ್ ರಿಕಾರ್ಡ್‌ನಲ್ಲಿ ಸೇರಬೇಕಾದ ವಾರ್ತೆಯಾಗುತ್ತದೆ''

''ಆಗ ಅಂತಹ ವಾರ್ತೆಯನ್ನು ಮೊದಲು ಹಿಡಿದಿದ್ದಕ್ಕಾಗಿ ನಮ್ಮ ಪತ್ರಿಕೆಗೆ ಒಳ್ಳೆ ಹೆಸರೂ ಬರುತ್ತದೆ'' ಎನ್ನುತ್ತಾ ನಕ್ಕ.

ಅಷ್ಟರಲ್ಲಿ ವಿಮಾನ ಇಳಿಯಿತು. ರವಿ ತನ್ನ ವಿಳಾಸದ ಕಾರ್ಡನ್ನು ಕೊಡುತ್ತಾ

''ವಿವರಗಳನ್ನು ಕಳುಹಿಸುತ್ತೀರಲ್ಲಾ!'' ಎಂದು ಕೇಳಿದ.

''ಕೂಡಲೇ ಅಲ್ಲ. ಎರಡು-ಮೂರು ತಿಂಗಳಲ್ಲಿ, ಅದೂ ಆ ರೀತಿಯ ಮಕ್ಕಳು ಹುಟ್ಟಿದರೆ ಇಲ್ಲದಿದ್ದರೆ ಚಿಕ್ಕ ವಿಷಯವನ್ನು ಅನಗತ್ಯವಾಗಿ ಬಲಟ್ಟದಂತೆ ಮಾಡಿ ಪ್ರಜೆಗಳನ್ನು ಭಯಗೊಳಿಸುವುದು ಸರಿಯಲ್ಲ''

ಇಬ್ಬರೂ ಸೀಟಿನಿಂದ ಎದ್ದರು.

## 13

ರವಿ ಮತ್ತೆ ಮುಂಬೈಗೆ ಹೋಗಲು ನಿರ್ಧರಿಸಿದ್ದ ದಿನಾಂಕಕ್ಕಿಂತಲೂ ಎರಡು ದಿನಗಳು ತಡವಾಯಿತು. ಹೊಸದಾಗಿ ಪರಿಚಯವಾದ ತರುಣಿ. ಟ್ರಿಕ್ ಅಷ್ಟು ಬೇಗ ಕಲಿತುಕೊಳ್ಳಲಿಲ್ಲ. ಅದಕ್ಕಾಗಿ ಆತ ಉಳಿದುಕೊಳ್ಳಬೇಕಾಯಿತು.

ಅವನು ಮುಂಬೈಗೆ ಹೋಗುತ್ತಲೇ ಪತ್ರಿಕೆಯವರು ಅವನನ್ನು ಕಲ್ಕತ್ತೆಗೆ ಕಳುಹಿಸಿಕೊಟ್ಟರು. ಅಲ್ಲಿ ಬಹುಕಾಲವೇ ಇದ್ದ. ಪರಿಸರ ಮಾಲಿನ್ಯದ ಮೇಲೆ ಅಲ್ಲಿ ಅಭ್ಯಾಸ ಮಾಡಿ ಒಂದು ಲೇಖನವನ್ನು ತಯಾರಿಸಬೇಕಾಗಿತ್ತು.

ಆದರೆ ಅಲ್ಲೂ ಅವನಿಂದ ಟ್ರಿಕ್ ಕಲಿಯಬೇಕೆಂದು ಬಯಸಿದ ತರುಣಿಯರು ಹೆಚ್ಚಾದ್ದರಿಂದ ಒಂದು ತಿಂಗಳಕಾಲ ವಿವಿಧ ಟ್ರಿಕ್‌ಗಳನ್ನು ಕಲಿಸುತ್ತಾ ಕಾಲ ಕಳೆದ. ಇದ್ದಕ್ಕಿದ್ದಂತೆ ಒಮ್ಮೆ ತನ್ನ ಕೆಲಸದ ನೆನಪಾಗಿ ಆತುರದಿಂದ ಲೇಖನವನ್ನು ಸಿದ್ಧಪಡಿಸಿ ತೆಗೆದುಕೊಂಡು ಹೋದ.

ಆ ಲೇಖನವನ್ನು ಓದಿದ ಸಂಪಾದಕ ಮನಸ್ವಿಯಾಗಿ ಬೈಯ್ದ. ''ಇದು ಸೈನ್ಸ್ ಇಂಡಿಯಾದ ಲೇಖನದಂತಿಲ್ಲ ಹೈಸ್ಕೂಲ್ ಟೆಕ್ಸ್ಟ್‌ಬುಕ್ ಪಾಠದಂತೆ ಇದೆ'' ಎಂದ.

ರವಿ ಆಶ್ಚರ್ಯದಿಂದ ''ಅದು ನಿಮಗೆ ಹ್ಯಾಗೆ ಗೊತ್ತಾಯಿತು ಸರ್? ಅಲ್ಲಿಂದಲೇ ಕಾಪಿ ಮಾಡದ್ದು...'' ಎಂದ.

ಸಂಪಾದಕ ಕಿಡಿಕಿಡಿಯಾದ. ''ಪ್ರತಿಸಾರಿ ನಿನ್ನನ್ನು ಕೆಲಸದಿಂದ ತೆಗೆದಾಗಲೂ ಪ್ರೊಪ್ರೈಟರ್ ಮಗಳು ಫೋನ್ ಮಾಡಿ ಹೇಳುತ್ತಾಳೆ ನೀನು ಮತ್ತೆ ಹಾಜರ್. ಈ ಬಾರಿ ಆಕೆಯಲ್ಲ. ಆಕೆಯ ತಂದೆಯೇ ಸ್ವತಃ ಬಂದು ಹೇಳಿದರೂ ನಿನ್ನನ್ನೂ ಕೆಲಸಕ್ಕೆ ಮತ್ತೆ ತಗೋಳ್ಳಲ್ಲ. ಎರಡು ತಿಂಗಳಿದ್ದು ಈ ರೀತಿನೇ ಬರೆಯೋದು. ಯೂ ಆರ್ ಅಂಡರ್ ಸಸ್ಪೆನ್‌ಷನ್!''

''ಸಾರಿ ಸರ್. ಈ ಸಾರಿ ಆಕೆನೂ ಹೇಳೋಲ್ಲ. ಆಕೆಗೆ ಮದುವೆ ನಿಶ್ಚಯವಾಗಿದೆ...'' ಎಂದು ಪೆಚ್ಚು ಮುಖ ಹಾಕಿಕೊಂಡ.

''ಹಾಗಿದ್ರೆ ಇನ್ನೂ ಒಳ್ಳೆದೇ. ಒಂದೇ ಸಾರಿ ಕೆಲಸದಿಂದ ತೆಗೆದುಹಾಕ್ತೇನೆ''

ರವಿ ತನ್ನ ಟೇಬಲ್ ಬಳಿಗೆ ಬಂದ.

''ಏನಯ್ಯ ಮಿತ್ರ ಹ್ಯಾಗಿದೀಯಾ? ನಿನಗೆ ಒಂದು ಕವರ್ ಬಂದಿದೆ. ಮೇಜಿನ ಮೇಲಿಟ್ಟಿದ್ದೀನಿ ನೋಡು'' ಎಂದ ಸಹೋದ್ಯೋಗಿ.

ರವಿ ಅದನ್ನು ತೆಗೆದುಕೊಂಡ. ತೂಕವಾಗಿಯೇ ಇತ್ತು. ತೆರೆದುನೋಡಿದ. ರಂಗಪ್ರಸಾದ್ ಬರೆದಿದ್ದ ಪತ್ರ. ಕವರಿನಲ್ಲಿ ಮೂರು ಫೋಟೋಗಳಿದ್ದವು. ಅದರಲ್ಲಿದ್ದ ಪತ್ರ:

''ಡಿಯರ್ ವೈಟ್ ಷಾಡೋ''

''ನಾವು ಮಾತನಾಡಿಕೊಂಡಂತೆ ಫೋಟೋ ಕಳುಹಿಸುತ್ತಿದ್ದೇನೆ ಇಲ್ಲಿಯ ಪರಿಸ್ಥಿತಿ ಬಿಳಿಯಾಗಿದೆ. ಎಲ್ಲರೂ ಭಯಗ್ರಸ್ಥರಾಗಿದ್ದಾರೆ. ಎರಡು ಹೆರಿಗೆಗಳಲ್ಲೂ ವಿಕೃತ ಶಿಶುಗಳೇ ಜನಿಸಿವೆ. ಅದಕ್ಕೂ ಮೊದಲಿನ ಗರ್ಭದಲ್ಲಿಯೇ ಸತ್ತಿದ್ದ ಮಗುವಿನ ಬಗ್ಗೆ ನಿಮಗೆ ಮೊದಲೇ ನಾನು ಹೇಳಿದಲ+ದೇನೆ. ಅದರ ಫೋಟೋ ಕೂಡ ಅದೃಷ್ಟವಶಾತ್ ದೊರೆತಿದೆ. ಅದನ್ನೂ ಹೊಸ ಕೇಸ್‌ಗಳೊಂದಿಗೆ ಕಳುಹಿಸುತ್ತಿದ್ದೇನೆ.

''ಆರು ತಿಂಗಳ ಅವಧಿಯಲ್ಲಿ ಒಂದು ಸಣ್ಣ ಹಳ್ಳಿಯಲ್ಲಿ ನಾಲ್ಕು ವಿಕೃತಶಿಶುಗಳ ಜನನ ವಿಜ್ಞಾನದ ಇತಿಹಾಸದಲ್ಲಾಗಲಿ, ಪ್ರಪಂಚದ ಚರಿತ್ರೆಯಲ್ಲಾಗಲಿ ಕಲ್ಪನೆಗೂ ನಿಲುಕದ ಸಂಗತಿಗಳು. ಸ್ಥಳೀಯ ಪತ್ರಿಕೆಗಳು ಇದನ್ನು ಒಂದು ಸುದ್ದಿಯಾಗಿ ಪ್ರಕಟಿಸಿವೆ. ಅದಕ್ಕಿಂತಲೂ ಹೆಚ್ಚಿನ 'ಗೌರವ' ಈ ಸಂಗತಿಗೆ ಸಂದಾಯವಾಗಿಲ್ಲ. ಸರ್ಕಾರದ ದೃಷ್ಟಿ ಈ ವಿಷಯದತ್ತ ಇನ್ನೂ ಏಕೆ ಬಂದಿಲ್ಲ ಎಂಬುದೇ ನನಗೆ ಅರ್ಥವಾಗುತ್ತಿಲ್ಲ. ಬೇರೆ ದೇಶದಲ್ಲಾಗಿದ್ದರೆ ಈ ವೇಳೆಗೆ ಎಷ್ಟೋ ಪ್ರಯೋಗಗಳು, ಸಂಶೋಧನೆಗಳು ಪ್ರಾರಂಬವಾಗಿರುತ್ತಿದ್ದುವು. ಇಲ್ಲಿಯ ಜನರು ತೀರ ಹೆದರಿದ್ದರೂ ಸರ್ಕಾರ ಮೌನವಾಗಿರುವುದು ತೀರಾ ಶೋಚನೀಯ ಸಂಗತಿ.

''ಈ ಗ್ರಾಮದವನಾಗಿ, ಅರಿವುಳ್ಳವವನಾಗಿ ನನ್ನಿಂದ ಸಾಧ್ಯವಾದ ಕೆಲಸವನ್ನು ನಿರ್ವಂಚನೆಯಿಂದ ನಡೆಸಿದ್ದೇನೆ. ಆಂಧ್ರಪ್ರದೇಶದಲ್ಲಿರುವ ಅತಿಕಡಿಮೆ ಹೆಲ್ತ್ ಮೂಯಜಿಯಂಗಳಲ್ಲೆಲ್ಲಾ ತುಂಬಾ ಚೆನ್ನಾಗಿರುವ ಗುಂಟೂರು ಕಾಲೇಜಿನಲ್ಲಿ ವೇವೇರಗಳನ್ನು ಸಂಗ್ರಹಿಸಿದ್ದೇನೆ. ಮ್ಯುಟೇಷನ್‌ಗೆ ಕಾರಣವಾದ ಪಾದರಸವು ಕುಡಿಯುವ ನೀರಿನಲ್ಲಿ ಬೆರೆತಿದೆಯೇನೋ ಎಂದು ನೀರನ್ನು ಪರೀಕ್ಷೆಮಾಡಿಸಿದೆ. ಅಂತಹುದೇನೂ ಆಗಿಲ್ಲ. ಎಕ+ಆಸರೇ ಇಲ್ಲಿ ಪ್ರಯೋಜನವಾಗದು. ಗರ್ಭದಲ್ಲಿರುವ ಶಿಶುವನ್ನು ಹಾನಿಗೊಳಿಸಬಲ್ಲ ಅಥವ ವಿಕೃತಗೊಳಿಸಬಲ್ಲ ರೇಡಿಯೋ ಆಕ್ಟಿವ್ ಕಿರಣಗಳು ಯಾವುದಾದರೂ ಉಂಟೇ ಎಂಬುದನ್ನು ಗಮನಿಸಿದ್ದೇನೆ. ಅಂತಹುದೇನೂ ಇಲ್ಲ. ನನ್ನ ಶಕ್ತಿಯೊಳಗಿರುವುದನ್ನು ನಾನು ಮಾಡಿ ಸುಮ್ಮನಾಗಿದ್ದೇನೆ.

''ಮತ್ತಿಬ್ಬರು ಪ್ರವಸಕ್ಕೆ ಸಿದ್ಧರಾಗಿದ್ದಾರೆ. ನಾನಾ ರೀತಿಯ ಸುದ್ದಿಗಳು ಹರಡುತ್ತಿವೆ.

ಈ ಬಾರಿ ಪ್ರಸವಕ್ಕೆ ನನ್ನಆಸ್ಪತ್ರೆಯ ಮುಂದೆ ನೂರಾರು ಮಂದಿ ಸೇರಿದರೂ ವಿಶೇಷವೇನೂ ಇಲ್ಲ.

''ನಾನೇನು ಮಾಡಬೇಕೆಂಬುದೇ ನನಗೆ ಅರ್ಥವಾಗಿಲ್ಲ. ನಾನು ಸಂಗ್ರಹಿಸಿದ ವಿವರಗಳು. ಕನ್‌ಜೆನಿಟರ್ ಮಾಲ್ ಫಾರ್ಮೆಷನ್‌ಗೆ ವಿವಿಧ ರೀತಿಯ ಕಾರಣಗಳು. ಯಾವ ಕಾರಣಕ್ಕೂ ಹೊಂದದ ಕೃಷ್ಣಾಪುರದ ವಿಚಿತ್ರ ಜನನಗಳು. ಎರಿತ್ರೊ ಬ್ಲಾಸ್ಟೋಸಿಸ್‌ಗೆ ದಾರಿ ಸೂಚಿಸುವ ವಿವರಗಳು ಇವೆಲ್ಲವನ್ನು ವಿವರಿಸುತ್ತಾ ನಲವತ್ತು ಪುಟಗಳ ಲೇಖನವನ್ನು ಕಳುಹಿಸುತ್ತಿದ್ದೇನೆ. ಅದೇನಾದರೂ ನಿಮಗೆ ಉಪಯೋಗವಾಗುತ್ತದೆಯೇನೋ ನೋಡಿ.

''ಕೃಷ್ಣಾಪುರದ ಜನರಿಗೆ ಏನಾದರೂ ಅನುಕೂಲವಾಗಬೇಕು. ಅದು 'ಸೈನ್ಸ್ ಇಂಡಿಯಾ' ಮುಖಾಂತರ ದೊರೆಯುತ್ತದೆ ಎಂದು ನಂಬಿದ್ದೇನೆ''

ಇಂತು ಡಾ. ರಂಗಪ್ರಸಾದ್

ರವಿಯ ಸಂತೋಷಕ್ಕೆ ಎಲ್ಲೆಯೇ ಇಲ್ಲ.

ಆ ಲೇಖನ, ಚಿತ್ರಗಳನ್ನುತೆಗೆದುಕೊಂಡು ಸಂಪಾದಕರ ಕೋಣೆಗೆ ಹೋದ. 'ಮತ್ತೆ ಯಾಕೆ ಬಂದೆ?' ಎನ್ನುವಂತೆ ನೋಡಿದ ಸಂಪಾದಕ.

''ನನ್ನನ್ನು ನೀವು ಅಪಾರ್ಥ ಮಾಡಿಕೊಂಡಿದ್ದೀರಿ ಸಾರ್'' ಎನ್ನುತ್ತಾ ಎದುರಿದ್ದ ಕುರ್ಚಿಯಲ್ಲಿ ಕುಳಿತುಕೊಳ್ಳುತ್ತಾ, ''ಮೊನ್ನೆ ಪ್ಲೇನ್‌ನಲ್ಲಿ ಹೈದರಾಬಾದಿಗೆ ಹೋಗುತ್ತಿದ್ದಾಗ ಒಬ್ಬ ಡಾಕ್ಟರ್ ಪರಿಚಯವಾಗಿ, ತಮ್ಮ ಊರಿನಲ್ಲಿ ನಡೆಯುತ್ತಿರುವ ಒಂದು ಸಮಸ್ಯೆ ಹೇಳಿದರು. ಪರಿಸರ ಮಾಲಿನ್ಯಕ್ಕಿಂತಲೂ ಅದು ಹೆಚ್ಚು ಭಯಂಕರವಾಗಿ ಕಾಣಿಸಿತು. ಅದನ್ನೇ ಯೋಚಿಸುತ್ತಿದ್ದೆ. ಇದನ್ನು ತಾವು ಓದಿ'' ಎಂದು ಲೇಖನವನ್ನು ಅವರ ಮುಂದಿರಿಸಿದ.

ನಿರಾಸಕ್ತಿಯಿಂದ ತೆಗೆದು ನೋಡಿದ ಸಂಪಾದಕ. ಮೊದಲ ಪುಟ ಓದುತ್ತಲಲೇ ಸರಿಯಾಗಿ ಕುಳಿತ. ರವಿ ಆತನನ್ನೇ ನೋಡುತ್ತಿದ್ದ. ಆತನ ಮುಖದಲ್ಲಿ ಕವಳಿಕೆಗಳು ತೀರಾ ಶೀಘ್ರವಾಗಿ ಬದಲಿಸುತ್ತಿವೆ. ಸಂಪಾದಕ ಸೀರಿಯಸ್ಸಾಗಿ ಬೇಗ ಬೇಗ ಓದತೊಡಗಿದ.

ಓದಿ ಪೂರೈಸುತ್ತಲೇ ತನ್ನ ಕುರ್ಚಿಯಲ್ಲಿ ಹಿಂದಕ್ಕೆ ಒರಗಿ ಕಣ್ಮುಚ್ಚಿದ. ರವಿ ಆತುರದಿಂದ ಸಂಪಾದಕನನ್ನೇ ನೋಡುತ್ತಿದ್ದ. ಈ ಸಂಪಾದಕ ಯುವಕ ಸೈನ್ಸ್ ಚೆನ್ನಾಗಿ ಓದಿರುವವನು ಅವನಿಗೆ ಕೊಡುವ ಮುನ್ನ ಒಮ್ಮೆಯಾದರೂ ತಾನು ಓದಿದ್ದರೆ ಚೆನ್ನಾಗಿರುತ್ತಿತ್ತು ಅದರಲ್ಲೇನು ತಪ್ಪಿದೆಯೋ?...

''ಹೇಗಿದೆ?'' ರವಿ ಕೇಳಿದ.

ಯಾವುದೋ ಲೋಕದಲ್ಲಿರುವವನಂತೆ ಕಣ್ತೆರೆದ. ಗಂಭೀರವಾಗಿ ''ಈ

ಲೇಖನದಲ್ಲಿರುವ ವಿಷಯ ನಿಜವೇ ಆಗಿದ್ದರೆ 'ಸೈನ್ಸ್ ಇಂಡಿಯಾ' ಪ್ರಪಂಚಕ್ಕೇ ಅತ್ಯಂತ ಆಶ್ಚರ್ಯಕರವಾದ ವಿಷಯವನ್ನು ತಿಳಿಸುತ್ತದೆ. ಭಾರತ ದೇಶದ ಎಲ್ಲಾ ಪ್ರಜೆಗಳಿಗೂ ಕೃಷ್ಣಾಪುರ ಪರಿಚಿತವಾಗುತ್ತದೆ'' ಎನ್ನುತ್ತಾ ಆ ಕಾಗದಗಳನ್ನು ಕೈಗೆತ್ತಿಕೊಂಡ. ''ಈ ಡಾಕ್ಟರ್ ಯಾರೋ ಪಾಪ ತುಂಬಾ ಶ್ರಮವಹಿಸಿದ್ದಾರೆ. ತನ್ನ ಸೀಮೆಯಲ್ಲಿ ತನ್ನಿಂದ ಸಾಧ್ಯವಾದುದನ್ನು ಮಾಡುತ್ತಿದ್ದೇನೆ ಎಂದು ಬರೆದಿದ್ದಾರೆ ಅಷ್ಟೇ. ಬೇರೆ ಯಾವ ವಿಜ್ಞಾನಿಯೂ ಇದಕ್ಕಿಂತ ಹೊಚ್ಚೇನೂ ಮಾಡಲಾರ. ರೇಡಿಯೋ ಆಕ್ಟಿವಿಟಿಯಾಗಿ ಶೋಧಿಸಿದ್ದಾರೆ. ಮಕ್ಕಳ ತಾಯಂದಿರನ್ನು ಪರೀಕ್ಷಿಸಿದ್ದಾರೆ. ಅವರ ಗಂಡಂದಿರ ವೀರ್ಯ ಪರೀಕ್ಷೆ ನಡೆಸಿದ್ದಾರೆ. ಎಲ್ಲೂ ಏನೂ ತಪ್ಪಿಲ್ಲ. ಆದರೂ ಒಂದೇ ಸಮನೆ ನಾಲ್ಕು ವಿಕೃತ ಜನನಗಳು. ಮೈ ಗಾಡ್!'' ತಲೆಎತ್ತಿ ಗಂಭೀರವಾಗಿ ''ಈ ತಿಂಗಳ ಕವರ್ ಪೇಜಿಗೆ ಇದೇ ಫೋಟೋಗಳನ್ನೇ ಹಾಕೋಣ ಇಷ್ಟೆಲ್ಲಾ ನಡೆಯುತ್ತಿದ್ದರೂ ಸರ್ಕಾರ ಏನು ಮಾಡುತ್ತಿದೆ ಎಂದು ಕೊನೆಯಲ್ಲಿ ಸೇರಿಸು. 'ಕೃಷ್ಣಾಪುರವನ್ನು ರಕ್ಷಿಸುವವರು ಯಾರು?' ಎಂಬುದೇ ಹೆಡ್ಡಿಂಗ್ ಈ ವಿಷಉವನ್ನು ಪರಿಶೀಲಿಸಲು 'ಸೈನ್ಸ್ ಇಂಡಿಯಾ' ಪರವಾಗಿ ಜೆನೆಟಿಕ್ಸ್ ಸಂಬಂಧಿಸಿದಂತೆ ಸಲಹೆಗಾರರು ಕೃಷ್ಣಾಪುರಕ್ಕೆ ಇಂದೇ ಹೋಗುತ್ತಿದ್ದಾರೆ ಎಂದು ಸೇರಿಸು. ಡಾ. ರಂಗಪ್ರಸಾದ್ ಫೋಟೋ ಕೂಡ ತರಿಸಬೇಕು. ಇದೆಲ್ಲಾ ಈ ಸಂಚಿಕೆಯಲ್ಲೇ ಬರಬೇಕು''

''ಹಾಗಿದ್ದರೆ ನನ್ನ...''

''ಏನೂ ಇಲ್ಲ, ಹೇಳಿದ ಕೆಲಸ ಬೇಗ ಮುಗಿಸು'' ರವಿ ನಗುತ್ತಾ ಹೊರಬಂದ.

★★★

ಹತ್ತು ದಿನಗಳಲ್ಲಿ ಆ ತಿಂಗಳ ಸೈನ್ಸ್ ಇಂಡಿಯಾ ಸಂಚಿಕೆ ಮಾರುಕಟ್ಟೆಗೆ ಬಿಡುಗಡೆಯಾಯಿತು.

ಮೊದಲು ಅಂದೊಂದು ಸಣ್ಣ ಅಲೆಯಾಗಿತ್ತು. ನಂತರದಲ್ಲಿ ಕ್ರಮವಾಗಿ ವೃದ್ಧಿಗೊಂಡು ಪ್ರಚಂಡ ದಾವಾನಲವಾಯಿತು.

## 14

ರಾಕೇಶನ ಮುಖ ಕೆಂಪಾಗಿತ್ತು. ಅವನೆದುರು ಇಬ್ಬರು ರೆಡ್ ಸ್ಕೆಲಿಟನ್‌ಗಳಿದ್ದರು. ಮುಂದೆ 'ಸೈನ್ಸ್ ಇಂಡಿಯಾ' ಪತ್ರಿಕೆ ಬಿದ್ದಿತ್ತು. ಹಲ್ಲು ಕಡಿಯುತ್ತಾ ''ರಂಗಪ್ರಸಾದ್...ತುಂಬಾ ಗೋಪ್ಯವಾಗಿ ನಮ್ಮ ಕಾರ್ಯವನ್ನು ನಿರ್ವಹಿಸುತ್ತಿರುವಾಗಲೇ ನಮ್ಮ ರಹಸ್ಯವನ್ನು ಬಯಲು ಮಾಡಿದ್ದೀ. ಎಲ್ಲರ ದೃಷ್ಟಿ ಕೃಷ್ಣಾಪುರದತ್ತ ಸೆಳೆಯುವಂತೆ ಮಾಡಿದ್ದೀ. ಇದಕ್ಕೆ ತಕ್ಕ ಫಲ ಅನುಭವಿಸಬೇಕು.

ಉಸ್ಲೋಕ್ ನನಗೆ ಶಿಕ್ಷೆ ವಿಧಿಸುತ್ತದೆ'' ಎನ್ನುತ್ತಾ ರೆಡ್ ಸ್ಕೆಲಿಟನ್‌ಗಳ ಕಡೆ ತಿರುಗಿ ''ಈ ರಾತ್ರಿಯೇ ಅವನು ಸಾಯಬೇಕು...''

''ಮಹಾದ್ರಷ್ಟರ ಅಪ್ಪಣೆಯಿಲ್ಲದೆ ಈ ರೀತಿ ಕೆಲಸ ಮಾಡುವುದು ಉಸ್ಲೋಕ್ ಆಚಾರವಲ್ಲ ರಾಕೇಶ್''

''ನಾನ್ಸೆನ್ಸ್...ಒಂದು ಕಡೆಯಿಂದ ಅವರು ಮುಂದೆ ಮುಂದೆ ಬರ್ತಿದಾರೆ. ಈಗ ಬರುವವರಿಗೆ ರಂಗಪ್ರಸಾದ್ ಸಂಶೋಧನೆಗಳೇ ದೊರೆಯಬಾರದು. ಅಷ್ಟರಲ್ಲಿ ನಾವು ನೀರಿನಲ್ಲಿ ಪಾದರಸವನ್ನು ಬೆರೆಸುವ ಯೋಜನೆ ಹಾಕಿಕೊಳ್ಳಬೇಕು. ಬಂದವರು ಮತ್ತಷ್ಟು ದಿಗ್ಭ್ರಮೆಗೆ ಸಿಲುಕಬೇಕು. ಈ ವಿಕೃತ ಶಿಶುಗಳ ಜನನಕ್ಕೆ ಯಾವುದೋ ಭೌತಕಾರಣ ಇರುವಂತೆ ಭ್ರಾಂತಿಗೆ ಒಳಗಾಗಬೇಕು. ಅಷ್ಟಾವಕ್ರನ ಜನನದವರೆಗೂ ಆ ಗರ್ಭಗಳನ್ನು ರಕ್ಷಿಸಬೇಕು. ಅದಕ್ಕಾಗಿ ಈಗ ಸಂಶೋಧನೆ ನಡೆಸಿ ಸಾಕ್ಷ್ಯಾಧಾರಗಳನ್ನು ಸಂಗ್ರಹಿಸಿರುವ ರಂಗಪ್ರಸಾದ್ ಸಾಯಬೇಕು...ಈ ಕೆಲಸಕ್ಕೆ ಮಹಾದ್ರಷ್ಟರ ಅನುಮತಿ ಅವಶ್ಯಕವಾಗಿದ್ದರೆ ಅದನ್ನು ನಾನೇ ಪಡೆಯುತ್ತೇನೆ. ನಮ್ಮ ಬೇಟೆ ನಾಯಿಯ ಸಹಾಯದಿಂದ ಈ ರಾತ್ರಿ ಹನ್ನೆರಡು ಗಂಟೆಗೆ ಕೆಲಸವಾಗಬೇಕು...'' ಎನ್ನುತ್ತಾ ಜೋರಾಗಿ ಕಿರುಚಿದ.

ಒಂದು ನಾಯಿ ಆ ಕೋಣೆಯೊಳಕ್ಕೆ ಬಂತು. ಅದು ನಾಯಿಯಂತಿಲ್ಲ ಎತ್ತರವಾದ ಮನುಷ್ಯನಂತಿದೆ. ಕಣ್ಣು ಬೆಂಕಿಯ ಉಂಡೆಯಂತಿದೆ. ಹೊರಗೆ ಚಾಚಿಕೊಂಡಿರುವ ನಾಲಿಗೆಯಿಂದ ಜೊಲ್ಲು ಸುರಿಯುತ್ತಿದೆ. ಆಜ್ಞೆಯ ಕೊರಳನ್ನಾದರೂ ಸುಲಭವಾಗಿ ಚುಚ್ಚುವ ಮೊನಚಾದ ಕೋರೆಗಳು. ಅಪ್ಪಣೆ ದೊರೆತರೆ ಸಾಕು ಎದುರಿನವನನ್ನು ಚೂರು ಚೂರು ಮಾಡುವಷ್ಟು ಕೋಪ ಅದರ ಮುಖದಲ್ಲಿದೆ. ಆ ಭಯಂಕರ ಪ್ರಾಣಿ ರಾಕೇಶ್ ಮುಂದೆ ಬಂದು ನಿಂತಿತು.

ರಾಕೇಶ್ ಅದರ ಕೊರಳ ಮೇಲೆ ಕೈಹಾಕಿ ನೇವರಿಸುತ್ತಾ ನಿಂತ. ಆ ಕ್ಷಣದಲ್ಲಿ ಅವರಿಬ್ಬರ ಮುಖ ಭಾವಗಳಲ್ಲೂ ಹೆಚ್ಚು ಅಂತರವೇನೂ ಕಾಣಿಸಲಿಲ್ಲ.

★★★

ಹನ್ನೆರಡು ಘಂಟೆಗೆ ಇನ್ನೂ ಐದು ನಿಮಿಷಗಳಿವೆ.

ರಂಗಪ್ರಸಾದ್ ತನ್ನ ಮನೆಯ ಮುಂದಣ ಕೋಣೆಯಲ್ಲಿ ಕುಳಿತು ಪತ್ರಿಕೆಯೊಂದನ್ನು ಓದುತ್ತಿದ್ದಾನೆ. ವೈದ್ಯ ವೃತ್ತಿಯೇ ಆತನಿಗೆ ಆನಂದನೀಡುತ್ತದೆ. ಅದೇ ಆತನ ವಿಶ್ರಾಂತಿ ಮಾರ್ಗ. ನಿದ್ರೆಗಿಂತಲೂ ಒಂದು ಶಾಸ್ತ್ರಕೃತಿಯನ್ನು ಓದುವದು ಆತನಿಗೆ ಹೆಚ್ಚು ಸಂತೋಷವನ್ನು ನೀಡುವ ಕೆಲಸ.

ಅರ್ಧಗಂಟೆಗೆ ಮೊದಲು ಮಾತ್ರವೇ ಅಪೆಂಡಿಸೈಟಿಸ್ ರೋಗಿಯೊಬ್ಬರ ಚಿಕಿತ್ಸೆ ಮುಗಿಸಿ ಬಂದಿದ್ದರು. ಆ ವೃದ್ಧ ದಂಪತಿಗಳು ಕಣ್ಣೀರು ಸುರಿಸುತ್ತಾ ಕೈಜೋಡಿಸಿದ್ದರು. ಅವರು ಮಾತ್ರವೇ ಅಲ್ಲ ಆ ಗ್ರಾಮದವರೆಲ್ಲಾ ಡಾಕ್ಟರನ್ನು ಹಾಗೇ ಗೌರವದಿಂದ

ನೋಡುತ್ತಾರೆ. ಹೆಂಡತಿ-ಮಕ್ಕಳು ಇಲ್ಲದೆ, ಹಣದ ಮೇಲೆ ಆಸೆಯಿಲ್ಲದೆ ಕೇವಲ ತಮ್ಮ ಒಳಿತಿಗಾಗಿ ಬಂದ ದೇವರೆಂದೇ ಅವರು ಭಾವಿಸುತ್ತಾರೆ.

ಪುಟ ತಿರುಗಿಸಿದ.

ಹೊರ ಬಾಗಿಲನ್ನು ಯಾರೋ ಉಗುರುಗಳಿಂದ ಕೆರೆದಂತೆ ಸದ್ದು. ತಲೆ ಎತ್ತಿ ನೋಡಿದರು.

ಮೌನ.

ಏನೂ ಇಲ್ಲ ಎಂದು ಮತ್ತೆ ಪತ್ರಿಕೆಯ ಪುಟದ ಮೇಲೆ ಕಣ್ಣೇರಿಸಿದರು ಮತ್ತೆ ಅದೇ ಸದ್ದು. ಈ ಬಾರಿ ಅದು ತೀರಾ ಸ್ಪಷ್ಟವಾಗಿತ್ತು.

''ಯಾರದು?'' ಎನ್ನುತ್ತಾ ಬಾಗಿಲ ಬಳಿಗೆ ಬಂದರು.

ಅಸ್ತಮಾ ರೋಗಿಯ ಗಂಟಲಿಂದ ಶಬ್ದಬರುವಂತೆ ಒಂದು ಗೊರಕೆ. ಬಾಗಿಲ ಚಿಲಕ ತೆರೆದರು. ಬಾಗಿಲನ್ನು ತೆರೆಯುವವನು ಒಂದು ಕ್ಷಣ ನಿಂತು ''ಯಾರದು?'' ಎಂದು ಮತ್ತೆ ಕೇಳಿದರು. ಹೊರಗಿನಿಂದ ಉತ್ತರವಿಲ್ಲ. ಬಾಗಿಲು ತೆರೆಯುತ್ತಿದ್ದಂತೆಯೇ ಬಾಗಿಲನ್ನು ತಳ್ಳಿಕೊಂಡು ಅದು ಒಳಕ್ಕೆ ಬಂತು. ಅನಿರೀಕ್ಷಿತವಾಗಿ ಬಂದ ಪ್ರಾಣಿಯನ್ನು ಕಂಡು ಒಂದಡಿ ಹಿಂದಿರಿಸಿದರು.

ಆಳೆತ್ತರದ ಬೇಟೆನಾಯಿ! ರಕ್ತದಲ್ಲಿ ನೆನೆದ ಬೆಂಕಿಯ ಮುದ್ದೆಗಳಂತೆ ಇರುವ ಕಣ್ಣುಗಳು. ಒಡನೆಯೇ ಹಾರಿ ಡಾಕ್ಟರ್ ಮೇಲೆ ಎರಗಿತು. ಅದರ ಉಗುರು ಡಾಕ್ಟರರ ಭುಜದಲ್ಲಿ ನೆಟ್ಟಿತು. ಅದರ ಮುಖ ಅವರ ಮುಖವನ್ನು ಸಮೀಪಿಸಿತು. ಒಂದು ರೀತಿಯ ದುರ್ವಾಸನೆ. ಅದನ್ನು ಗುರ್ತಿಸುವಂತಿಲ್ಲ. ಅದರ ಕೋರೆಗಳು ಡಾಕ್ಟರರ ಕೊರಳಲ್ಲಿ ಇಳಿಯಲು ಸನ್ನದ್ಧವಾಯಿತು.

★★★

''ಅತ್ತೆಮ್ಮಾ'' ಎಂದಳು ಕೇದಾರಗೌರಿ ಗಾಬರಿಯಿಂದ ಮಾತಿಲ್ಲ. ಏನೋ ನೋವು ಅನುಭವಿಸುತ್ತಿರುವಂತೆ ಆಕೆಯ ಮುಖ ಹೇಳುತ್ತಿದೆ. ಇದ್ದಕ್ಕಿದ್ದಂತೆಯೇ ನಿರ್ಣಯಿಸಿದವಳಂತೆ ''ಡಾಕ್ಟರನ್ನು ಕರೆತರ್ತೀನಿ'' ಎಂದು ಗೌರಿ ಎದ್ದುನಿಂತಳು.

''ಇಷ್ಟು ಹೇತ್ತಿನಲ್ಲಿ ನೀನು ಹೋಗ್ತೀಯೇನಮ್ಮ?'' ಎಂದಳು ನೋವನ್ನು ಸಹಿಸಿ ಕೊಳ್ಳುತ್ತಾ.

''ಡಾಕ್ಟರ್ ಮನೆ ಹತ್ತಿರ ತಾನೆ. ನಾಲ್ಕು ಹೆಜ್ಜೆ ಹೋಗಿ ಬರ್ತೀನಿ'' ಎಂದು ಆಕೆಗೆ ಸಾಂತ್ವನ ಹೇಳಿದಳು.

ಸಂಜೆ ಸ್ವಲ್ಪವಾಗಿ ಎದೆನೋವು ಕಾಣಿಸಿಕೊಂಡಿತ್ತು. ಗಮನಿಸದೆ ಸುಮ್ಮನಿದ್ದಳು. ರಾತ್ರಿ ಹತ್ತುಗಂಟೆಗೆ ನೋವು ಹೆಚ್ಚಾಯಿತು. ಹುಡುಗರಾರೂ ಇರಲಿಲ್ಲ. ಸೊಸೆ ಡಾಕ್ಟರನ್ನು

ಕರೆತರುತ್ತೇನೆ ಎಂದರೆ ಬೇಡವೆಂದು ತಡೆದಿದ್ದಳು ಮತ್ತಷ್ಟು ಸಮಯ ಕಳೆದಂತೆ ನೋವು ಉಲ್ಬಣಿಸಿತ್ತು.

ಇದ್ದಾರ್ಥ ಊರಿನಲ್ಲಿರಲಿಲ್ಲ ಗೌರಿ ಊರಿಗೆ ಹೊಸಬಳೇನೂ ಅಲ್ಲ. ಮದುವೆಯ ನಂತರ ಎರಡು-ಮೂರು ತಿಂಗಳಲ್ಲಿ ಕೇವಲ ಕೆಲವು ದಿನಗಳಿಗಾಗಿ ಮಾತ್ರವೇ ಅತ್ತೆಯ ಮನೆಗೆ ಕಳುಹಿಸಿದ್ದರೂ ಅದಕ್ಕೆ ಮೊದಲು 'ರಾವೇ' ಪ್ರೋಗ್ರಾಂನಲ್ಲಿ ಇಲ್ಲಿಯೇ ಇದ್ದುದರಿಂದ ದಾರಿ ಆಕೆಗೆ ಚೆನ್ನಾಗಿ ಪರಿಚಯವಾಗಿತ್ತು.

ಮೊಣಕಾಲಿಗೆ ಕೈಯ್ಯಾಸರೆ ಕೊಡುತ್ತಾ ನಡೆದುಕೊಂಡು ಆ ಗಲ್ಲಿಯ ತಿರುವನ್ನು ತಿರುಗಿದಳು. ಉಳಿದ ರಸ್ತೆಗಳಿಗಿಂತಲೂ ವಿಶಾಲವಾದ ರಸ್ತೆ. ಅಲ್ಲಿ ಮಜ್ಞಲಗಳು ಸ್ವಲ್ಪ ದೂರದೂರದಲ್ಲಿವೆ. ಮನೆಯ ಸುತ್ತಲೂ ಕಾಂಪೌಂಡ್. ಗೇಟನ್ನು ತೆರೆದುಕೊಂಡು ಪ್ರವೇಶಿಸಿದಳು.

ಅರ್ಧರಾತ್ರಿಯಾಗಿದ್ದರಿಂದ ಎಲ್ಲೂ ಯಾವ ಸಪ್ಪಳಗಳೂ ಇಲ್ಲ. ಮನೆಯೊಳಗೆ ಯಾರೋ ಬಿದ್ದ ಸದ್ದು. ಏನೋ ಎಳೆಯುವ ಶಬ್ದ...

ಬೇಗ ಮೆಟ್ಟಿಲೇರಿ ಒಳಕ್ಕೆ ಇಣುಕಿ ನೋಡಿದಳು. ಹೃದಯವೇ ನಿಂತಂತಾಗಿ ಅಪ್ರಯತ್ನವಾಗಿ ಚೀತರಿಸಿದಳು.

ಡಾಕ್ಟರ್ ಅಂಗಾತ ಬಿದ್ದಿದ್ದಾರೆ. ಅದನ್ನು ದೂರಕ್ಕೆ ತಳ್ಳಲು ಆತನ ಕೈ ಪ್ರಯತ್ನಿಸುತ್ತಿದೆ. ಎದೆಯ ಮೇಲೆ ಕಾಲಿರಿಸಿ ನಿಂತಿರುವ ಆ ಬೇಟೆನಾಯಿ ತನ್ನ ಕೋರೆಯನ್ನು ಕೊರಳಲ್ಲಿ ಇಳಿಸಲು ಪ್ರಯತ್ನಿಸುತ್ತಿದೆ. ಆ ಬಲಿಷ್ಠನಾಯಿಯ ಮುಂದೆ ಡಾಕ್ಟರರ ಶಕ್ತಿ ಸೋಲುತ್ತಿದೆ.

ಚೀತ್ಕಾರದ ಧ್ವನಿಕೇಳಿ ತನ್ನ ಪ್ರಯತ್ನದಲ್ಲಿ ಯಶಸ್ವಿಯಾಗುತ್ತಿದ್ದ ನಾಯಿ ಹಿಂತಿರುಗಿ ನೋಡಿತು. ಬಿಳಿಚಿಕೊಂಡು ಪ್ರತಿಮೆಯಂತಾಗಿದ್ದ ಕೇದಾರಗೌರಿ. ಅವಳ ಮುಂದಿನ ದೃಶ್ಯ ಅವಳ ಬಾಯ್ಮಾತನ್ನು ಅಪಹರಿಸಿತ್ತು.

ಒಂದು ಕ್ಷಣ ಅದರ ಕಣ್ಣು ಆಕೆಯನ್ನು ಸೂಕ್ಷ್ಮವಾಗಿ ಪರಿಶೀಲಿಸಿತು. ಮರುಕ್ಷಣವೇ ಹಿಂದಕ್ಕೆ ಕುಪ್ಪಳಿಸಿತ್ತು.

ಅದುವರೆವಿಗೂ ಅದರ ಕೋರೆಗಳು ತನ್ನ ಕೊರಳಲ್ಲಿ ಇಳಿಯದ ಹಾಗೆ ಕೈಯಿಂದ ಪ್ರಯತ್ನಿಸುತ್ತಿದ್ದ ರಂಗಪ್ರಸಾದ್ ಅದರ ನೋಟವು ಬೇರೆಯ ಕಡೆತಿರುಗಿದ್ದನ್ನು ಕಂಡು ಚಕಿತನಾದ. ಆತನ ದೃಷ್ಟಿ ಬಾಗಿಲ ಬಳಿನಿಂದ ಆಕೆಯತ್ತ ಹರಿಯಿತು. ಆಕೆಯನ್ನು ಗುರ್ತಿಸಿದ. ಸಿದ್ಧಾರ್ಥನ ಮದುವೆಗೆ ಹಿಗಿರಲಿಲ್ಲವಾದರೂ ಆಕೆಯನ್ನು ವಿದ್ಯಾರ್ಥಿಯಾಗಿ ಊರಿನಲ್ಲಿ ಅನೇಕ ಬಾರಿನೋಡಿದ್ದ. ಇಬ್ಬರು ನಿಮ್ಮ ಮನೆಗೆ 'ಬರುತ್ತೇವೆ' ಎಂದು ಸಿದ್ಧಾರ್ಥ ನಾಲ್ಕೈದು ಬಾರಿ ಹೇಳಿದ್ದರೂ ಆಕೆ ಹೆಚ್ಚು ದಿನಗಳು ನಗರದಲ್ಲೇ ಇದ್ದುದರಿಂದ ಸಾಧ್ಯವಾಗಿರಲಿಲ್ಲ.

ಡಾಕ್ಟರ್ ನೋಡುತ್ತಿದ್ದಂತೆ ತಾಯಿ ಕೇದಾರಗೌರಿಯತ್ತ ಜಿಗಿಯಿತು. ಕಿರುಚಲು

ಕೂಡ ಸಮಯವಿಲ್ಲದೆ ನೆಲದ ಮೇಲೆ ಬಿದ್ದಳು. ಮೊದಲೇ ಒಂದುಕಾಲು ದುರ್ಬಲವಾಗಿದ್ದು ನಾಯಿಯ ಆಘಾತವನ್ನು ಸಹಿಸಲಾರದಾದಳು. ನೆಲಕ್ಕೆ ತಲೆ ತಾಗಿ ಪ್ರಜ್ಞೆ ತಪ್ಪಿದಂತಾಯಿತು. ಆದರೂ ತಕ್ಷಣ ಎಚ್ಚರಗೊಂಡಳು.

ಡಾಕ್ಟರ್ ತಟ್ಟನೆ ಮೇಲೆದ್ದ. ಕೈಯಲ್ಲಿ ಯಾವ ಆಯುಧವೂ ಇಲ್ಲ. ಪಕ್ಕದಲ್ಲಿದ್ದ ಕುರ್ಚಿಯನ್ನೇ ಎತ್ತಿ ಆ ನಾಯಿಯನ್ನು ಬಲವಾಗಿ ಬಡಿದ. ಆದರೆ ಎಮ್ಮೆಯ ಮೇಲೆ ಮಳೆ ಸುರಿದಂತೆ ಆ ಪಲಟ್ಟಿನ ಪ್ರಭಾವವೇನೂ ಇಲ್ಲ. ಪೆಟ್ಟಿನಿಂದ ಕೇದಾರಗೌರಿಯನ್ನು ಬಿಟ್ಟು ಹಿಂದಕ್ಕೆ ತಿರುಗಿ ಕೋಪದಿಂದ ಮತ್ತೆ ಡಾಕ್ಟರ್ ಮೇಲೆ ಹಾರಿತು. ಆ ರಭಸಕ್ಕೆ ಡಾಕ್ಟರ್ ಕುರ್ಚಿಯೊಂದಿಗೆ ಕೆಳಕ್ಕೆ ಬಿದ್ದ.ನೆಲಕ್ಕೆ ತಲೆ ತಗುಲಿ 'ಗಿರ್ರ್ರಂ'ದಿತು.

ಆ ಕ್ಷಣವೇ ಡಾಕ್ಟರ್‌ಗೆ ಅರ್ಥವಾಗಿತ್ತು; ತನ್ನಿಂದ ಆ ನಾಯಿಯನ್ನು ಎದುರಿಸುವುದು ಸಾಧ್ಯವಿಲ್ಲ. ಸಾವು ಖಚಿತ. ಕಿರುಚೋಣವೆಂದುಕೊಂಡರೂ ನಾಲಿಗೆಯೇ ಹೊರಳುತ್ತಿಲ್ಲ. ಕ್ರಮಕ್ರಮವಾಗಿ ಕಣ್ಣು ಕತ್ತಲೆ ಕಟ್ಟುತ್ತಿತ್ತು. ತಲೆಗೆ ಬಿದ್ದ ಪೆಟ್ಟಿನ ಫಲವಾಗಿ ಪ್ರಜ್ಞೆ ಮರೆಯಾಗುತ್ತಾ ಬಂತು. ನಾಯಿ ಮೇಲೆ ಬಂದ ಸ್ಪರ್ಶ ಗೊತ್ತಾಗುತ್ತಿದ್ದರೂ ಅದೇನೂ ಮಾಡುತ್ತಿದೆಯೋ ತಿಳಿಯುತ್ತಿಲ್ಲ. ನಂತರ ಐದಾರು ನಿಮಿಷಗಳು ಆತ ಅದೇ ಸ್ಥಿತಿಯಲ್ಲಿದ್ದ. ಮುಖದ ಮೇಲೆ ನೀರಿನ ಹನಿಗಳು ಬಿದ್ದಾಗ ಕಣ್ತೆರೆದ. ನಾಯಿಯಿಲ್ಲ ಆಕೆ ಮುಂದೆ ಬಗ್ಗಿ ಕಾತರದಿಂದ ನೋಡುತ್ತಿದ್ದಾಳೆ.

''ಏನಾಯಿತು?'' ಡಾಕ್ಟರ್ ಕೇಳಿದ.

''ಅದನ್ನು ಯಾರೋ ಕರೆದಂತೆ ಓಡಿ ಹೋಯಿತು''

ಇಬ್ಬರೂ ಕೂಡಲೇ ಏನೂ ಮಾತನಾಡಲಿಲ್ಲ. ಮೊದಲು ಆಕೆಯೇ ನಿಶ್ಯಬ್ದವನ್ನು ಮುರಿಯುತ್ತಾ ''ನನ್ನ ಹೆಸರು ಕೇದಾರಗೌರಿ. ಸಿದ್ಧಾರ್ಥ...'' ಎಂದು ಏನೋ ಹೇಳುತ್ತಿದ್ದಂತೆ ''ನನಗೂ ಗೊತ್ತು. ನೀವು ರಾವೇ ಪ್ರೋಗ್ರಾಂಗೆ ಬಂದಿದ್ದಾಗ ನಿಮ್ಮನ್ನು ನೋಡಿದ್ದೇನೆ, ಸಿದ್ಧಾರ್ಥ ನನ್ನ ಸ್ನೇಹಿತ'' ಎಂದ ಡಾಕ್ಟರ್ ರಂಗಪ್ರಸಾದ್.

ಆತ ತಮ್ಮ ಮದುವೆಗೆ ಬಂದಿದ್ದರೋ ಇಲ್ಲವೋ ಆಕೆಗೆ ನೆನಪಿರಲಿಲ್ಲ.

''ಅತ್ತೆಯವರಿಗೆ ಸಂಜೆಯಿಂದ ಎದೆನೋವು. ಈಗ ಹೇಳಿದ್ದರಿಂದ ಬಂದೆ''

''ಓ ಹಾಗೋ ನಡಿಯಿರಿ'' ಎಂದು ಬೇಗ ತನ್ನ ಡ್ರೆಸ್ ತಲಗೆದುಕೊಂಡು ಸಿದ್ಧವಾಗುತ್ತಿದ್ದುದನ್ನು ಕಂಡು ಆಕೆಗೆ ಆಚ್ಚರಿ ಎನಿಸಿತು. ಮರಣದ ಸೀಮೆಯ ತನಕ ಹೆಗಿ ಬಂದೂ ಅಷ್ಟು ಲಲಿತವಾಗಿ ನಡೆದುಕೊಳ್ಳುವ ಸಾಮರ್ಥ್ಯವಿಲ್ಲದಿದ್ದರೆ ಇದು ಅಸಾಧ್ಯ. ಅವಳ ಕಣ್ಮುಂದೆ ಭಯಂಕರ ಬೇಟೆನಾಯಿಯ ರೂಪ ಇನ್ನೂ ಹಾಗೇ ಇತ್ತು.

''ಈ ದಿನ ನನ್ನ ಪ್ರಾಣ ಉಳಿಸಿದಿರಿ'' ಎಂದ ಡಾಕ್ಟರ್ ಚಪ್ಪಲಿಯನ್ನು ಮೆಟ್ಟುತ್ತಾ...''ಯಾರೋ ಪೇಷಂಟ್ ಎಂದು ಬಾಗಿಲು ತೆರೆಯುತ್ತಲೇ ಮೇಲೆ ಬಿತ್ತು.

ನಾಳೆ ಬೆಳಿಗ್ಗೆ ನೋಡಬೇಕು. ಯಾವುದೋ ಹುಚ್ಚುನಾಯಿ ಇರಬೇಕು. ಷರ್ಟ್ ಇದ್ದದ್ದರಿಂದ ಉಗುರುಗಳು ಮೈಯಲ್ಲಿ ಇಳಿಯಲಿಲ್ಲ''

''ಹೊರಗೆ ಇಷ್ಟು ದೊಡ್ಡ ನಾಯಿಯನ್ನು ನೋಡುತ್ತಿರುವುದು ಇದೇ ಮೊದಲು''

''ನೀವು ಈಗ ಬರದಿದ್ದರೆ ನಾನು ಬದುಕಿರುತ್ತಿರಲಿಲ್ಲ. ಅದಕ್ಕಾಗಿ ನಿಮಗೆ ಥ್ಯಾಂಕ್ಸ್. ಮೊದಲಬಾರಿ ನಮ್ಮ ಮನೆಗೆ ಬಂದಾಗ ಈ ರೀತಿಯ ಆತಿಥ್ಯ ದೊರೆತಿದ್ದಕ್ಕೆ ಕ್ಷಮಿಸಿ'' ಎಂದು ಮಲಟ್ಟಿಲು ಇಳಿಯುತ್ತಾ ನುಡಿದ ಡಾಕ್ಟರ್.

ಗೌರಿ ನಾಚಿ, ''ನಾನೇನು ಮಾಡಿದೆ? ಇಷ್ಟು ಯಾರಾದರೂ ಮಾಡುವ ಕೆಲಸ'' ಎಂದಳು.

ಅವಳು ಅಷ್ಟೊಂದು ಸರಳವಾಗಿ ಮಾತನಾಡಿದ್ದು ಆತನಲ್ಲಿ ಆತ್ಮೀಯಭಾವವನ್ನು ಉದ್ದೀಪನಗೊಳಿಸಿತು. ಅರ್ಧ ರಾತ್ರಿಯಲ್ಲಿ ಮರಗಳ ಮಧ್ಯದಿಂದ ತೂರಿ ಬರುತ್ತಿದ್ದ ತಿಂಗಳ ಬೆಳಕಿನಲ್ಲಿ ಮೊಣಕಾಲ ಮೇಲೆ ಕೈಯಿರಿಸಿ ನಡೆಯುತ್ತಿರುವುದನ್ನು ನೋಡುತ್ತಿದ್ದರೆ ಸಾಗರ ತಟದಲ್ಲಿ ಕಪ್ಪೆಚಿಪ್ಪುಗಳನ್ನು ಆರಿಸುವ ಮಕ್ಕಳ ನೆನಪಾಗುವಂತಿತ್ತು.

''ಈ ಊರಿನಲ್ಲಿರುವ ಒಬ್ಬರೇ ಡಾಕ್ಟರ್ ನೀವು. ನಮಗೇನಾದರೂ ತೊಂದರೆಯಾದರೆ ನೀವು ನೆರವಿಗೆ ನಿಲ್ಲುವುದಿಲ್ಲವೇ?'' ಎಂದು ಕೇಳಿದಳು ನಗುತ್ತಾ.

ಡಾಕ್ಟರ್ ನಗಲಿಲ್ಲ. ಮನೆಯ ಮುಂದಣ ಗೇಟನ್ನು ಮುಚ್ಚಿ ಚಿಲುಕಹಾಕುತ್ತಾ ''ನಾನು ನಿಮ್ಮ ಋಣ ತೀರಿಸಿಕೊಳ್ಳಲೆಂದೇ ನಿಮಗೆ ಯಾವ ತೊಂದರೆಗಳೂ ಬರಬಾರದೆಂದೇ ಕೋರುತ್ತೇನೆ'' ಎಂದು ಕೆಳಗಿರಿಸಿದ್ದ ಟೆಸ್ಸನ್ನು ಕೈಗೆತ್ತಿಕೊಂಡು, ''ಒಂದು ವೇಳೆ ಅಂಥಾ ಕಷ್ಟವೇನಾದರೂ ಬಂದರೆ ಎಲ್ಲರಿಗಿಂತಲೂ ಮೊದಲು ನಾನೇ ಇರುತ್ತೇನೆ, ಸರಿತಾನೇ?'' ಎಂದರು.

ಇಬ್ಬರೂ ಹೆಜ್ಜೆ ಹಾಕಿದರು.

ಮೂಲೆಯಲ್ಲಿ ಅವರಿಬ್ಬರೂ ತಿರುಗುತ್ತಲೇ ಮನೆಯ ಹಿಂಭಾಗದ ಕತ್ತಲಿಂದ ಸದ್ದಿಲ್ಲದೆ ರಾಕೇಶ್ ಹೊರಬಂದ. ಅವನ ಮುಖ ಕೆಂಪಾಗಿದೆ. ಕ್ರೌರ್ಯವೇ ಮೂರ್ತೀಭವಿಸಿದಂತಿದ್ದಾನೆ.

ಆ ಸಮಯದಲ್ಲಿ ಕೇದಾರಗೌರಿಯಲ್ಲದೆ ಬೇರೆ ಯಾರಾದರೂ ಆಗಿದ್ದಿದ್ದರೆ ಅವನು ಬೇಟೆನಾಯಿಯನ್ನು ಹಿಂದಕ್ಕೆ ಕರೆಯುತ್ತಿರಲಿಲ್ಲ.

## 15

''ಉಸ್ಲೋಕ್‌ನಲ್ಲಿ ನಿರ್ಣಯಗಳನ್ನು ತೆಗೆದುಕೊಳ್ಳುವ ಹಕ್ಕು-ಕ ಮಹಾದ್ರಷ್ಟನಿಗೆ ಮಾತ್ರವೇ ಉಂಟು. ಬೇರಾರಿಗೂ ಈ ಹಕ್ಕಿಲ್ಲ. ನಿನ್ನ ಸ್ವಂತ ನಿರ್ಣಯವನ್ನು

ತೆಗೆದುಕೊಂಡಿದ್ದರಿಂದ ಈ ನಿಯಮಕ್ಕೆ ವಿರುದ್ಧವಾಗಿ ನೀನು ವರ್ತಿಸಿದ್ದೀ. ಅದಕ್ಕೆ ನಿನ್ನ ವಿವರಣೆ ಬೇಕು ರಾಕೇಶ್''

ರಾಕೇಶ್ ಮಾತನಾಡಲಿಲ್ಲ.

ರಂಗಪ್ರಸಾದ್ ಮೇಲೆ ನಡೆದ ಹತ್ಯಾಪ್ರಯತ್ನ ಮಹಾದ್ರಷ್ಟ ಬರುತ್ತಲೇ ಗೊತ್ತಾಗಿತ್ತು. ಆತ ರಾಕೇಶನನ್ನು ಕರೆದು ವಿವರಣೆ ಕೇಳುತ್ತಿದ್ದ.

ರಾಕೇಶನನ್ನು ಮಹಾದ್ರಷ್ಟ ಕರೆಯುತ್ತಿದ್ದಾನೆ ಎಂದು ಹೇಳಿದ ವ್ಯಕ್ತಿ ರೆಡ್ ಸ್ಕೆಲಿಟನ್ ಈ ಬಗ್ಗೆ ವಿವರಣೆ ನೀಡಿದ್ದ.

ದೋಷಿಯನ್ನು ನಿಲ್ಲಿಸಿ ವಿವರಣೆ ಕೇಳುತ್ತಾರೆ. ಅಲ್ಲಿ ಮೂವರು ರೆಡ್ ಸ್ಕೆಲಿಟನ್ಸ್ ಇರುತ್ತಾರೆ. ತೀರ್ಪು ಹೇಳುವವ ಮಹಾದ್ರಷ್ಟ. ಶಿಕ್ಷೆ ಮಾತ್ರ ತುಂಬಾ ಕಠಿಣವಾಗಿರುತ್ತದೆ.

''ನಾನೇನೂ ತಪ್ಪು ಮಾಡಿಲ್ಲ. ಡಾಕ್ಟರ್ ರಂಗಪ್ರಸಾದ್ ಬರೆದಿರುವ ಲೇಖನ ಆಗಲೇ ಹಲವರ ದೃಷ್ಟಿಯನ್ನು ಕೃಷ್ಣಾಪುರದತ್ತ ಸೆಳೆದಿದೆ. ಇನ್ನು ಎಲ್ಲರೂ ಈ ಗ್ರಾಮವನ್ನೇ ಗಮನಿಸುತ್ತಾರೆ. ಇನ್ನು ಒಂದೆರಡು ಮಕ್ಕಳು ಇದೇ ರೀತಿ ಹುಟ್ಟಿದರೆ ಅದು ದೇಶದಲ್ಲೆಲ್ಲಾ ಹಾಹಾಕಾರಕ್ಕೆ ಕಾರಣವಾಗುತ್ತದೆ. ಆದ್ದರಿಂದಲೇ ಡಾಕ್ಟರನ್ನು ಮುಗಿಸಬೇಕೆಂದುಕೊಂಡೆ. ಅದರಿಂದ ವಿಷಯಕ್ಕೆ ಮುಕ್ತಾಯ ಕೊಟ್ಟಂತಾಗುತ್ತದೆ''

''ಹಾಗೋ'' ವ್ಯಂಗ್ಯವಾಗಿ ಉದ್ಗರಿಸಿದ ಮಹಾದ್ರಷ್ಟ. ''...ಹಾಗಿದ್ದರೆ ನಂತರ ಕೃಷ್ಣಾಪುರದಲ್ಲಿ ಮಕ್ಕಳು ಹುಟ್ಟೋಲ್ಲವೇ?''

''ನಮಗೆ ಬೇಕಾದದ್ದು ಕೇದಾರಗೌರಿ ಹೊಟ್ಟೆಯಲ್ಲಿ ಹುಟ್ಟುವ ಅಷ್ಟಾವಕ್ರ ಮಾತ್ರವೇ. ಉಳಿದವರಲ್ಲ. ಅವರನ್ನು ಗರ್ಭದಲ್ಲಿಯೇ ಕೊಲ್ಲುವ ಅಥವಾ ಅವರ ತಾಯಂದಿರನ್ನು ಕೊಲ್ಲುವುದಾದರೆ ಈ ರಹಸ್ಯ...'' ಮಾತು ಪೂರ್ತಿಯಾಗಲಿಲ್ಲ. ಅಷ್ಟರಲ್ಲಿ ಕೆನ್ನೆಯ ಮೇಲೆ ಪ್ರಹಾರ ಬಿತ್ತು.

ರಾಕೇಶ್ ಮುಖ ಬಿಳಿಚಿಕೊಂಡಿತು.

''ಕುಟ್ಟಿಸೆಎತಾನ್ ಈ ಪ್ರಪಂಚಕ್ಕೆ ಬರುವ ಮೊದಲು ಕಳುಹಿಸುವ ಅನುಚರರನ್ನು ಗರ್ಭದಲ್ಲಿಯೇ ಕೊಲ್ಲುತ್ತೀಯಾ? ಉಸ್ಸೋಕ್ ಸದಸ್ಯನಾಗಿದ್ದೂ ಈ ಯೋಚನೆ ಹೇಗೆ ಬಂತು?''

ರಾಕೇಶ್ ಕೆನ್ನೆ ಸವರಿಕೊಳ್ಳುತ್ತಿದ್ದ.

ರೆಡ್‌ಸ್ಕೆಲಿಟನ್ನುಗಳು ಯಾವ ರೀತಿಯ ಭಾವವನ್ನೂ ತೋರದೆ ಮೌನಪ್ರೇಕ್ಷಕರಾಗಿದ್ದರು.

''ರಾಕೇಶ್ ಮೊದಲಿನಿಂದ ನಿನ್ನನ್ನು ಗಮನಿಸುತ್ತಲೇ ಇದ್ದೇನೆ. ಅವಶ್ಯಕತೆಗಿಂತ ಹೆಚ್ಚು ಯೋಚಿಸುತ್ತಿದ್ದೀ. ಉಸ್ಸೋಕ್‌ನಲ್ಲಿ ಕೇವಲ ಮಹಾದ್ರಷ್ಟ ಮಾತ್ರವೇ ಸೂಚನೇ ಕೊಡುತ್ತಾನೆ. ಅದನ್ನು ಉಳಿದವರೆಲ್ಲಾ ಅನುಸರಿಸುತ್ತಾರೆ. ಅರ್ಥವಾಯಿತೇ?''

'ಅರ್ಥವಾಯಿತು. ರಾಕೇಶ್ ಯಾರೆಂಬುದು ನಿನಗಿನ್ನೂ ತಿಳಿಯದು. ಒಂದೊಂದು ಪೆಟ್ಟನ್ನೂ ಹಿಂತಿರುಗಿಸದೆ ಇರೊಲ್ಲ. ಅದೂ ಅದರ ನಾಲ್ಕು ಪಟ್ಟು ಬಲವಾಗಿರುತ್ತದೆ. ಈ ಕ್ಷಣದಲ್ಲಿ ನಿನ್ನ ಮೇಲೆ ಬಿದ್ದು ಚೂರು ಚೂರಾಗಿ ನಿನ್ನನ್ನು ಕತ್ತರಿಸಿ ಹಾಕಿದರೂ ನನಗೆ ಎದುರು ನಿಲ್ಲುವವರು ಇಲ್ಲಾರೂ ಇಲ್ಲ. ಉಸ್ತೋಕ್‌ನ ಭಾವಿ ನಾಯಕನನ್ನು ತಡೆಯುವ ಎದೆಗಾರಿಕೆ ಯಾರಿಗಿದೆ? ಆದರೆ ಇದು ಸೂಕ್ತ ಸಮಯವಲ್ಲ. ತಾಳಿದವನು ಬಾಳಿಯಾನು'

ರಾಕೇಶ್ ಮನಸ್ಸಿನ ಭಾವನೆಗಳನ್ನು ಓದುತ್ತಾ ಮಹಾದ್ರಷ್ಟ ನುಡಿದ:

''ಡಾ. ರಂಗಪ್ರಸಾದ್ ಬರೆದಿರುವ ಲೇಖನದ ಪ್ರಭಾವ ದೇಶದಲ್ಲಿ ಎಷ್ಟುಮಂದಿಯ ಮೇಲಾಗಿದೆಯೋ ನಮಗೆ ಗೊತ್ತಿಲ್ಲ. ಅದೆಷ್ಟೇ ಪ್ರಭಾವಶಾಲಿಯಾಗಿರಲಿ ನಮಗೇನು ನಷ್ಟ? ಕ್ಷುದ್ರ ಗಣಗಳ ಶಕ್ತಿಯನ್ನು ಈ ಮನುಷ್ಯರು ಎದುರಿಸಬಲ್ಲರೇ? ಅವರಿಗೆ ಮುಂದಿನ ನಾಲ್ಕು ಹುಟ್ಟುಗಳನ್ನು ತಡೆಯಬಲ್ಲ ಶಕ್ತಿ ಇರುವುದೇ? ಅವರಿಂದೇನು ತಾನೇ ಸಾಧ್ಯವಾಗುತ್ತದೆ? ಕೃಷ್ಣಾಪುರದಲ್ಲಿ ಇರುವ ಗರ್ಭಿಣಿ ಸ್ತ್ರೀಯರನ್ನೆಲ್ಲಾ ಆ ಊರು ಬಿಡಲು ಹೇಳುತ್ತಾರೇನು? ಇಲ್ಲ, ಗರ್ಭ ವೈಚಿತ್ರ್ಯದ ಕಾರಣಕ್ಕೆ ಮೂಲವನ್ನು ಹುಡುಕುತ್ತಾರೋ? ಹ್ಹ...ಹ್ಹ...ಅವರಿಗೇ ಮತಿಗೆಡುತ್ತದೆ. ಅವರೆಲ್ಲಾ ಹುಚ್ಚರಾಗಿ ಹಾಳಾಗಲಿ.''

ಅಷ್ಟರಲ್ಲಿ ಅಷ್ಟಾವಕ್ರನ ಅವತಾರದ ಬಗ್ಗೆ ಸುದ್ದಿ ಜನರಲ್ಲಿ ಹರಡಿಸುತ್ತೇನೆ. ಕೆಲವೇ ದಿನಗಳ ಅವಧಿ ಇರುತ್ತದೆ. ಕ್ಷುದ್ರಗಣಾಧಿಪತಿ ತನ್ನ ಪರಿವಾರದೊಂದಿಗೆ ಭೂಮಿಯ ಮೇಲೆ ಬರುವ ಕಾಲಕ್ಕೆ ಜನರೇ ಸ್ವಾಗತ ಗೀತೆಯನ್ನು ಹಾಡುವಂತೆ ನಾವು ಅಣಿಗೊಳಿಸಬೇಕು. ತಾವೇ ಜಾಣರು ಎಂದುಕೊಳ್ಳುವವರು, ಕಾರ್ಯ-ಕಾರಣ ಸಂಬಂಧ ವಿಶ್ಲೇಷಕರು, ತಮ್ಮ ಶೋಧನೆಯಲ್ಲಿ ವಿಲವಿಲನೆ ಒದ್ದಾಡುತ್ತಿರುತ್ತಾರೆ. ನಮ್ಮ ಒಂದೊಂದೇ ನುಡಿ ಹೊರ ಬರುತ್ತಿದ್ದಂತೆ ಜನರು ಉಸ್ತೋಕನನ್ನು ನಂಬಲು ಪ್ರಾರಂಭಿಸುತ್ತಾರೆ. ಅವರು ಮಾತ್ರವೇ ಅಷ್ಟಾವಕ್ರನ ರಾಜ್ಯದಲ್ಲಿ ಬದುಕುತ್ತಾರೆ; ಉಳಿದವರು ಸಾಯುತ್ತಾರೆ. ಅವರ ಸಾವಿಗೆ ಪ್ರಜೆಗಳೇ ಕಾರಣರಾಗುತ್ತಾರೆ ಎಂಬುದೂ ಗಮನಾರ್ಹ ಸಂಗತಿ''

ಮಹಾದ್ರಷ್ಟ ಹೇಳಿದ್ದು ಸರಿ ಎನ್ನುವಂತೆ ರೆಡ್ ಸ್ಕೆಲಿಟನ್‌ಗಳು ತಲೆದೂಗುತ್ತಿದ್ದರು. ರಾಕೇಶ್ ಮಾತಿಲ್ಲದೆ ಮೌನವಾಗಿದ್ದ.

''ಸಪ್ತ ಗರ್ಭಗಳನ್ನು ವಿಚ್ಛಿನ್ನ ಮಾಡಿದ ಅಟ್ಟಹಾಸದಿಂದ ಕುಟ್ಟಿಸೈತಾನ್ ಭೂಮಿಯ ಮೇಲೆ ಪಾದಾರ್ಪಣೆ ಮಾಡುತ್ತಿರುವ ಈ ಪರ್ವದಲ್ಲಿ ಅರಿತೋ ಅರಿಯದೆಯೋ ಡಾಕ್ಟರ್ ರಂಗಪ್ರಸಾದ್ ಈ ಲೇಖನವನ್ನು ಬರೆದಿದ್ದಾನೆ. ಬರೆಯಲಿ. ಜಗತ್ತೆ ತಲ್ಲಣಿಸಲಿ. ಉಸ್ತೋಕ್‌ನ ಪ್ರತಿಷ್ಠೆ ಹಲಚ್ಚಲೆಂದೇ ಇದೆಲ್ಲಾ ನಡೆಯುತ್ತಿದೆ. ಕಾದ್ರಾ

ನಡೆಯಲಿ...'' ಗಹಗಹಿಸಿ ನಗುತ್ತಾ ಒಂದು ನಿಮಿಷದ ನಂತರ ಗಂಭೀರವಾಗಿ ರಾಕೇಶ್ ಕಡೆ ನೋಡುತ್ತಾ ''ಇದ್ಯಾವುದರ ಕಲ್ಪನೆಯೂ ಇಲ್ಲದೆ ನಿನ್ನ ಅರ್ಧ ತಿಳಿವಿನಿಂದ ತೀರ್ಮಾನ ಕೈಗೊಂಡಿದ್ದೀಯೆ. ಇದುವರೆವಿಗಿನ ಉಸ್ತೋಕ್ ಇತಿಹಸದಲ್ಲಿ ಯಾರೂ ಮಾಡದಂತಹ ಕಾರ್ಯವನ್ನು ಮಾಡಿದ್ದೀ. ಮಹಾದ್ರಷ್ಟನ ಅಪ್ಪಣೆಯಿಲ್ಲದೆ ಮರಣದ ಪ್ರಯತ್ನನಡೆಸಿದ್ದೀ. ಈ ತಪ್ಪಿಗಾಗಿ ನೀನು ಶಿಕ್ಷಾರ್ಹ ರಾಕೇಶ್''

ಸೂಜಿ ಬಿದ್ದರೂ ಕೇಳಿಸುವಷ್ಟು ನಿಶ್ಯಬ್ದ ಅಲ್ಲಿ.

ಆ ನಿಶ್ಯಬ್ದದಲ್ಲಿ ಮತ್ತೇ ಮಹಾದ್ರಷ್ಟನ ಮಾತು ಕೇಳಿತು:

''ರಾಕೇಶ್, ಅಷ್ಟಾವಕ್ರನ ಆಗಮನಕ್ಕಾಗಿ ನಿರ್ವಹಿಸಬೇಕಾಗಿರುವ ಐದು ಅಂಶಗಳಲ್ಲಿ ಉಳಿದಿರುವ ಅಂಶವನ್ನು ನೀನೊಬ್ಬನೇ ನೆರವೇರಿಸಬೇಕು. ಕ್ಷುದಯಜ್ಞ ನೀನೇ ನಿನ್ನ ಸ್ವಂತ ಖರ್ಚಿನಲ್ಲಿ ನೆರವೇರಿಸಬೇಕು. ಅದಕ್ಕೆ ಅವಶ್ಯವಿರುವ ಎಲ್ಲಾ ಸಾಮಗ್ರಿಗಳನ್ನೂ ನೀನೇಸಂಗ್ರಹಿಸಿ ನೆರವೇರಿಸಬೇಕು''

ಏನೋ ನಿರೀಕ್ಷಿಸಿದ್ದ ರಾಕೇಶ್ ವಿಸ್ಮಿತನಾಗಿ ತಲೆ ಎತ್ತಿ ನೋಡಿದ.

ತುಂಬಾ ಉತ್ಸಾಹದಿಂದ ಉಸ್ತೋಕ್ ನಿರ್ವಹಿಸಬೇಕಾದ ಯಜ್ಞವಿದು. ಅಂತಹುದನ್ನು ತಾನೊಬ್ಬನೇ ಮಾಡಬೇಕೆಂಬ ಈ ಆಜ್ಞೆ ಅಚ್ಚರಿಯದೇ. ಬಿಸ್ತಾದಲ್ಲಿ ದೊರೆತಿದ್ದ ಪತ್ರದಲ್ಲಿದ್ದ ಸಾಲು ನೆನಪಾಯಿತು:

'ಯಾರು ಈ ಐದೂ ಅಂಶಗಳನ್ನು ತಾವಾಗಿಯೇ ಪೂರ್ಣ ಮಾಡುತ್ತಾರೋ ಅವರೇ ಅಷ್ಟಾವಕ್ರನ ಸಾಮ್ರಾಜ್ಯದಲ್ಲಿ ಆತನ ಸಹಚರಿಯಾಗಿದ್ದು ರಾಜ್ಯಾಡಳಿತ ನಡೆಸುತ್ತಾರೆ'

ಸಂಗತಿಯನ್ನು ತಾನು ಹೇಳದೆ ಹೋದದ್ದು ಈಗ ಒಳಿತಿಗೆ ಕಾರಣವಾಯಿತು. ಈ ಕಾರ್ಯಗಳೆಲ್ಲಾ ತಾನೇ ನಿರ್ವಹಿಸಬೇಕೆಂದು ಬೇರೆಲ್ಲೋ ಇದೆ. ಅದೇ ಕಾರಣದಿಂದಲೇ ಮಹಾದ್ರಷ್ಟ ಈ ರೀತಿಯ ಶಿಕ್ಷೆಯನ್ನು ವಿಧಿಸಿರುವುದು.

ರಾಕೇಶನಿಗೆ ತುಂಬಾ ಸಂತೋಷವಾಯಿತು. ಅಷ್ಟರಲ್ಲಿ ಮಹಾದ್ರಷ್ಟನುಡಿದ: ''ರಾಕೇಶ್, ಕ್ಷುದಕ್ಷಯಜ್ಞವೇನು ಸಾಮಾನ್ಯದಲ್ಲ. ಅದಕ್ಕೆ ಅವಶ್ಯಕವಾದ ಸಾಮಗ್ರಿಗಳನ್ನು ಈಗಿನಿಂದಲೇ ಸಂಗ್ರಹಿಸಬೇಕು. ಅದರಲ್ಲಿ ಅನೇಕ ವಸ್ತುಗಳು ಅಲಭ್ಯವಾದವು. ಅವನ್ನೂ ನೀನೇ ಸಂಗ್ರಹಿಸಬೇಕು. ಪೂರ್ಣವಾಗಿ ನಿಷ್ಠೆಯಲ್ಲಿರಬೇಕು. ಅಷ್ಟಾವಕ್ರನು ತಾಯ ಗರ್ಭವನ್ನು ಪ್ರವೇಶಿಸಿದ ಮೂರನೆಯ ತಿಂಗಳೇ ನಡೆಸಬೇಕಾಗಿದ್ದ ಯಜ್ಞವಿದು. ಗಣಾಧಿಪತಿಗಳಿಗೆ ಯಾವುದೇ ರೀತಿಯಲ್ಲಿ ಅತೃಪ್ತಿಯುಂಟಾದರೂ, ಯಜ್ಞ ನಿರ್ವಹಣೆಯಲ್ಲಿ ಯಾವುದೇ ಲೋಪ ಉಂಟಾದರೂ ಕಂಕಣ ಕಟ್ಟಿಕೊಂಡಿರುವ ನಿನ್ನ ರಕ್ತವನ್ನೆಲ್ಲಾ ಸೆಳೆದು ಕುಡಿಯಲಾಗುತ್ತದೆ. ನಮ್ಮ ವಂಶದ ಮೂಲ ಪುರುಷನಾದ

ಎಂಬ ಮಹಾಯಾಂತ್ರಿಕ ಮರಣಿಸಿದ್ದು ಇದೇ ರೀತಿಯೆ. ಯಜ್ಞದ ಮಧ್ಯದಲ್ಲಿ ಮಂತ್ರವನ್ನು ಸರಿಯಾಗಿ ಉಚ್ಚರಿಸಲಾಗದೆ ಹೋದುದರಿಂದ ಪರಿಸರದಲ್ಲಿ ವಿನಮ್ರರಾಗಿ ಪರಿಭ್ರಮಿಸುತ್ತಿದ್ದ ಗಣದೇವತೆಗಳು ತಿರುಗಿಬಿದ್ದು ಕಂಕಣ ಕಟ್ಟಿದ್ದ ಆತನ ರಕ್ತವನ್ನೆಲ್ಲಾ ಹೀರಿದರು. ಆದ್ದರಿಂದ ರಾಕೇಶ್ ಎಚ್ಚರಿಕೆ! ಆ್ಞ, ಇನ್ನೊಂದು ವಿಷಯ ಆ ಯಜ್ಞಕ್ಕೆ ಆಗುವ ಖರ್ಚುಕೂಡ ಉಸ್ಲೋಕ್ ವಹಿಸಿಕೊಳ್ಳುವುದಿಲ್ಲ. ಆರ್ಥಿಕವಾಗಿ ಹೆಚ್ಚು ಹೊರೆಯಾಗುವುದರೊಂದಿಗೆ ಜೀವಕ್ಕೆ ತೊಂದರೆ ಇರುವಂತಹ ಭಯಂಕರವಾದ ಯಜ್ಞವನ್ನು ನಿರ್ವಹಿಸುವುದೇ ಉಸ್ಲೋಕ್ ನಿನಗೆ ವಿಧಿಸಿರುವ ಶಿಕ್ಷೆ...''

ಇದಿಷ್ಟನ್ನು ಹೇಳಿ ಮಹಾದ್ರಷ್ಟ ಉತ್ತರಕ್ಕೂ ಕಾಯದೆ ಹೊರಟು ಹೋದ. ಆತನ ಹಿಂದೆಯೇ ರೆಡ್ ಸ್ಕೆಲಿಟನ್‌ಗಳೂ ಹೋದರು.

ಅಲ್ಲಿಯೇ ನಿಂತಿದ್ದ ರಾಕೇಶನ ತುಟಿಗಳ ಮೇಲೆ ಕಿರುನಗೆ ಅರಳಿತು. ಕುಟ್ಟಿ ಸೈತಾನ್ ಅನುಗ್ರಹವೊಂದಿದ್ದರೆ ಯಾವುದೂ ಜೀವನಕ್ಕೆ ಭಯವಾಗುವುದಿಲ್ಲ. ಕೇದಾರಗೌರಿ ಹೀಗೇ ಮುಗ್ಧಳಾಗಿರುವವರೆಗೂ ಹಣದ ಬಗ್ಗೆ ಯೋಚಿಸಬೇಕಾಗಿಲ್ಲ.

★★★

''ಕೆಲವು ದಿನಗಳಿಂದ ನಾನು ಗಮನಿಸುತ್ತಲೇ ಇದ್ದೇನೆ. ಇತ್ತೀಚೆಗೆ ಅದೇನೋ ಒಂದು ರೀತಿ ಇರ್ತೀರಲ್ಲಾ ಯಾಕೆ?''

ರಾಕೇಶ್ ತಲೆಎತ್ತಿ ಆಕೆಯ ಕಡೆ ನೋಡಿದ. ಅವನ ಮುಖದಲ್ಲಿ ಯಾವ ರೀತಿಯ ಭಾವವೂ ಇರಲಿಲ್ಲ.

''ಯಾಕೆ ಅನ್ನೋದನ್ನ ಹೇಳೋದಿಲ್ವೇನು?''

ಒಡನೆಯೇ ಏನೊಂದು ಉತ್ತರವನ್ನೂ ಕೊಡಲಿಲ್ಲ. ಏನೋ ಹೇಳಬೇಕೆಂದು ಪ್ರಯತ್ನಿಸಿ ಹೇಳಲಾರದೆ ಸುಮ್ಮನಾದ. ಅವನ ಸಂಕೋಚವನ್ನು ಗುರ್ತಿಸುತ್ತಾ ''ನನ್ನ ಬಳಿ ಹೇಳಲು ಸಂಕೋಚವೇ?'' ಎಂದು ಕೇಳಿದಳು.

''ಹಾಗಲ್ಲ ಗೌರಿ, ಇದು ನನ್ನ ಮನಸ್ಸಿಗೆ ಸಂಬಂಧಿಸಿದ್ದು ಮನಸ್ಸನ್ನು ಕೊರೆಯುವ ಅನೇಕ ಸಂಗತಿಗಳು ಹೊರಗೆ ಹೇಳಲು ಅನೇಕ ಬಾರಿ ಹಾಸ್ಯಾಸ್ಪದವಾಗಿರುತ್ತವೆ'' ಎಂದ ರಾಕೇಶ್.

''ನಿಮ್ಮ ಮನಸ್ಸನ್ನು ಅಷ್ಟೊಂದು ಕಾಡುತ್ತಿರುವ ವಿಷಯ ಯಾವುದು?'' ಸ್ನೇಹದಿಂದ ಒತ್ತಾಯಿಸಿದಳು ಗೌರಿ.

''ಅದೆಲ್ಲಾ ನಿನಗೆ ಹೇಗೆ ಹೇಳಲಿ?''

''ಹೇಳಿದರೆ ಏನು? ನನಗೆ ಹೇಳಲೇಬೇಕು. ನನ್ನಾಣೆ ನೀವು ಹೇಳಲೇ ಬೇಕು''

ಕುರ್ಚಿಯಿಂದ ಎದ್ದು ಒಂದೆರಡು ಬಾರಿ ಅತ್ತಿತ್ತ ಸುತ್ತಿ ಮತ್ತೆ ಕೇದಾರಗೌರಿಯತ್ತ

ನೋಡಿದ. ನಂತರ ತಲೆತಗ್ಗಿಸಿ ನಿಧಾನವಾಗಿ ''ನಾನು ಇಲ್ಲಾಗಲಿ ಒಂದು ಕಾಲದಲ್ಲಿ ನೀನಿದ್ದ ಮನೆಯಲ್ಲಿ ಮಾವನೊಂದಿಗಾಲಿ ಇರಲು ಸಾಧ್ಯವಾಗುತ್ತಿಲ್ಲ ಎಂದರೆ ನಂಬುತ್ತೀಯಾ?'' ಎಂದು ಕೇಳಿದ.

''ನಂಬುತ್ತೇನೆ''

''ನೀನು ಜಾಣೆ. ಅದಕ್ಕಾಗಿಯೇ ನನ್ನ ಮನಸ್ಸು ನಿನಗೆ ಅರ್ಥವಾಗುತ್ತದೆ. ಇಲ್ಲಿಂದ ದೂರ ಬೇರೆಲ್ಲಿಗಾದರೂ ಹೋಗಬೇಕು. ಒಂದು ಸಣ್ಣ ವ್ಯಾಪಾರ ಪ್ರಾರಂಭಿಸಬೇಕು. ಉಸಿರಾಡಲು ಬಿಡುವು ದೊರೆಯದಷ್ಟು ವ್ಯಸ್ತನಾಗಿ ಕಾರ್ಯೋನ್ಮುಖನಾಗಿರಬೇಕು. ಆಗಲೇ ನನ್ನ ಮನಕ್ಕೆ ಶಾಂತಿ ದೊರೆಯುವುದು...''

''ಸಣ್ಣ ಸಂಗತಿಯನ್ನೂ ಬಲಟ್ಟದಂತೆ ದೊಡ್ಡದಾಗಿಸಿಕೊಳ್ಳುತ್ತಿದ್ದೀರಿ ಎನಿಸುತ್ತದೆ. ನಿಮಗೆ ಅತ್ಯಂತ ಲಾವಣ್ಯವತಿ ವಧು ದೊರೆಯುವುದು ಕಷ್ಟವಲ್ಲ''

''ಇರಬಹುದು ಆದರೆ ನಿನ್ನಷ್ಟು ಒಳ್ಳೆಯತನ ಅವರಲ್ಲಿ ಇರಬೇಕಲ್ಲಾ!''

ಈ ಮಾತು ಮುಂದುವರೆಸುವುದು ಅವಳಿಗೆ ತೀರಾ ಮುಜುಗರವಾಯಿತು. ಅನವಶ್ಯಕವಾಗಿ ಅವಳ ಬಾಳಿನಲ್ಲಿ ಆಶಾಭಂಗಕ್ಕೆ ತಾನು ಕಾರಣಳಾದಳೇನೋ ಎಂಬ ಅನುಮಾನ ಅವಳಲ್ಲಿ ಕೊರೆಯುತ್ತಿತ್ತು. ಅದೇ ಸಮಯದಲ್ಲಿ ರಾಕೇಶ ನಿರ್ವಿಣ್ಣನಾಗಿದ್ದದ್ದು ಅವಳಲ್ಲಿ ಕರುಣೆಯನ್ನುಕ್ಕಿಡಿತು ತನ್ನಿಂದ ಸಾಧ್ಯವಿರುವುದೇನಾದರೂ ನಡೆಸಿ ಅವನಿಗಾಗಿರುವ ಅನ್ಯಾಯವನು,ನ ಸರಿಪಡಿಸಬೇಕೆಂಬ ಬಯಕೆ. ಅವನ ಬಗ್ಗೆ ಕೇದಾರಗೌರಿ ಇಷ್ಟೊಂದು ಯೋಚಿಸುವ ಅವಶ್ಯಕತೆ ಇರಲಿಲ್ಲ. ಆದರೆ ಅವಳ ಮನಸ್ಸಿನ ಸಂವೇದನೆ ಅಂತಹುದು. ಆಕೆಯ ಕಿರು ಪ್ರಪಂಚದಲ್ಲಿ ಗಿಡ-ಮರ, ಎಲೆ-ಹೂ-ಕಾಯಿಗಳಂತೆ ಮನುಷ್ಯರೂ ನಿರ್ಮಲ ಸ್ವಭಾವಿಗಳು.

''ನೀವು ಯಾವುದಾದರೂ ವ್ಯಾಪಾರ ಪ್ರಾರಂಭಿಸುವಂತಿದ್ದರೆ ಬೇಡ ಎನ್ನುವವರು ಯಾರು ಭಾವ?''

''ವ್ಯಾಪಾರ ಇಲ್ಲಲ್ಲ. ಮದರಾಸೋ, ಬೊಂಬಾಯೋ...''

''ಅದು ನಿನ್ನ ಇಷ್ಟ''

'ಆದರೆ ಮಾವಯ್ಯ ಒಪ್ಪಬೇಕಲ್ಲಾ...''

ತುಂಬಾ ಕಾಲದ ನಂತರ ಕೇದಾರಗೌರಿ ಮೊದಲ ಬಾರಿಗೆ ನಕ್ಕಳು. ''ನಾನು ಕೇಳಿದರೆ ಡ್ಯಾಡಿ ಕಾರಣವನ್ನೂ ಕೇಳದೆ ಒಪ್ಪಿಕೊಳ್ಳುತ್ತಾರೆ ಎಂಬ ನಂಬಿಕೆ ಇದೆ. ಎಷ್ಟು ಹಣ ಬೇಕು ಹೇಳು''

ರಾಕೇಶನ ಮನಸ್ಸು ಒಡನೆಯೇ ಯೋಚಿಸಿತು. ಕ್ಷುದಕ್ಷಯಜ್ಞದ ಖರ್ಚುರೆಡ್ ಸ್ಕೆಲಿಟನ್‌ಗಳನ್ನು ಸಂತೃಪ್ತಿಪಡಿಸಲು ಅವಶ್ಯಕ ಸಾಮಗ್ರಿ, ಎಲ್ಲಾ ಸೇರಿ-

''ಎರಡು ಲಕವಾದರೂ ಬೇಕಾಗುತ್ತದೆ. ಸಣ್ಣ ಪ್ರಮಾಣದಲ್ಲಿ ವ್ಯಾಪಾರ ಪ್ರಾರಂಭಿಸಿದರೆ ತಾಪತ್ರಯ ಹೆಚ್ಚು. ಉಸಿರಾಡಲು ಸಮಯದ ಅಭಾವ ಇರಬೇಕೆನ್ನುವಷ್ಟು ಕೆಲಸ ಎಂದರೆ ಬಂಡವಾಳ ಕಡಿಮೆಯಾದರೆ ಹೇಗೆ...''

''ಅದಕ್ಕೆ ಇಷ್ಟೊಂದು ವಿವರಣೆ ಏಕೆ ಭಾವ? ಎರಡು ಲಕ್ಷ ಎಂದರೆ ಡ್ಯಾಡಿಗೆ ದೊಡ್ಡದಲ್ಲ, ಖಂಡಿತ ಕೊಡುತ್ತಾರೆ. ನಿನ್ನ ಬಗ್ಗೆ ಅಷ್ಟೊಂದು ಹೇಳುವ ಅಗತ್ಯವೂ ಇಲ್ಲ...''

''ಹಾಗಲ್ಲ, ಅವರಿಗೂ ಇದೆಲ್ಲಾ ಗೊತ್ತಾಗಬೇಕು. ಬಿಜಿನೆಸ್‌ನಿಂದ ಹಿಂದಿನದೆಲ್ಲಾ ಮರೆಯಬೇಕು. ಇದೆಲ್ಲಾ ನನ್ನ ಹಕ್ಕು ಎಂದೇನೂ ನಾನು ಕೇಳುತ್ತಿಲ್ಲ ಗೌರಿ. ಅನಾಥನನ್ನು ತಂದು ಪಿಷಿಸಿ ಬೆಳೆಸಿದ್ದೀರಿ; ಅದಕ್ಕೆ ಕೃತಜ್ಞ. ಈ ಒಂದು ಸಹಾಯ ಮಾಡಿದರೆ ಮಾವಯ್ಯನ ಹೆಸರು ಹೇಳಿಕೊಂಡು ಬದುಕುತ್ತೇನೆ...''

''ಹಾಗೆಲ್ಲಾ ಮಾತನಾಡಬೇಡಿ. ನನಗೆ ಇರುವಷ್ಟೇ ಹಕ್ಕು ಆಸ್ತಿಯ ಮೇಲೆ ನಿಮಗೂ ಇದೆ. ಈ ದಿನವೇ ಡ್ಯಾಡಿಯೊಂದಿಗೆ ಮಾತನಾಡುತ್ತೇನೆ''

★★★

''ಎಷ್ಟು? ಎರಡು ಲಕ್ಷಗಳೇ?'' ಎಂದು ಆಚ್ಚರಿಯಿಂದ ಕೇಳಿದರು ಭವಾನಿಶಂಕರ್.

''ಹೌದು ಡ್ಯಾಡಿ. ರಾಕೇಶನನ್ನು ಒಂದು ಮನೆಯವನನ್ನಾಗಿ ಮಾಡಬೇಕಾದ ಹೊಣೆಗಾರಿಕೆ ನಮ್ಮ ಮೇಲಿದೆ. ಅದಕ್ಕೂ ಮೊದಲು ಆತನು ಯಾವುದಾದರೂ ವ್ಯಾಪಾರದಲ್ಲಿ ಸ್ಥಿರಗೊಳ್ಳಬೇಕು. ಅದಕ್ಕೆ...''

''ರಾಕೇಶ್ ಎಲ್ಲಿದ್ದಾನೆ?'' ಎಂದು ಆಕೆಯ ಮಾತನ್ನು ತಡೆಯುತ್ತಾ ಕೇಳಿದರು. ತಂದೆಯ ಮುಖ ಒಂದು ರೀತಿ ಇತ್ತು. ಅವರು ಹಾಗಿದ್ದುದ್ದನ್ನೇ ಅವಳು ನೋಡಿರಲಿಲ್ಲ. ತುಂಬಾ ಆಸೆಯಿಂದ ಬಂದಿದ್ದಳು. ಕೇಳಿದ ಕೂಡಲೇ ತಂದೆ ಒಪ್ಪಿಕೊಳ್ಳುತಾತ್ರೆ ಎಂದೇ ನಿರೀಕ್ಷಿಸಿದ್ದಳು. ಆದರೆ ರಾಕೇಶನ ಪ್ರಸ್ತಾಪ ಬರುತ್ತಲೇ ಅವರ ಮುಖದಲ್ಲಿ ಅಹಸ್ಯವಾದ ಬದಲಾವಣೆ ಕಂಡು ವಿಸ್ಮಿತಳಾದಳು.

''ರಾಕೇಶ್ ಎಲ್ಲಿದ್ದಾನೆ?'' ಈ ಬಾರಿ ಅವರ ಧ್ವನಿ ಕಠಿಣವಾಗಿತ್ತು.

''ಹ...ಳ್ಳಿ...ಯ...ಲ್ಲಿ...''

''ನೀನು ಹಿಗಿ ಅದೇ ಕಾರಿನಲ್ಲಿ ಅವನನ್ನು ಕಳುಹಿಸು''

''ಆಗಲಿ ಡ್ಯಾಡಿ...ನಾನು ಕೇಳಿದ್ದು...''

''ಕೂಡಲೇ ಅವನನ್ನು ನೋಡಬೇಕು'' ಎಂದು ಹೇಳಿ ಭವಾನಿಶಂಕರ್ ಎದ್ದುನಿಂತರು.

ಕೇದಾರಗೌರಿ ತಂದೆಯ ಮುಖವನ್ನು ನೋಡಿ ಅದರಿಂದ ಅವರ ಭಾವನೆಯನ್ನು ಗ್ರಹಿಸಲು ಪ್ರಯತ್ನಿಸಿದಳು. ಆದರೇನೂ ಗೊತ್ತಾಗಲಿಲ್ಲ; 'ಇನ್ನು ನೀನು ಹೊರಡು' ಎನ್ನುವಂತೆ ನೋಡಿದರು.

ಕೇದಾರಗೌರಿ ಹೋಗಿ ರಾಕೇಶನನ್ನು ಕಳುಹಿಸುವವರೆಗೂ ಆತ ಮುಳ್ಳಿನ ಮೇಲೆ ಇದ್ದಂತೆಯೇ ಇದ್ದರು. ಅಂದು ಸಂಜೆ ರಾಕೇಶ್ ಬಂದ.

ಗೌರಿ, ತಂದೆಯ ವರ್ತನೆಯನ್ನು ಅವನಿಗೆ ಹೇಳಿರಲಿಲ್ಲ. ತಂದೆ ಒಮ್ಮೆ ನೋಡ ಬಯಸಿದ್ದು ಮಾತ್ರವೇ ತಿಳಿಸಿದ್ದಳು. ಎಚ್ಚರಿಕಲಯಿಂದ ಅವರ ಕೋಣೆಯನ್ನು ಪ್ರವೇಶಿಸುತ್ತಾ ''ಏನು ಮಾವ?'' ಎಂದ.

ಭವಾನಿಶಂಕರ್ ಅವರ ಆಫೀಸು ಅದು. ಪೂರ್ಣವಾಗಿ ಏರ್‌ಕಂಡೀಷನ್ ಆಗಿದ್ದ ಕೋಣೆ. ವಿಶಾಲವಾದ ಮೇಜು. ಅದರ ಹಿಂದೆ ರಿವಾಲ್ವಿಂಗ್ ಕುರ್ಚಿ. ಒಳಕ್ಕೆ ಬಂದ ರಾಕೇಶನನ್ನು ಎವೆಯಿಕ್ಕದೆ ನೋಡಿದರು. ''ಕುಳಿತುಕೋ'' ಎಂದು ಗಂಭೀರ ಧ್ವನಿಯಲ್ಲಿ ಅಪ್ಪಣೆ ಮಾಡಿದರು.

ರಾಕೇಶ್ ಕುಳಿತುಕೊಳ್ಳುತ್ತಿದ್ದಂತೆ ತಾವೇ ಹಿಗಿ ಬಾಗಿಲ ಬೋಲ್ಟ್ ಭದ್ರಪಡಿಸಿ ಬಂದು ''ನಿನ್ನೊಡನೆ ಕೆಲವು ಮುಖ್ಯ ಸಂಗತಿಗಳನ್ನು ಮಾತನಾಡಬೇಕೆಂದಿದ್ದೇನೆ'' ಎಂದರು.

ರಾಕೇಶನ ಆಶ್ಚರ್ಯ ಮತ್ತೂ ಹೆಚ್ಚಿತು.

''ರಾಕೇಶ್ ಕಳೆದ ವರ್ಷದವರೆಗೂ ನಮ್ಮ ಮನೆಯಲ್ಲಿ ಒಬ್ಬ ವಯಸ್ಸಾದ ಹೆಂಗಸು ಸುಮಾರು ಇಪ್ಪತ್ತೈದು ವರ್ಷಗಳಿಂದಲೂ ಕೆಲಸ ಮಾಡಿಕೊಂಡಿದ್ದಳು. ತುಂಬಾ ನಂಬಿಕೆಗೆ ಅರ್ಹಳಾದವಳು ಹೇಳದೆ ಕೇಳದೆ ಆಕೆ ಕೆಲಸವನ್ನು ಬಿಟ್ಟಳು. ಆಕೆಗೆ ಐವತ್ತೈದು ವರ್ಷ ವಯಸ್ಸು. ಯಾರೆಷ್ಟು ಕೇಳಿದರೂ ಹೇಳಿದರೂ ಏನೂ ಹೇಳಲಿಲ್ಲ...''

''ಇದೆಲ್ಲಾ ಏಕೆ ಹೇಳುತ್ತಿದ್ದೀರಿ?''

''ನಿನಿಗೆ ಗೊತ್ತಿಲ್ಲವೆ?''

''ಇಲ್ಲ'' .

''ನಿಜವಾಗಿಯೂ ಗೊತ್ತಿಲ್ಲವೇ?''

''ನಿಜವಾಗಿಯೂ ಇಲ್ಲ''

ಭವಾನಿಶಂಕರ್ ಮೇಜಿನಿಂದ ಒಂದು ಕವರ್ ತೆಗೆದು ಟೇಬಲ್ ಮೇಲೆ ಇರಿಸಿ ''ಇದೇನು ಗೊತ್ತೇ?'' ಎಂದು ಕೇಳಿದರು

''ಗೊತ್ತಿಲ್ಲ''

''ಸೆಏಕ್ರಿಯಾಟ್ರಿಸ್ಟ್ ಡಾಕ್ಟರ್ ವ್ಯಾಸ್ ಬಳಿ ನೀನೇಕೆ ಹಿಗಿದಲ+ದ ಹೇಳುತ್ತೀಯಾ?''

ರಾಕೇಶ್ ಬೆಚ್ಚಿದ. ಎರಡು ವರ್ಷಗಳ ಹಿಂದಿನ ಸಂಗತಿ ಈಗೇಕೆ?

''ಈ ಭವಾನಿಶಂಕರ್ ಹಣದಲ್ಲಿಯೇ ಬೆಳೆದವನು. ಪ್ರತಿಕ್ಷಣವೂ ಪರಿಸರವನ್ನೂ, ಶತ್ರುಗಳನ್ನು ಗಮನಿಸುತ್ತಿರುವುದು ನನ್ನ ಸ್ವಭಾವ. ಪೇಷಂಟ್ ರಹಸ್ಯವನ್ನು ಡಾಕ್ಟರ್ ಬಯಲು ಮಾಡುವುದಿಲ್ಲ. ಆದರೆ ಹಣ ಕೊಳ್ಳದೆ ಇರುವಂತಹುದು ಯಾವುದೂ ಇಲ್ಲ. ನಿನ್ನ ಪರೀಕ್ಷೆಯ ವಿವರಗಳು, ಪೆಂಟಥಾಲ್ ಮತ್ತಿನಲ್ಲಿ ಆತನಿಗೆ ನೀನು ತಿಳಿಸಿದ ಸಂಗತಿಗಳು ಎಲ್ಲಾ ಇದರಲ್ಲಿವೆ. ನೀನಲಷ್ಟು ನೀಚನೋ, ಎಂಥಾ ಮಾನಸಿಕ ದೌರ್ಬಲ್ಯದಿಂದ ನರಳುತ್ತಿದ್ದೀಯೋ ಅದನ್ನು ತಿಳಿಸುವ ದಾಖಲೆ ಇದು. ಐವತ್ತೈದು ವರ್ಷಗಳ ವೃದ್ಧೆ ಆಕಸ್ಮಾತ್ತಾಗಿ ಮನೆಯಿಂದ ಏಕೆ ಹೋದಳೆಂಬುದರ ವಿವರವೂ ಇದರಲ್ಲಿದೆ. ಆಕೆ ಒಳ್ಳೆಯವಳಾಗಿದ್ದರಿಂದ ಮನೆಯ ಗೌರವವನ್ನು ಉಳಿಸಿದಳು...

''ನನಗೆ ತುಂಬಾ ಮೊದಲೇ ಅನುಮಾನ ಬಂತು ರಾಕೇಶ್. ನಿನ್ನ ನಡೆನುಡಿ ವಿಚಿತ್ರವಾಗಿತ್ತು. ಆದರೆ ಅದನ್ನು ಮಹತ್ವವಾಗಿ ಪರಿಗಣಿಸಲಿಲ್ಲ. ಅದಕ್ಕೆಂದೇ ನನ್ನ ಮಗಳು ನಿನ್ನನ್ನು ಮದುವೆಯಾಗುವುದಿಲ್ಲ ಎಂದಾಗ ಸಂತೋಷದಿಂದ ಸುಮ್ಮನಿದ್ದೆ. ನಂತರವೇ ಈ ಭಯಂಕರವಾದ ರಹಸ್ಯಗಳೆಲ್ಲಾ ಹೇರಬಂದದ್ದು. ಇದರಂತೆ ನೀನು ತೀರಾ ಕ್ರೂರವಾದ ಮನೋದೌರ್ಬಲ್ಯಕ್ಕೆ ತುತ್ತಾಗಿದ್ದೀ, ಕ್ರೌರ್ಯದಿಂದ ಕೂಡಿದ ಹುಚ್ಚು ನಿನ್ನನ್ನು ಬಲವಾಗಿ ಹಿಡಿದಿದೆ. ಸ್ವಲ್ಪದರಲ್ಲಿ ನನ್ನ ಮಗಳು ಅನುಭವಿಸಬೇಕಾಗಿದ್ದ ಅಪಾಯದಿಂದ ದೂರವಾದಳು...''

ಕುರ್ಚಿಯಲ್ಲಿ ಮುಂದಕ್ಕೆ ಬಗ್ಗಿ ''ಇನ್ನೂ ನಿನ್ನ ಬಗ್ಗೆ ವಿಷಯ ಸಂಗ್ರಹಣೆ ನಡೆಯುತ್ತಲೇ ಇದೆ. ಗ ಹೇಳು ರಾಕೇಶ್ ಹತ್ತನೆಯ ಕ್ರಾಸ್‌ನಲ್ಲಿರುವ, ಸದಾ ಬಾಗಿಲು ಮುಚಿಚ್ರುವ ಎರಡಂತಸ್ತಿನ ಮನೆಗೆ ಆಗಾಗ ಏಕೆಹೋಗುತ್ತಿರುತ್ತೀ? ಅದಕ್ಕೂ ನಿನಗೂ ಇರುವ ಸಂಬಂಧವೇನು? ಮೊನ್ನೆ ಒರಿಸ್ಸಾಕ್ಕೆ ಏಕೆ ಹಿಗಿದ್ದೆ? ನಿನ್ನ ಜತೆಯಲ್ಲಿ ಬಂದಿದ್ದ ಮುದುಕಯಾರು?''

ಅಗ್ನಿಪರ್ವತ ಗರ್ಭದ ಲಾವಾರಸವೆಲ್ಲಾ ಮೈಮೇಲೆ ಚಿಮ್ಮಿದಂತೆ ಆ ಮಾತುಗಳಿಗೆ ಬೇರೆ ಯಾರೇ ಆಗಿದ್ದರೂ ಭಯಗೊಳ್ಳುತ್ತಿದ್ದರು. ಆದರೆ ರಾಕೇಶ್ ಮಾಮೂಲಾಗಿಯೇ ಇದ್ದ.

''ಇದೆಲ್ಲಾ ಏನು ಮಾವ? ನಾನು ಸೈಕಿಯಾಟ್ರಿಸ್ಟ್ ಬಳಿಗೆ ಹಿಗಿದೆಷ್ಟೆ ಅಂತ ಏನೇನೋ ಕೇಳ್ತಿದೀರಲ್ಲಾ!'' ಎಂದ ಏನೂ ತಿಳಿಯದವನಂತೆ.

''ರಾಕೇಶ್ ನಿನ್ನಂತಹ ಸಾವಿರಾರು ಮಂದಿಯನ್ನು ಕಂಡಿದ್ದೇನೆ. ಸುಮ್ಮನೆ ಸುತ್ತು ಬಳಸಿ ಮಾತು ಬೇಡ. ನಿನ್ನ ಸಮಸ್ಯೆ ಹೇಳು...''

''ನನಗೇನೂ ಸಮಸ್ಯೆ ಇಲ್ಲವಲ್ಲ...''

''ರಾಕೇಶ್ ಸೈನ್ಸ್ ತುಂಬಾ ಮುಂದಿದೆ. ಮನುಷ್ಯ ಹೇಳದಿದ್ದದ್ದನ್ನೂ ಕಂಪ್ಯೂಟರ್ ಗುರುತಿಸಿ ಹೇಳಬಲ್ಲುದು. ಈ ರಿಪೋರ್ಟ್ ಪ್ರಕಾರ ನೀನು ಹೈಪರ್ ಟೆನ್‌ಷನ್,

ಸೋಮ್ನಾಂಬುಲಿಜಂ ನಂತಹ ಮಾಮೂಲಿ ಸಮಸ್ಯೆಗಾಗಿ ಡಾಕ್ಟರ್ ಬಳಿಗೆ ಹೋದೆ. ಆದರೆ ಅಲ್ಲಿಯ ಪರೀಕ್ಷೆಗಳಿಂದ ತೀರ ಭಯಂಕರವಾದ ವಿವರಗಳು ತಿಳಿದವು. ಮನುಷ್ಯರಲ್ಲೂ ಇಷ್ಟೊಂದು ಕ್ರೂರವಾದ ಯೋಚನೆ ಮಾಡುವವರು ಇರುತ್ತಾರೆ ಎಂಬುದು ಈಗ ಗೊತ್ತಾಯಿತು.

''ಸಾಮಾನ್ಯ ಮನುಷ್ಯರು ಕಲ್ಪಿಸಿಕೊಳ್ಳಲಾರದಂತಹ ಜಾಡ್ಯ ನಿನ್ನದು. ಆದರೊಂದಿಗೆ ನಿನ್ನಲ್ಲಿ ದಿನದಿನಕ್ಕೆ ಬೃಹತ್ತಾಗಿ ಬೆಳೆದಿರುವ ಕ್ರೌರ್ಯ ಕಾಮವಿಕಾರ. ಇನ್ನು ಕೆಲವು ತಿಂಗಳು ಹೀಗೇ ನೀನು ಮುಂದುವರಿದರೆ ಸಿನಿಕನಾಗಿ ಮಾನವ ವಿದ್ವೇಷಿಯಾಗುತ್ತೀ ಎಂದು, ನಂತರ ಹುಚ್ಚಾಸ್ಪತ್ರೆಯಲ್ಲಿ ಮಾತ್ರವೇ ಸೇರಬೋಕಾಗುತ್ತದೆ ಎಂದು ಡಾಕ್ಟರ್ ಹೇಳಿದ್ದಾರೆ. ಕೆಲವು ದಿನಗಳ ಹಿಂದೆ ಯಾವುದೋ ಪಾರ್ಟಿಯಲ್ಲಿ ಡಾಕ್ಟರ್ ಭೇಟಿಯಾಗಿ 'ನಿಮ್ಮವನು ಹೇಗಿದ್ದಾನೆ?' ಎಂದು ಕೇಳಿದಾಗ ನನಗೆ ಆಶ್ಚರ್ಯವಾಯಿತು. ಚೆನ್ನಾಗಿಯೇ ಇದ್ದಾನೆ ಎಂದಾಗ ಆತ ನನಗಿಂತಲೂ ಹೆಚ್ಚು ಚಕಿತಗೊಂಡ. ಬೇರೆ ಸೈಕಿಯಾಟ್ರಿಸ್ಟ್ ಬಳಿಗೆ ಹಿಗಿದ್ದನೇನೋ ಎಂದು ಆತ ಗೊಣಗಿಕೊಂಡಾಗ ಅನುಮಾನ ಬಂತು. ರಹಸ್ಯವಾಗಿ ಈ ರಿಪೋರ್ಟ್ ಸಂಪಾದಿಸಿದೆ''

ರಾಕೇಶ್ ನಿರ್ವಿಕಾರನಾಗಿ ಆತನನ್ನು ನೋಡುತ್ತಾ ಇದ್ದ.

''ನಿನ್ನ ಕೋಣೆಯನ್ನು ಹುಡುಕಿದೆ. ಹಷಿಪ್ ಸಿಕ್ಕಿತು. ಡ್ರಗ್ಸ್‌ಗೆ ತುತ್ತಾಗಿರುವುದು ತಿಳಿಯಿತು. ಮತ್ತೆ ಆ ಡಾಕ್ಟರನ್ನು ಕಂಡೆ. ನಿನ್ನ ಮಾನಸಿಕ ಸಮತೋಲನವನ್ನು ಯಾವ ಔಷಧವೂ ಈಗ ಹಿಂದಕ್ಕೆ ಕೊಡಿಸದೆಂದು, ಈಗಿನ ಮಾದಕ ವಸ್ತುವಿನ ಬಳಕೆಯಿಂದ ಸ್ಥಿತಿ ಮತ್ತಷ್ಟು ಹದಗೆಡುತ್ತದೆ ಎಂದು ಹೇಳಿದ. ಆದರೆ ನೀನು ಮಾಮೂಲಾಗಿ ವರ್ತಿಸುತ್ತಿರುವುದು ಹೇಗೆ ಸಾಧ್ಯವಾಯಿತು? ವಿಜ್ಞಾನಕ್ಕೆ ನಿಲುಕದ ಬೇರೆ ಯಾವುದೋ ಅದ್ಭುತವೊಂದು ನಡೆಯದೆ ಇದು ಸಾಧ್ಯವೇ ಇರಲಿಲ್ಲ. ನೀನು ಸಾಧಾರಣ ಮನುಷ್ಯನೋ, ಅಲ್ಲವೋ ಎಂಬ ಸಂಗತಿಯೇ ತಿಳಿಯದಾದಾಗ ಗೌರಿಯ ನಿರ್ಣಯ ನನಗೆ ಆನಂದವನ್ನು ಕೊಟ್ಟಿತು. ಆದರೆ ಅನುಮಾನ ಮಾತ್ರ ಹಾಗೇ ಉಳಿದಿದೆ. ನೀನು ಯಾವುದೋ ರಹಸ್ಯ ಗುಂಪಿನಲ್ಲಿ ಸೇರಿದ್ದೀಯ. ರಾಕೇಶ್, ಈ ಪ್ರಪಂಚದಲ್ಲಿ ನಿನ್ನ ಒಳಿತನ್ನು ಬಯಸುವವರು ಯಾರಾದರೂ ಇದ್ದರೆ ಅದು ನಾನೊಬ್ಬನೇ! ನಿನ್ನ ಎಳೆಯ ವಯಸ್ಸಿನಲ್ಲಿ ನಡೆದ ಘಟನೆಗಳು, ಅವು ನಿನ್ನ ಮೇಲೆ ಬೀರಿರುವ ಪ್ರಭಾವ ಇವನ್ನೆಲ್ಲಾ ನಾನು ಅರ್ಥಮಾಡಿಕೊಳ್ಳಬಲ್ಲೆ. ಹೇಳು ರಾಕೇಶ್, ಆ ಗುಂಪು ಯಾವುದು? ನೀನು ಭಾಗವಹಿಸುತ್ತಿರುವ ಆ ರಹಸ್ಯ ಸಮಾವೇಶಗಳು ಏನು? ಅವೆಲ್ಲಾ ನೀನು ಈಗ ಹೇಳಿದಿದ್ದರೂ ನಾಳೆ ಖಂಡಿತವಾಗಿಯೂ ನಾನು ತಿಳಿದುಕೊಳ್ಳುತ್ತೇನೆ. ಆದರೆ ನೀನೇ ಅದನ್ನು ಹೇಳುವುದು ಒಳ್ಳೆಯದು''

ರಾಕೇಶ್ ತುಂಬಾ ಹೊತ್ತು ಮೌನವಾಗಿ ಕುಳಿತಿದ್ದ. ನಂತರ ಕುರ್ಚಿಯಿಂದೆದ್ದು ''ಮಾವ'' ಎಂದಾಗ ಅವನ ಧ್ವನಿಯಲ್ಲಿ ಒಂದು ರೀತಿ ನಡುಕವಿತ್ತು. ''ಎಲ್ಲಾ ರೀತಿಗಳಲ್ಲೂ ನಾನು ಭ್ರಷ್ಟನಾಗಿದ್ದೇನೆ. ಒಳ್ಳೆಯವನಾಗಬೇಕೆಂದರೂ ಇನ್ನು ಸಾಧ್ಯವಿಲ್ಲ''

''ಹಾಗೆ ಹೇಳಬೇಡ ರಾಕೇಶ್. ನಿನ್ನ ಬಗ್ಗೆ ನಾನು ಯಾರಿಗೂ ಏನೂ ಹೇಳಿಲ್ಲ. ನಿನ್ನ ಒಳ್ಳೆಯದಕ್ಕಾಗಿಯೇ ಇದೆಲ್ಲವನ್ನೂ ರಹಸ್ಯವಾಗಿರಿಸಿದ್ದು. ನಿನ್ನ ಜತೆಯಲ್ಲಾದ್ದಾಗಲೂ ನನ್ನ ಮನಸ್ಸಿನ ಅನುಮಾನಗಳನ್ನು ಸ್ವಲ್ಪವೂ ಬಹಿರಂಗಪಡಿಸದೆ ವರ್ತಿಸಿದ್ದನ್ನು ನೀನನು ಗಮನಿಸಿದ್ದೀಯ, ಹೌದೇ?''

''ಥ್ಯಾಂಕ್ಸ್ ಮಾವ. ನಾನು...ನಾ...ನು'' ಎಂದು ಮುಂದೆ ಮಾತನಾಡಲಾರದೆ ಹೋದ. ಕಣ್ಣು ಮುಚ್ಚಿತು. ತುಟಿ ನಡುಗಿತು. ಭವಾನಿ ಶಂಕರ್ ಅವನ ಬಳಿಗೆ ಬಂದು ಪ್ರೇಮದಿಂದ ಅವನನ್ನು ಬಳಿಗೆ ಸೆಳೆದುಕೊಂಡ, ''ಹೇಳಪ್ಪಾ ಹೇಳು...'' ಎಂದ.

ಮೊದಲು ಏನೂ ಗೊತ್ತಾಗಲಿಲ್ಲ. ನಂತರ ಒಂದೇ ಉರಿ. ಎದೆಯ ಪಕ್ಕದಲ್ಲಿ ಕೆಳಗೆ ಏನೋ ಉರಿ. ಯಾವುದರಿಂದಲೋ ಚುಚ್ಚಿದಂತೆ ಎಳಗೆಲ್ಲಾ ತಿರುವಿದಂತೆ...

ಒಡನೆಯೇ ಒಂದಡಿ ಹಿಂದಿರಿಸಿದ. ಆದರೆ ಆತನೊಂದಿಗೇ ರಾಕೇಶ್ ಕೂಡ ಮುಂದೆ ಬಂದ. ''ಯಾರಿಗೂ ಹೇಳದೆ ಇದ್ದುದಕ್ಕೆ ಥ್ಯಾಂಕ್ಸ್ ಮಾವ'' ಎನ್ನುತ್ತಾ ಪೇಪರ್ ನೈಫ್‌ನಿಂದ ಮತ್ತೊಮ್ಮೆ ಎದೆಯ ಬಳಿ ಚುಚ್ಚಿದ.

ಭವಾನಿಶಂಕರ್‌ಗೆ ಆಗ ನೋವು ಗೊತ್ತಾಯಿತು. ಕಾರಂಜಿಯಲ್ಲಿ ನೀರು ಚಿಮ್ಮುವಂತೆ ರಕ್ತ ಹೊರಕ್ಕೆ ಚಿಮ್ಮುತ್ತಿತ್ತು. ಅಂಗೈಯಿಂದ ಗಾಯವನ್ನು ಅದುಮಿಹಿಡಿದರೂ ರಕ್ತ ಉಕ್ಕುತ್ತಲೇ ಇತ್ತು.

ಹಾವಿನ ಬಾಯಿಗೆ ಸಿಕ್ಕಿದ ಕಪ್ಪೆ ತಪ್ಪಿಸಿಕೊಳ್ಳಲು ನಡೆಸುವ ವಿಫಲ ಪ್ರಯತ್ನಗಳನ್ನೆಲ್ಲಾ ಆನಂದದಿಂದ ಗಮನಿಸುವಂತೆ ರಾಕೇಶ್ ಸಾವಕಾಶವಾಗಿ ಅದೆಲ್ಲವನ್ನೂ ನೋಡುತ್ತಿದ್ದ. ತುಂಬು ಪ್ರಾಣವೊಂದು ವಿಲವಿಲನೆ ವಿಲಪಿಸುತ್ತಾ ಶರೀರದಿಂದ ಹೊರಬೀಳುವುದನ್ನು ಸಾವಧಾನಚಿತ್ತನಾಗಿ ತೀರಾ ಸಾಧಾರಣವೆನ್ನುವಂತೆ ನೋಡುವ ಸ್ಥಿತಿಗೆ ರಾಕೇಶ್ ಇಳಿದಿದ್ದಾನೆ ಎಂದರೆ ಕುಟ್ಟಿಸೆಏತಾನ್ ಬೇರೆಲ್ಲೂ ಇಲ್ಲ. ಅವನಲ್ಲೇ ಇದ್ದಾನೆ ಎಂದು ತಾನೇ ಅರ್ಥ? ಮತ್ತೊಮ್ಮೆ ಚೂರಿ ಹಾಕುವ ಪ್ರಯತ್ನವನ್ನೂ ಅವನು ಮಾಡಲಿಲ್ಲ. ಸರಿಯಾಗಿ ಆಯವನ್ನು ನೋಡಿ ಒಂದೇ ಸಾರಿಗೆ ಕೆಲಸ ಮುಗಿಸಿದ ಅಷ್ಟೆ.

ಭವಾನಿಶಂಕರ್ ಕುಸಿದು ಮೊಣಕಾಲ ಮೇಲೆ ಕುಳಿತರು. ಪ್ರಾಣವಂತೂ ಖಂಡಿತ ಹೋಗುತ್ತದೆ. ಕಿರುಚಿದರೂ ಸೌಂಡ್ ಪ್ರೂಫ್ ಕೋಣೆಯಲ್ಲಿ ಯಾವ ಲಾಭ? ಆದ್ದರಿಂದ ಆ ಪ್ರಯತ್ನವನ್ನೇ ಮಾಡಲಿಲ್ಲ. ಹಾಲೆರೆದು ಸಾಕಿದ ಹಾವನ್ನು ಕಂಡ

ಷಾಕ್! ಮನುಷ್ಯನೊಬ್ಬನ ಬಗ್ಗೆ ಬೆಳೆಸಿದ ನಂಬಿಕೆಯನ್ನು ಬೇರೆ ಸಹಿತ ನಿರ್ಮೂಲನಗೊಳಿಸಿದ ಷಾಕ್!!

ಆಗಲೂ ಒಂದು ಸಂತೋಷ- ತನ್ನ ಮಗಳು ತುಂಬಾ ಒಳ್ಳೆಯ ನಿರ್ಣಯ ತೆಗೆದುಕೊಂಡವಳು ಎಂಬುದು. ಈ ಸರ್ಪದೊಂದಿಗೆ ಮದುವೆ ನಡೆಯದಂತೆ ಮಾಡಿದ್ದು ಎಂತಹ ವಿವೇಯುತ ಕಾರ್ಯ.

ಆದರೆ ಆ ಆನಂದವನ್ನೂ ರಾಕೇಶ್ ಆತನಿಗೆ ಉಳಿಸಲಿಲ್ಲ.

''ಲೋ ಮುದುಕಾ!'' ಎಂದು ಗಹಗಹಿಸಿ ನಗುತ್ತಾ, ''ನಾನು ಕ್ರೂರಕಾಮಿಯೇ. ಅದನ್ನೇ ಸ್ಯಾಡಿಸ್ಟ್ ಅಂತಾರೆ. ಅದಕ್ಕಿಂತಲೂ ಒಳ್ಳೆ ಪದವಿದೆ- ಸ್ಕೀಜೋಫ್ರೆನಿಯಾ. ಮಾನವ ದ್ವೇಷಿ ನಾನು. ಹೊರನೋಟಕ್ಕೆ ಸಮಾಜದಲ್ಲಿ ಗೌರವ-ಪ್ರತಿಷ್ಠೆಗಳ ಮನುಷ್ಯ. ನಿಮ್ಮೆಲ್ಲರಿಗೂ ಬೇಕಾದವನು. ಆದರೆ ನನ್ನೊಳಗೆ ಇನ್ನೇನು, ನಿನ್ನ ಮಗಳು ಎಂದರೆ ಜಿಗುಪ್ಸೆ ಇದೆ. ನಿನ್ನ ಮಗಳ ಮೇಲೆ ಇನ್ನೂ ಭಯಂಕರವಾಗಿ ಸೇಡು ತೀರಿಸಿಕೊಳ್ಳುತ್ತೇನೆ. ಈಗ ತಾನೇ ಕೇಳಿದೆ, ನನ್ನ ಮನೋವ್ಯಾಧಿಯನ್ನು ಹೇಗೆ ಕಳೆದುಕೊಂಡೆ ಎಂದು. ಯಾವಮಾದಕ ವಸ್ತುವೂ ಅದನ್ನು ಗುಣಪಡಿಸಲಿಲ್ಲ. ನಾನು ತೀರಾ ಆರೋಗ್ಯವಂತನಾಗಿದ್ದೇನೆ ಅಲ್ಲವೇ?...ಅದಕ್ಕೆ ಕಾರಣ ಉಸ್ಲೋಕ್... ಉಸ್ಲೋಕ್...''

ಭವಾನಿಶಂಕರ್ ಕಣ್ಣವೆ ಹಾಕದೆ ರಾಕೇಶನನ್ನೇ ನೋಡುತ್ತಿದ್ದರು. ಪರಿಪೂರ್ಣ ವಕ್ರಮಾರ್ಗಿ. ಹೌದು ಪರಮಾವಧಿ ಹುಚ್ಚು.

''ಉಸ್ಲೋಕ್ ಪ್ರಭುವಾದ ಕುಟ್ಟಿಸೆಏತಾನ್ ಅಷ್ಟಾವಕ್ರನ ರೂಪದಲ್ಲಿ ಭೂಮಿಯ ಮೇಲೆ ಅವತರಿಸಲಿದ್ದಾನೆ. ನಾವೆಲ್ಲಾ ಆತನ ಅನುಚರರು. ಆತ ಹುಟ್ಟುವಾಗಲೇ ತಾಯಿಯನ್ನು ಕೊಲ್ಲುತ್ತಾನೆ. ಹುಟ್ಟಿದ. ದಿನವೇ ತಂದೆಯನ್ನು ಕೊಲ್ಲುತ್ತಾನೆ. ಅವನು ಬೆಳೆದ ನಂತರ ಕ್ಷುದ್ರರ ನಲರವಿನಿಂದ ರಾಜ್ಯವನ್ನಾಳುತ್ತಾನೆ. ಏಯ್ ಮುದುಕಾ! ಈ ಮಾತು ಕೇಳಿ ಪ್ರಾಣ ಬಿಡು. ಅಷ್ಟಾವಕ್ರ ಹುಟ್ಟುವುದು ನಿನ್ನ ಮಗಳ ಹೊಟ್ಟೆಯಲ್ಲಿಯೇ. ಅರ್ಥವಾಯಿತೇ?...ನನ್ನನ್ನು ಬೇಡವೆಂದು ಸಿದ್ಧಾರ್ಥನನ್ನು ಮದುವೆಯಾದದ್ದಕ್ಕೆ ಎಷ್ಟು ಮಧುರವಾಗಿ ಸೇಡು ತೀರಿಸಿಕೊಂಡಿದ್ದೇನೆ ಗೊತ್ತಾಯಿತೇ? ನನ್ನ ಸೇಡು ಅರ್ಥವಾಯಿತೇ?...'' ಎಂದು ಮತ್ತೆ ಗಹಗಹಿಸಿ ನಕ್ಕ.

ನೆಲದ ಮೇಲಿದ್ದ ರತನ್ನಗಂಬಳಿ ರಕ್ತದಿಂದ ತೊಯ್ದು ಹೋಗುತ್ತಿದೆ. ಮೇಜಿನ ಪಕ್ಕದಲ್ಲಿ ಕುಸಿದು ಕುಪ್ಪೆಯಾಗಿದ್ದಾರೆ ಭವಾನಿಶಂಕರ್. ಸುರಿಯುತ್ತಿರುವ ರಕ್ತದೊಂದಿಗೆ ಪ್ರಾಣವೂ ಸ್ವಲ್ಪ ಸ್ವಲ್ಪವಾಗಿ ಹೋಗುತ್ತಿದೆ. ಹತ್ತು...ಒಂಬತ್ತು...ಎಂಟು...

ಮಗಳು ನೆನಪಾದಳು. ಮುಗ್ಧಳಾದ ಅವಳು ಪ್ರಪಂಚದಲ್ಲಿ ಇರುವವರೆಲ್ಲಾ ಳ್ಳೆಯವರೇ ಎನ್ನುವ ನಿರ್ಮಲ ಮನಸ್ಸಿನವಳು.

ಏಳು...ಆರು...ಐದು...ನಾಲ್ಕು...

ಸಿದ್ಧಾರ್ಥ ನೆನಪಾದ. ತನ್ನ ಅಳಿಯನಲ್ಲಿ ಯಾವುದೋ ಅರಿಯದ ಪ್ರಭಾವಶಾಲಿ ಶಕ್ತಿಯೊಂದಿದೆ ಎಂದು ಆತ ಎಂದೋ ಗುರ್ತಿಸಿದ್ದಾನೆ. ಈ ಹಾವನ್ನು ತನ್ನ ಅಳಿಯ ಕಂಡುಕೊಳ್ಳಬಲ್ಲನೆ? ಕಂಡುಹಿಡಿದು ಏನು ಪ್ರಯೋಜನ?...ಕೈಸುಟ್ಟ ನಂತರ...

ಮೂರು...ಎರಡು...ಒಂದು

ಆತನ ಪ್ರಾಣ ಹಿಯಿತು.

ರಾಕೇಶ್ ನಿಶ್ಚಲವಾಗದ್ದ. ಆ ಶರೀರವನ್ನು ನೋಡುತ್ತಾ ತುಂಬಾ ಹೊತ್ತು ಸುಮ್ಮನಿದ್ದ. ನಂತರ ಬಾಗಿಲನ್ನು ಬಲವಾಗಿ ಎಳೆದುಕೊಂಡು ಹೋದ.

ಭವಾನಿಶಂಕರ್ ಆಫೀಸ್ ಟೇಬಲ್‌ನಲ್ಲಿ ಡಿಕ್ಟಾಫೋನೊಂದಿತ್ತು. ತನ್ನ ಸೆಕ್ರಟರಿಗೆ ಅದರಲ್ಲಿ ಡಿಕ್ಟೇಷನ್ ಕೊಡುವುದು ವಾಡಿಕೆ. ಅದಕ್ಕೆ ಪ್ರತ್ಯೇಕವಾದ ಒಂದು ಟೇಪ್ ರೆಕಾರ್ಡರ್ ಇತ್ತು. ರಾಕೇಶ್ ಚಾಕುವಿನಿಂದ ಚುಚ್ಚುತ್ತಲೇ ಆತ ಕುಸಿಯುತ್ತಾ ಬೀಳುವಾಗ ಟೇಬಲನ್ನು ಆಸರೆಯಾಗಿ ಹಿಡಿದ. ಡಿಕ್ಟಾಫೋನಿನ ಸ್ವಿಚ್ ಕೈಗೆ ತಗುಲಿತು. ಆನ್ ಮಾಡಿ ರತ್ನಗಂಬಳಿಯ ಮೇಲೆ ಕುಸಿದು ಬಿದ್ದ.

ರಾಕೇಶ್ ಹೋದ ಮೇಲೂ ತುಂಬಾ ಹೊತ್ತು ರೆಕಾರ್ಡರ್ ತಿರುಗುತ್ತಲೇ ಇತ್ತು. ನಂತರ ಟಪ್ ಎಂದು ಸದ್ದು ಮಾಡುತ್ತಾ ಟೇಪ್ ನಿಂತಿತು.

## 16

''ಹದಿನೆಂಟನೆಯ ಶತಮಾನದ ಅಂತಿಮ ಭಾಗದಲ್ಲಿ ಒಬ್ಬ ಹೆಣ್ಣಿಗೆ ಕೃತಕ ಗರ್ಭಧಾರಣಾ ಪ್ರಯೋಗವನ್ನು ಮೊದಲ ಬಾರಿಗೆ ನಡೆಸಿದ್ದು ಡಾಕ್ಟರ್ ಜಾನ್ ಹಂಟರ್. ಪುರುಷನ ಹಸ್ತ ಪ್ರಯೋಗದಿಂದ ಹೊರಚಿಮ್ಮಿದ ವೀರ್ಯವನ್ನು ಚಿಕ್ಕ ಸಿರಿಂಜಿನಲ್ಲಿ ತುಂಬಿಕೊಂಡು ಅದನ್ನು ಹೆಣ್ಣಿನಲ್ಲಿ ಸೇರಿಸಿ ಗರ್ಭವನ್ನುಂಟು ಮಾಡಿದ್ದ ಆತ. ಸಾಧಾರಣವಾಗಿ ಪುರುಷೇಂದ್ರಿಯವು ಪೂರ್ಣವಾಗಿ ಉದ್ದೀಪನಗೊಳ್ಳದಾಗ ಅದು ಸ್ತ್ರೀ ಜನನೇಂದ್ರಿಯವನ್ನು ಪ್ರವೇಶಿಸುವುದು ಅಸಾಧ್ಯವಾದುದರಿಂದ ಆತನ ವೀರ್ಯವನ್ನು ಆಕೆಯಲ್ಲಿ ಸೇರಿಸುವುದನ್ನು ಆರ್ಟಿಫಿಷಿಯಲ್ ಇನ್‌ಸೇಮಿನೇಷನ್ ಬೈ ಹಸ್‌ಬೆಂಡ್ ( ಎ ಐ ಹೆಚ್)ಎನ್ನುತ್ತಾರೆ. ಆದರೆ ಇಂತಹ ಸಂದರ್ಭಗಳು ತೀರ ಕಡಿಮೆ. ಅನೇಕ ಪ್ರಕರಣಗಳಲ್ಲಿ ಗಂಡನ ಬಂಜೆತನದಿಂದ, ಆತನ ವೀರ್ಯಕಣಗಳಲ್ಲಿ ಮಕ್ಕಳನ್ನು ಹುಟ್ಟಿಸುವ ಶಕ್ತಿ ಇಲ್ಲದೆ ಇರುವುದರಿಂದ ಸ್ತ್ರೀ ಬಂಜೆಯಾಗಿಯೇ ಉಳಿಯಬೇಕಾಗುತ್ತದೆ. ಆದ್ದರಿಂದಲೇ ಎ ಐ ಹೆಚ್ ಗಿಂತಲೂ ಎ ಐ ಡಿ ತುಂಬಾ ಬೇಗ ವ್ಯಾಪಿಸಿತು. ಪತಿ-ಪತ್ನಿಯರಿಗೆ ತಿಳಿಯದಂತೆ ಮೂರನೆಯ ವ್ಯಕ್ತಿಯಿಂದ ವೀರ್ಯದಾನವನ್ನು ಪಡೆದು ಅದನ್ನು ದಂಪತಿಗಳ ಅಂಗೀಕಾರದೊಂದಿಗೆ ಪತ್ನಿಯಲ್ಲಿ

ಬಿಡುವುದನ್ನು ಎ ಐ ಡಿ (ಆರ್ಟಿಫಿಷಿಯಲ್ ಇನ್ ಸೇಮಿನೇಷನ್ ಬೈ ಡೋನರ್) ಎನ್ನುತ್ತಾರೆ''

-ತನ್ನ ಮಾತನ್ನು ನಿಲ್ಲಿಸಿ ಡಾಕ್ಟರ್ ವಂಶೀಕೃಷ್ಣ ಸಭೆಯನ್ನು ನೋಡಿದ. ಸುಮಾರು ಇಪ್ಪತ್ತೈದು ಮಂದಿ ಡಾಕ್ಟರ್‌ಗಳಿದ್ದರು.

ಇನ್‌ಸ್ಟಿಟ್ಯೂಟ್ ಆಫ್ ಜೆನೆಟಿಕ್ಸ್ ಅದು. ಅದರಲ್ಲಿ ಆರ್ಟಿಫಿಷಿಯಲ್ ಇನ್‌ಸೇಮಿನೇಷನ್ ಸೆಂಟರ್ (ಕೃತಕ ಗರ್ಭಧಾರಣಾ ಕೇಂದ್ರ) ಹೊಸದಾಗಿ ಸ್ಥಾಪಿತವಾಗಿತ್ತು. ಅಂದಿನ ವಿಷಯದ ಬಗ್ಗೆ ಮಾತನಾಡಲು ಡಾ|| ವಂಶೀಕೂಷ್ಣನನ್ನು ಆಹ್ವಾನಿಸಲಾಗಿತ್ತು. ಮೂವತ್ತು ವರ್ಷಗಳ ಯುವಕ ತಳಿಶಾಸ್ತ್ರದಲ್ಲಿ ಪ್ರಖ್ಯಾತನಾಗಿದ್ದ.

''ತಮಗೆ ಮಕ್ಕಳಿಲ್ಲವೆಂಬ ಅಸಂತೃಪ್ತಿ ದಿನ ದಿನವೂ ವೃದ್ಧಿಗೊಂಡು ಯಾವುದೋ ರೀತಿಯಲ್ಲಿ ತಮಗೆ ಮಕ್ಕಳಾದರೆ ಸಾಕೆಂಬ ಭಾವನೆ ದಂಪತಿಗಳಲ್ಲಿ ಬೇರೂರುತ್ತದೆ. ತನ್ನ ಅಸಾಮರ್ಥ್ಯ ಹೆಂಡತಿಯ ಅಸಂತೃಪ್ತಿಯ ಮಧೆ+ಯ ಪತಿಯಾದವನು ಸೊರಗಿ ಸೊದೆಯಾಗಿರುತ್ತಾನೆ. ಬೇಲಿ ದಾಟಲು ನೈತಿಕ ಧರ್ಮದ ಭಯ. ಇದೇ ಪರಿಸ್ಥಿತಿಯಲ್ಲಿ ಕಂಡುಕೊಂಡ ಮಾರ್ಗ ಎ.ಐ.ಡಿ. ಇದು ತುಂಬಾ ಬೇಗ ಜನಪ್ರಿಯವೂ ಆಯಿತು. ಇದರಲ್ಲಿ ಒಂದು ಒಳಿತು ಎಂದರೆ ತನ್ನ ಪತ್ನಿಗೆ ಗರ್ಭ ಕಟ್ಟಲು ಕಾರಣವಾದ ವೀರ್ಯ ಯಾವ ಪುರುಷನದೆಂಬುದು ಗಂಡನಿಗಾಗಲಿ, ತನ್ನ ಮಗುವಿನ ತಂದೆ ಯಾರೆಂಬುದು ಹೆಂಡತಿಗಾಗಲಿ ತಿಳಿಯುವ ಅವಕಾಶವಿಲ್ಲ. ಈ ವಿಧಾನವನ್ನು 1957ರಲ್ಲಿಯೇ ಅಮೆರಿಕಾದಲ್ಲಿ ಒಂದು ಲಕ್ಷ ಮಂದಿ ಒಪ್ಪಿಕೊಂಡಿದ್ದರು ಎಂದರೆ ಎಷ್ಟು ಬೇಗ ಜನರು ಇದನ್ನು ಒಪ್ಪಿದರೆಂಬುದು ಸ್ಪಷ್ಟವಾಗುತ್ತದೆ. ಲಂಡನ್‌ನಲ್ಲಿ ಕೆಲೇವು ಮಂದಿ ಡಾಕ್ಟರ್‌ಗಳು ಇದನ್ನೇ ತಮ್ಮ ವೃತ್ತಿಯನ್ನಾಗಿ ಸ್ವೀಕರಿಸಿದ್ದಾರೆ. ಅವರ ಬಳಿ ಹಲವಾರು ಬಗೆಯ ಪುರುಷರ ವೀರ್ಯಕಣಗಳು ಇರುತ್ತವೆ. ಆದರೆ ಅದರೊಂದಿಗೆ ದಾತನ ಹೆಸರು ಇತರ ವಿವರಗಳು ಇರುವುದಿಲ್ಲ. ದಂಪತಿಗಳು ತಮಗೆ ಬೇಕಾದಂತಹ ಮಗುವನ್ನು ವಿಜ್ಞಾನಿಯೊಬ್ಬನಿಂದ, ವಿದ್ವಾಂಸನಿಂದ, ಕ್ರೀಡಾಪಟುವಿನಿಂದ ಪಡೆಯುವುದು ಸಾಧ್ಯವಿತ್ತು. ಟೋಕಿಯೋದಲ್ಲಿ ಪ್ರತಿವರ್ಷವೂ ಸಾವಿರಾರು ಮಂದಿ ಈ ರೀತಿ ಮಕ್ಕಳನ್ನು ಪಡೆಯುತ್ತಾರೆ.

''ಪರುಷನ ವೀರ್ಯವನ್ನು ಘನೀಕರಿಸುವುದನ್ನು (ಫ್ರೀಜ್ ಮಾಡುವುದನ್ನು) ಕಂಡುಕೊಂಡ ನಂತರ ಈ ಕಾರ್ಯ ಮತ್ತಷ್ಟು ಸುಲಭವಾಯಿತು. ಗ್ಲಿಜರಾಲ್‌ನಲ್ಲಿ ಬೆರೆಸಿ, 790 ಸೆಂಟಿಗ್ರೇಡ್ ಶೈತ್ಯದಲ್ಲಿ ಘನೀಕರಿಸಿ ಇರಿಸಿದರೆ ಆ ವೀರ್ಯವು ಹತ್ತರಿಂದ ಇಪ್ಪತ್ತು ವರ್ಷ ಬದುಕಿರುತ್ತದೆ ಎಂದು ವಿಜ್ಞಾನಿಗಳು ಕಂಡುಕೊಂಡರು. ಇದು ಒಂದು ಮುಖ್ಯ ಘಟ್ಟ. ಇತ್ತೀಚೆಗೆ ನೈಟ್ರೋಜನ್ ದ್ರವದಲ್ಲಿ 19650ಗಳಲ್ಲಿ ಕೋಳಿ ಮೊಟ್ಟೆಯ ಲೋಳೆ, ಗ್ಲಿಜರಾಲ್, ಆಂಟಿಬಯೋಟಿಕ್ ಕಲಿಸಿ ಇರಿಸಿದರೆ

ಶಾಶ್ವತವಾಗಿ ಜೀವವಿರುತ್ತದೆ ಎಂದು ಕಂಡುಕೊಳ್ಳಲಾಗಿದೆ. ಇದು ನಂಬಿಕೆಗೆ ದೂರ ಎನಿಸಿದರೂ ಸತ್ಯ. ಇದರಿಂದ ಒಂದೆಡೆಯಿಂದ ಮತ್ತೊಂದೆಡೆಗೆ ಸಾಗಿಸುವ ಸೌಕರ್ಯವೂ ಸೇರಿತು. ಇದರಿಂದ ನೂರು ವರ್ಷಗಳ ನಂತರ ಅಮೇರಿಕಾದಲ್ಲಿರುವ ದಂಪತಿಗಳು, ತಮಗೆ ಪಂಡಿತ್ ಜವಾಹರಲಾಲ್ ನೆಹರು ಅವರಿಂದ ಸಂತಾನ ಬೇಕೆನಿಸಿದರೆ ಅದನ್ನು ಪಡೆದುಕೊಳ್ಳುವುದು ಸಾಧ್ಯವಿದೆ ಎಂದಾಯಿತು. ಆದರೆ ನೆಹರು ಬದುಕಿರುವಾಗ ತಮ್ಮ ವೀರ್ಯವನ್ನು ಕೊಟ್ಟಿರಬೇಕು.

ಸಭೆಯಲ್ಲಿ ನಗು.

ಈ ಪದ್ಧತಿಯಿಂದ ಮತ್ತೆ ಕೆಲವು ಸಮಸ್ಯೆಗಳೂ ದೂರವಾದವು. ತನ್ನ ಹೆಂಡತಿಯಲ್ಲಿ ಜನಿಸಿರುವ ಮಗುವಿನ ತಂದೆ ಎಲ್ಲೋ ಬದುಕಿದ್ದಾನೆ ಎನ್ನುವ ಅನಿಸಿಕೆಗಿಂತಲೂ ಎಂದೋ ಸತ್ತುಹೋಗಿದ್ದಾನೆ ಎಂಬ ಭಾವ ಗಂಡನಿಗೆ ತೃಪ್ತಿಯನ್ನು ನೀಡುತ್ತದೆ. ಈ ವೀರ್ಯದಲ್ಲಿರುವ ದೊಡ್ಡ ತಾಪತ್ರಯವೆಂದರೆ ಹಸ ವೀರ್ಯ ಕೆಲಸ ಮಾಡುವಷ್ಟು ತೀವ್ರವಾಗಿ ಶೈತ್ಯೀಕರಿಸಿದ ವೀರ್ಯ ಕೆಲಸ ಮಾಡುವುದಿಲ್ಲ. ಸರಾಸರಿ 19 ಸಾರಿ ವೀರ್ಯವನ್ನು ಏರಿಸಿದರೆ ಒಮ್ಮೆ ಗರ್ಭ ಕಟ್ಟುವ ಅವಕಾಶವಿದೆಯೆಂದು ತಜ್ಞರು ನಿರ್ಣಯಿಸಿದ್ದಾರೆ. 'ನನಗೆ ಇಬ್ಬರು ಮಕ್ಕಳು. ನಾನು ವೆಸಕ್ಟಮಿ ಆಪರೇಷನ್ ಮಾಡಿಸಿಕೊಂಡ ನಂತರ ಅವರಿಗೇನಾದರೂ ಅಪಘಾತವಾದರೆ ಹೇಗೆ?' ಎಂದು ಕೇಳುವ ಗಂಡಸರಿಗೂ ಈ ಮಾರ್ಗ ಉತ್ತರವನ್ನು ಹೇಳುತ್ತದೆ.

ಆಪರೇಷನ್ನಿಗೆ ಮೊದಲೇ ಆತನ ವಿರ್ಯವನ್ನು ಸಾಕಷ್ಟು ಸಂಗ್ರಹಿಸಿ ಶೈತ್ಯೀಕರಿಸಿದ ನಂತರ ಈ ಸಮಸ್ಯೆ ಸುಲಭವಾಗಿ ಪರಿಹರಿಸುವುದು ಸಾಧ್ಯವಿದೆ.

''ಈ ಮಾರ್ಗದ ಸಂಪೂರ್ಣ ಮಹತ್ವವವನ್ನು ನಮ್ಮ ದೇಶದಲ್ಲಿ ಇನ್ನೂ ಕಂಡುಕೊಳ್ಳದೆ ಇರುವುದು ನಮ್ಮ ದುರದೃಷ್ಟ. ಈ ಮಾರ್ಗ ಅನುಸರಿಸಿ ನಡೆಸಿದ ಕೃತಕ ಗರ್ಭಧಾರಣೆ ಪತಿಯ ಮಾನಸಿಕ ಸ್ಥಿತಿಯ ಮೇಲೆ ಯಾವ ಪರಿಣಾಮವನ್ನು ಬೀರುವುದಿಲ್ಲ ಎಂಬುದು ಈಗಾಗಲೇ ಸಾಬೀತಾಗಿದೆ. ಉದಾಹರಣೆಗೆ ಒಮ್ಮೆ ಎ ಐ ಡಿ ಮೂಲಕ ಕೃತಕ ಗರ್ಭಧಾರಣೆ ನಡೆಸಿಕೊಂಡವರು ಮತ್ತೊಂದು ಮಗುವಿಗಾಗಿ ಬರುವುದು. ಆ ಸಮಯದಲ್ಲಿ ಗಂಡಂದಿರನ್ನು ಸಂದರ್ಶಿಸಿದಾಗ ತಮ್ಮ ಪತ್ನಿ ತಪ್ಪು ಮಾಡಿದಳು ಎನಿಸುವುದೇ ಇಲ್ಲ, ಮಗು ತಮ್ಮವೇ ಎನಿಸುತ್ತದೆ ಎಂದು ಎಲ್ಲರೂ ಹೇಳಿದ್ದಾರೆ.

''ಡಾಕ್ಟರರು ಮತ್ತೂ ಮುಂದುವರಿದರು. ಅದುವರೆವಿಗೂ ನಾಲ್ಕೈದು ಮಂದಿ ಪುರುಷರ ವೀರ್ಯವನ್ನು ಬೆರೆಸಿ ಗರ್ಭಧಾರಣೆಗೆ ಬಳಸುತ್ತಿದ್ದರು. ಹೀಗೆ ಮಾಡುವುದರಿಂದ ತಂದೆ ಯಾರು ಎಂಬುದು ತಿಳಿಯುವ ಅವಕಾಶವೇ ಇರಲಿಲ್ಲ. ಆ ಮಾರ್ಗವನ್ನು ಬಿಟ್ಟು ಪತಿಯ ಎತ್ತರ, ಬಣ್ಣಗಳಿಗೆ ಹೋಲುವ ವ್ಯಕ್ತಿಯನ್ನು ಆರಿಸಿ

ಆತನಿಂದ ಮಾತ್ರವೇ ವೀರ್ಯವನ್ನು ಸ್ವೀಕರಿಸಿ ಬಳಸಲು ಪ್ರಾರಂಭಿಸಿದರು. ಇದರಿಂದ ಹುಟ್ಟುವ ಮಗುವಿಗೆ ತಾಯಿ-ತಂದೆಗಳ ಹೋಲಿಕೆ ಇದೆ ಎಂಬ ತೃಪ್ತಿ ದಂಪತಿಗಳಿಗೆ ದೊರೆಯುವುದು ಸಾಧ್ಯವಿತ್ತು.

''ಭಾರತದೇಶದಲ್ಲಿ ಈ ರೀತಿಯ ಕೃತಕ ಗರ್ಭಧಾರಣೆಯ ಬಗ್ಗೆ ಪ್ರಜೆಗಳಲ್ಲಿ ಸೂಕ್ತವಾದ ವಿಶಾಲ ನೋಟವನ್ನು ಮೂಡಿಸಿದವರು ಡಾಕ್ಟರ್ ಹರಿಹರರಾವ್. ಗಂಡನಿಂದ ತನಗೆ ಸಂತಾನ ದೊರೆಯದೆಂದು ತಿಳಿದು ಮಾನಸಿಕವಾಗಿ ಕುಸಿಯುವ ಸ್ತ್ರೀಯರು ರಹಸ್ಯವಾಗಿ ಪರ ಪುರುಷನ ಸಂಪರ್ಕಕ್ಕೆ ಸಿದ್ಧವಾಗುವಂತಹ ಪರಿಸ್ಥಿತಿಗೆ ಬಲಿಯಾಗುವ ಪರಿಸ್ಥಿತಿ ಇದರಿಂದ ದೂರವಾಗುತ್ತದೆ. ಈ ಎಲ್ಲಾ ಕೃತಿಗಳಿಗೂ ಇದೇ ಪರಿಹಾರವೆಂದು ನಂಬಿದ ಡಾಕ್ಟರ್ ಅವರು. ಈ ದಿನ ಕ್ಲಿನಿಕ್‌ಗೆ ಅವರ ಹೆಸರು ಇಟ್ಟಿರುವುದು ತುಂಬಾ ಸಂತೋಷ ಸಂಗತಿ ಅವರ ಪೂರ್ಣಾಕಾರ ವಿಗ್ರಹದ ಉದ್ಘಾಟನೆಯೊಂದಿಗೆ ಈ ಇನ್‌ಸ್ಟಿಟ್ಯೂಟ್ ಪ್ರಾರಂಭವಾಗುತ್ತದೆ''

ಡಾ. ವಂಶೀಕೃಷ್ಣ ಈ ಇರೀತಿ ಹೇಳುತ್ತಲೇ ಅಧ್ಯಕ್ಷರು ಗುಂಡಿಯನ್ನು ಒತ್ತಿದರು. ವಿಗ್ರಹದ ಮುಂದೆ ಹಾಕಿದ್ದ ತೆರೆ ಸ್ವಲ್ಪ ಸ್ವಲ್ಪವಾಗಿ ಸರಿಯಿತು.

ಚಪ್ಪಾಳೆ.

ಡಾ. ವಂಶೀಕೃಷ್ಣ ತನ್ನ ಭಾಷಣವನ್ನು ಹೀಗೆ ಮುಕ್ತಾಯ ಮಾಡಿದ:

''ನಮ್ಮ ಭಾರತದಲ್ಲಿ ಮನುಷ್ಯರಿಗೆ ನೈತಿಕ ಮೌಲ್ಯದ ಬಗ್ಗೆ ಹೆಚ್ಚು ನಂಬಿಕೆ ಎಂದರೆಕ್ಷ ಆ ಮೌಲ್ಯಕ್ಕೆ ಗೌರವ ಕೊಡುತ್ತಾರೆ ಎಂದಲ್ಲ ಮಾಡುವ ಎಲ್ಲಾ ನೀಚಕೆಲಸಗಳನ್ನೂ ಮಾಡುತ್ತಾರೆ. ಆದರೆ ಅದಕ್ಕೇ ನೈತಿಕ ಮೌಲ್ಯದ ಮುಸುಕು ತೊಡಿಸುತ್ತಾರೆ (ಸಭೆಯಲ್ಲಿ ನಗು) ನಮ್ಮ ದೇಶದಲ್ಲಿ ಕೃತ್ರಿಮಗರ್ಭಧಾರಣಲಗೆ ಸಂಬಂಧಿಸಿದಂತೆ ಪ್ರತ್ಯೇಕವಾದ ನ್ಯಾಯ ನಿಬಂಧನೆಗಿಳಲ್ಲ. ಆದರೆ ಭಗವಾನ್ ವರ್ಸಸ್ ಮಹೇಶ್ ಕೇಸಿನಲ್ಲಿ ಕೋರ್ಟ್ ತೀರಾ ಭಯಂಕರವಾದ ತೀರ್ಪು ಕೊಟ್ಟಿದೆ. ಗಂಡನಿಗೆ ಬಂಜೆತನ ಇದ್ದೂ, ಆತನ ಅನುಮತಿಯಿಂದಲೇ ಹೆಂಡತಿಯಾದವಳು ಕೃತ್ರಿಯ ಗರ್ಭಧಾರಣೆ ಪದ್ದತಿಯಲ್ಲಿ ಮಗನನ್ನು ಪಡೆದರೆ ಆ ಮಗು. ಅಕ್ರಮ ಸಂತಾನವೆಂದು ತೀರ್ಮಾನಿಸಲಾಗಿದೆ. ಅಷ್ಟು ಮಾತ್ರವೇ ಅಲ್ಲ ಎ ಐ ಹೆಚ್ ರೀತಿಯಲ್ಲೂ ಕೃತಕ ಗರ್ಭಧಾರಣೆಯಿಂದ ಜನಿಸಿದ ಮಗುವೂ ಅಕ್ರಮ ಸಂತಾನವೆಂದು ಕೋರ್ಟು ತೀರ್ಮಾನ ಮಾಡಿದೆ! ಈ ರೀತಿಯ ಅನ್ಯಾಯವನ್ನು ವಿರೋಧಿಸುತ್ತಾ ಎಲ್ಲಾ ಡಾಕ್ಟರುಗಳೂ ಹೋರಾಡಬೇಕು. ಆ ರೀತಿ ಹೋರಾಡಿದ ವ್ಯಕ್ತಿ ಡಾ. ಹರಿಹರರಾವ್. ಒಬ್ಬನಲ್ಲಿ ಯಾವುದೋ ಅಂಗ ವೈಕಲ್ಯವನ್ನು ದೇವರು ಏರ್ಪಡಿಸಿದರೆಂದು ಅದನ್ನೇ ಸ್ಮರಿಸುತ್ತಾ ಬಾಳೆಲ್ಲಾ ನರಕವೆಂದು ಗೋಳಾಡುವ ಅವಶ್ಯಕತೆ ಇಲ್ಲ. ಇರುವುದರಲ್ಲೇ ಸಂತೃಪ್ತಿ ಕಂಡುಕೊಳ್ಳುವುದು ಸಾಧ್ಯವೆಂಬುದು ಅವರು

ತೋರಿಸಿಕೊಟ್ಟಿದ್ದಾರೆ. ಅವರ ಸಾವು ಭಾರತದೇಶಕ್ಕೆ ಮಾತ್ರವಲ್ಲ ವಿಶ್ವದ ತಳಿಶಾಸ್ತ್ರಕ್ಕೇ ದೊಡ್ಡ ನಷ್ಟ. ಅವರ ಸ್ಮರಣೆಯಲ್ಲಿ ಎರಡು ನಿಮಿಷಗಳು ಮೌನವಾಗಿ ನಿಂತು ಅವನ ಆತ್ಮಕ್ಕೆ ಶಾಂತಿಯನ್ನು ಕೋರೋಣ. ಇದರೊಂದಿಗೆ ಇಂದಿನ ಸಭೆ ಮುಗಿಯುತ್ತದೆ''

ಸಭಿಕರೆಲ್ಲರೂ ಎದ್ದು ನಿಂತರು.

ಡಾ. ವಂಶೀಕೃಷ್ಣ ವೇದಿಕೆಯಿಂದ ಇಳಿದು ಇತರ ಡಾಕ್ಟರ್‌ಗಳೊಂದಿಗೆ ಮಾತನಾಡುತ್ತಿದ್ದ. ಎಲ್ಲರೂ ಟೀ ಕುಡಿಯುತ್ತಾ ಮಾತು ಸಾಗಿಸಿದ್ದರು. ಅದುವರೆವಿಗೂ ಸಭೆಯಲ್ಲಿ ಕೊನೆಯ ಸಾಲಿಂಲ್ಲಿ ಕುಳಿತಿದ್ದ ಒಬ್ಬ ವ್ಯಕ್ತಿ ಬಂದು ''ನನಗೆ ಕೆಲವು ಅನುಮಾನಗಳಿವೆ. ಆ ಬಗ್ಗೆ ನಿಮ್ಮನ್ನು ಕೇಳಬೇಕೆಂದುಕೊಂಡಿದ್ದೇನೆ...'' ಎಂದಿತು.

ಡಾ. ವಂಶೀಕೃಷ್ಣ ಕಿರುನಗೆಯಿಂದ ''ಖಂಡಿತವಾಗಿಯೂ ಕೇಳಿ...'' ಎಂದ.

''ಈಗ ಸಾಧ್ಯವಾಗದು ಎನಿಸುತ್ತದೆ. ಇನ್ನೂ ಎರಡು-ಮೂರು ದಿನಗಳಿರುತ್ತೀರಲ್ಲಾ. ಅಷ್ಟರಲ್ಲಿ ಒಂದು ದಿನ ನಮ್ಮಲ್ಲಿಗೆ ಡಿನ್ನರ್‌ಗೆ ಬಂದರೆ ಎಲ್ಲವನ್ನೂ ವಿವರವಾಗಿ ಮಾತನಾಡಿಕೊಳ್ಳಬಹುದು''

''ನೀವು?''

''ತಾವು ಇದುವರೆವಿಗೂ ಮಾತನಾಡಿದ ಡಾಕ್ಟರ್ ಹರಿಹರಿರಾವ್ ಅವರ ಮಗ ನಾನು''

ವಂಶೀಕೂಷ್ಣ ದಿಗ್ಭ್ರಾಂತನಾದಂತೆ ಆತನತ್ತ ನೋಡುತ್ತಾ ''ಇಷ್ಟೊಂದು ದೊಡ್ಡ ಫಂಕ್ಷನ್ ನಿಮ್ಮ ತಂದೆಯವರ ನೆನಪಿನಲ್ಲಿ ನಡೆಯುತ್ತಿದ್ದರೆ ನೀವು ವೇದಿಕೆಗೂ ಬರದೆ ಹಿಂದಿನ ಸಾಲುಗಳಲ್ಲಿ ಕುಳಿತಿದ್ದೀರಲ್ಲಾ!'' ಎಂ.. ಆತನ ಕಣ್ಣಲ್ಲಿ ವಿಸ್ಮಯವಿತ್ತು.

''ಕೃತಕ ಗರ್ಭಧಾರಣೆಯ ವಿರೋಧಿ ನಾನು. ಆದ್ದರಿಂದ ವೇದಿಕೆಗೆ ಬರಲು ನನಗೆ ಇಷ್ಟವಿರಲಿಲ್ಲ. ನಮ್ಮ ತಂದೆಯವರು ಸಾಯುವ ಮೊದಲಿನ ಕೆಲವು ದಿನಗಳನ್ನು ಹರಿದ್ವಾರ, ಹೃಷಿಕೇಶಗಳಲ್ಲಿಯೇ ಕಳೆದರು. ಕೊನೆಗೆ ಅಲ್ಲೇ ಸತ್ತರು''

''ಅದು ನನಗೂ ಗೊತ್ತು'' ಎನ್ನುತ್ತಾ ಏನೋ ಸ್ಫುರಿಸಿದಂತಾಗಿ ''ಅಂದರೆ ಅವರು ತಮ್ಮ ತರ್ಕದಲ್ಲಿರುವ ತಪ್ಪನ್ನು ಕೊನೆಗಾಲದಲ್ಲಿ ಗುರ್ತಿಸಿ ವೇದಾಂತವನ್ನು ಸ್ವೀಕರಿಸಿದರೆಂದು ಹೇಳುತ್ತಿದ್ದೀರೇನು?''

''ಇಲ್ಲ. ಅವರು ತಮ್ಮ ಬಾಳಿನಲ್ಲಿಯೇ ಯಾರೂ ಊಹಿಸಲಾರದಷ್ಟು ಬಲವಾದ ಪೆಟ್ಟು ತಿಂದಿದ್ದಾರೆ. ವಿವರಗಳನ್ನು ಕೇಳಬೇಡಿ. ಅವು ನಮ್ಮ ಕೌಟುಂಬಿಕ ರಹಸ್ಯಗಳು...''

''ಸಾರಿ, ನೀವು ವಿವರಗಳನ್ನು ಹೇಳಬೇಕಾಗಿಲ್ಲ''

''ನಾನು. ಡಾ. ಹರಿಹರರಾವ್ ಅವರ ಮಗನೆಂಬುದು ಇಲ್ಲಿಯ ಬಹುಮಂದಿಗೆ ಗೊತ್ತಿಲ್ಲ. ಇಲ್ಲಿ ಈ ಇರತಿ ವಿಗ್ರಹದ ಉದ್ಘಾಟನೆ ಎಂಬುದು ನನಗೂ ಗೊತ್ತಿರಲಿಲ್ಲ. ಈ ವಿಷಯ ನನ್ನ ತಂದೆಗೂ ಸಮ್ಮತವಾಗುತ್ತಿರಲಿಲ್ಲ ಎನಿಸುತ್ತದೆ''

"ಆವೇಶ ಬೇಡ..."

"ಅಂತಹುದೇನೂ ಇಲ್ಲ. ನನಗೂ ಇದು ಇಷ್ಟವಾಗದು ಎಂದು ಮಾತ್ರವೇ ಹೇಳಿದೆ. ನಮ್ಮ ಮನೆಗೆ ಡಿನ್ನರ್‌ಗೆ ಯಾವಾಗ ಬರುತ್ತೀರಿ? ಈ ಸಂಗತಿಯಲ್ಲ ಬೇರೊಂದು ಮುಖ್ಯ ಸಂಗಿತಯನ್ನು ತಮ್ಮೊಡನೆ ಚರ್ಚಿಸಬೇಕು. ನನ್ನೊಂದಿಗೆ ನಾಲ್ಕು ಗಂಟೆಗಳು ಕಳೆಯಲು ಸಾಧ್ಯವಾಗುವಂತೆ ಅವಕಾಶ ಮಾಡಿಕೊಂಡು ಬನ್ನಿ"

"ಖಂಡಿತವಾಗಿಯೂ ಬರುತ್ತೇನೆ ನೀವು ಡಾ. ಹರಿಹರರಾವ್ ಅವರ ಮಗನಾದ್ದರಿಂದ ನಿಮ್ಮ ಬಗ್ಗೆ ತುಂಬಾ ವಿಶ್ವಾಸವಿದೆ. ನಿಮ್ಮ ಮನೆ ಎಲ್ಲಿ?"

"ಇಲ್ಲಿಲ್ಲ; ಇಲ್ಲಿಗೆ ಇಪ್ಪತ್ತು ಮೈಲಿ ದೂರವಿದೆ. ಕಾರಿನಲ್ಲಿ ಹೋಗಿಬರಬೇಕು"

"ಹೋಗೋಣ. ನೀವು ಸೆಮಿನಾರ್‌ಗೆ ಬಂದಿದ್ದೀರಿ ಎಂದ ಮೇಲೆ ನೀವೂ ಡಾಕ್ಟರ್ ಆಗಿರಬೇಕು"

"ಹೌದು ಡಾಕ್ಟರೇ"

ವಂಶೀಕೃಷ್ಣ ನಗುತ್ತಾ "ಇಷ್ಟು ಹೊತ್ತಿನಿಂದ ಮಾತನಾಡುತ್ತ ಇದ್ದೇವೆ. ನಿಮ್ಮ ಹೆಸರೇನೋ ನಾನು ಕೇಳಲೇ ಇಲ್ಲ!" ಎಂದ.

"ನನ್ನ ಹೆಸರು ಡಾಕ್ಟರ್ ರಂಗಪ್ರಸಾದ್"

★★★

"ಗೌರಿ ಅಳು...ಪ್ಲೀಸ್ ಅಳು"

ಅವಳು ಶಿಲಾ ಪ್ರತಿಮೆಯಂತಿದ್ದಳು. ನೋಟ ಶೂನ್ಯದಲ್ಲಿತ್ತು. ಕಣ್ಣು ಗಾಜಿನುಂಡೆಯಂತಿತ್ತು. ಮೂರು ದಿನಗಳಿಂದಲೂ ಹಾಗೇ ಇದ್ದಳು. ದುಃಖವಿಲ್ಲ; ವೇದನೆಯಿಲ್ಲ. ಇವೆಲ್ಲವನ್ನೂ ಮೀರಿಸುವ ತೀರಾ ದೊಡ್ಡ ಷಾಕ್‌ನಲ್ಲಿದ್ದಳು.

ತಂದೆಯ ಮರಣದ ಬೆಳಗ್ಗೆ ಹತ್ತುಗಂಟೆಗಷ್ಟೆ ಗೊತ್ತಾಯಿತು. ಆ ಸಮಯಕ್ಕೆ ಸಿದ್ಧಾರ್ಥನ ಮನೆಯಲ್ಲಿದ್ದ ಹುಡುಗರಿಗೆ ಊಟಕ್ಕೆ ಸಿದ್ಧಮಾಡುತ್ತಿದ್ದಳು. ನಗರದಿಂದ ಯಾರೋ ಬಂದಿದ್ದಾರೆಂದು ಹೊರಗೆ ಬಂದಳು. ತುಂಬಾ ದಿನಗಳಿಂದ ತನ್ನ ತಂದೆಯ ಮನೆಯಲ್ಲಿ ಕೆಲಸ ಮಾಡುತ್ತಿದ್ದ ಸೇವಕ. ಸಿದ್ಧಾರ್ಥ ಆತನೊಂದಿಗೆ ಮಾತನಾಡುತ್ತಿದ್ದ.

ಸಿದ್ಧಾರ್ಥ ಆ ಸುದ್ದಿಯನ್ನು ಹೇಗೆ ಕೇಳುತ್ತಿದ್ದನೋ ಆದರೆ ಕೇದಾರಗೌರಿಯನ್ನು ಕಂಡ ಆ ಸೇವಕ "ಯಜಮಾನರು ಹೋದ್ರು ತಾಯಿ" ಎಂದು ಕಣ್ಣೀರಿಟ್ಟ.

ಆಕೆಗೆ ಅದು ಅರ್ಥವಾಯಿತೋ ಇಲ್ಲವೋ ಹಾಗೇ ನಿಂತಳು. ಬಳಿಗೆ ಬಂದು ಸಿದ್ಧಾರ್ಥ ಕರೆದಾಗಲೂ ಉತ್ತರವಿಲ್ಲ. ನಾಲ್ಕಾರು ಬಾರಿ ಕರೆದ ನಂತರ ನೋಸಿದಳು. ಕಣ್ಣಲ್ಲಿ ಜೀವವಿಲ್ಲ. ಅಂದಿನಿಂದ ಇಂದಿನವರೆಗೂ ಆಕೆ ಹಾಗೇ ಇದ್ದಾಳೆ. ಆಕೆಯ ಪುಟ್ಟ ಪ್ರಪಂಚದಲ್ಲಿ ಇದ್ದ ಒಬ್ಬನೇ ಸ್ನೇಹಿತ; ಮಾರ್ಗದರ್ಶಿ, ತಂದೆ. ಆತನ ಸಾವು ಆಕೆಯ ಮೇಲೆ ಎಂತಹ ಪ್ರಭಾವ ಬೀರಬಲ್ಲದೆಂಬುದನ್ನು ಊಹಿಸಬಲ್ಲ. ಮೌನವಾಗಿ

ಈ ಸುದ್ದಿ ಕೇಳಿ ಹಾಗೆ ಉಳಿದದ್ದು, ಆ ಕ್ಷಣದಲ್ಲಿ ಆಚ್ಚರಿ ಎನಿಸಿದ್ದರೂ ಈಗ ಅರ್ಥವಾಗಿತ್ತು ಸಾಧಾರಣದುಃಖ, ನೋವುಗಳಿಗೆ ಅತೀತವಾದ ವ್ಯಥೆಯಲ್ಲಿ ಆಕೆ ಇರುವಳು ಎಂಬುದು.

ಆಕೆಯನ್ನು ಸಾಧಾರಣ ವ್ಯಕ್ತಿಯನ್ನಾಗಿ ಮಾಡಲು ಮಾಡಿದ ಪ್ರಯತ್ನಗಳು ಫಲ ಕೊಡಲಿಲ್ಲ.

ಇವರು ಹೋಗುವ ವೇಳೆಗೆ ಶವವನ್ನು ಸ್ಮಶಾನಕ್ಕೆ ಸಾಗಿಸಲು ಸಿದ್ಧತೆ ನಡೆದಿತ್ತು. ಬದುಕಿದ್ದಾಗ ಇದ್ದಷ್ಟೇ ಗಾಂಭೀರ್ಯ, ಘನತೆಗಳು ಸತ್ತಿದ್ದಾಗಲೂ ಭವಾನಿಶಂಕರ್ ಮುಖದಲ್ಲಿ ಕಾಣುತ್ತಿತ್ತು.

ಕೇದಾರಗೌರಿ ನಿಶ್ಚಲವಾಗಿ ನಿಂತು ಆತನನ್ನೇ ನೋಡುತ್ತಿದ್ದಳು. ತಲೆಯ ಕಡೆಯಿಂದ ಬರುತ್ತಿದ್ದ ಹೊಣೆಯನ್ನು, ಮಣ್ಣಿನ ಮುದ್ದೆಯಂತಿದ್ದ ತನ್ನ ಬಾಳನ್ನು ಸುಂದರವಾದ ಗೊಂಬೆಯಂತೆ ರೂಪಿಸಿದ ಆತನ ಕೈಗಳನ್ನೂ, ತನ್ನ ವ್ಯಕ್ತಿತ್ವವನ್ನು ನಿರ್ಮಿಸಿಕೊಳ್ಳಲು ನೆರವಾದ ಆ ಬಲರಳುಗಳನ್ನು ನೋಡುತ್ತಿದ್ದಳು. ಯಾರೋ ಅಳುತ್ತಿದ್ದರು. ನಿರ್ವಿಕಾರವಾದ ನೋಟ ಅವರತ್ತ ಬೀರಿದಳು. ನೋವನ್ನು ಹೊರಸೂಸಲು ಕಣ್ಣೀರಿರೊಂದೇ ಮಾರ್ಗವಾಗಿರುವ ಇವರೆಲ್ಲಾ ಎಷ್ಟು ಅದೃಷ್ಟವಂತರು! ನಾಲ್ಕು ದಿನ ಕಣ್ಣೀರು ಸುರಿಸಿ ಐದನೆಯದಿನ ಎಲ್ಲವನ್ನೂ ಮರೆಯುತ್ತಾರೆ. ಆದರೆ ತಾನು?

ದೂರದಿಂದ ಆಕೆಯನ್ನೇ ಗಮನಿಸುತ್ತಿದ್ದ ಸಿದ್ಧಾರ್ಥ ಚಿಂತಾಕ್ರಾಂತನಾದ. ಏಕಾಂಗಿಯಾಗಿದ್ದರೆ ಆಕೆ ಸರಿಯಾಗಬಹುದೆಂದು ಭಾವಿಸಿದ. ಆದರೆ ಅವಳಲ್ಲಿ ಯಾವ ಪ್ರತಿಕ್ರಿಯೆಯೂ ಕಾಣದೆ ಹೋದದ್ದು ಅವನಲ್ಲಿ ಭಯವನ್ನು ಮೂಡಿಸಿತು.

ಹೊರಗೆ ಇನ್ಸ್‌ಪೆಕ್ಟರ್ ಮಾತನಾಡುತ್ತಿದ್ದರು. ಬಾತ್‌ರೂಂನಿಂದ ಬಹಳ ಹೇತ್ತಾದರೂ ಹೊರಗೆ ಬರೆದಿದ್ದುದರಿಂದ ಬಾಗಿಲು ಒಡೆದು ನೋಡಿದರೆ ರಕ್ತದ ಮಡುವಿನಲ್ಲಿ ಭವಾನಿಶಂಕರ್ ಬಿದ್ದಿದ್ದರು. ಕಾಲುಜಾರಿ ಬಿದ್ದಿದ್ದರಿಂದ ಕ್ಲೀನರ್‌ನ ಹಿಡಿಯಲ್ಲಿದ್ದ ಮೊನಚಾದ ಕಂಬಿ ಎದೆಗೆ ಚುಚ್ಚಿಕೊಂಡಿದೆ- ಇದು ಅಲ್ಲಿಯವರ ಮಾತು.

ಇನ್ಸ್‌ಪೆಕ್ಟರ್ ಉಳಿದ ಇಬ್ಬರಿಂದಲೂ ಹೇಳಿಕೆಗಳನ್ನು ಪಡೆದು ಹೋದರು. ಅವರಿಬ್ಬರೂ ಒಂದೇ ರೀತಿಯಲ್ಲಿ ಹೇಳಿಕಲಗಳನ್ನು ಯಾವ ಭಾಗಗಳಿಗೂ ತುತ್ತಾಗದೆ ಕೊಟ್ಟಿದ್ದರು. ಬ್ಲಾಕ್ ಸ್ಕೆಲಿಟನ್‌ಗಳು ಎಂದೂ ಭಾವಗಳಿಗೆ ತುತ್ತಾಗುವುದಿಲ್ಲ.

ಇನ್ಸ್‌ಪೆಕ್ಟರ್ ಹೋಗುವ ಮೊದಲು ಸಿದ್ಧಾರ್ಥನನ್ನು ಒಂದೆರಡು ಪ್ರಶ್ನೆಗಳನ್ನು ಕೇಳಿದರು. ಅನ್ಯ ಮನಸ್ಕನಾಗಿ ಉತ್ತರಿಸಿದ ಸಿದ್ಧಾರ್ಥ. ಅವನ ಮನಸ್ಸೆಲ್ಲಾ ಕೇದಾರಗೌರಿಯ ಬಗ್ಗೆಯೇ ತುಂಬಿತ್ತು.

ಒಂದು ದಿನದ ನಂತರ ಅವನಿಗೆ ಒಂದು ಸಂಗತಿ ಗೊತ್ತಾಯಿತು. ಯಾರೂ

ಕೇದಾರಗೌರಿಯನ್ನು ಈ ವಾತಾವರಣದಲ್ಲಿ ಇರಿಸಿದರೆ ಅವಳು ಬದಲಾಗುವುದಿಲ್ಲ ಹೀಗೆ ಮುಂದುವರಿದರೆ ಖಂಡಿತವಾಗಿಯೂ ಅವಳು ಹಿಸ್ಟೀರಿಯಾಕ್ಕೆ ತುತ್ತಾಗುತ್ತಾಳೆ.

ಅಂದೇ ಆಕೆಯನ್ನು ಕರೆದುಕೊಂಡು ಹಳ್ಳಿಗೆ ಬಂದ. ಇತರ ಎಲ್ಲಾ ಕೆಲಸಗಳನ್ನೂ ಬದಿಗೊತ್ತಿ ಅವಳೊಂದಿಗೇ ಇರುತ್ತಿದ್ದ. ಅವಳು ಮೊದಲಿನಂತೆ ಆಗಲು ಸಂಪೂರ್ಣವಾಗಿ ಪ್ರಯತ್ನಿಸುತ್ತಿದ್ದ. ಆದರೂ ಆಕೆ ಬದಲಾಗಲಿಲ್ಲ. ಕಲ್ಲುಗೊಂಬೆಯಂತೆ ತದ್ದಳು. ಅವನಲ್ಲಿ ಆಂದೋಲನ ಹೆಚ್ಚಾಯಿತು. ಇದೇ ಪರಿಸ್ಥಿತಿ ಮುಂದುವರಿದರೆ ಆಕೆಯೂ ದಕ್ಕದೆ ಹೋಗಬಹುದು ಎಂಬ ಅನುಮಾನವೂ ಬಂತು.

ಮೂರನೆಯ ದಿನ ಸಂಜೆವಾಕಿಂಗ್‌ಗಾಗಿ ಆಕೆಯನ್ನು ಕರೆದುಕೊಂಡು ಹೊರಟ. ಏನೊಂದೂ ಹೇಳದೆ ಆಕೆಯೂ ಅವನ ಹಿಂದೆ ಬಂದಳು. ಇಬ್ಬರೂ ಊರಿಂದ ಹೇರಕ್ಕೆ ಬಂದರು.

ಸಂಜೆಯಾಗಿತ್ತು. ಗೋವುಗಳು ಮನೆಗೆ ಹಿಂತಿರುಗುತ್ತಿದ್ದವು. ಮತ್ತೆ ಅರ್ಧಗಂಟೆಯಲ್ಲಿ ಕತ್ತಲಾವರಿಸಿತು. ಗದ್ದೆಯ ಮಧ್ಯೆ ಬಾವಿಯ ಪಕ್ಕದಲ್ಲಿಯ ಕಲ್ಲಿನಮೇಲೆ ಕುಳಿತರು. ಚಂದ್ರನ ಬೆಳಕು ಅವಳ ಮುಖದ ಬೀಳುತ್ತಿತ್ತು. ''ಅಳು ಗೌರಿ...ಅತ್ತು ಎದೆಯಲ್ಲಿ ತುಂಬಿರುವ ಅಳುವನ್ನೆಲ್ಲಾ ಕಳೆದುಕೋ...'' ಎಂದ ಸಿದ್ಧಾರ್ಥ.

ಅವಳು ಮಾತನಾಡಲಿಲ್ಲ.

ಅವಳ ಕೈಯನ್ನು ತನ್ನ ಕೈಯಲ್ಲಿ ತೆಗೆದುಕೊಂಡು ಪ್ರೇಮದಿಂದ ನೇವರಿಸುತ್ತಾ ''ನಿನ್ನ ನೋವು ನನಗೆ ಗೊತ್ತು ಗೌರಿ...ನಾನು ಅರ್ಥಮಾಡಿಕೊಳ್ಳಬಲ್ಲೆ...ಆದರೆ ನೀನು ಹೀಗಿದ್ದರೆ ನಮಗೆಲ್ಲಾ ಎಷ್ಟು ನೋವುಂಟುಮಾಡುವುದೋ ನೀನು ತಿಳಿಯಬೇಕು. ಅಮ್ಮನೂ ತುಂಬಾ ಭಯಗೊಂಡಿದ್ದಾಳೆ''

ಆಕೆ ಮಾತನಡಲಿಲ್ಲ.

ಒಂದು ಮೋಡ ಚಂದ್ರನಿಗೆ ಮರೆಯಾಗಿ ಬಂತು. ಆ ಕತ್ತಲಲ್ಲಿ ತಲೆ ತಗ್ಗಿಸಿಕೊಂಡು ಮಲಡಿಲಲ್ಲಿ ಕೈಕಟ್ಟಿಕೊಂಡು ಕುಳಿತಿದ್ದ ಆಕೆಯನ್ನು ನೋಡುತ್ತಿದ್ದರೆ ಅವನಲ್ಲಿ ಉಕ್ಕುತ್ತಿತ್ತು. ವಿಶಾಲವಾದ ಮೈದಾನದಲ್ಲಿ ದಾರಿಯನ್ನು ಹುಡುಕಿ ಹುಡುಕಿ ಕಾಣದಂತೆ ಕಣ್ಣೀರು ತುಂಬಿಕೊಂಡು ಕುಳಿತಿದ್ದ ಚಿಕ್ಕ ಮಗುವಿನ ನೆನಪಾಗುತ್ತಿತ್ತು. ಬಹುಮಂದಿ ಗಂಡಸರಂತೆ ಅವನಿಗೆ ತನ್ನ ಪ್ರೇಮ ವ್ಯಕ್ತಪಡಿಸುವ ರೀತಿ ಗೊತ್ತಿಲ್ಲ. ಆ ಭಾಷೆಯೂ ಅಷ್ಟಾಗಿ ಗೊತ್ತಿಲ್ಲ. ಆದರೆ ಪ್ರೇಮದಲ್ಲಿ ಸತ್ಯವಿದ್ದಾಗ ಅದಕ್ಕೆ ಭಾಷೆಯ ನೆರವಾಗಲಿ, ಮಾತುಗಳ ಆಶ್ರಯವಾಗಲಿ ಬೇಕಾಗಿಲ್ಲ. ಅವನು ವಿಶ್ವಾಸದಿಂದ ಅವಳ ಕೈಗಳನ್ನು ತನ್ನ ಕೈಯಲ್ಲಿರಿಸಿಕೊಂಡು ಹೇಳಿದ:

''ಗೌರೀ, ನಾನು ನಿನ್ನಂತೆ ಎಳೆತನದಿಂದಲೂ ಒಂಟಿಯಾಗಿಯೇ ಇದ್ದವನು.

ಹತ್ತಿರ ಸೇರಿಸುತ್ತಿರಲಿಲ್ಲ. ಇದಕ್ಕೆ ಅಮ್ಮನೊಬ್ಬಳು ಮಾತ್ರ ವಿನಾಯಿತಿ! ಆದ್ದರಿಂದ ನಿನ್ನ ಈಗಿನ ನೋವು ನನಗೆ ಅರ್ಥವಾಗುತ್ತದೆ. ನಾವಿಬ್ಬರೂ ಅಂದವಿಲ್ಲದವರೇ; ಇಬ್ಬರೂ ಸೌದರ್ಯ ಪ್ರಪಂಚಕ್ಕೆ ಬೇಡದವರೇ. ಯಾರಾದರೂ ಸ್ವಲ್ಪ ಆತ್ಮೀಯತೆಯನ್ನು ತೋರಿದರೂ ಸಾಕು ಹೇಗೆ ಕರಗುತ್ತಿದ್ದೆವೋ ನನಗೆ ಗೊತ್ತು. ಅದನ್ನು ನಿನಗೆ ತೋರಿಸಿದವರು ನಿನ್ನ ತಂದೆ. ಅವರು ಇಲ್ಲವೆಂದರೆ ಎಂಥ ಶೂನ್ಯವೇರ್ಪಡುವುದೋ ನಾನು ಅರ್ಥಮಾಡಿಕೊಳ್ಳಬಲ್ಲೆ. ಆದರೆ ಈ ಕಾರಣದಿಂದ ನೀನು ನನ್ನಿಂದ ದೂರವಾದರೆ ನಾನು ಸಹಿಸಲಾರೆ. ಇದೆಲ್ಲವನ್ನು ನಾನು ನಿನಗೆ ಹೇಗೆ ವಿವರಿಸಲಿ?...ನಾನು ಬುದ್ಧಿವಂತನಲ್ಲ. ನಿಮ್ಮ ತಂದೆಯವರಂತೆ ಅಪಾರ ಅನುಭವದಿಂದ ನಿನ್ನ ಜೀವನದಲ್ಲಿ ಮಾರ್ಗದರ್ಶಿಯಾಗುವುದು ಸಾಧ್ಯವಿಲ್ಲ. ಆದರೆ ನನ್ನಿಂದ ಸಾಧ್ಯವಿರುವಷ್ಟೂ ನಿನಗೆ ಯಾವುದರ ಕೊರತೆಯೂ ಉಂಟಾಗದಂತೆ ನೋಡಿಕೊಳ್ಳುತ್ತೇನೆ ಎಂದು ನಂಬಿಕೆ ಬರುವಂತೆ ಹೇಗೆ ಹೇಳಲಿ ಗೌರಿ...ಈ ಕೈಗಳು ಅಂದವಾಗಿರುವವೇನೂ ಅಲ್ಲ. ಆದರೆ ನಿನ್ನ ರಕಣೆಗೆ, ನಿನ್ನನ್ನು ಕೋಟೆಯಂತೆ ಆವರಿಸಿ ಕಾಪಾಡಲು, ಈ ಜಗತ್ತಿನಲ್ಲಿ ಯುವುದರ ವಿರುದ್ಧವೇ ಆಗಲಿ ಹೋರಾಡಲು ಇವೆಷ್ಟು ಬಲವಾಗಿವೆಯೋ ನೋಡು. ನೀನು ಅಸಹಾಯಕಳು ಎಂಬುದು ಕನಸಿನಲ್ಲೂ ಭಾವಿಸಬೇಡ ಅದೇ ನನಗೆ ಬೇಕಾದ್ದು. ನನ್ನನ್ನು ನಂಬು...ಪ್ಲೀಜ್...ನಂಬು...''

ಆಗ ಅವಳಲ್ಲಿ ಕಣ್ಣೀರು ಉಕ್ಕಿತು.

ಅಣೆಕಟ್ಟು ಸಡಿಲಗೊಳ್ಳುತ್ತಲೇ ನರಿಯ ಪ್ರವಾಹ ಸುರಳಿ ಸುತ್ತುತ್ತಾ ಹರಿಯುವಂತೆ ಅದುವರೆವಿಗೂ ಸಂಗ್ರಹಗೊಂಡಿದ್ದ ಅಳು ಕಣ್ಣೀರಾಗಿ ಹರಿಯತೊಡಗಿತು. ಅವನ ಅಂಗೈಗಳಲ್ಲಿ ತನ್ನ ಮುಖ ಮುಚ್ಚಿಕೊಂಡು ಬಿಕ್ಕಿ ಬಿಕ್ಕಿ ಅತ್ತಳು. ಅವನು ಸಂತೈಸುವ ಪ್ರಯತ್ನವನ್ನು ಮಾಡಲಿಲ್ಲ. ಅವಳೆಷಊಟ ಹೆಚ್ಚು ಅತ್ತರೆ ಅಷ್ಟು ಒಳ್ಳೆಯದೆಂದು ಅವಳ ಮುಂಗುರಳನ್ನು ನೇವರಿಸುತ್ತಾ ಇದ್ದ. ಅಳು ಬಿಕ್ಕಳಿಕೆಗೆ ಸೀಮಿತವಾಗಿ ''ನಮ್ಮ...ಡ್ಯಾಡಿ ಅಂದ್ರೆ...ಎಷ್ಟು ಇಷ್ಟಾನೋ ನಿಮಗೆ ಗೇತ್ತಿಲ್ಲ...ನನಗೆ...ನನಗೆ..ಅವರೇ...ಗುರು...ದೈವ...ಡ್ಯಾಡೀ...ನಾನೂ...''

ಬಿಕ್ಕಳಿಸಿಕೆಯ ಮಧ್ಯೆ ಮಾತು ಪೂರ್ಣವಾಗಲಿಲ್ಲ.

ಎದೆಯಲ್ಲಿ ಸಣ್ಣ ನೋವಾಗಿದ್ದು ಚುಳುಕಾಗಿ ಮೈಯೆಲ್ಲಾ ವ್ಯಾಪಿಸಿತು. ಅಚೇತನಳಾಗಿ ಅವನ ಮಡಿಲಲ್ಲಿ ಬಿದ್ದಳು. ''ಗೌರೀ...ಗೌರೀ'' ಎಂದು ಕರೆದ. ಚಲನವಿಲ್ಲ.

ಗಾಬರಿಯಿಂದ ಸುತ್ತಲೂ ನೋಡಿದ. ಆಗ್ಗೆ ಕತ್ತಲೇ ಆವರಿಸುತ್ತಿದೆ. ಎಲ್ಲೂ ಮನುಷ್ಯ ಸಂಚಾರವಿಲ್ಲ, ಸುತ್ತಲೂ ತೋಟಗಳು. ದೂರದ ಹಳ್ಳಿಯಲ್ಲಿ ದೀಪಗಳು ಮಿಣಕ್ ಮಿಣಕ್ ಎನ್ನುತ್ತಿವೆ.

ಕಣ್ಣೀರನ್ನು ಮುಖದ ಮೇಲೆ ಮೆಲ್ಲನೆ ಸಿಂಪಡಿಸಿ ಮತ್ತೊಮ್ಮೆ ''ಗೌರಿ...'' ಎಂದು ಕಾಂದ.

ಅಷ್ಟರಲ್ಲಿ ದೂರದಲ್ಲಿ ಎರಡು ದೀಪಗಳು ಕಾಣಿಸಿದುವು ಯಾವುದೋ ಕಾರು ಬರುತ್ತಿತ್ತು. ಸಾಧಾರಣವಾಗಿ ಆ ಹಳ್ಳಿಗೆ ಕಾರುಗಳು ಬರುವುದಿಲ್ಲ. ಬರುತ್ತಿರುವುದು ರಾಕೇಶ್ ಇರಬೇಕು ಎಂದುಕೊಂಡ. ಕೈಎತ್ತಿ ಕಾರು ನಿಲ್ಲಿಸಲು ಸನ್ನೆಮಾಡಿದ. ಆದರೆ ಕಾರಿನಲ್ಲಿ ಇದ್ದದ್ದು ಇಬ್ಬರು ವ್ಯಕ್ತಿಗಳು- ವಂಶೀಕೃಷ್ಣ. ಅವರನ್ನು ಡಿನ್ನರ್‌ಗೆ ಕರೆದುಕೊಂಡು ಡಾಕ್ಟರ್ ರಂಗಪ್ರಸಾದ್ ಬರುತ್ತಿದ್ದರು.

ಸಿದ್ಧಾರ್ಥ ಪರಿಸ್ಥಿತಿ ವಿವರಿಸಿದ. ಇಬ್ಬರು ಡಾಕ್ಟರ್‌ಗಳು ಅತ್ತ ಬಂದರು. ಆ ವೇಳೆಗೆ ಗೌರಿ ಎಚ್ಚರಗೊಂಡಿದ್ದಳು. ಆದರೂ ತೀರಾ ಬಲಹೀನತೆ. ಸಿದ್ಧಾರ್ಥ ಆಕೆಯನ್ನು ತುಂಬಾ ಎಚ್ಚರಿಕೆಯಿಂದ ಕಾರಿನಲ್ಲಿ ಕುಳ್ಳಿರಿಸಿದ. ರಂಗಪ್ರಸಾದ್ ವಂಶೀಕೃಷ್ಣರ ಪರಿಚಯ ಮಾಡಿಸಿದ.

ಹತ್ತು ನಿಮಿಷಗಳಿಗೆ ಡಾ. ರಂಗಪ್ರಸಾದ್ ಅವರ ಕ್ಲಿನಿಕ್ ಸೇರಿದರು. ಇಂಜಕ್ಷನ್ ಕೊಡಲು ಗೌರಿಯನ್ನು ಒಳಕ್ಕೆ ಕರೆದೊಯ್ದರು. ಡಾ. ವಂಶೀಕೃಷ್ಣಮೇಜಿಗೆ ಚಿಕ್ಕ ಬಿಳಿನಾಯಿಯನ್ನು ಕಟ್ಟಿದ್ದರು. ವಂಶೀಕೃಷ್ಣ-ಸಿದ್ಧಾರ್ಥ ಇಬ್ಬರೇ ಉಳಿದರು.

''ಅಳುತ್ತಾ ಇದ್ದಕ್ಕಿದ್ದಂತೆಯೇ ಪ್ರಜ್ಞೆ ತಪ್ಪಿಬಿದ್ದಳು. ಅದೃಷ್ಟವಶಾತ್ ನೀವು ಕಾಣಿಸಿದಿರಿ'' ಎಂದ ಸಿದ್ಧಾರ್ಥ.

''ದುಃಖ ತೀರಾ ಹೆಚ್ಚಾದಾಗ ಹೀಗಾಗುತ್ತೆ ಚಿಂತಿಸಬೇಡಿ...ನೀವೂ ನಮ್ಮೊಂಗೆ ಊಟಕ್ಕೆ ಕುಳಿತುಕೊಳ್ಳಿ'' ಎಂದ ವಂಶೀಕೃಷ್ಣ.

''ನೋ...ಥ್ಯಾಂಕ್ಸ್''

ಅಷ್ಟರಲ್ಲಿ ಡಾಕ್ಟರ್ ಒಳಗಡಲಯಿಂದ ಬರುತ್ತಾ ಕಿರುನಗೆಯೊಂದಿಗೆ ''ಕನ್‌ಗ್ರ್ಯಾಂಟ್ಸ್ ಸಿದ್ಧಾರ್ಥ! ನೀವು ತಂದೆಯಾಗಲಿದ್ದೀರಿ...''

ಸಿದ್ಧಾರ್ಥನಿಗೆ ಒಂದು ನಿಮಿಷ ಏನೂ ಅರ್ಥವಾಗಲಿಲ್ಲ. ಅರ್ಥವಾಗುತ್ತಲೇ ಕೇದಾರಗೌರಿಗಾಗಿ ಒಳಕ್ಕೆ ಬಗ್ಗಿನೋಡಿದ. ಶಾಂತವಾಗಿ ನಡೆದುಬರುತ್ತಿದ್ದಾಳೆ. ಮುಖದ ಮೇಲೆ ಸ್ವಲ್ಪ ನಾಚಿಕೆ ಕಾಣಿಸುತ್ತಿದೆ.

ಆಕೆ ಸಮೀಪಿಸುತ್ತಿದ್ದಂತೆಯೇ ಮೇಜಿಗೆ ಕಟ್ಟಿದ ನಾಯಿ ಚಾವಟಿಯ ಪೆಟ್ಟುತಿಂದಂತೆ ವಿಕಾರವಾಗಿ ಅಳುತ್ತಿದೆ.

ಅದನ್ನು ಯಾರೂ ಗಮನಿಸಲಿಲ್ಲ.

''ತಾವು ಹೋದ ನೋವನ್ನು ಮರೆಯಿಸಲೆಂದೇ ನಿಮ್ಮ ತಂದೆಯೇ ಮತ್ತೆ ಹುಟ್ಟುತ್ತಿದ್ದಾರೇನೋ?'' ಎಂದ ರಂಗಪ್ರಸಾದ್.

ಬಹುದಿನಗಳ ನಂತರ ಆಕೆಯ ತುಟಿಯ ಮೇಲೆ ಕಿರುನಗೆ ಕಾಣಿಸಿಕೊಂಡಿರುವುದು ಸಿದ್ಧಾರ್ಥನಿಗೆ ತೃಪ್ತಿ ನೀಡಿತ್ತು.

''ಥ್ಯಾಂಕ್ಸ್ ಡಾಕ್ಟರ್'' ಎಂದು ಹೇಳಿ ಗೌರಿಯನ್ನು ಹೊರಕ್ಕೆ ಕರೆದೊಯ್ದ. ಮೆಟ್ಟಲಿಳಿಯುತ್ತಾ ಅವಳ ಕೈಹಿಡಿದು ಈಗಲೂ ಹಾಗೆ ಹೋಗುವುದು ಸರಿಯೇ. ಏನೋ ಚಿಂತೆ ಮರುಕಳಿಸಿದ್ದಕ್ಕೆ ಅವನ ಭುಜದ ಮೇಲೆ ತಲೆಇರಿಸಿದ್ದಳು, ಯಾವುದೋ ಅಲೌಕಿಕಾವಸ್ಥೆಯಲ್ಲಿರುವಂತೆ...

ಮೊನ್ನೆಯವರೆಗೂ ಬಾಲೆ. ನಿನ್ನೆ ಮದುವೆಯಾಯಿತು ಈಗಾಗಲೇ ತಾಯಿಯಾಗುವ ಭಾಗ್ಯ ಪಡೆದಿದ್ದಾಳೆ. ಡಾಕ್ಟರ್ ಹೇಳಿದಂತೆ ತನ್ನ ಹೊಟ್ಟೆಯಲ್ಲಿರುವುದು ತನ್ನ ತಂದೆಯೇ- ತನ್ನನ್ನು ತೋಡಿದಷ್ಟೂ, ಅರೆದು ಕಷಾಯಮಾಡಿದಷ್ಟೂ ತನ್ನಲ್ಲಿರುವುದು ತಂದೆ' ಎಂಬ ತೃಪ್ತಿ. ತಾನು ನೀಡಿದ ಪ್ರೇಮವನ್ನೆಲ್ಲಾ ಒಂದಾಗಿ ಶೇಖರಿಸಿ ಮೊಲೆಹಾಲಿನಿಂದಲೇ ವಾಪಸ್ಸು ಕೊಡಬೇಕೆಂಬ ಪ್ರಯತ್ನ. ಈ ಭಾವನೆಯಿಂದ ಆಕೆಯ ಕಣ್ಣಕಾಂತಿ ಏರಿತು. ಗಂಡನಿಗೆ ಮತ್ತಷ್ಟು ಸನಿಹಳಾಗಿ ನಿಂತಳು.

ದಂಪತಿಗಳು ಕತ್ತಲನ್ನು ಭೇದಿಸಿಕೊಂಡು ತಮ್ಮ ಮನೆಯ ಕಡೆ ಅಡಿಇರಿಸಿದರು.

ದೂರದಲ್ಲಿ ನಾಯಿ ಮಾತ್ರ ಭಯಂಕರ ಸ್ವರದಲ್ಲಿ ಊಳಿಡುತ್ತಿದ್ದದ್ದು ಇನ್ನೂ ಕೇಳಿಸುತ್ತಲೇ ಇತ್ತು.

## 17

''ಇನ್ನು ಹೇಳಿ'' ಎಂದು ಕೇಳಿದ ವಂಶೀಕೃಷ್ಣ, ಸಿದ್ಧಾರ್ಥ ಮತ್ತು ಗೌರಿಯವರು ಹೋದ ನಂತರ.

ಊಟ ಮುಗಿಸಿ ಇಬ್ಬರೂ ಹೊರಗಿನ ವರಾಂಡಾದಲ್ಲಿ ಕುರ್ಚಿ ಹಾಕಿಕೊಂಡು ಕುಳಿತಿದ್ದರು. ಬೆಳದಿಂಗಳು ಒಳಕ್ಕೆ ಇಣುಕುಹಾಕುತ್ತಿತ್ತು.

''ಆರ್ಟಿಫಿಷಿಯಲ್ ಇನಾಸೇಮಿನೇಷನ್ (ಕೃತಕ ಗರ್ಭಧಾರಣೆ) ಬಗ್ಗೆ ನನಗಿನ್ನೂ ಅನುಮಾನಗಳು ಹಾಗೇ ಉಳಿದಿವೆ''

ವಂಶೀಕೃಷ್ಣ ನಗುತ್ತಾ ''ನಿಮ್ಮ ತಂದೆಯವರು ಈ ವಿಷಯದಲ್ಲಿ ತುಂಬಾ ಸಂಶೋಧನೆ ನಡಲಸಿದ್ದಾರೆ. ಅಂತಹುದರಲ್ಲಿ ನಿಮಗೆ ಈ ವಿಷಯದಲ್ಲಿ ಅನುಮಾನವಿರುವುದಕ್ಕೆ ಅವಕಾಶವೇ ಇಲ್ಲ. ಆದರೆ ನಿಮ್ಮ ಮಾತಿನಿಂದ ನೀವು ಕೃತಕ ಗರ್ಭಧಾರಣೆಯ ವಿರೋಧಿಗಳಂತೆ ಕಾಣುತ್ತೀರಿ'' ಎಂದ.

''ಡಾಕ್ಟರ್...'' ಎಂದು ಆತನ ಮಾತನ್ನು ಅರ್ಧದಲ್ಲಿಯೇ ನಿಲ್ಲಿಸುತ್ತಾ ಡಾ. ರಂಗಪ್ರಸಾದ್ ಹೇಳಿದ ''ವೀರ್ಯಕಣಗಳು ಶೇಕಡ ನೂರಕ್ಕೆ ನೂರು ನಿರ್ಜೀವವಾಗಿದ್ದರೆ ಮಾತ್ರವೇ ಗಂಡು ನಿಜವಾದ ಗಂಡಲ್ಲವೆಂದು ತೀರ್ಮಾನಿಸಲು ಸಾಧ್ಯ.

ಉದಾಹರಣೆಗೆ ನಿಮ್ಮಲ್ಲಿ ದಂಪತಿಗಳು ಬಂದರೆಂದುಕೊಳ್ಳಿ. ಮದುವೆಯಾಗಿ ಹತ್ತು ವರ್ಷಗಳಾದರೂ ಮಕ್ಕಳಾಗಿಲ್ಲ. ಹೆಣ್ಣು ಪೂರ್ಣ ಆರೋಗ್ಯವತಿ. ಗಂಡನ್ನು ಪರೀಕ್ಷಿಸುತ್ತೀರಿ. ಶೇಕಡ ಹತ್ತು ಮಾತ್ರವೇ ಜೀವಕಣಗಳಿವೆ. ನೀವೇನು ಸಲಹೆ ಕೊಡುತ್ತೀರಿ? ಅವರಿಗೆ ಮಕ್ಕಳಾಗಲು ಆ ಶೇಕಡ ಹತ್ತು ಸಾಕು. ಆದರೆ ಗರ್ಭಕಟ್ಟುವ ಸಾಧ್ಯತೆ ಕಡಿಮೆ ಅಷ್ಟೆ. ಇನ್ನೊಬ್ಬ ಪುರುಷನ ವೀರ್ಯದಿಂದ ಗರ್ಭಕಟ್ಟಿಸುವುದಕ್ಕಿಂತಲೂ ದತ್ತಕ ಒಳ್ಳೆಯದಲ್ಲ ಎನ್ನುತ್ತೀರಾ? ಇದರಿಂದ ನಂತರದಲ್ಲಿ ಆಕೆ ಗರ್ಭವತಿಯಾದರೆ ಅದಕ್ಕೂ ಮೊದಲೇ ಆಕೆ ಹಾದಿತಪ್ಪಿದ್ದಳು ಎನ್ನುವ ಭಾವನೆ ಗಂಡಲ್ಲಿ ಇರುವುದಿಲ್ಲ ಅಲ್ಲವೇ?''

''ಹಾದಿ ತಪ್ಪುವುದೇ? ಕೃತಕ ಗರ್ಭಧಾರಣೆಯಲ್ಲಿ ಆ ಪ್ರಶ್ನೆಯೇ ಇಲ್ಲ ಡಾಕ್ಟರ್. ಅನಾವಶ್ಯಕವಾಗಿ ನೀವು ನೈತಿಕಮೌಲ್ಯ ತರುತ್ತಿದ್ದೀರಿ. ಸೈನ್ಸ್ ಬಹುವಾಗಿ ಪ್ರಗತಿ ಸಾಧಿಸುತ್ತಿರುವ ಈ ಕಾಲದಲ್ಲಿ ಧರ್ಮದ ಮಾತು ತರುತ್ತಿದ್ದಿರಿ. ನೀವು ಹೇಳಿದ ಉದಾಹರಣೆಯಲ್ಲಿ ಗಂಡನ ವೀರ್ಯದಲ್ಲಿ ಸ್ವಲ್ಪವಾಗಿ ಬದುಕಿರುವ ಜೀವಕಣಗಳನ್ನು ಬೇರ್ಪಡಿಸಿ ಜಾಗ್ರತೆಯಾಗಿ ಸ್ಟೋರ್ ಮಾಡಿ, ಆ ರೀತಿ ಹತ್ತು ಸಾರಿ ನಡೆದಸಿದ ನಂತರ ಆ ವೀರ್ಯವನ್ನು ಹೆಂಡತಿಯ ಗರ್ಭದಾನಕ್ಕೆ ಉಪಯೋಗಿಸಬಹುದು. ಆಕೆ ಆಗ ಖಂಡಿತವಾಗಿಯೂ ಗರ್ಭವತಿಯಾಗುತ್ತಾಳೆ''

ಸಾಧ್ಯವಿಲ್ಲ ಹಾಗೆ ಹತ್ತಿಪ್ಪತ್ತು ಸಾರಿ ಪ್ರಯತ್ನಿಸಿದರೆ ಆಗಬಹುದೇನೋ. ಅದಕ್ಕೆಂದೆ ನೀವು ಎಐಡಿ ಶಿಫಾರಸ್ಸು ಮಾಡುವುದು. ಆದರೆ ಗಂಡ ಎಷ್ಟೇ ಸಹೃದಯಿಯಾದರೂ ತನ್ನ ಹೆಂಡತಿಯ ಗರ್ಭದಲ್ಲಿ ಬೇರೊಬ್ಬನ ಮಗು ಹುಟ್ಟುವುದನ್ನು ಸಹಿಸುವುದಿಲ್ಲ. ಆ ವೀರ್ಯವು ಗೊತ್ತಿಲ್ಲದ ಮೂರನೆಯವನದಾದರೂ ಚಿಂತೆಯಿಲ್ಲ. ಅದರಲ್ಲೂ ಭಾರತೀಯರಿಗೆ ಅದೇ ಮನಸ್ಸಿನ ವ್ರಣವಾಗುತ್ತದೆ...''

ಮಧ್ಯೆ ವಂಶೀಕೃಷ್ಣ ಹೇಳಿದ: ''ನೀವೂ ಡಾಕ್ಟರೇ ಆದ್ದರಿಂದ ಮನಶ್ಶಾಸ್ತ್ರದ ದೃಷ್ಟಿಯಿಂದ ಯೋಚಿಸಿ, ನಮ್ಮ ಭಾರತೀಯರಲ್ಲಿರುವ ದ್ವಂದ್ವಪ್ರವೃತ್ತಿ ಬೇರಾರಲ್ಲೂ ಇಲ್ಲ. ಮದುವೆಯಾದ ಒಂದೆರಡು ವರ್ಷಗಳಲ್ಲಿ ಆಕೆ ಗರ್ಭವತಿಯಾಗದಿದ್ದರೆ ಒಡನೆಯೇ ಎಲ್ಲಾ ತಪ್ಪನ್ನೂ ಆಕೆಯ ಮೇಲೆ ಹೊರಿಸುತ್ತಾರೆ. ಗಂಡು ತನ್ನ ಪುರುಷತ್ವದ ಬಗ್ಗೆ ತೀರಾ ನಂಬಿಕೆ ಇರಿಸಿಕೊಂಡು ತಪ್ಪನ್ನು ಹೆಣ್ಣಿನ ಮೇಲೆ ಆರೋಪಿಸುತ್ತಾನೆ. ಎರಡನೆಯ ಮದುವೆ ಬಗ್ಗೆ ಯೋಚಿಸುತ್ತಾನೆ. ಅವನು ದತ್ತಕದ ಬಗ್ಗೆ ಯೋಚಿಸುವುದೇ ಇಲ್ಲ. ಹಾಗೆ ಮಾಡಿದ್ದೇ ಆದರೆ ಪರಿಸರದಲ್ಲಿ ತನ್ನ ಅಹಂಕಾರಕ್ಕೆ ಪೆಟ್ಟು ನೀಡಿ ಪ್ರತಿಕ್ಷಣವೂ ತನ್ನನ್ನು ಕೀವಲಗೊಳಿಸುವ ಶಾಶ್ವತ ಚಿಹ್ನೆಯಾಗುತ್ತದೆ ಎಂದು ಭಯಪಡುತ್ತಾನೆ. ಇಂತಹ ಪರಿಸ್ಥಿತಿಯಲ್ಲಿ ಕೃತಕ ಗರ್ಭಧಾರಣೆ ತುಂಬಾ ಪ್ರಯೋಜನಕಾರಿ ದಂಪತಿಗಳ ವಿನಾ ಮೂರನೆಯವರಿಗೆ ಈ ರಹಸ್ಯ ಗೊತ್ತಾಗುವುದಿಲ್ಲ. ಕಾಲದೊಂದಿಗೆ ಗಂಡನೂ, ಮಹಯ ತನ್ನದಲ್ಲ ಎಂಬ ಸಂಗತಿ

ಮರೆಯುತ್ತಾನೆ- ಹೇಗಿದ್ದರೂ ಅವನಿಂದ ಮಗು ಕೊಡುವ ಯೋಗ್ಯತೆ ಇರುವುದಿಲ್ಲವಲ್ಲಾ! ಆದ್ದರಿಂದಲೇ ಭಾರತದಲ್ಲಿ ಈ ಕ್ಲಿನಿಕ್‌ಗಳು ರಹಸ್ಯವಾಗಿ ತುಂಬಾ ಸೇವೆಮಾಡುತ್ತಿವೆ. ಈ ಕ್ಲಿನಿಕ್‌ಗಳಿಗಾಗಲಿ, ಈ ಪದ್ಧತಿಗಾಗಲಿ ಪ್ರಚಾರದ ಅವಶ್ಯಕತೆಯೇ ಇಲ್ಲ. ಇದರಿಂದ ಇಷ್ಟೋ ಮಂದಿ ದಂಪತಿಗಳು ಸುಖವಾಗಿದ್ದಾರೆ''

''ನಿಮ್ಮ ಮಾತೇ ಒಪ್ಪಿದರೆ ಮದುವೆಯಾಗಿ ಒಂದೆರಡು ವರ್ಷಗಳಲ್ಲಿ ಮಕ್ಕಳಾಗದವರಿಗೆ- ಹಲೀಣ್ಣು ಆರೋಗ್ಯವತಿಯಾಗಿದ್ದರೂ - ಎಐಡಿ ನಡೆಸಬೇಕು!''

''ನೀವೇಕೆ ಹೀಗೆ ಯೋಚಿಸುತ್ತೀರಿ ಡಾ|| ರಂಗಪ್ರಸಾದ್?''

' ದೇಶದ ಶೀತೋಷ್ಣಗಳ ಸ್ಥಿತಿಯಲ್ಲಿ ಆರೋಗ್ಯವಂತನಾದ ಪುರುಷನು ತನ್ನ ಪತ್ನಿಯೊಂದಿಗೆ ವಿವಾಹದ ಮೊದಲ ವರ್ಷದಲ್ಲಿ ಸುಮಾರು 915 ಬಾರಿ ಕೂಡುತ್ತಾನೆ(3X (365-12X5)) ಎಂದುಕೊಂಡರೆ, ಅದರಲ್ಲಿ ನಿಖರವಾಗಿ 36 ದಿನಗಳು (12X3) ಫರ್ಟಿಲಿಟಿ ಪೀರಿಯಡ್ ಇರುತ್ತದೆ. ಇದರ ಸಾಧ್ಯತೆಯನ್ನು ( 36X 3=108) ಲೆಕ್ಕಿಸಿ 108:915ರಲ್ಲಿ ಗರ್ಭ ಕಟ್ಟದಿದ್ದರೆ ಇನ್ನು ಮುಂದೆ ಅದರ ಸಾಧ್ಯತೆ ಕಡಿಮೆ ಎನ್ನುವುದರಲ್ಲಿ ತಪೆ+ಪೇನು?''

''ಮೈಗಾಡ್! ಇದು ತೀರಾ ಕ್ರೂರವಾದ ವಾದ''

''ನೈತಿಲ ಮೌಲ್ಯಗಳನ್ನು ವಿಸ್ಮರಿಸಿ ಇದನ್ನು ತೀರಾ ಸೈಂಟಿಫಿಕ್ ಮಾಡಿದ್ದು ನೀವೇ ತಾನೇ?''

ಮಾನವ ಕೋಟಿಯ ಉಪಕಾರಾರ್ಥವಾಗಿ ಪ್ರಕೃತಿಯನ್ನು ಕೈಗೆತ್ತಿಕೊಂಡರೆ ತಪ್ಪೇನಿದೆ? ಜೆನೆಟಿಕ್ಸ್‌ನಲ್ಲಿ ಇನ್ನು ಸ್ವಲ್ಪ ಪ್ರಗತಿ ಸಾಧಿಸಿದರೆ ಜಗತ್ತಿನ ಎಲ್ಲಾ ಭಾಗಗಳವರೂ ಅಂದವಾಗಿ, ಎತ್ತರವಾಗಿ ಆರೋಗ್ಯವಾಗಿರುತ್ತಾರೆ. ಇದರಲ್ಲಿ ತಪ್ಪೇನು?''

'4ತಪ್ಪೇನೂ ಇಲ್ಲ. ಆದರೆ ಹೆಂಡತಿಯು ಬೇರೆಯವನ ಮಗುವನ್ನು ತನ್ನ ಗರ್ಭದಲ್ಲಿರಿಸಿಕೊಂಡು ಬೆಳೆಸುವುದನ್ನು ಸಹಿಸುವ ಸ್ಥಿತಿಗೆ ಗಂಡು ಬರುವುದಿಲ್ಲ''

''ಬೇರೆ ಮಾತ್ರವೇ ಇಲ್ಲದಾಗ ಬೇರೇನು ಮಾಡಲು ಸಾಧ್ಯ? ಈಗ ಪಾಶ್ಚಾತ್ಯದೇಶಗಳಲ್ಲಿ ನಡೆಯುತ್ತಿದೆ. ಇನ್ನೊಂದು ಹತ್ತು ವರ್ಷಗಳಾದರೆ ನಮ್ಮಲ್ಲೂ ರೂಢಿಗೆ ಬಂದು ಅಭ್ಯಾಸವಾಗುತ್ತದೆ''

''ದಾಶನ ಜೀವಕಣ ಭದ್ರಪಡಿಸುವ ಮುನ್ನ ಅವನ ವಂಶಚರಿತ್ರೆ ಅವರಲ್ಲಿ ಯಾರಿಗಾದರೂ ಅನುವಂಶಿಕ ಖಾಯಿಲೆಗಳಿವೆಯೋ ಮುಂತಾದ ವಿವರಗಳನ್ನು ಪರಿಶೀಲಿಸುತ್ತೀರಲ್ಲವೇ?''

ವಂಶೀಕೃಷ್ಣ ಸಂದಿಗ್ಧವಾಗಿ ನೋಡುತ್ತಾ, ''ಮದುವೆಗಾಗಿ ಪ್ರಯತ್ನನಡೆಸುವಾಗ ನಾವು ಈ ಎಲ್ಲಾ ವಿವರಗಳ ಬಗ್ಗೆಯೂ ಪರಿಶೀಲಿಸಿ ವಿಮರ್ಶಿಸುವುದಿಲ್ಲ. ಬದಲಾಗಿ

ಜಾತಕಗಳನ್ನು ಮಾತ್ರ ಕೇಳುತ್ತೇನೆ ಅಲ್ಲವೇ? ಅದೇ ರೀತಿ ಎಐಡಿ ಕೂಡ ಅಷ್ಟು ರಿಸ್ಕ್ ತೆಗೆದುಕೊಳ್ಳದಿದ್ದರೆ ಹೇಗೆ?'' ಎಂದ.

''ಮುಂದೆ ಜಾತಕಗಳ ಬದಲು ಜೆನೆಟಿಕ್ ಕೋಡ್‌ಗಳನ್ನೇ ವಧೂ-ವರರು ಪರೀಕ್ಷೋಸುತ್ತಾರೇನೋ!''

ವಂಶೀಕೂಷ್ಣಏನೋ ಹೇಳಲು ಪ್ರಯತ್ನಿಸುತ್ತಿದ್ದಂತೆಯೇ ರಂಗಪ್ರಸಾದ ಅದನ್ನು ತಡೆಯುತ್ತಾ, ''ಇನ್ನೂ ಕೆಲವು ದಿನಗಳದರೆ ಪತ್ನಿ ತನ್ನ ಅಂಡವನ್ನು ಮತ್ತು ಪತಿಯ ಜೀವಕಣವನ್ನು ರಸ್ತೆಯ ಮಗ್ಗುಲಿನ ಲ್ಯಾಬೋರೆಟರಿಯಲ್ಲಿ ಕೊಟ್ಟು ಒಂಬತ್ತು ತಿಂಗಳ ನಂತರ ಮಗುವನ್ನು ಕರೆದೊಯ್ಯುತ್ತಾರೇನೋ?'' ಎಂದ.

''ನೀವು ಡಾಕ್ಟರಾಗಿದ್ದು ಎಐಡಿಬಗ್ಗೆ ಇಷ್ಟೊಂದು ವಿರೋಧಿಸಿ ಏಕೆ ಮಾತನಾಡುತ್ತಿದ್ದೀರಿ?'' ಎಂದು ವಂಶೀಕೃಷ್ಣ ಕೇಳಿದಾಗ ಸ್ವಲ್ಪ ಕೋಪ, ಸ್ವಲ್ಪ ಬೇಸರ ಮಿಶ್ರವಾಗಿತ್ತು.

''ಏಕೆಂದರೆ ಅದು ಒಂದು ಸಣ್ಣ ಕುಟುಂಬವನ್ನು ನಾಶಮಾಡಿತು. ಮೂವರು ವ್ಯಕ್ತಿಗಳ ಸುಖ ಜೀವನವನ್ನು ಹಾಳುಮಾಡಿತು...''

''ಇದೇನು ನೀವು ಹೇಳುತ್ತಿರುವುದು? ಆ ಮೂವರು ಯಾರು?'' ಎಂದು ಕೇಳಿದ ವಂಶೀಕೃಷ್ಣ ಏನೂ ಅರ್ಥವಾಗದೆ?

ರಂಗಪ್ರಸಾದ್ ಹೇಳಲು ಪ್ರಾರಂಭಿಸಿದ:

''ತುಂಬಾ ದಿನಗಳಾದವು. ಸುಮಾರು ಹದಿನೈದು ವರ್ಷಗಳ ಹಿಂದಿನ ಮಾತು ಹೊಸದಾಗಿ ಪ್ರಾಕ್ಟೀಸ್ ಪ್ರಾರಂಭಿಸಿದ ದಿನಗಳು. ನಮ್ಮ ತಂದೆಯವರ ಹೆಸರಿನಿಂದ ತುಂಬಾ ಬೇಗ ಪ್ರಾಕ್ಟಿಸ್ ಅಭಿವೃದ್ಧಿಗೊಂಡಿತು. ನನ್ನ ತಂದೆಯವರು ಆಗಷ್ಟೇ ಜೆನೆಟಿಕ್ಸ್‌ನಲ್ಲಿ ಖ್ಯಾತನಾಮರಾಗಿದ್ದರು. ಆಗಾಗ ವಿದೇಶಗಳಿಂದಲೂ ಅವರಿಗೆ ಆಹ್ವಾನ ಬರುತ್ತಿತ್ತು.

''ನನ್ನ ತಂದೆಯವರಿಗೆ ನಾನೆಂದರೆ ತುಂಬಾ ಪ್ರೇಮ. ವಿಜ್ಞಾನಿಗಳಾಗಿ ಅವರ ಬಾಳು ನನ್ನೊಂದಿಗೇ ಪ್ರಾರಂಭವಾಯಿತೆಂದು ಹೇಳುತ್ತಿದ್ದರು. ನಾನೂ, ನನ್ನ ತಾಯಿ ಮತ್ತು ಅವರು ತುಂಬಾ ಆತ್ಮೀಯರಂತಿದ್ದೆವು. ನನ್ನ ತಾಯಿ ತುಂಬಾ ಸೌಂದರ್ಯವತಿ. ಆಕೆಯನ್ನು ತುಂಬಾ ಪ್ರೇಮದಿಂದ ನೋಡಿಕೊಳ್ಳುತ್ತಿದ್ದರು ತಂದೆ.

''ನನ್ನ ತಂದೆ ತಮ್ಮ ವೈಜ್ಞಾನಿಕ ಬಾಳು ನನ್ನಿಂದ ಪ್ರಾರಂಭವಾಯಿತು ಎಂದು ಹೇಳುತ್ತಿದ್ದುದು ನನಗೆ ಅರ್ಥವಾಗಿರಲಿಲ್ಲ. ಮೆಡಿಕಲ್‌ನಲ್ಲಿ ಓದುತ್ತಿದ್ದಾಗ ಇದು ಅರ್ಥವಾಯಿತು.

''ಮದುವೆಯಾದ ಐದಾರು ವರ್ಷಗಳಾದರೂ ಅವರಿಗೆ ಮಕ್ಕಳಾಗಲಿಲ್ಲ. ಇದರಿಂದ ಅಮ್ಮ ವ್ಯಸನ ಚಿತ್ತಳಾದಳು. ನನ್ನ ತಂದೆ ಆಗ ತಾನೇ ಜೆನೆಟಿಕ್+ಸ

ರಂಗವನ್ನು ಪ್ರವೇಶಿಸಿದ್ದರು. ಅವರು ತಮ್ಮ ವೀರ್ಯ ಪರೀಕ್ಷೆ ನಡೆಸಿದರೆ ಅದರಲ್ಲಿ ಜೀವಕಣಗಳು ಶೇಕಡ ಇಪ್ಪತ್ತೈದು ಮಾತ್ರವೇ ಇತ್ತು''.

''ಇದರಿಂದ ಅವರು ವ್ಯಥಿತರಾಗಲಿಲ್ಲ. ಅವರು ಮತ್ತಷ್ಟು ಕಾರ್ಯೋನ್ಮುಖರಾದರು. ಮತ್ತಷ್ಟು ಶ್ರದ್ಧೆಯಿಂದ ಸಂಶೋಧನೆಗೆ ತೊಡಗಿದರು. ಡಾ||ವಿಲಿಯಮ್ಸ್ ಎನ್ನುವ ಮತ್ತೊಬ್ಬ ಯುವಕ ಅವರ ಈ ಸಂಶೋಧನೆಯಲ್ಲಿ ನೆರವಾದ. ಒಂದು ವರ್ಷವಾಗುವ ವೇಳೆಗೆ ತಂದೆಯವರು ತಮ್ಮ ಪ್ರಯತ್ನದಲ್ಲಿ ಸಫಲರಾಗಿದ್ದರು. ಹೆಣ್ಣಿನ ಒ.ಎಫ್.ಟಿ (ಆಪ್ಟಿಮಮ್ ಫರ್ಟಿಲಿಟಿ ಟೈಂ; ಗರ್ಭಧಾರಣೆಗೆ ಅತ್ಯಂತ ಅನುಕೂಲವಾದ ಕಾಲ) ಮೊದಲ ಬಾರಿಗೆ ಕಂಡುಹಿಡಿದ ಶಾಸ್ತ್ರಜ್ಞರು ಅವರು.

''ಇದು ತಿಳಿಯದೆ ವೈದ್ಯರು ಬಹುಪಾಲು ವೀರ್ಯವನ್ನು ನಷ್ಟ ಮಾಡಬೇಕಾಗಿತ್ತು. ಹೆಣ್ಣಿನ ಎರಡು ಋತು ಧರ್ಮಗಳ ಸರಾಸರಿ ತಿಂಗಳೆಂದು ಭಾವಿಸಿದರೆ ಸುಮಾರು ಹದಿನೈಧು ದಿನಗಳಿಗೆ ಅಂಡವು ಫಲವಾಗಲು ಪೂರ್ಣರೂಪದಲ್ಲಿ ಸಿದ್ಧವಾಗಿರುತ್ತದೆ. ಸುಮಾರು ಐದು ದಿನಗಳ ಕಾಲ ಅದು ಜೀವಂತವಾಗಿರುತ್ತದೆ.

''ಡಾಕ್ಟರ್‌ಗೆ ಇಲ್ಲಿ ತೊಂದರೆಯೊಂದಿದೆ''

''ಕೃತಕ ಗರ್ಭಧಾರಣೆಯಲ್ಲಿ ಪುರುಷನ ವೀರ್ಯವನ್ನು ಪ್ರನಾಳದಲ್ಲಿ ಭದ್ರಗೊಳಿಸಿ ನಂತರ ಅದನ್ನು ಹೆಣ್ಣಿನ ಗರ್ಭದಲ್ಲಿ ಬಿಡಬೇಕು. ದುರದೃಷ್ಟವಶಾತ್ ಒಮ್ಮೆ ಹೊರಬಂದ ವೀರ್ಯವು ಸ್ವಲ್ಪಕಾಲದಲ್ಲಿ ತನ್ನ ಜೀವವನ್ನು ಕಳೆದುಕೊಳ್ಳುತ್ತದೆ. ಲಿಕ್ವಿಡ್ ನೈಟ್ರೋಜನ್‌ನಲ್ಲಿ ಮೈನಸ್ 199 ಡಿಗ್ರಿಗಳಲ್ಲಿ ಶೈತ್ಯೀಕರಿಸಿದ ಈ ವೀರ್ಯವು ಹೆಣ್ಣಿನ ತೊಡೆಗಳ ಮಧ್ಯೆ ಒಳಕ್ಕೆ ಹರಿಯುವಾಗ ಆ ಶಾಖಕ್ಕೆ ಅದರಲ್ಲಿಯ ಜೀವಕಣಗಳು ಸಾಯುತ್ತಿದ್ದುವು. ಸಾಧಾರಣ ಹೆಣ್ಣು-ಗಂಡುಗಳ ದೈಹಿಕ ಮಿಲನದಲ್ಲಿ ಈ ಸಮಸ್ಯೆಯೇ ಇಲ್ಲ. ಆ ಕ್ರಿಯೆಯಲ್ಲಿ ವೀರ್ಯವು ಹೊಸದಾಗಿರುತ್ತದೆ. ಈ ಸಮಸ್ಯೆಯು ಲಿಕ್ವಿಡ್ ನೈಟ್ರೋಜನ್‌ನಲ್ಲಿ ಶೈತ್ಯೀಕರಿಸಿರುವ ವೀರ್ಯದಲ್ಲಿಯೇ ಇರುವುದು. ಆದ್ದರಿಂದ ಜೀವಕಣಬದುಕಿರುವ ಸ್ವಲ್ಪಕಾಲದಲ್ಲಿಯೇ ಫಲೀಕರಣಕ್ಕೆ ನೆರವಾಗಬೇಕು.

''ಒಂದು ಹೆಣ್ಣಿಗೆ ಕೃತಕ ಗರ್ಭಧಾರಣೆ ನಡೆಸಲು ಐದು ದಿನಗಳಲ್ಲಿ ಹಲವು ಔನ್ಸ್ ವೀರ್ಯವನು,ನ ಹಸ್ತ ಪ್ರಯೋಗದಿಂದ ಸಂಗ್ರಹಿಸಬೇಕು. ಇದು ವೀರ್ಯದಾನಿಗಳಿಗೆ ತೊಂದರೆಯನ್ನು, ಡಾಕ್ಟರುಗಳಿಗೆ ನಾಚಿಕೆಯನ್ನು, ಗರ್ಭ ಕಟ್ಟಿಸಿಕೊಳ್ಳಬೇಕೆಂಬ ಹೆಣ್ಣಿಗೆ ಬೇಸರವನ್ನು ಉಂಟುಮಾಡುವಂತಹ ಪರಿಸ್ಥಿತಿ.

''ಸತ್ಯಸಂಗತಿ ಎಂದರೆ- ಫಲೀಕರಣಕ್ಕೆ ಅಂಡವು ಸಿದ್ಧವಾಗಿದ್ದರೆ ಒಂದೇ ಒಂದು ಜೀವಕಣವೇ ಸಾಕು. ಒಂದು ಔನ್ಸ್ ವೀರ್ಯದಲ್ಲಿ ಹಲವಾರು ಲಕ್ಷ ಜವಕಣಗಳಿರುತ್ತವೆ.

''ಇದೇ ಸಮಯಕ್ಕೆ ಸರಿಯಾಗಿ ನ್ನ ತಂದೆಯವರು ಒ.ಎಫ್.ಟಿ ಕಂಡುಹಿಡಿದರು. ಹೆಣ್ಣಿನ ಶರೀರದ ಬಿಸಿಯಲ್ಲಿ ಉಂಟಾಗುವ ವೈಪರೀತ್ಯ, ಯೋನಿಯ ಪರಿಸರದಲ್ಲಿಯ

ಸ್ರವಗಳಲ್ಲಿ ಕಂಡುಬರುವ ಅಂತರ. ಹಾರ್ಮೋನ್‌ಕಾನ್‌ಸನ್‌ಟ್ರೇಷನ್‌ಗಳಲ್ಲಿ ಬದಲಾವಣೆ ಇವುಗಳಿಂದ ಸ್ವಾತಿಯ ಮಳೆಹನಿಗಾಗಿಕಾದಿರುವ ಮುತ್ತಿನ ಚಿಪ್ಪನ್ನು ಗುರ್ತಿಸುವಂತೆ ಆ ಸಮಯವನ್ನು ಸರಿಯಾಗಿ ಗುರ್ತಿಸಲು ಸಾಧ್ಯವಾಯಿತು. ಆ ಸಮಯದಲ್ಲಿ ಕೇವಲ ಒಂದೇ ಒಂದು ಜೀವಕಣವನ್ನು ಹೆಣ್ಣಿನಲ್ಲಿ ಸೇರಿಸಿದರೂ ಸಾಕು. ಆಕೆ ಗರ್ಭ ಧರಿಸುತ್ತಾಳೆ.''

''ತಾನು ಕಂಡುಕೊಂಡ ಈ ಸಂಗತಿ ನಿಜವೋ ಅಲ್ಲವೋ ಅವರಿಗೇ ಗೊತ್ತಿರಲಿಲ್ಲ. ಪ್ರಯೋಗ ನಡೆಸಬೇಕು ಎಲ್ಲಿ? ಯಾರ ಮೇಲೆ ಪ್ರಯೋಗ ನಡೆಸುವುದು?''

''ಅದಕ್ಕೆ ತಮ್ಮ ಹೆಂಡತಿಯನ್ನೇ ಪ್ರಯೋಗಕ್ಕೆ ಆರಿಸಿಕೊಂಡರು''

ರಂಗಪ್ರಸಾದ್ ಮುಂದುವರಿಸಿದ: '4ಆಗ್ಗೇ ಅವರ ಮದುವೆಯಾಗಿ ಆರೇಳು ವರ್ಷಗಳಾಗುತ್ತಾ ಬಂದಿತ್ತು. ಮಕ್ಕಳಿರಲಿಲ್ಲ. ತಮ್ಮ ವೀರ್ಯದಲ್ಲಿ ಜೀವಕಣಗಳು ಕಡಿಮೆ ಎಂಬುದು ಗೊತ್ತು. ಇನ್ನೇಕೆ ತಮ್ಮನ್ನೇ ಆ ಪ್ರಯೋಗಕ್ಕೆ ಬಳಸಿಕೊಳ್ಳಬಾರದು ಎಂದು ಯೋಚಿಸಿದ್ದರು. ಈ ಪ್ರಯೋಗಕ್ಕೆ ಅವರು ವಿಲಿಯಮ್ಸ್ ನೆರವನ್ನು ಪಡೆದರು.

''ತನ್ನ ಹೆಂಡತಿಯ ಒವಿಫ್‌ಟಿಯನ್ನು ಲೆಕ್ಕಿಸಿ ನಿಖರವಾಗಿ ತೀರ್ಮಾನಿಸಿದರು. ಅದೇ ಸಮಯಕ್ಕೆ ತನ್ನ ವೀರ್ಯದಲ್ಲಿಯ ನಿರ್ಜೀವ ಕಣಗಳನ್ನು ಬೇರೆ ಮಾಡಿ ಜೀವಕಣಗಳನ್ನು ಮಾತ್ರವೆ ಸಂಗ್ರಹಿಸಿದರು ವಿಲಿಯಮ್ಸ್. ಈ ಕ್ರಿಯೆಗಾಗಿಯೇ ರೂಪಿಸಿದ್ದ ಆಧುನಿಕ ಉಪಕರಣದಿಂದ ಆಕೆಯಲ್ಲಿಯ ಅಂಡವನ್ನು ಜೀವಕಣಗಳು ತೀರಾ ಬೇಗ ಸೇರಿಕೊಳ್ಳಲು ಸಾಧ್ಯವಾಗುವಂತೆ ಬಿಡಲಾಯಿತು.

''ಎರಡು ತಿಂಗಳಲ್ಲಿ ಆಕೆ ಗರ್ಭವತಿಯಾದಳು''

''ವಿಜ್ಞಾನದ ಇತಿಹಾಸದಲ್ಲಿ ಹೊಸ ಅಧ್ಯಾಯವೊಂದು ಪ್ರಾರಂಭವಾಯಿತು. ಜಗತ್ತಿನ ವಿಜ್ಞಾನಿಗಳು ಆತನ ಸಾಧನೆಗಾಗಿ ಅಭಿನಂದನೆಗಳನ್ನು ಸಲ್ಲಿಸಿದರು. ನ್ಯೂಯಾರ್ಕ್‌ನಲ್ಲಿ ಈ ವಿಷಯದ ಬಗ್ಗೆ ನಡೆದ ಸೆಮಿನಾರ್‌ನಲ್ಲಿ ಆತ ತನ್ನ ಪ್ರಬಂಧ ಮಂಡಿಸುತ್ತಿದ್ದಷ್ಟು ಕಾಲವೂ ಸತತವಾಗಿ ಚಪ್ಪಾಳೆ ತಟ್ಟುತ್ತಲೇ ಇದ್ದರು.

''ನಂತರ ಬಹುಮಂದಿ ದಂಪತಿಗಳಿಗೆ ಅವರು ಚಿಕಿತ್ಸೆ ನೀಡಿದರು. ಇನ್ನು ತಮಗೆ ಸಂತಾನ ಭಾಗ್ಯವೇ ಇಲ್ಲವೆಂದುಕೊಂಡಿದ್ದ ಅನೇಕರಿಗೆ ಅವರ ವೀರ್ಯದಲ್ಲಿ ಜೀವಕಣಗಳು ಎಷ್ಟೇ ಕಡಿಮೆ ಇದ್ದರೂ, ಅವರನ್ನು ತಂದೆ-ತಾಯಿಗಳನ್ನಾಗಿ ಮಾಡಿದರು.

''ಪ್ರಪಂಚದಲ್ಲೆಲ್ಲಾ ಅವರು ಗೌರವವನ್ನು, ಕೀರ್ತಿಯನ್ನು ಬಹುವಾಗಿ ಸಂಪಾದಿಸಿದರು.

''ಅಮ್ಮನಿಗೆ ನಾನು ಅಕ್ಕರೆಯ ಕಂದನಾಗಿದ್ದರೆ, ಅಪ್ಪನಿಗೆ ನಾನು ಅಪೂರ್ವ ಸಾಧನೆಯಾಗಿದ್ದೆ. ತಮ್ಮಬಾಳಿಗೆ ವಿಜಯವೇ ನಾನೆಂದು ಅವರು ಭಾವಿಸಿದ್ದರು. ಅವರ

ಜಾಣತನ, ಬುದ್ಧಿವಂತಿಕೆಗಳನ್ನೆಲ್ಲಾ ನಾನು ಪಡೆದುಕೊಂಡಿದ್ದೇನೆ ಎಂದು ಹೆಮ್ಮೆಯಿಂದ ಮೆಚ್ಚಿನುಡಿಯುತ್ತಿದ್ದರು. ನನ್ನ ಪ್ರಾಕ್ಟೀಸೂ ಕೂಡ ಅಭಿವೃದ್ಧಿಯಲ್ಲಿತ್ತು. ಅದೇ ಕಾಲದಲ್ಲಿ ಕಾಯುತ್ತಿದ್ದ ಘಟಸರ್ಪ ತನ್ನ ವಿಷಯದ ಕೋರೆಯನ್ನು ಇಳಿಸಿತು''

''ಅಂದು ನನ್ನ ಕ್ಲಿನಿಕ್‌ಗೆ ಒಬ್ಬ ವ್ಯಕ್ತಿ ಕುಂಟುತ್ತಾ ಬಲತ್ತದ ನೆರವಿನಿಂದ ನಡೆಯುತ್ತಾ ಬಂದ, ಆತನಿಗೆ ಒಂದು ಕಾಲು ಇರಲಿಲ್ಲ. ನೋಟ ವಿಕೃತವಾಗಿತ್ತು. ಆತ ನನ್ನ ಬಳಿಗೆ ಬಂದದ್ದೇಕೆ ಎಂಬುದು ನನಗೇ ವಿಚಿತ್ರವಾಗಿತ್ತು. ಕೆಲವು ದಿನಗಳಿಂದ ಆತ ಕ್ಲಿನಿಕ್ ಮುಂದೆ ಓಡಾಡುತ್ತಿದ್ದುದನ್ನು ಗಮನಿಸುತ್ತಿದ್ದೆ ಕಾರಿನಲ್ಲಿ ಮನೆಗೆ ಹೋಗುವಾಗ, ಕ್ಲಿನಿಕ್‌ಗೆ ಬರುವಾಗ ನನ್ನನ್ನು ನೋಡುತ್ತಿದ್ದ. ಅದೇಕೆ ಎಂಬುದು ನನಗೆ ಅರ್ಥವಾಗುತ್ತಿರಲಿಲ್ಲ. ಅಂದು ಅವನೇ ಬಂದಿದ್ದ.

''ಏನು ಬೇಕಾಗಿತ್ತು?'' ಎಂದು ಕೇಳಿದೆ.

''ಒಡನೆಯೇ ಉತ್ತರ ಹೇಳಲಿಲ್ಲ. ನನ್ನನ್ನೇ ಎವೆಯಿಕ್ಕದೆ ನೋಡುತ್ತಿದ್ದ'' ಬೇಸರದಿಂದ ಅದೇ ಪ್ರಶ್ನೆ ಪುನರುಚ್ಚಿಸಿದೆ.

''ನನ್ನ ಹೆಸರು ವಿಲಿಯಮ್ಸ್''

''ಡಾಕ್ಟರ್ ವಿಲಿಯಮ್ಸ್?'' ಎಂದೆ ಅನುಮಾನದಿಂದ.

''ಹೌದೆನ್ನುವಂತೆ ತಲೆಯಾಡಿಸಿದ''

''ಇಪ್ಪತ್ತೈದು ವರ್ಷಗಳ ಹಿಂದೆ ತಂದೆಯವರೊಂದಿಗೆ ಕೆಲಸ ಮಾಡುತ್ತಿದ್ದ ವ್ಯಕ್ತಿ. ನಾನು ಎದ್ದು 'ನಮ್ಮ ತಂದೆ ಆಗಾಗ ನಿಮ್ಮ ಬಗ್ಗೆ ಹೇಳುತ್ತಿರುತ್ತಾರೆ...ಇಷ್ಟು ದಿನ ಎಲ್ಲಿ ಹಿಗಿದ್ದಿರಿ?...ಸ್ವಲ್ಪ ತಾಳಿ ತಂದೆಯವರನ್ನು ಕರೆಯುತ್ತೇನೆ'' ಎಂದೆ.

''ಅವರು ಬೇಕಾಗಿಲ್ಲ, ನಿನ್ನೊಂದಿಗೇ ಮಾತನಾಡಲು ಬಂದಿದ್ದೇನೆ''

ನನ್ನ ಆಶ್ಚರ್ಯ ಮತ್ತೂ ಹೆಚ್ಚಾಯಿತು. 'ನನ್ನ ಬಳಿಯೇ? ಅಂಥಾ ಸಂಗತಿ ಏನು?' ಎಂದು ಕೇಳಿದೆ.

''ಆತ ಉತ್ತರಿಸದೆ ಏನೋ ಗೊಣಗಿದ. ಎದ್ದು ಹಿಂದಿರುಗಲು ಮೂರು ನಾಲ್ಕು ಹೆಜ್ಜೆ ಇರಿಸಿದ. ಇದ್ದಕ್ಕಿದ್ದಂತೆಯೇ ನಿಂತು ನೇರವಾಗಿ ನನ್ನ ಬಳಿಗೆ ಬಂದು ನನ್ನ ಕೈಹಿಡಿದು 'ಇದೇನೋ ಬಿಡಲು ಸಾಧ್ಯವಾಗುತ್ತಿಲ್ಲ. ಮರೆಯುವುದು ಸಾಧ್ಯವೇ ಇಲ್ಲ...' ಎಂದ''

''ನೀವು ಹೇಳುತ್ತಿರುವುದು ಅರ್ಥವಾಗುತ್ತಿಲ್ಲ. ಏನು ಬಿಡೋದು? ಏನು ಮರೆಯೋದು?'' ಎಂದು ಕೇಳಿದೆ.

''ಉನ್ಮತ್ತನಂತೆ ನೀನು...ನೀನು...ನನ್ನ...ನನ್ನ...ಮ...ಗ...'' ಬಡಬಡಿಸಿದ.

''ನಿಮಗೆ ಮತಿಭ್ರಮಣೆಯಾಗಿದೆಯೇನು?'' ಈ ಬಾರಿ ತುಂಬಾ ಕೋಪ ನನ್ನ ಧ್ವನಿಯಲ್ಲೂ ಇತ್ತು. ನೋಟದಲ್ಲಿ ಜಿಗುಪ್ಸೆ ತುಂಬಿತ್ತು.

''ಇನ್ನೂ ಮತಿ ಕಳೆದುಕೊಂಡಿಲ್ಲ ಮಗೂ...ಇಪ್ಪತ್ತೈದು ವರ್ಷಗಳ ಹಿಂದೆ ನಿಮ್ಮ ತಂದೆ ನಡೆಸಿದ ಪ್ರಯೋಗದಲ್ಲಿ ನೆರವಾಗಿದ್ದು ನಾನೇ''

''ಅದೂ ನನಗೆ ಗೊತ್ತು'' ಈ ಮಾತು ಹೇಳುವಾಗಲೇ ಅನುಮಾನದ ಕಣ ನನ್ನ ಮನಸ್ಸನ್ನು ಪ್ರವೇಶಿಸಿತ್ತು.

''ನಿಮ್ಮ ತಂದೆಯವರ ವೀರ್ಯ ಪರೀಕ್ಷೆಯ ಹೊಣೆಗಾರಿಕೆನನ್ನದಾಗಿತ್ತು. ಉಳಿದ ಸಿದ್ಧತೆಗಳು ಅವರು ನಡೆಡುವಷ್ಟರಲ್ಲಿ ನಾನು ಆ ಕೆಲಸ ಪೂರ್ಣಗೊಳಿಸಿದೆ. ಆದರೆ...ಆ...ದ...ರೆ...'' ಆತನ ಮಾತು ನಿಂತಿತು. ನಿಧಾನವಾಗಿ ಗಂಭೀರ ಸ್ವರದಲ್ಲಿ ಹೇಳಿದ: 'ಅವರ ವೀರ್ಯದಲ್ಲಿ ಒಂದು ಜೀವಕಣವೂ ಇರಲಿಲ್ಲ. ಆಗ್ಗೇ ಅವರನ್ನು ಪೂರ್ಣವಾಗಿ ಬಂಜೆತನ ಆವರಿಸಿತ್ತು. ಜೀವಕಣಗಳು ಶೇಕಡ ಇಪ್ಪತ್ತೈದರಿಂದ ಸೊನ್ನೆಗೆ ಇಳಿದಿತ್ತು. ಆ ದುರದೃಷ್ಟಕ್ಷಣದಲ್ಲಿ ಪ-ರನಾಳವನ್ನು ಬದಲಿಸಿದೆ. ಈ ಪ್ರಯೋಗವು ಅಪೂರ್ವ ಫಲವನ್ನು ನೀಡಿತ್ತು. ಕೇವಲ ಕೆಲವೇ ಜೀವಕಣಗಳಿಂದ ಗರ್ಭೋತ್ಪತ್ತಿ ನಡೆಸಿದ್ದರು. ಆದರೆ ಆ ಕೆಲವು ಜೀವಕಣಗಳು ನನ್ನವು...''

''ನನ್ನ ಕಣ್ಮುಂದೆ ಕತ್ತಲೆಯ ತೆರೆಯಾವರಿಸಿತು. ತಲೆ ತಿರುಗುತ್ತಿದೆ. ನನ್ನನ್ನು ಅತಿ ಪ್ರೇಮದಿಂದ ಅಪರೂಪವಾಗಿ ಸಾಕಿ ಬೆಳೆಸಿದ ತಂದೆ...ನನ್ನ ತಂದೆಯಲ್ಲ...ಇಲ್ಲ ಖಂಡಿತ ಇಲ್ಲ...ಇದು ಸಾಧ್ಯವೇ ಇಲ್ಲ. ಕಣ್ತೆರೆದೆ. ಎದುರಿನಲ್ಲಿ ಆತ ನಿಂತೇ ಇದ್ದಾನೆ. ಹೆಟೌಟ್...'' ಎಂದು ಕಿರುಚಿದೆ. 'ನಾನೇ ನಿನ್ನನ್ನು ಕೊಲ್ಲುವ ಮೊದು ಇಲ್ಲಿಂದ ತೊಲಗು'

ಆತ ಚಲಿಸಲಿಲ್ಲ. ನನ್ನನ್ನೇ ನೋಡುತ್ತಾ ಹೇಳಿದ: 'ಅದರಲ್ಲಿ ನನ್ನ ತಪ್ಪೂಪ್ಪೇಂ ಇಲ್ಲ. ನಿಮ್ಮ ತಂದೆ ಸಂತಾನೋತ್ಪತ್ತಿಗೆ ಅನರ್ಹರೆಂದು ಆ ಕ್ಷಣದಲಿ-ಲ ನಾನು ಹೇಳಲಾರದಾದೆ. ಅದುವರೆವಿಗೂ ಅವರು ತಮ್ಮಲ್ಲಿ ಇನ್ನೂ ಕೆಲವು ಜೀವಕಣಗಳು ಇವೆ ಎಂಬ ಭ್ರಮೆಯಲ್ಲಿಯೇ ಇದ್ದರು. ಒಂದು ಸಣ್ಣ ಮಾರ್ಪಾಡಿನಿಂದ ಅವರಿಗೆ ಶಾಶ್ವತ ಸಂತೃಪ್ತಿಯನ್ನು ಉಂಟುಮಾಡಬಹುದು ಎಂದು ಮಾತ್ರವೇ ಯೋಚಿಸಿದೆ. ಆದರೆ ಅದು ನನ್ನಲ್ಲಿ ಇಷ್ಟೊಂದು ಮಾನಸಿಕ ಸಂಘರ್ಷಕ್ಕೆ ಕಾರಣವಾಗುತ್ತದೆ,ಎಂದು ನಾನು ಊಹಿಸಿಯೂ ಇರಲಿಲ್ಲ. ನಾನು ಆ ಅಂಗತಿಯನ್ನು ಆಗಲೇ ಮರೆತಿದ್ದೆ. ನಿಮ್ಮ ತಂದೆಯವರು ಸಾಧಿಸಿದ ವಿಜಯ ಸಾಧಾರಣವಾದುದೇನೂ ಅಲ್ಲ. ಅವರ ಸಾಧನೆಗೆ ತಕ್ಕಂತೆ ಪ್ರಪಂಚದವರೆಲ್ಲಾ ಅವರಿಗೆ ಅಭೂತಪೂರ್ವ ಸನ್ಮಾನ ಸತ್ಕಾರಗಳನ್ನು ಮಾಡಿದರು. ಅವರ ನೆರವಿನಿಂದ ಅನೇಕ ದಂಪತಿಗಳು ಅದೃಷ್ಟವಂತರಾದರು. ಆದರೆ ನನ್ನನ್ನು ದುರದೃಷ್ಟವೇ ಸೆರೆಹಿಡಿದಿತ್ತು. ಅಪಘಾತದಲ್ಲಿ ಬೆನ್ನೆಲುಬಿಗೆ ಪೆಟ್ಟಾಗಿ ನಾನು ಸಂಸಾರ ಸುಖಕ್ಕೆ ಅನರ್ಹನಾದೆ. ಈ ವಿಷಯ ಗೊತ್ತಾಗುತ್ತಲೇ ನನ್ನ ಮನಸ್ಸಿನಲ್ಲಿ ರಾಕ್ಷಸಿಯಂತೆ ಒಂ ಬಯಕೆ ಮೂಡಿ ಅದು ಮಹಾವೃಕ್ಷವಾಗಿ ವೃದ್ಧಿಸಿತು. ಬಾಳಿನಲ್ಲಿ

ಎಲ್ಲವನ್ನೂ ಕಳೆದುಕೊಂಡು ಏಕಾಂಗಿಯಾದ ನಾನು ನಿನ್ನನ್ನು ನೋಡಬೇಕೆಂಬ ಬಯಕೆಯನ್ನು ಮಾತ್ರ ದೂರೀಕರಿಸಲಾರದಾದೆ. ನನಗೊಬ್ಬ ಮಗನಿದ್ದಾನೆ. ಕಾಲದೊಂದಿಗೂ ಅವನೂ ಬೆಳೆದು ದೊಡ್ಡವನಾಗುತ್ತಿದ್ದಾನೆ. ಇದೇ ಯೋಚನೆ...''

''ಒಳಗೆ ಏನೋ ದೊಪ್ಪನೆ ಬಿದ್ದ ಸದ್ದು. ಆ ಸದ್ದು ಕೇಳಿ ಆತ ಮಾತುನಿಲ್ಲಿಸಿದ. ನಾನು ಒಳಕ್ಕೆ ಓಡಿದೆ. ಅಮ್ಮ...''

''ಅಮ್ಮ ನೆಲದ ಮೇಲೆ ಉರುಳಿಸಿದ್ದಳು. ಆಕೆಯ ತಲೆ ತಂದೆಯ ಮಡಿಲಲ್ಲಿತ್ತು. ಈ ಕಹಿ ಸತ್ಯವನ್ನು ತಾಳಲಾರದೆ ಎದೆಬಡಿತ ಯಾವಾಗಲೋ ನಿಂತಿತ್ತು. ಬದುಕಿದ್ದಿದ್ದರೆ ಈ ಸಮಸ್ಯೆಗೆ ಅದೇ ಉತ್ತರವೆಂದು ಹೇಳುವಂತೆ ಮುಖ ಪ್ರಶಾಂತವಾಗಿತ್ತು''

''ವಿಲಿಯಮ್ಸ್ ಚಲನೆಯಿಲ್ಲದ ಪ್ರತಿಮೆಯಂತಾದ. ತಾನು ಹೊರಗಿಟ್ಟ ಸತ್ಯ ಈ ರೀತಿಯ ಫಲ ನೀಡುವುದೆಂದು ಆತನು ಕನಸಿನಲ್ಲೂ ಊಹಿಸಿರಲಾರ. ಆತನದು ತಪ್ಪೇನೂ ಇಲ್ಲ.ಈ ಎಲ್ಲಾ ಒಳ್ಳೆಯ ಮನಸ್ಸಿನಿಂದಲೇ ಮಾಡಿದ ಆದರೆ ವಿಧಿ ಹಾಗೆ ಮಾಡಿತ್ತು. ಕುಂಟುತ್ತಲೇ ಹುಚ್ಚನಂತೆ ಹೊರಕ್ಕೆ ಓಡಿದ.

''ತಂದೆ ಮಾತ್ರ ಆಕಾಶವನ್ನು ನೋಡುತ್ತಾ ನಿಂತಿದ್ದರು. ಮತ್ತೆ ಅವರು ಈ ಷಾಕ್‌ನಿಂದ ಪಾರಾಗಲೇ ಇಲ್ಲ. ಆಗಲೇ ಅವರು ಹಿಮಾಲಯಕ್ಕೆ ಹೊರಟುಹೋಗಿದ್ದು...''

''ಈಗ ಹೇಳಿ, ಈ ಕೃತ್ರಿವ ಪದ್ಧತಿ ಒಳ್ಳೆಯದೇ?''

ಡಾ।। ವಂಶೀಕೃಷ್ಣ ಸಹಾನುಭೂತಿಯಿಂದ ಡಾಕ್ಟರನ್ನು ನೋಡಿದ. ಆತನ ವಯಸ್ಸು ಈ ಕಥೆ ಕೇಳಿ ಭಾರವಾಗಿತ್ತು.

''ನೀವು ಗುಂಟೂರಿನಲ್ಲಿ ಪ್ರಾಕ್ಟೀಸ್ ಬಿಟ್ಟು ಹೀಗೆ ಹಳ್ಳಿಗೆ ಬರಲು ಕಾರಣ ಇದೇ ಎನಿಸುತ್ತದೆ'' ಎಂದ. ಧ್ವನಿಯಲ್ಲಿ ಅನುಕಂಪ ತುಂಬಿತ್ತು.

''ಹೌದು ಅಲ್ಲಿ ಇರಲಾರದಾದೆ. ನನಗೆ ಯಾರೂ ಇಲ್ಲ. ಮದುವೆ ಈ ಸಂಬಂಧಗಳ ಕೋಟಲೆಗಳ ಮೇಲಣ ಆಸೆ ನಶಿಸಿತ್ತು. ಒಂದು ಬಗೆಯ ನಿರ್ಲಿಪ್ತತೆ ಆವರಿಸಿತ್ತು. ಪ್ರತಿ ನಿಮಿಷವೂ ನಾನವುದೋ ಬೇರೆ ಬೀಜದಿಂದ ಹುಟ್ಟಿದ್ದೇನೆ ಎನ್ನುವ ಅನಿಸಿಕೆ ತೀರಾ ಕ್ರೂರವಾದ ನೋವನ್ನು ನೀಡುತ್ತಿತ್ತು. ಆದರೆ ಇದೇ ವಿಷಯ ವಿವರಣೆಗೆ ವಿಶ್ಲೇಷಣೆಗೆ ಏನೂ ಇರುವುದಿಲ್ಲ!'' ನೋವಿನಿಂದ ತೆಳುನಗೆ ಬೀರಿದ ಡಾಕ್ಟರ್.

''ನನಗೆ ಪರಿಸ್ಥಿತಿ ಅರ್ಥವಾಗುತ್ತದೆ'' ಎಂದ ವಂಶೀಕೃಷ್ಣ.

## 18

''ಲೇಡೀಸ್ ಅಂಡ್ ಜಂಟಲ್ಮನ್'' ಎಂದ ವೈಟ್ ಷಾಡೋ.

ಶ್ರೀಮಂತರೊಬ್ಬರು ಯಾವುದೋ ಸಮಾರಂಭ ಏರ್ಪಡಿಸಿದ್ದರು. ಸುತ್ತಲೂ

ಸಹಪತ್ರಕರ್ತರೊಂದಿಗೆ ವೈಟ್‌ಷಾಡೋ ಅಲ್ಲಿಗೆ ಬಂದಿದ್ದ. ಮಾತಿನಲ್ಲಿ ಅವನೊಬ್ಬ ಯಕ್ಷಿಣಿಗಾರನೆಂಬುದು ಗೊತ್ತಾಯಿತು. ಎಲ್ಲರೂ ಅವನ ಸುತ್ತಲು ಸೇರಿದರು. ಯಾವುದಾದರೂ ಯಕ್ಷಿಣಿ ತೋರಿಸಿ ಎಂದು ಪೀಡಿಸತೊಡಗಿದರು.

ಕನ್ನಡಕ ತೊಟ್ಟ ಬಿಳಿಯ ಹುಡುಗಿ ಸುಂದರವಾಗಿ ಆಕರ್ಷಕವಾಗಿದ್ದಳು. ಹಣವಂತರ ಕುಟುಂಬಕ್ಕೆ ಸೇರಿದವಳೇನೋ ಮಾತಿನಲ್ಲಿ ಬಿಗುಮಾನ, ದರ್ಪಗಳಿಗೇನೂ ಕಡಿಮೆ ಇರಲಿಲ್ಲ. ಷಾಡೋ ದೃಷ್ಟಿ ಅವಳ ಮೇಲೆ ಬಿತ್ತು.

''ಏನು ಯಕ್ಷಿಣಿ ಮಾಡಬೇಕೆಂದು ಹೇಳ್ತೀರಿ ಮೇಡಂ?'' ಎಂದ ಅತಿವಿನಯದಿಂದ.

''ನಿಮಗೆ ಬರೋದು ಮಾತ್ರ ಮಾಡ್ತೀರೇ ಹೊರ್ತು ನಾ ಕೇಳಿದ್ದೆಲ್ಲಾ ಮಾಡ್ತೀರಾ?'' ಎಂದಳು ವ್ಯಂಗ್ಯವಾಗಿ. ಅಲ್ಲಿದ್ದವರೆಲ್ಲಾ ನಕ್ಕರು. ಷಾಡೋ ನಗುತ್ತಾ ಹೇಗೂ ಇರಲಿ ನೀವು ಹೇಳಬಾರದೇ?'' ಎಂದ.

''ಈ ಸೋಫಾವನ್ನು ಇಲ್ಲಿಂದ ಮಾಯಮಾಡಿ ನೋಡೋಣ'' ಎಂದಳು.

ಷಾಡೋ ಆ ಸೋಫಾವನ್ನು ಪರೀಕ್ಷಾ ದೃಷ್ಟಿಯಿಂದ ನೋಡುತ್ತಾ ''ಅದನ್ನು ಮಾಡಲಾಗೋಲ್ವೆನೋ. ಆದರೆ ಈ ಹತ್ತು ಪೈಸೆಯನ್ನು ಮಾಯಮಾಡುತ್ತೇನೆ'' ಎನ್ನುತ್ತಾ ಅದನ್ನು ಪಕ್ಕದಲ್ಲಿದ್ದವರ ನೊಸಲಿನ ಮೇಲೆ ಟಪ್ಪನೆ ಅಂಗೈಯಿಂದ ಬಡಿಯುತ್ತಾ 'ಚೆಕ್ ಷಾಡೋ' ಎಂದ.

ಹತ್ತು ಪೈಸೆ ನಾಣ್ಯ ಕಾಣದಾಯಿತು. ಎಲ್ಲರ ಮುಖಗಳಲ್ಲೂ ಆಶ್ಚರ್ಯ ಅಷ್ಟರಲ್ಲಿ ಪಕ್ಕದಲ್ಲಿದ್ದ ಆತ ಕಿಸೆಯಿಂದ ಆ ನಾಣ್ಯವನ್ನು ತೆಗೆದುಕೊಟ್ಟ.

ಕನ್ನಡಕದ ಹುಡುಗಿ ಕೋಪದಿಂದ ''ಪಕ್ಕದವರು ನನ್ನ ಕಡೆಯವರಾಗಿದ್ದರೆ ನಾನೂ ಈ ರೀತಿ ಟ್ರಿಕ್ ಮಾಡುತ್ತೇನೆ'' ಎಂದಳು.

''ಹೋಗಲಿ ನನ್ನ ಕಡೆಯವರಲ್ಲದ ನಿಮ್ಮ ಬಳಿಯೇ ಈ ಟ್ರಿಕ್ ಮಾಡಲೇ ಮೇಡಂ?'' ಎಂದ.

''ಹ್ಞು, ಆಗಲಿ''

ಇಪ್ಪತ್ತೈದು ಪೈಸೆ ನಾಣ್ಯವನ್ನು ತೆಗೆದು ಆಕೆಯ ತಲೆಯ ಮೇಲಿಟ್ಟು 'ಚೆಕ್ ಷಾಡೋ' ಎಂದ. ನಾಣ್ಯ ಕಾಣದಾಯಿತು. ಜನರು ಮತ್ತೆ ಚಪ್ಪಾಳೆತಟ್ಟಿದರು. ಆಕೆ ಅಚ್ಚರಿಯಿಂದ ಎಚ್ಚರಗೊಳ್ಳುವ ಮೊದಲೇ 'ಎಲ್ಲಿ ನನ್ನ ಇಪ್ಪತ್ತೈದು ಪೈಸೆ?' ಎಂದು ಕೇಳಿದ.

''ನನಗೇನು ಗೊತ್ತು?''

''ನನ್ನ ಕಡೆಯವರು ಅದನ್ನು ನನಗೆ ಕೊಡಲಿಲ್ಲವೇ? ಹಾಗೆ ನೀವೂ ನನಗೆ ಇಪ್ಪತ್ತೈದು ಪೈಸೆ ವಾಪಸ್ ಮಾಡಿ'' ಎಂದು ಆತುರಪಡಿಸಿದ.

ನೋಡಿದಳು ಆಕೇ ಎಲ್ಲರ ನೋಟ ಆಕೆಯ ಮೇಲೆ ಇತ್ತು. ಕೋಪದಿಂದ ''ನನ್ನಲ್ಲಿ ಇಲ್ಲ, ಬಚ್ಚಿಡಲು ಜೇಬುಗಳಿಲ್ಲ'' ಎಂದಳು.

''ಹುಡುಕಿ ಮೇಡಂ, ಇಲ್ಲಿ ಸಾಧ್ಯವಿಲ್ಲ ಎಂದರೆ ಬಾತ್‌ರೂಂಗೆ...''

ಮಾತು ಪೂರ್ಣವಾಗಿರಲಿಲ್ಲ. ಮುಖವೆಲ್ಲಾ ಕೆಂಪೇರಿತ್ತು. ಮೂಗು ಅರಳಿತ್ತು. 'ಯೂ ಈಡಿಯಟ್' ಎಂದು ಕಿರುಚಿದಳು. ಹಲವು ರೀತಿಗಳಲ್ಲಿ ಯೋಚಿಸಿ ಅರ್ಥೈಸುತ್ತಾ ಇತರರು ನಗತೊಡಗಿದರು. ಅಷ್ಟರಲ್ಲಿ ಹೋಸ್ಟ್‌ಬರುತ್ತಲೇ ಎಲ್ಲರ ನೋಟವು ಅತ್ತ ತಿರುಗಿತು. ಪಾರ್ಟಿ ಪ್ರಾರಂಭವಾಯಿತು.

ಹತ್ತು ನಿಮಿಷಗಳ ನಂತರ ಎಲ್ಲರೂ ಪಾರ್ಟಿಯಲ್ಲಿ ಮಗ್ನರಾದ ಮೇಲೆ ಆಕೆ ಮೆಲ್ಲನೆ ಷಾಡೋ ಪಕ್ಕಕ್ಕೆ ಸೇರಿದಳು. ''ಇಪ್ಪತ್ತೈದು ಪೈಸೆ ಹೇಗೆ ಮಾಯವಾಯಿತು ಹೇಳುತ್ತೀರಾ?'' ಎಂದು ತುಂಬಾ ನಯವಾಗಿ ಕೇಳಿದಳು ಹಳೆಯ ಹಗೆತನ ಮರೆತಂತೆ.

''ಅದಕ್ಕೆ ಅದೃಶ್ಯಕರಣಿ ಎನ್ನುವ ದೇವತೆಯನ್ನು ಹದಿನಾರು ದಿನ ಆರಾಧಿಸಬೇಕು. ಮಂತ್ರಸಿದ್ಧಿ ತುಂಬಾ ಕಷ್ಟ''

''ಮೈ ಗಾಡ್''

''ಹೋಗಲಿ ಅದಕ್ಕಿಂತಲೂ ಸುಲಭವಾದ ಬೇರೊಂದು ಟ್ರಿಕ್ ಕಲಿಸುತ್ತೇನೆ ಒಂದು ನ್ಯೂಸ್ ಪೇಪರ್ ಕೊಡಿ''

''ಟೇಬಲಿನಿಂದ ಪೇಪರ್ ತೆಗೆದು ಕೊಟ್ಟಳು. ಇದರಲ್ಲಿಯ ವಾರ್ತೆ ಒಂದು ಓದಿ. ಉದಾಹರಣೆಗೆ...''' ಎಂದು ತೋರಿಸಲು ಹಿಗಿ ಮೌನವಾದ.

ಅವನ ಮುಖದಲ್ಲಿ ಬದಲಾಗುತ್ತಿದ್ದ ಭಾವನೆಗಳನ್ನು ನೋಡಿ ಆಕೆ 'ಏನು?' ಎಂದು ಕೇಳಿದಳು.

''ಇವರು...ಇವರು...'' ಎಂದು ಫೋಟೋ ತೋರಿಸಿದ.

ಆಕೆ ಕೈಯಲ್ಲಿದ್ದ ಪತ್ರಿಕೆ ತೆಗೆದುಕೊಂಡು ''ಇವರು ತಿಳಿಯದೆ ಇರುವುದು ಎಂದರೇನು?...ಓಹೋ ನೀವು ಇರುವುದು ದೆಹಲಿಯಲ್ಲವೇ! ಈ ಊರಿನ ದೊಡ್ಡ ಬಿಸಿನಲಸ್ ಮಾಗ್ನೆಟ್, ಮೊನ್ನೆ ಸತ್ತರು. ಇವರ ಮಗಳು ನನ್ನ ಕ್ಲಾಸ್‌ಮೇಟ್''

''ಗೌರಿ...''

''ಹೌದು, ಕೇದಾರಗೌರಿ. ಕಳೆದ ಬೇಸಿಗೆಯಲ್ಲಿ ಮದುವೆಯಾಯಿತು. ಈಗ ಕೃಷ್ಣಾಪುರದಲ್ಲಿದ್ದಾಳೆ''

''ಗೌರಿಗೆ ಮದುವೆ ಕೂಡ ಆಯಿತೇ?''

''ಹೌದು ಇದೇನು ಒಂದು ರೀಲತಿ ಇದೀರಲ್ಲಾ ಭಾವಾನಿಶಂಕರ್ ನಿಮಗೆ ಗೊತ್ತೇ?''

''ಗೊತ್ತು''

''ಹೇಗೆ?''

''ಅವರು ತನ್ನ ತಂದೆ''

## 19

ಅವತಾರ್‌ಬಾಬಾ ಅಭೌತ ಪ್ರಭಾವಗಳಿಗೆ ಒಳಗಾಗುವ ವ್ಯಕ್ತಿ. ಆದರೆ, ರಾಕೇಶ್‌ನಂತೆ ರಾಕ್ಷಸ ಪ್ರವೃತ್ತಿಗೆ ಅವನ ಮನಸ್ಸು ಒಳಪಟ್ಟಿರಲಿಲ್ಲ. ಅದು ಬೇರೊಂದು ಕಡೆ ವ್ಯಾಪಿಸಿತ್ತು. ಆದರಿಂದ ಸ್ವ-ವಶೀಕರಣಕ್ಕೆ ತುತ್ತಾದ ಬುದ್ಧಿಸ್ಥಿಮಿತದಲ್ಲಿ ಇಲ್ಲದ ವ್ಯಕ್ತಿ (ಸೆಲ್ಫ್ ಹಿಪ್ನಾಟಿಕ್ ಸಿಎಕೋಪಾತ್) ಆಗಿದ್ದ. ಮನುಷ್ಯ ಬೆಳೆದ ನಂತರವೂ ಅವನ ಮನೋ ಪ್ರವೃತ್ತಿ, ನಡೆವಳಿಕೆಬಹುಪಾಲು ಅವನು ಬಾಲ್ಯದಲ್ಲಿ ಇದ್ದ ಪರಿಸ್ಥಿತಿಗಳ ಮೇಲೆ ಆಧಾರಿಸಿರುತ್ತದೆ ಎನ್ನುವುದಕ್ಕೆ ಅವತಾರ್‌ಬಾಬಾನ ಜೀವನ ಒಳ್ಳೇ ಉದಾಹರಣೆ.

ಬಾಬಾ ಬಾಲ್ಯನಾಮ ಕೃಷ್ಣ. ತಂದೆ-ತಾಯಿಗಳು ತೀರಾ ಬಡವರು.

ಒಮ್ಮೆ ಆತನ ಚಿಕ್ಕಮ್ಮ ತಮ್ಮ ಊರಿಗೆ ಹೋಗಲು ಸಿದ್ಧವಾಗುತ್ತಿದ್ದರೆ ''ಈಗ ಹೋಗಬೇಡ್ವೆ...'' ಎನ್ನುತ್ತಾ ಅಳಲು ಪ್ರಾರಂಭಿಸಿದ. ಸಾಧಾರಣವಾಗಿ ಮಕ್ಕಳಿಗೆ ಬಂದಲೂಗಳು ಮನೆಗೆ ಬಂದರೆ ಸಂಭ್ರಮ. ಇದರಿಂದ ಮಗುವಿನ ಮಾತಿಗೆ ತಾಯಿಯೂ ತಾಳ ಹಾಕಿದಳು. ಹಾಗೂ, ಹೀಗೂ ಅವನ ಚಿಕ್ಕಮ್ಮನ ಅಂದಿನ ಪ್ರಯಾಣ ಸ್ಥಗಿತಗೊಂಡಿತು.

ಅದೇ ದಿನ ಅವರು ಹೋಗಬೇಕೆಂದಿದ್ದ ಬಸ್, ಅಪಘಾತಕ್ಕೆ ತುತ್ತಾಯಿತು. ಬಸ್ಸಿನಲ್ಲಿದ್ದವರೆಲ್ಲಾ ಸತ್ತರು. ಇದರಿಂದ ಆ ಚಿಕ್ಕಮ್ಮ ಕೃಷ್ಣನೇ ತನ್ನ ಪ್ರಾಣ ಕಾಪಾಡಿದನೆಂದು ಎಲ್ಲರಲ್ಲೂ ಹೇಳಲು ಪ್ರಾರಂಭಿಸಿದಳು. ಆ ಪ್ರಚಾರ ಹಾಗೇ ವೃದ್ಧಿಗೊಂಡಿತು.

ಒಮ್ಮೆ ಅವನು ತಾಯಿಯನ್ನು ''ಅಮ್ಮಾ, ಅಪ್ಪ ಸತ್ತರೆ ನಮ್ಮ ಗತಿ ಏನು?'' ಎಂದು ಕೇಳಿದ. ಇದರಿಂದ ಕೋಪಗೊಂಡ ತಾಯಿ ಅವನ ನೆತ್ತಿಯಮೇಲೆ ಮೊಟಕಿದ್ದಳು. ಇದು ನಡೆದ ನಾಲ್ಕು ವರ್ಷಗಳಿಗೆ ಅಪ್ಪ ಸತ್ತ. ಆಗ ಆಕೆ ಎದೆ ಬಡಿದುಕೊಳ್ಳುತ್ತಾ, ''ಮಗುವಿನ ಬಾಯಿಂದ ಬ್ರಹ್ಮ ಹೇಳಿಸಿದ್ರೂ ನಾನು ಕೇಳಲಿಲ್ವೇ...'' ಎನ್ನುತ್ತಾ ಗೋಳಾಡಿದಳು ತಾಯಿ. ಇದರಿಂದ ಕೃಷ್ಣನ ಮಾತು ಎಂದರೆ ಅವರ ಬಂಧುವರ್ಗದಲ್ಲಿ ಸ್ವಲ್ಪ ಕುತೂಹಲಮೂಡಿತು.

ಇದರ ನಂತರದ ನಾಲ್ಕು ತಿಂಗಳಿಗೆ ಅವನ ಅಕ್ಕ ಸಿಂಪಿಗನೊಂದಿಗೆ ಪರಾರಿಯಾಗುವ ಮುನ್ನ ತನ್ನ ಭವಿಷ್ಯದ ಬಗ್ಗೆ ಕೇಳಿದ್ದಳು. ಸ್ವಲ್ಪ ಯೋಚಿಸಿ ''ಚೆನ್ನಾಗಿದೆ ಹೋಗು'' ಎಂದಿದ್ದ. ಕಾಣೆಯಾದ ಆಕೆಗಾಗಿ ಮನೆಯವರು ಶೋಧನೆ ಸಾಗಿಸುತ್ತಿದ್ದರೆ

''ಸಿಂಪಿಗನೂ ಇಲ್ಲನೋಡಿ'' ಎಂದು ಹೇಳಿದ್ದ. ಇದರಿಂದ ಹೋದವರನ್ನು ಮರೆತು ಅಲ್ಲಿಯವರು ಹುಡುಗನ ಬಗ್ಗೆಯೇ ಮಾತನಾಡಲು ಪ್ರಾರಂಭಿಸಿದರು. ಅವನ ನಾಲಿಗೆಯಲ್ಲಿ ಬ್ರಹ್ಮನೋ, ಸರಸ್ವತಿಯೋ ವಾಸಿಸುತ್ತಾರೆ ಎಂದು ಒಮ್ಮತದ ನಿರ್ಣಯ ಮಾಡಿದರು. ಇದರಿಂದ ತನ್ನಲ್ಲಿ ವಿಶೇಷವಾದ ಶಕ್ತಿ ಇದೆಯೆಂಬ ಭ್ರಮೆ ಅವನಿಗೂ ಉಂಟಾಯಿತು.

ಇದೆಲ್ಲಾ ನಡೆಯುವ ವೇಳೆಗೆ ಕೃಷ್ಣನಿಗೆ ಹದಿನಾರು ವಯಸ್ಸು. ಇದರ ನಂತರ ಅವನು ತೀರಾ ಆಳವಾಗಿ ಭ್ರಮಾಧೀನನಾದ. ಇದರಿಂದ ನಿದ್ರೆಯಲ್ಲಿ ಕನಸುಗಳು ಪ್ರಾರಂಭವಾದವು. ಪದ್ಮ ಪೀಠದಲ್ಲಿ ಮಂಡಿಸಿದ್ದ ದೇವ ( ಅಥವಾ ದೇವತೆ- ಇದು ಸರಿಯಾಗಿ ಕಾಣಿಸಲಿಲ್ಲವಂತೆ. ನಂತರದಲ್ಲಿ ಶಿಷ್ಯರು ಈ ಬಗ್ಗೆ ಬಹಳ ಪ್ರಚಾರ ಮಾಡಿದರು) ಆತನ ನಾಲಿಗೆ ಮೇಲೆ ಬೀಜಾಕ್ಷರಗಳನ್ನು ಬರೆದರಂತೆ. ಇದ್ದಕ್ಕಿದ್ದಂತೆಯೇ ಎಚ್ಚರವಾಗಿ ಈ ಸಂಗತಿ ಎಲ್ಲರಿಗೂ ಹೇಳಿದ ಅದೇ ಬೀದಿಯಲ್ಲಿದ್ದ ಒಬ್ಬ ವಿದ್ವಾಂಸ ಮರುದಿನ ಬೆಳಿಗ್ಗೆ ಬಂದು ದಿವ್ಯಕಾಂತಿಯಿಂದ ಶೋಭಾಯಮಾನವಾಗಿದ್ದ ಅವನ ಮುಖವನ್ನು ನೋಡಿ ನಮಸ್ಕರಿಸಿ ತನ್ನ ಜನ್ಮ ಪಾವನವಾಯಿತೆಂದ. ಈ ಘಟನೆಯೊಂದಿಗೆ ಇದ್ದಕ್ಕಿದ್ದಂತೆಯೇ ಆ ಬಡ ಕುಟುಂಬದ ಪರಿಸ್ಥಿತಿ ತೀರಾ ಬದಲಾಯಿತು. ಬಾಳೆಹಣ್ಣಿನಿಂದ ಪ್ರಾರಂಭವಾದ ಕಾಣಿಕೆಗಳು ರೇಷ್ಮೆ ಪಂಚೆಗಳ ತನಕ ಏರಿದುವು.

ಆ ವಯಸ್ಸಿನಲ್ಲೇ ಕೆಲವು ಸಂಗತಿಗಳು ಅವನ ಮನಸ್ಸಿನಲ್ಲಿ ಬಲವಾಗಿ ಮನೆಮಾಡಿಕೊಂಡಿದ್ದವು-

ಒಂದು-ಕೇಳಿದವರಿಗೆ ಸಾಧ್ಯವಿರುವಷ್ಟೂ ಒಳಿತೇ ನಡೆಯುತ್ತದೆ ಎಂದು ಹೇಳಬೇಕು. ಸಮಯವನ್ನು ಮಾತ್ರ ಸ್ವಲ್ಪ ಇತ್ತ - ಅತ್ತ ಸರಿಸಬೇಕು. ಯಾರಿಗೂ ಕೆಟ್ಟದರ ಬಗ್ಗೆ ತಿಳಿಸಬಾರದು. ಹೇಳಿದರೂ ಅದು ಬೇಗಹೋಗುತ್ತದೆ ಎಂದು ತಿಳಿಸಬೇಕು. ದೇವರ ಪ್ರತಿನಿಧಿಯಾಗಿ ಇದು ತನ್ನ ಕರ್ತವ್ಯ.

ಎರಡು-ಯಾವುದೋ ರೋಗದಿಂದ ನೋವು ಅನುಭವಿಸುತ್ತಿರುವವನು ಮೊದಲು ಡಾಕ್ಟರ್‌ಗಳ ಬಳಿಗೆ ಹೋಗಿ ನಂತರ ತಮ್ಮ ಬಳಿಗೆ ಬರುತ್ತಾನೆ. ಅಂತಹವರಿಗೆ ಏನು ಹೇಳಿದರೂ ಅರ್ಥವಾಗುವುದಿಲ್ಲ. ನೋವು ಕಡಿಮೆಯಾಗುವುದು ಮುಖ್ಯ. ತನ್ನ ಮೇಲೆ ಆವರಿಸಿರುವ ನಂಬಿಕೆಯೇ ಆ ಕೆಲಸ ಮಾಡಿಕೊಡುತ್ತದೆ. ತಾನೇ ಅವರನ್ನು ಸಂತೈಸಿ ಆದರಿಸಬೇಕು. ದೇವರ ಪ್ರತಿನಿಧಿಯಾಗಿ ಇದೆ ತನ್ನ ಕರ್ತವ್ಯ.

ಹೀಗೆ ಆತ ಸ್ವ-ಭ್ರಾಂತಿಗೆ ತುತ್ತಾಗಿದ್ದ. ಆಗ್ಗ ತಾನು ದೈವಾಂಶಸಂಭೂತನಾದ್ದರಿಂದ ಆತನ ಪ್ರತಿನಿಧಿ ಎಂಬ ನಂಬಿಕೆಗೆ ಮನೆಯಾಗಿದ್ದ ಕರ್ಪೂರಾರತಿಯನ್ನು ಬೆಳಗಿಸಿ

ತನ್ನ ಸುತ್ತ ತಾನೇಪ ಬೆಳಗಿಕೊಳ್ಳುತ್ತಿದ್ದ. ಊದುಬತ್ತಿಗಳನ್ನು ಹಚ್ಚಿ ತಾನೇ ಆ ಸುವಾಸನೆ ಸ್ವೀಕರಿಸುತ್ತಿದ್ದ.

ಹಲವು ವರ್ಷಗಳಿಂದ ಹೊಟ್ಟೆನೋವಿನಿಂದ ನರಳುವವನೊಬ್ಬ ಬಂದುಕುಳಿತ. ಅವನನ್ನು ಮುಟ್ಟುತ್ತಲೇ ಆ ನೋವನ್ನೆಲ್ಲಾ ಯಾರೋ ಸೆಳೆದು ಹೊರಗೆಸೆದಂತೆ ಅನುಭವಕ್ಕೆ ಬಂದು ಅವನು ನೋವಿನಿಂದ ಮುಕ್ತನಾದ. ಇದರಿಂದ 'ಫೆಯಿತ್ ಹೀಲರ್' ಎಂಬ ಹೆಸರು ಪ್ರಚಾರಕ್ಕೆ ಬಂತು. (ಎಷ್ಟೋ ದಿನಗಳಿಂದ ಆ ನೋವಿನಿಂದ ಬರಳುತ್ತಿದ್ದವನು ಆತನ ಮೇಲೆ ನಂಬಿಕೆಯಿಂದ ಬಂದಿದ್ದರಿಂದ ಆತ ಮುಟ್ಟಿಕೊಳ್ಳುತ್ತಲೇ, ಆ ಭ್ರಾಂತಿ ಒಂದೆರಡು ದಿನ ಅವನ ಮೇಲೆ ಪರಿಣಾಮ ಬೀರಿತು. ಮತ್ತೆ ನೋವು ಯಥಾ ಪ್ರಕಾರವಾಗಿ ಬರುವುದು ಆರಂಭವಾಯಿತು. ಆದರೆ ಈ ಸುದ್ದಿಗಿಂತಲೂ ವಾಸಿಯಾದ ಸುದ್ದಿ ಹೆಚ್ಚು ಪ್ರಚಾರವನ್ನು ಪಡೆಯಿತು).

ಇದರ ನಂತರ ಕೃಷ್ಣ 'ಅವತಾರ್ ಬಾಬಾ' ಎಂದು ರೂಢಿಗೆ ಬಂದ. ಕೆಲವು ಮಂದಿ ಶಿಷ್ಯರು, ಅಂತರಂಗ ಸೇವಕರು ಹೀಗೆ ಬಳಗಬೆಳೆಯಿತು.

ಒಮ್ಮೆ ವಿಮಾನ ಪ್ರಯಾಣ ಮಾಡುತ್ತಿದ್ದರೆ ಅವತಾರ್‌ಬಾಬಾ ಪಕ್ಕದಲ್ಲಿ 'ಇಂಟೆಲಿಜೆಂಟ್' ಎಂಬ ಪತ್ರಿಕೆಯ ಸಂಪಾದಕ ಕುಳಿತಿದ್ದ. ಭಾರತೀಯ ಎಲ್ಲಾ ಭಾಷೆಗಳ ಪತ್ರಿಕೆಗಿಂತಲೂ ಅತಿ ಹೆಚ್ಚಿನ ಪ್ರಸಾರವುಳ್ಳ ಪತ್ರಿಕೆ. ಆದರೂ ಅದು ಬುದ್ಧಿವಂತ ಓದುಗರಿಗಾಗಿ ಪ್ರಕಟವಾಗುವ ಪತ್ರಿಕೆಯೋ ಅಥವ ಬುದ್ಧಿವಂತ ಸಂಪಾದಕ ಮೂರ್ಖ ಓದುಗರಿಗಾಗಿ ನಡೆಸುತ್ತಿರುವ ಪತ್ರಿಕೆಯೋ, ಇದುವರೆವಿಗೂ ಯಾರಿಗೂ ಅರ್ಥವಾಗಿಲ್ಲ!

ಅವತಾರ್ ಬಾಬಾ ಆ ಸಂಪಾದಕನೊಂದಿಗೊ ಮಾತನಾಡಬೇಕಾಯಿತು. ಸದಾ ತನ್ನ ಕೈ ಚೀಲದಲ್ಲಿರಿಸುತ್ತಿದ್ದ ಎಂದೋ ಪ್ರಕಟವಾದ ಲೇಖನವೊಂದನ್ನು ಅವರಿಗೆ ತೋರಿಸಿದ. ಪ್ರಧಾನಮಂತ್ರಿ ಮತ್ತೆ ಅಧಿಕಾರಕ್ಕೆ ಬರುತ್ತಾರೆ, ಮತ್ತೆ ತೀರಾ ಗಂಭೀರ ಸಮಸ್ಯೆಯನ್ನು ಎದುರಿಸುತ್ತಾರೆ ಎಂಬುದನ್ನು ಕೆಲವು ವರ್ಷಗಳ ಮೊದಲೇ ಆ ಲೇಖನದಲ್ಲಿ ತಾವು ತಿಳಿಸಿರುವುದಾಗಿ ಹೇಳಿದ.

ಸಂಪಾದಕ ನಕ್ಕ. ಈ ರೀತಿಯ ಸಾವಿರಾರು ಮಂದಿಯನ್ನು ಆತಕಂಡಿದ್ದ. ಪ್ರಧಾನಮಂತ್ರಿಯ ಪಕ್ಕದಲ್ಲಿ ನಿಂತು ಫೋಟೋ ತೆಗಿಸಿಕೊಂಡ ಭವಿಷ್ಯದವರನ್ನೂ ಆತ ಕಂಡಿದ್ದ! ಲೇಖನಗಳನ್ನು ಬರೆಯುವವರಲ್ಲಿ ಕೆಲವು ಸತ್ಯಸಂಗತಿಗಳ ನೂರೂಪಣೆ ನಡೆದಿರುತ್ತದೆ. ಅವನ್ನೇ ಮತ್ತೆ ಮತ್ತೆ ಹೇಳುತ್ತಿರುತ್ತಾರೆ. ಉದಾಹರಣೆಗೆ- ದಕ್ಷಿಣ ಭಾಗದವನು ಮಂತ್ರಿಯಾಗುತ್ತಾನೆ. ಪದವಿಯಲ್ಲಿರುವಾಗ ಪ್ರಧಾನಿ ಸತ್ತು ಆ ಕುರ್ಚಿಗಾಗಿ ಕಾದಾಟ ನಡೆಯುತ್ತದೆ.

ಆದರೆ ಇವೆಲ್ಲಾ ಯಾವ ವರ್ಷದಲ್ಲಿ ನಡೆಯುತ್ತದೆ ಎಂಬುದನ್ನು ತಿಳಿಸುವುದಿಲ್ಲ.

ಎಂದೋ ಒಂದು ದಿನ ಇವು ನಡೆಯದೆ ಬೇರೆ ಮಾರ್ಗವಿಲ್ಲ. ಹಾಗೆ ನಡೆದರೆ ಒಡನೆಯೇ ಈ ಲೇಖನ ತೋರಿಸಿ ನಾನು ಮೊದಲೇ ಹೇಳಿದ್ದೆ ಎಂದು ಪ್ರಚಾರ ಪ್ರಾರಂಭಿಸುತ್ತಾನೆ.

ಇದೆಲ್ಲಾ ಅರಿತ ಆ ಸಂಪಾದಕ ತನ್ನ ಪತ್ರಿಕೆಯನ್ನು ಬುದ್ಧಿವಂತಿಕೆಯಿಂದ ಬಳಸಿಕೊಂಡ. ಓದುಗರ ಪ್ರಶ್ನೆಗಳಿಗೆ ಅವತಾರ್ ಬಾಬ ಉತ್ತರ ಕೊಡುತ್ತಾರೆ ಎಂದು ಪ್ರಕಟಿಸಿದ. ಇದರಿಂದ ಪ್ರಶ್ನೆಗಳು ರಾಶಿರಾಶಿಯಾಗಿ ಬಂದವು. 'ನಾನು ಎಂ.ಎಲ್.ಎ. ಆಗುತ್ತೇನೆಯೇ?' ಎಂಬ ಪ್ರಶ್ನೆಯಿಂದ 'ನನ್ನ ಬಿಳಿಸೆರಗು ವಾಸಿಯಾಗುತ್ತದೆಯೇ?' ಎನ್ನುವ ಪ್ರಶ್ನೆಯ ತನಕ ಬಂದವು. ಪ್ರಸಾರ ದ್ವಿಗುಣಗೊಂಡಿತು.

ಏನಕೇನ ಪ್ರಕಾರೇಣ ಅವತಾರ್ ಬಾಬಾ ದೇಶದಲ್ಲಿ ಒಬ್ಬ ಪ್ರಸಿದ್ಧ ಪುರುಷನಾದ.

'ಸೈನ್ಸ್ ಇಂಡಿಯಾ' ಪತ್ರಿಕೆಯಲ್ಲಿ ವಿಚಿತ್ರ ಶಿಶುಗಳ ಬಗ್ಗೆ ಲೇಖನ ಪ್ರಕಟವಾದ ನಂತರ ಬಾಬಾ ಕನಸಿನಲ್ಲಿ ಇಂದ್ರ ಕಾಣಿಸಿಕೊಂಡ- ಐರಾವತದಲ್ಲಿ ಮಂಡಿಸಿ ವಜ್ರಾಯುಧ ಹಿಡಿದಿದ್ದ. ಒಡನೆಯೇ ಕೃಷ್ಣಾಪುರಕ್ಕೆ ಹೋಗು ಎಂದು ಅಪ್ಪಣೆ ಮಾಡಿದ.

ದೇವರ ಆಜ್ಞೆಯನ್ನನುಸರಿಸಿ ದೇವಪುತ್ರ ಮರುದಿನವೇ ಸಪರಿವಾರ ಸಮೇತನಾಗಿ ಕೃಷ್ಣಾಪುರವನ್ನು ಪ್ರವೇಶಿಸಿ ಅಲ್ಲಿ ಉಳಿದುಕೊಂಡು ಕೋಷ್ಣಾಪುರದ ಪ್ರಜೆಗಳನ್ನು ದುಷ್ಟದೇವತೆಗಳ ಬಾಯಿಂದ ಕಾಪಾಡಲು ಅವತಾರ್ ಬಾಬಾ ತನ್ನೊಂದಿಗೆ ಮಂತ್ರದಿಂದ ಶುದ್ಧಿಕರಿಸಿದ ನೀರನ್ನೂ ತಂದಿದ್ದರು.

★★★

ಪ್ರೊಫೆಸರ್ ಪುಟ್ಟಣ್ಣ ಜೆನೆಟಿಕ್ಸ್ ಡಿಪಾರ್ಟ್‌ಮೆಂಟಿನಲ್ಲಿ ಸುಮಾರು ಹತ್ತು ವರ್ಷಗಳಿಂದ ಆ ವಿಶ್ವವಿದ್ಯಾಲಯದಲ್ಲಿ ಕೆಲಸ ಮಾಡುತ್ತಿದ್ದರೂ ಬಹುಮಂದಿ ಇತರ ಪ್ರೊಫೆಸರ್‌ಗಳಂತೆಯೇ ಆತನ ಬಗ್ಗೆಯೂ ವಿದ್ಯಾರ್ಥಿಗಳಿಗೆ ಗೌರವವಿಲ್ಲ. ಕೇವಲ ತಮ್ಮ ಕೆಲಸವನ್ನು ಮಾತ್ರ ನಡೆಸಿಕೊಳ್ಳುವ ಲೌಕಿಕಮಾರ್ಗಗಳನ್ನು ಅರಿತುಕೊಂಡಿರುವ ವಿದ್ಯಾರ್ಥಿಗಳು ಮಾತ್ರವೇ ಆತನಿಗೆ 'ಕಾಕಾ' ಹೊಡಾಯುತ್ತಿರುತ್ತಾರೆ. ಜೆನೆಟಿಕ್ಸ್ ಪದವು 'ಜ'ಯಿಂದ ಪ್ರಾರಂಭವಾಗುತ್ತದೆಯೋ 'ಜೆ'ಇಂದ ಪ್ರಾರಂಭವಾಗುತ್ತದೆಯೋ ಎಂದು ಗದರಿಸಿ ಕೇಳಿದರೆ ಹೇಳಲಾರದ ಆ ವೃದ್ಧನಿಗೆ ಬಹುಕಾಲದ ಆಸೆ ಅಮೇರಿಕಕ್ಕೆ ಹೋಗಿಬರುವುದು! ಅದಕ್ಕಾಗಿ ಆತ ಅನೇಕ ರೀತಿಗಳಲ್ಲಿ ಪ್ರಯತ್ನಿಸಿದ್ದ.

ಎಲ್ಲಾ ಆಕಾಂಕ್ಷೆಗಳಲ್ಲೂ ಮನುಷ್ಯನನ್ನು ಬಹುವಾಗಿ ಸುಡುವುದು ಕೀರ್ತಿ ಸ್ವತಃ ಶಕ್ತಿಯಿದ್ದ ರೆಪರವಾಗಿಲ್ಲ ಅನ್ಯಥಾ ಚಿಲ್ಲರೆ ಹಾದಿಗಳೇಗತಿ. ಪ್ರೊ ಪುಟ್ಟಣ್ಣನವರ ಬಯಕೆ ಆದ್ದರಿಂದಲೇ ತೀರಲಿಲ್ಲ.

ಯಾವುದಾದರೂ ಒಂದು ಸಂಸ್ಥೆ, ವಿಶ್ವವಿದ್ಯಾಲಯಗಳಲ್ಲಿ ಒಂದು ಉಪನ್ಯಾಸ ಮಾಡಿ ಅದರ ಸುದ್ದಿ ಭಾರತೀಯ ಪತ್ರಿಕೆಗಳಲ್ಲಿ ಬಂದರೆ ಅದೂ ಫೊಟೋ ಸಮೇತ

ತನ್ನ ಬಾಳೇ ಪುನೀತಗೊಂಡಿತು ಎಂದುಕೊಂಡಿದ್ದ. ಈ ಕೋರಿಕೆ ತನ್ನ ಸಾವಿಗೆ ಮೊದಲೇ ನೆರವೇರುತ್ತದೆ ಎಂಬ ನಂಬಿಕೆ ಕರಗಿತ್ತು. ಆದರೂ ಪ್ರಯತ್ನ ಕೈ ಬಿಡಲಿಲ್ಲ.

ಅದೇ ಸಮಯಕ್ಕೆ ಕೃಷ್ಣಾಪುರದ ವಿಚಿತ್ರ ಮಕ್ಕಳ ಬಗ್ಗೆ ಓದಿದ. ಒಡನೆಯೇ ಆತನ ಮಿದುಳಿಗೆ ಏನೋ ಸ್ಫುರಿಸಿತು.

ಕೆಲವು ವರ್ಷಗಳ ಹಿಂದೆ ಯಾವುದೋ ಕಾದಂಬರಿಯಲ್ಲಿ ಪಾದರಸ ನೀರಿನಲ್ಲಿ ಬೆರೆತಿದ್ದರೆ ಅದು ಕ್ರೋಮೋಸೋಮ್‌ಗಳಲ್ಲಿ ಮಾರ್ಪಾಡನ್ನುಂಟುಮಾಡಿ ಅದರ ಫಲವಾಗಿ ವಕ್ರವಾದ ಮಕ್ಕಳಾಗುತ್ತಾರೆ ಎಂದು ಓದಿದ್ದ. ಫ್ಯಾಕ್ಟರಿಗಳಿಂದ ಬರುವ ನೀರಿನಲ್ಲಿ ಕ್ಯಾನ್ಸರ್, ಕ್ಷಯ ಮುಂತಾದ ವ್ಯಾಧಿಗಳನ್ನುಂಟು ಮಾಡುವವೇ ವಿನಾ ಜೀನ್ಸ್ ಮೇಲೆ ಪ್ರಭಾವ ಬೀರಲಾರದು ಎಂಬುದನ್ನು ಆ ದೊಡ್ಡ ಪ್ರೊಫೆಸರ್ ಅರಿಯಲಾರದಾಗಿದ್ದ. ಆತನು ಓದಿದ ವಿಷಯಕ್ಕಿಂತಲೂ ಹೆಚ್ಚಾಗಿ ಆತ ಓದಿದ್ದ ಕಾದಂಬರಿಯೇ ನೆನಪಿನಲ್ಲಿದ್ದದ್ದು ಆತನ ವಿದ್ಯಾರ್ಥಿಗಳ ದುರದೃಷ್ಟ! ದೌರ್ಭಾಗ್ಯ! ಒಟ್ಟಿನಲ್ಲಿ ಇಷಲೂಟ ದಿನಗಳ ನಂತರ ತನಗೆ ಈ ರೀತಿಯಾದ ಅವಕಾಶ ಲಭಿಸಿದ್ದಕ್ಕಾಗಿ ತೀರ ಉಬ್ಬಿದ. ಕೃಷ್ಣಾಪುರಕ್ಕೆ ಹೋಗಿ ತನ್ನ ಸಂಶೋಧನೆ ಸಾಗಿಸಬೇಕೆಂದು ಸನ್ನದ್ಧನಾದ.

ಅಮೆರಿಕಾದಲ್ಲಿದ್ದ ತನ್ನ ಮಿತ್ರರಿಗೆ, ಭಾರತದಲ್ಲಿರುವ ತನಗೆ ಸಹಾಯಮಾಡಬಲ್ಲ ಮಿತ್ರರಿಗೆ ಅರಿಕೆಮಾಡಿ, ಎಲ್ಲಾ ಸಿದ್ಧತೆಗಳನ್ನೂ ಅವರಿಂದ ಮಾಡಿಸಿಕೊಂಡನು. 'ಭಾರತದ ಒಂದು ಹಳ್ಳಿಯಲ್ಲಿ ವಿಧಿ ವೈಚಿತ್ರ್ಯ' ಎಂಬ ವಿಷಯದ ಬಗ್ಗೆ ಜೆನೆಟಿಕ್ಸ್ ಆಧಾರದ ಮೇಲೆ ಒಂದು ಪ್ರಬಂಧ ಓದುವ ಅವಕಾಶವೂ ಆತನಿಗೆ ಲಭಿಸಿತು. ತನ್ನ ಇಬ್ಬರು ವಿದ್ಯಾರ್ಥಿಗಳೊಂದಿಗೆ ಕೃಷ್ಣಾಪುರಕ್ಕೆ ಹೊರಟ.

ಒಟ್ಟಿನಲ್ಲಿ ಎಲ್ಲಾ ದಿಕ್ಕುಗಳಿಂದ ಅತಿರಥ-ಮಹಾರಥನು ಕೃಷ್ಣಾಪುರಕ್ಕೆ ಬಂದು ಸೇರಿಕೊಂಡರು. ಇವರೆಲ್ಲರಿಗೂ ತಿಳಿಯದ ವಿಷಯ ಒಂದೇ- ಉಸ್ಪೋಕ್ ಇವರೆಲ್ಲರನ್ನೂ ಗಮನಿಸುತ್ತಿದೆ ಎಂಬುದು!

ಅವತಾರ್‌ಬಾಬಾ ಅಲ್ಲಿ ಸೇರಿಕೊಳ್ಳುವ ವೇಳೆಗೆ ಆ ಊರು ದೋಸೆಯುಬೇಯುವಂತೆ ಬೇಯುತ್ತಿತ್ತು. ಒಂದು ಸಣ್ಣ ಸಂಗತಿ ಹಿರಿದಾಗೇ ಮತ್ತೆ ಬೆಟ್ಟವಾಗಿ ಪ್ರಸಾರಕ್ಕಿಳಿಯುತ್ತಿತ್ತು.

ಮಾಸ್ ಹಿಸ್ಟೀರಿಯಾ ಮೊದಲಾಗುವ ಸೂಚನೆಗಳು ಕಾಣತೊಡಗಿದವು. ಅನುಮಾನಗಳು ಅತಿಯಾದವು. ಪ್ರಜೆಗಳಲ್ಲಿ ಭೀತಿ ಅಪಾರ. ದೇವಾಲಯಗಳಲ್ಲಿ ಪೂಜೆಗಳು ನಡೆದವು. ಗ್ರಾಮ ದೇವತೆಗಳಿಗೆ ಬಲಿಗಳು ನಡೆದವು. ಮುಖ್ಯವಾಗಿ ಗರ್ಭಿಣಿಯರಿದ್ದ ಕುಟುಂಬಗಳಲ್ಲಿ ಹಾಹಾಕಾರ ಮೊದಲಾಯಿತು. ಇನ್ನೊಂದೆರಡು ಜನನಗಳು ಇದೇ ರೀತಿ ಸಾಗಿದರೆ ಕುಟುಂಬಗಳು ವಲಸೆ ಹೋಗುವುದರಲ್ಲಿ ಸಂಶಯವಿರಲಿಲ್ಲ. ಅದುವರೆವಿಗೂ ಪ್ರಶಾಂತವಾಗಿ ಸುಭಿಕ್ಷವಾಗಿದ್ದ ಕೃಷ್ಣಾಪುರ ಈಗ

ಪ್ರತಿಕ್ಷಣವೂ ಭಯದಿಂದ ತಲ್ಲಣಿಸುತ್ತಿತ್ತು. ಯಾವ ಕ್ಷಣದಲ್ಲಿ ಎಂತಹ ವಿಕೃತ ಶಿಶು ಜನಿಸುವುದೋ ಎಂಬ ಭಯ.

ಅದೇ ಸಮಯಕ್ಕೆ ಅವತಾರ್‌ಬಾಬಾ ಕೃಷ್ಣಾಪುರ ಪ್ರವೇಶಿಸಿದ್ದು. ಬೇರೆಲ್ಲ ಎಷ್ಟು ಗೊತ್ತಿದ್ದರೂ ಆ ಹಳ್ಳಿಯವರಿಗೆ ಇವರ ಹೆಸರೇ ಗೊತ್ತಿರಲಿಲ್ಲ. ಬಹುಬೇಗ ಬಾಬಾ ಹೆಸರು ಒಂದು ಸಣ್ಣ ಘಟನೆಯಿಂದ ಆ ಹಳ್ಳಿಯಲ್ಲಿ ಮೂಲೆಮೂಲೆಗೂ ಗೊತ್ತಾಯಿತು.

ಮಂಗಮ್ಮನ ಕೈಗೆ ತಾಯತಿಯನ್ನು ಕಟ್ಟಿ ತನಗೆ ತಾನೇ ನಮಸ್ಕಾರವನ್ನು ಮಾಡಿಕೊಂಡ ಅವತಾರ್‌ಬಾಬಾ! ಸುತ್ತಲೂ ಸೇರಿದ್ದ ಜನ- ಮಂಗಮ್ಮನ ಗಂಡನೂ ಸೇರಿದಂತೆ- ಆತನನ್ನು ಗೌರವ ಭಕ್ತಿಗಳೊಂದಿಗೆ ನೋಡಿದರು.

''ಈಕೆಯ ರಕ್ಷಣೆ ನಾನು ಮಾಡುತ್ತೇನೆ. ದುಷ್ಟ ಶಕ್ತಿಗಳಿಗೆ ವಿರುದ್ಧವಾಗಿ ನಾನು ಹೋರಾಡಬೇಕೆಂದು ದೇವರೇ ಅಪ್ಪಣೆ ಮಾಡಿದ್ದಾರೆ. ನಿಮ್ಮ ಊರಿನ ಜನ ಗ್ರಾಮದೇವತೆಯಾದ ಪೋಲೇರಮ್ಮನಿಗೆ ಅಪಚಾರ ಮಾಡಿದ್ದಾರೆ. ಆದ್ದರಿಂದಲೇ ಈ ಅನರ್ಥ ಪರಂಪರೆ ಸಾಗುತ್ತಿದೆ'' ಅವತಾರ್‌ಬಾಬಾ ಗಂಭೀರವಾಗಿ ಹೇಳಿದ.

ಹಳ್ಳಿಗರು ಮತ್ತಷ್ಟು ಭಯಭ್ರಾಂತರಾಗಿ ಆತನನ್ನು ನೋಡಿದರು.

''ಈಗೆಷ್ಟು ತಿಂಗಳು?...''

''ಒಂಬತ್ತು ತುಂಬಿದೆ ಸ್ವಾಮಿ. ಈಗ ದಿನಗಳು...''

''ಮಂಗಮ್ಮ ನೀನೊಂದು ಹೂ ಹೆಸರು ಹೇಳು''

''ಗುಲಾಬಿ ಸ್ವಾಮಿ''

''ಭೇಷ್ ನಿನಗೆ ಗಂಡು ಮಗುವೇ ಆಗುತ್ತದೆ'' ಎಂದು ಶಿಷ್ಯರತ್ತ ನೋಡಿ 'ಎಲ್ಲಾ ಸಿದ್ಧತೆಗಳನ್ನೂ ನಡೆಸಿ' ಎಂದರು. ಒಂದೆರಡು ಕ್ಷಣಗಳ ನಂತರ 'ಮಂಗಮ್ಮನಿಗೆ ನಮ್ಮ ಆಶ್ರಮದಲ್ಲಿಯೇ ಅವಕಾಶ ಕಲ್ಪಿಸಿಕೊಡಿ, ಪ್ರಸವ ಇಲ್ಲೇ ನಡೆಯುತ್ತದೆ. ಆಶ್ರಮದ ಸುತ್ತಲೂ ಪವಿತ್ರ ಜಲವನ್ನು ಸಿಂಪಡಿಸುತ್ತೇನೆ. ಯಾವ ಕ್ಷುದ್ರದೇವತೆ ಹೇಗೆ ಪ್ರವೇಶಿಸುತ್ತದೆಯೋ ನಾನು ನೋಡುತ್ತೇನೆ' ಎಂದು ಹೇಳುತ್ತಾ ಎದ್ದುನಿಂತ ಅವತಾರ್‌ಬಾಬಾ.

ಆಶ್ರಮದಲ್ಲಿಯೇ ಮಂಗಮ್ಮನಿಗಾಗಿ ಒಂದು ಹಾಸಿಗೆ ಸಿದ್ಧವಾಯಿತು. ಈ ಸಂಘಟನೆಯ ಎರಡು ದಿನಗಳ ನಂತರ ಒಂದು ದಿನ ಅರ್ಧರಾತ್ರಿಯಲ್ಲಿ ಆಕೆಗೆ ನೋವು ಪ್ರಾರಂಭವಾಯಿತು. ಅವತಾರ್‌ಬಾಬಾ ಹೋಮ ಪ್ರಾರಂಭಿಸಿದ. ಬೆಳಗಾಗುತ್ತಿದ್ದಂತೆಯೇ ಪ್ರಸವ ನಡೆದು ಹತ್ತು ಪೌಂಡಿನ ಆರೋಗ್ಯ ಪೂರ್ಣ ಗಂಡು ಮಗುವಾಯಿತು.

ಅಂದಿನಿಂದಲೇ ಆ ಹಳ್ಳಿಯ ಮುಕ್ಕಾಲು ಭಾಗದ ಜನರ ಪಾಲಿಗೆ ಅವತಾರ್‌ಬಾಬಾ ಪ್ರತ್ಯಕ್ಷ ದೈವವಾದ. ಇನ್ನುಳಿದವರು ಅಲ್ಲಿಯ ಎಮ್ಮೆಲ್ಯೇಗೆ ಬಾಬಾ

ಸಂಬಂಧಿಸಿದ ಜನರು. ಅಲ್ಲಿ ನಡೆದ ಸಂಗತಿ ಇದು- ಅವತಾರ್ ಬಾಬಾ ಮಂಗಮ್ಮನಿಗೆ ತಾಯತ ಕಟ್ಟಿದಾಗ ಸೋತು ಹೋಗಿದ್ದ ರಾಜಕೀಯ ಗಣ್ಯನು ಅಲ್ಲೇ ಇದ್ದ. ಆತನೇ ಅಲ್ಲಿ ನಿಂತು ತಾಯತ ಕಟ್ಟಿಸಿದ್ದ. ಆದ್ದರಿಂದಲೇ ಎಮ್ಮೆಲ್ಯೇ ಕಡೆಯವರ್‍ಯಾರೂ ತಾಯತ ಕಟ್ಟಿಸಿಕೊಳ್ಳಲಿಲ್ಲ. ಆ ಎಲ್ಲೆಲ್ಯೆಗೆ ಬಲಭುಜದಂತಿದ್ದ ಗಂಗುಲು ಹೆಂಡತಿಯೂ ಪೂರ್ಣ ಗರ್ಭಿಣಿ. ಕೇವಲ ಪಂಥಕ್ಕೆ ಕಟ್ಟುಬಿದ್ದು ಆಕೆಯನ್ನು ಬಾಬಾ ಬಳಿಗೆ ಕರೆದೊಯ್ಯಲಿಲ್ಲ. ಅಷ್ಟೇ ಅಲ್ಲದೆ ಬಾಬಾ ಬಗ್ಗೆ ದುಷ್‌ಪ್ರಚಾರ ಪ್ರಾರಂಭಿಸಿದ.

ಹತ್ತು ದಿನಗಳ ನಂತರ ಆಕೆ ಸತ್ತ ಶಿಶುವನ್ನು ಹೆತ್ತಳು. ಆ ಶಿಶುವಿಗೆ ತಲೆ ಇರಬೇಕಾದ ಎಡೆಯಲ್ಲಿ ಸಣ್ಣ ಮಾಂಸದ ಮುದ್ದೆ ಇತ್ತು, ಅಷ್ಟೆ!

ಬಾಂಬು ಸಿಡಿದಂತೆ ಈ ವಾರ್ತೆ ಕೃಷ್ಣಾಪುರ ಮತ್ತು ಸುತ್ತಮುತ್ತಲೂ ಒಡನೆಯೆನೇ ವ್ಯಾಪಿಸಿತು. ಜನರು ನಡೆದು, ಎತ್ತಿನ ಗಾಡಿಗಳನ್ನು ಕಟ್ಟಿಕೊಂಡು ತಂಡತಂಡವಾಗಿ ಅಲ್ಲಿಗೂ ಬರತೊಡಗಿದರು. ಆಶ್ರಮದ ಸುತ್ತಲೂ ಒಂದು ಕಿಲೋಮೀಟರ್ ತನಕ ತೆಂಗಿನಕಾಯಿ ಮಾರುವವರಿಂದ ಅವತಾರ್ ಬಾಬಾ ಫೋಟೋ ಮಾರುವ ತನಕ ಅಂಗಡಿಗಳು ಎದ್ದವು!

ಅವತಾರ್ ಬಾಬಾ ಬಗ್ಗೆ ಚಿಂತಿಸಬೇಡಿ ಸಾಧ್ಯವಿದ್ದರೆ ತಮ್ಮ ಗುರ್ತು ಸಿಕ್ಕದ ಹಾಗೆ ಆತನಿಗೆ ನೆರವಾಗುವಂತೂ ಉಸ್ಕೋಕ್ ಸದಸ್ಯರಿಗೆ ಸೂಚನೆಬಂತು. ಆದರೆ ರಾಕೇಶ್ ಇದಕ್ಕೆ ವಿರೋಧ ವ್ಯಕ್ತಪಡಿಸಿದ.

''ಹಾಗಿದ್ದರೆ ನೀನೇನು ಮಾಡುತ್ತೀ?''

''ಬಾಬಾಗೆ ಉಸ್ಕೋಕ್ ರುಚಿ ತೋರುತ್ತೇನೆ''

''ಆಗಬಹುದು''

ಮಹಾದ್ರಷ್ಟ ಇಷ್ಟು ಸುಲಭವಾಗಿ ಒಪ್ಪಿಕೊಂಡಿದ್ದು ರಾಕೇಶ್‌ನಿಗೆ ಆಶ್ಚರ್ಯವನ್ನುಂಟು ಮಾಡಿತು. ಆತ ಬಾಬಾ ಆಶ್ರಮಕ್ಕೆ ಹೊರಟ. ಜೇಬಿನಲ್ಲಿ ವಿಚಿತ್ರವಾದ ಆಯುಧವಿತ್ತು- ಸೈನೇಡ್ ಇರಿಸಿಕೊಂಡಿರುವ ಸೂಜಿಯನ್ನು ದೂರದಿಂದಲೇ ಮೈಗೆ ಇಳಿಸಬಹುದಾದಂತಹ ನವೀನ ಪರಿಕರಯಾರೇ ಆಗಲಿ ಈ ಸೂಜಿಯನ್ನು ಯಾವ ಕಡೆಯಿಂದ ಎಸೆದರೆಂಬುದನ್ನು ಗುರ್ತಿಸುವುದೂ ಅಸಾಧ್ಯವಾಗುತ್ತಿತ್ತು.

ರಾಕೇಶ್ ಬಾಬಾ ಅವರ ಆಶ್ರಮಕ್ಕೆ ಬರುವ ವೇಳೆಗೆ ರಾಷ್ಟ್ರೀಕೃತ ಬ್ಯಾಂಕೊಂದರ ಛೇರ್ಮನ್ ಮಾತನಾಡುತ್ತಿದ್ದ. ಆ ಛೇರ್ಮನ್ನಿಗೆ ತನ್ನ ಬ್ಯಾಂಕಿಗಿಂತಲೂ ಭವಿಷ್ಯ ಹೇಳುವ ಜನರು, ಗುಡಿ-ಗೋಪುರಗಳು ತುಂಬಾ ಮುಖ್ಯ. ತನ್ನ ಸ್ಥಾನವು ಮತ್ತಷ್ಟು ಕಾಲ ಭದ್ರವಾಗಿರಲು ಕೃಪೆ ಮಾಡಬೇಕೆಂದು ಸಾಷ್ಟಾಂಗ ಪ್ರಣಾಮದೊಂದಿಗೆ ಬೇಡುತ್ತಿದ್ದ. ಬಾಬಾ ಆತನನ್ನು ಆಶೀರ್ವದಿಸುತ್ತಿದ್ದ.

ದೃಷ್ಟಿ ರಾಕೇಶ್ ಮೇಲೆ ಬಿತ್ತು. ಇಬ್ಬರ ಕಣ್ಣು ಕೂಡಿತು. ಬಾಬಾ ಎದ್ದು ನಿಂತು ನಕ್ಕ.

ರಾಕೇಶ್ ಮುಖದಲ್ಲಿ ರಕ್ತವೆಲ್ಲಾ ಇಂಗಿ ಹೋಯಿತು. ಅಲ್ಲಿಂದೆದ್ದು ನೇರವಾಗಿ ಬಂದು ರಾಕೇಶ್ ಮಹಾದ್ರಷ್ಟನನ್ನು ಭೇಟಿಯಾದ ''ಅವತಾರ್ ಬಾಬಾ ಬ್ಲೂ ಸ್ಕೆಲಿಟನ್ ಎಂದು ನನಗೇಕೆ ಹೇಳಲಿಲ್ಲ''

''ನಿನ್ನ ಕಣ್ಣಿಂದ ನೀನೇ ನೋಡಿದರೆ ಒಳ್ಳೆಯದೆಂದು''

''ಇವೆಲ್ಲಾ ನನಗೆ ಅರ್ಥವಾಗುತ್ತಿಲ್ಲ. ಹೀಗೆಲ್ಲಾ ಏಕೆ ನಡೆಯುತ್ತಿದೆ?''

''ಅಷ್ಟಾವಕ್ರನು ಜನಿಸುವ ಮುನ್ನ ಇಲ್ಲಿಯ ಪರಿಸರವನ್ನು ಸಿದ್ಧಪಡಿಸುವ ಭಾಧ್ಯತೆ ನಮ್ಮ ಮೇಲೆಯೇ ಇದೆ ಎಂಬುದನ್ನು ಈ ಮೊದಲೇ ನಾನು ಹೇಳಿದ್ದು ನೆನಪಿದೆಯೇ ರಾಕೆಶ್? ನಮ್ಮೆಲ್ಲರ ಆಸೆಯಂತೆ ಕೇದಾರಗೌರಿ ಪ್ರಸವಿಸಲು ಇನ್ನೂ ಕೆಲವು ತಿಂಗಳುಗಳಿವೆ. ಅಷ್ಟರಲ್ಲಿ ಹಲವಾರು ಮಕ್ಕಳು ಆ ಹಳ್ಳಿಯಲ್ಲಿ ಜನಿಸುವ ಅವಕಾಶವೂ ಇದೆ. ಅವಕ್ಕೂ ಅಷ್ಟಾವಕ್ರನಿಗೂ ಮೊದಲು ಜನಿಸುವ ಏಳು ಮಂದಿ ಅಷ್ಟಾ-ವಕ್ರ ಮೃತ ಶಿಶುಗಳಿಗೂ ಯಾವ ಸಂಬಂಧವೂ ಇಲ್ಲ. ಅದನ್ನು ಅವತಾರ್‌ಬಾಬಾ ಕ್ಯಾಷ್ ಮಾಡಿಕೊಳ್ಳುತ್ತಿದ್ದಾನೆ. ಮಾಡಿಕೊಳ್ಳಲಿ ಬಿಡು. ಅವನೂ ನಮ್ಮವನೇ. ಆತನಿಂದ ನಮಗೆಲಾಭವೇ!'' ಮಹಾದ್ರಷ್ಟ ಹೇಳಿದ.

''ನಮಗೇನು ಲಾಭ?''

ಅಷ್ಟಾವಕ್ರನು ಹುಟ್ಟುವುದಕ್ಕೂ ಮೊದಲೇ ಜನರು ಆತನಿಗೆ ವಿಧೇಯಕರಾಗಬೇಕು. ಅಷ್ಟಾವಕ್ರನೇ ನಿಜವಾದ ದೈವ ಎಂದು ಅವರೆಲ್ಲಾ ನಂಬಬೇಕು. ಹಾಗೆ ನಂಬಿಕೆಯನ್ನು ಬೆಳೆಸಿಕೊಂಡವರು ಮಾತ್ರ ಆತನ ರಾಜ್ಯದಲ್ಲಿ ಬದುಕುತ್ತಾರೆ''

''ಕೃಷ್ಣಾಪುರದಂತಹು ಕುಗ್ರಾಮದಲ್ಲಿ ನಮ್ಮ ಪರವಾಗಿ ಎಷ್ಟು ಮಂದಿಯನ್ನು ಬದಲಿಸಲು ಸಾಧ್ಯವಾಗುತ್ತದೆ?''

ಮಹಾದ್ರಷ್ಟತುಂಬಾ ಹೊತ್ತು ನಗುತ್ತಿದ್ದ. ಆ ನಗುವು ಗೆಲುವಿನ ನಗು. ಪಕ್ಕದಲ್ಲಿದ್ದ ಗ್ರೀನ್ ಸ್ಕೆಲಿಟನ್‌ನನ್ನು ನೋಡಿದ. ಆತ ನೇರವಾಗಿ ಒಳಕ್ಕೆ ಹೋಗಿ ನಾಲ್ಕೈದು ಪೇಪರ್‌ಗಳನ್ನು ತೆಗೆದುಕೊಂಡು ಬಂದ. ರಾಕೇಶ್ ನೋಟ ಅದರ ಮೇಲೆ ಬಿತ್ತು- ನ್ಯೂಯಾರ್ಕ್‌ಟೈಮ್ಸ್, ಲಂಡನ್ ಎಕ್ಸ್‌ಪ್ರೆಸ್, ವರ್ಲ್ಡ್! ಟುಡೇ, ಸ್ಟೇಟ್ಸ್‌ಮನ್...

ಪ್ರಪಂಚದಲ್ಲಿ ಅತ್ಯಂತ ಹೆಚ್ಚಿನ ಪ್ರಸಾರವುಳ್ಳ ಪತ್ರಿಕೆಗಳು ಅವುಮೊದಲ ಪುಟದಲ್ಲಿಯೇ ಅಂಚು ಕಟ್ಟಿದ ವಾರ್ತೆ. ಅದರ ಹೆಡ್ಡಿಂಗ್ ಅವನನ್ನು ಆಕರ್ಷಿಸಿತು-

THE MIRACLE TOUCH

The Faith0Healer Form India

ರಾಕೇಶ್ ನಂಬಲಾರದೆ ಮಹಾದ್ರಷ್ಟನತ್ತ ನೋಡಿದ. ಮಹಾದ್ರಷ್ಟನನ್ನು ತಾನು

ಗೆಲ್ಲಲಾರೆ ಎಂಬ ಅನುಮಾನ ಅವನಲ್ಲಿ ಜನಿಸಿತು. ತನ್ನ ಬಯಕೆ ಈಡೇರದೇನೋ ಎಂಬ ಆತಂಕಹುಟ್ಟಿಸಿತು.

ಚಾಪೆಯ ಕೆಳಗಿನ ನೀರಿನಂತೆ ಮಹಾದ್ರಷ್ಟ ಬೆಳೆದಿದ್ದ. ಸ್ವಲ್ಪ ಸಮಯದಲ್ಲೇ ಇಷ್ಟೊಂದು ಏರ್ಪಾಟುಗಳನ್ನು ಮಾಡುವುದು ಸಾಮಾನ್ಯರಿಗೆ ಸಾಧ್ಯವೆ? ರಾಜ್ಯ-ರಾಷ್ಟ್ರಗಳಿಂದ ಮೇಲೇರಿ ಈ ವಾರ್ತೆ ಪ್ರಪಂಚದಲ್ಲೆಲ್ಲಾ ವ್ಯಾಪಿಸುತ್ತಿದೆ ಎಂದರೆ ಸಾಮಾನ್ಯವೇ? ಸ್ವಲ್ಪ ಸಮಯಕ್ಕೇ ಇಷ್ಟೊಂದು ನಡೆದಿದೆ ಎಂದರೆ ಇನ್ನು ಅಷ್ಟಾವಕ್ರನು ಜನಿಸುವ ಕಾಲಕ್ಕೆ ಖಂಡಿತವಾಗಿ ಜಗತ್ತಿನ ಅರ್ಧಭಾಗ ಅಷ್ಟಾವಕ್ರನ ಅನುಯಾಯಿಗಳಾಗಿರುತ್ತಾರೆ.

ಅವನ ಯೋಚನಾ ತಂತ್ರವನ್ನು ಅರಿತುಕೊಂಡವನತೆ ''ನಮ್ಮ ಅನುಚರರು ಎಲ್ಲಾ ಕಡೆಗಳಲ್ಲೂ ಇದ್ದಾರೆ. ಒಂದು ಯೋಜನೆಯಂತೆ ತಮಗೆ ಕೊಟ್ಟ ಕೆಲಸವನ್ನು ನಿಷ್ಕರ್ಷಿತ ರೀತಿಯಲ್ಲಿ ಮಾಡುತ್ತಿರುತ್ತಾರೆ ರಾಕೇಶ್. ನಾವೇ ಸ್ವಲ್ಪ ಹಿಂದುಳಿದಿದ್ದೇವೆ ಎನಿಸುತ್ತದೆ...'' ಎಂದ ಮಹಾದ್ರಷ್ಟ.

''ಇಲ್ಲ...ಕ್ಷುದಕ್ಷಯಜ್ಞದ ಬಗ್ಗೆ ತಾನೇ ಹೇಳುತ್ತಿದ್ದೀರಿ. ಅದನ್ನು ನನಗೆ ಬಿಡಿ...''

''ಪೌರ್ಣಮಿ ನಾಳೆ ತಾನೇ?''

''ನಾಳೆ ರಾತ್ರಿಯೇ ಯಜ್ಞ ಪ್ರಾರಂಭವಾಗುತ್ತದೆ'' ಎಂದ ರಾಕೇಶ್‌ನ ಧ್ವನಿಯಲ್ಲಿ ಎಂತಹ ಪರಿಸ್ಥಿತಿಯಲ್ಲೂ ನಾಳಿನ ಯಜ್ಞ ನಿಲ್ಲದು ಎನ್ನುವ ದೂಢತೆ ಇತ್ತು. ''ಉಸ್ಲೋಕ್‌ನಲ್ಲಿ ಎಲ್ಲರೂ ತಮ್ಮ ಕೆಲಸ ತಾವು ಕ್ರಮವಾಗಿ ನಡೆಸುತ್ತಿರುವಾಗ ನಾನು ಮಾತ್ರ ಹಿಂದಡಿ ಇಡುವುದಿಲ್ಲ!''

''ಉಸ್ಲೋಕ್‌ನಲ್ಲಿ ಇತರರೆಲ್ಲಾ ಎಂದು ತೂಕವಾದರೆ ನಿನ್ನದೇ ಒಂದುತೂಕ ಎಂಬುದನ್ನು ಮರೆಯಬೇಡ. ತುಂಬಾ ದೊಡ್ಡ ಹೊಣೆಗಾರಿಕೆ ನಿನ್ನ ಮೇಲಿದೆ. ಅಷ್ಟಾವಕ್ರನ ಆಗಮನಕ್ಕೆ ಮೂಲ ಪುರುಷ ನೀನು!''

ಎಲ್ಲವನ್ನೂ ಅರಿತಂತೆ ರಾಕೇಶ್ ತಲೆಯಾಡಿಸಿದ. ''ತಂದೆಯು ಸಾಯುತ್ತಲೇ ಮಗಳನ್ನು ಹಣ ಕೇಳುವುದು ಕಷ್ಟವೆನಿಸಿತು. ಅದಕ್ಕಾಗಿ ತಡಮಾಡಿದೆ. ನಾನು ಯಾವಾಗ ಕೇಳಿದರೂ ಇಲ್ಲವೆನ್ನುವುದಿಲ್ಲ ಎಂಬ ನಂಬಿಕೆ ನನಗಿದೆ. ಈ ದಿನವೇ ಹೋಗಿ ಕೇಳುತ್ತೇನೆ''

ಮಹಾದ್ರಷ್ಟ ಪಕ್ಕದಲ್ಲಿದ್ದ ಅನುಚರನತ್ತ ನೋಡಿದ.

ರಾಕೇಶ್ ಅವನನ್ನು ಅನುಸರಿಸಿದ.

ಅಷ್ಟಮೂಲ ಪದಾರ್ಥಗಳ ಮಿಶ್ರವನ್ನು ಬೆರೆಸಿ ಕಾಯಿಸಿದ್ದ ನೀರಿನಲ್ಲಿ ರಾಕೇಶ್‌ನಿಗೆ ಅಭ-ಯಂಜನ ಸ್ನಾನವನ್ನು ಮಾಡಿಸಲಾಯಿತು. ಆರು ಗಂಟೆಯಾಗಲು ಇನ್ನೊಂದು ಗಂಟೆಯಿತ್ತು. ಇನ್ನೂ ಕತ್ತಲಾಗಿರಲಿಲ್ಲ.

ರಾಕೇಶ್ ಹೊರಬರುವ ವೇಳೆಗೆ ಉಸ್ಲೋಕ್ ಸದಸ್ಯರಲ್ಲಿ ಉತ್ತಮಪೀಠವನ್ನು ಅಲಂಕರಿಸಿದ್ದ ಐದು ಮಂದಿ ವೃದ್ಧರು ಅಲ್ಲಿದ್ದರು. ಅವರೊಂದಿಗೆ ಹಲವಾರು ಗ್ರೀನ್ ಸ್ಕೆಲಿಟನ್ನುಗಳು. ಆ ಸಮಯಕ್ಕಾಗಿಯೇ ಅವರೆಲ್ಲರೂ ಕಾತರರಾಗಿ ಕಾಯುತ್ತಿದ್ದಂತೆ ಅವರ ಮುಖಗಳಲ್ಲಿ ಊಹಾತೀತವಾದ ಆತುರವಿತ್ತು. ಅವರಿಗೆಲ್ಲಾ ಯಾವಾಗ ಸುದ್ದಿ ಹೋಯಿತೋ, ಅಷ್ಟು ಬೇಗ ಅವರೆಲ್ಲಾ ಅಲ್ಲಿಗೆ ಹೇಗೆ ಬಂದು ಸೇರಿಕೊಂಡರೋ ಅರ್ಥವಾಗಲಿಲ್ಲ. ಬಯಸುತ್ತಿದ್ದ ಕ್ಷಣ ಬಳಿ ಸಾರಿದಾಗ ತುಂಬಿಕೊಳ್ಳುವ ಆನಂದದಲ್ಲಿ ರಾಕೇಶ್ ಓಲಾಡುತ್ತಿದ್ದ.

ಮಣೆಯ ಮೇಲೆ ಮಂಡಿಸಿದ. ಸುತ್ತಲು ನಾಲ್ಕು ಹಗ್ಗಗಳಿದ್ದವು. ಮುಂದೆ ಹೋಮಕುಂಡ. ಅದರಲ್ಲಿ ಅಗ್ನಿ ತನ್ನ ಕೆನ್ನಾಲಿಗೆ ತೋರುತ್ತಿದ್ದ. ಸೂಜಿಕೆಳಗೆ ಬಿದ್ದರೂ ಕೇಳಿಸುವಷ್ಟು ನಿಶ್ಯಬ್ದ...ಹೋಮದಲ್ಲಿ ಸುಡುತ್ತಿದ್ದ ಮೂಳೆಗಳ ಸದ್ದು ಮಾತ್ರ ಭಯಂಕರವಾಗಿ ಕೇಳಿಸುತ್ತಿತ್ತು.

ಉರಿಯಿಂದ ಒಂದು ಮೂಳೆಯನ್ನು ಹೊರಕ್ಕೆ ತೆಗೆದುಕೊಂಡ ಮಹಾದ್ರಷ್ಟ.

''ಗ್ರಹತಾರಾದಿಗಳೇ, ಮೃಗ-ಪಕ್ಷಿ ಸಂಕುಲವೇ, ಸಕಲ ಚರಾಚರವೆ; ಎಲ್ಲರೂ ಕೇಳಿರಿ. ಅಷ್ಟಾವಕ್ರನ ಆಗಮನಾರ್ಥವಾಗಿ ನಾಳೆ ನಡೆಸಲಿರುವ ಕ್ಷುದಕ್ಷ ಮಹಾಯಜ್ಞಕ್ಕೆ ಕರ್ತವಾಗಿ ರಾಕೇಶ್ ಎಂಬ ಈ ಯುವಕನನ್ನು ಆಯ್ಕೆ ಮಾಡಿದ್ದೇನೆ. ಯಾರಿಗಾದರೂ ಅಭ್ಯಂತರವಿದೆಯೇ?''

ಮೌನ, ಸುತ್ತಲೂ ಇದ್ದವರತ್ತ ನೋಡಿದ ರಾಕೇಶ್. ಎಲ್ಲರ ಕಣ್ಣು ಗುಡ್ಡೆಗಳೂ ಹಿಂದಕ್ಕೆ ತಿರುಗಿದೆ, ತುಟಿಗಳು ಅಸ್ಪಷ್ಟವಾಗಿ ಏನೋ ಪಠಿಸುತ್ತಿವೆ. ಎಲ್ಲರೂ ತಮ್ಮಲ್ಲಿ ತಾವೇ ಕಾಷ್ಮೋರಾವನ್ನು ಪ್ರಾರ್ಥಿಸುತ್ತಿದ್ದಾರೆ. ಯಾರೂ ಮಾತನಾಡಲಿಲ್ಲ.

ಪ್ರಾರ್ಥನೆ ಪೂರ್ಣಗೊಂಡಿತು.

ಮಹಾದ್ರಷ್ಟ ಅವನ ಕೈಗೆ ಒಂದು ತಾಯಿತವನ್ನು ಕಟ್ಟುತ್ತಾ ''ರಾಕೇಶ್ ನಾಳೆ ಚಂದ್ರೋದಯದ ಕಾಲಕ್ಕೆ ಸರಿಯಾಗಿ ಕ್ರತುವು ಪ್ರಾರಂಭವಾಗುತ್ತದೆ. ಅದುವರೆವಿಗೂ ನೀನೇ ಪುರುಷ-ಕರ್ತ ಈ ಕ್ರತುವಿನೊಂದಿಗೆ, ನೀನು ಯಜ್ಞ ಪುರುಷನಾಗುತ್ತೀ. ಈಗಿನಿಂದ ನಾಳೆ ರಾತ್ರಿ ಚಂದ್ರ ಆಕಾಶದಲ್ಲಿ ಕಾಣಿಸುತ್ತಿರುವಷ್ಟು ಕಾಲವು ಈ ತಾಯಿತ ನಿನ್ನ ಮೈಮೇಲೆಯೇ ಇರಬೇಕು. ಎಂತಹ ಪರಿಸ್ಥಿತಿಯಲ್ಲೂ ಈ ತಾಯಿತ ನಿನ್ನ ಮೈಯಿಂದ ದೂರವಾಗಬಾರದು ಎಚ್ಚರವಿರಲಿ''

ರಾಕೇಶ್ ತಲೆದೂಗಿದ. ಹೋಮಾಗ್ನಿಯ ಮುಂದೆ ಇದ್ದುದರಿಂದ ಅವನ ಕಣ್ಣು ಕೆಂಪಾಗಿ ಹೊಳೆಯುತ್ತಿತ್ತು.

''ನಾನು ಮಾಮೂಲಾಗಿ ಪ್ರಪಂಚದೊಂದಿಗೆ ವ್ಯವಹರಿಸಬಹುದೆ?''

''ಖಂಡಿತವಾಗಿ, ಅದಕ್ಕೂ ಇದಕ್ಕೂ ಸಂಬಂಧವಿಲ್ಲ''

ಬಾಣಲೆಯ ಕೆಳಗಿನ ನೀರಿನಂತೆ ಮಹಾದ್ರಷ್ಟ ಬೆಳೆದಿದ್ದ. ಸ್ವಲ್ಪ ಸಮಯದಲ್ಲೇ ಇಷ್ಟೊಂದು ಏರ್ಪಾಟುಗಳನ್ನು ಮಾಡುವುದು ಸಾಮಾನ್ಯರಿಗೆ ಸಾಧ್ಯವೆ? ರಾಜ್ಯ-ರಾಷ್ಟ್ರಗಳಿಂದ ಮೇಲೇರಿ ಈ ವಾರ್ತೆ ಪ್ರಪಂಚದಲ್ಲೆಲ್ಲಾ ವ್ಯಾಪಿಸುತ್ತಿದೆ ಎಂದರೆ ಸಾಮಾನ್ಯವೇ? ಸ್ವಲ್ಪ ಸಮಯಕ್ಕೇ ಇಷ್ಟೊಂದು ನಡೆದಿದೆ ಎಂದರೆ ಇನ್ನು ಅಷ್ಟಾವಕ್ರನು ಜನಿಸುವ ಕಾಲಕ್ಕೆ ಖಂಡಿತವಾಗಿ ಜಗತ್ತಿನ ಅರ್ಧಭಾಗ ಅಷ್ಟಾವಕ್ರನ ಅನುಯಾಯಿಗಳಾಗಿರುತ್ತಾರೆ.

ಅವನ ಯೋಚನಾ ತಂತ್ರವನ್ನು ಅರಿತುಕೊಂಡವನತೆ ''ನಮ್ಮ ಅನುಚರರು ಎಲ್ಲಾ ಕಡೆಗಳಲ್ಲೂ ಇದ್ದಾರೆ. ಒಂದು ಯೋಜನೆಯಂತೆ ತಮಗೆ ಕೊಟ್ಟ ಕೆಲಸವನ್ನು ನಿಷ್ಕರ್ಷಿತ ರೀತಿಯಲ್ಲಿ ಮಾಡುತ್ತಿರುತ್ತಾರೆ ರಾಕೇಶ್. ನಾವೇ ಸ್ವಲ್ಪ ಹಿಂದುಳಿದಿದ್ದೇವೆ ಎನಿಸುತ್ತದೆ...'' ಎಂದ ಮಹಾದ್ರಷ್ಟ.

''ಇಲ್ಲ...ಕ್ಷುದಕ್ಷಯಜ್ಞದ ಬಗ್ಗೆ ತಾನೇ ಹೇಳುತ್ತಿದ್ದೀರಿ. ಅದನ್ನು ನನಗೆ ಬಿಡಿ...''

''ಪೌರ್ಣಮಿ ನಾಳೆ ತಾನೇ?''

''ನಾಳೆ ರಾತ್ರಿಯೇ ಯಜ್ಞ ಪ್ರಾರಂಭವಾಗುತ್ತದೆ'' ಎಂದ ರಾಕೇಶ್‌ನ ಧ್ವನಿಯಲ್ಲಿ ಎಂತಹ ಪರಿಸ್ಥಿತಿಯಲ್ಲೂ ನಾಳಿನ ಯಜ್ಞ ನಿಲ್ಲದು ಎನ್ನುವ ದೃಢತೆ ಇತ್ತು. ''ಉಸ್ಲೋಕ್‌ನಲ್ಲಿ ಎಲ್ಲರೂ ತಮ್ಮ ಕೆಲಸ ತಾವು ಕ್ರಮವಾಗಿ ನಡೆಸುತ್ತಿರುವಾಗ ನಾನು ಮಾತ್ರ ಹಿಂದಡಿ ಇಡುವುದಿಲ್ಲ!''

''ಉಸ್ಲೋಕ್‌ನಲ್ಲಿ ಇತರರೆಲ್ಲಾ ಎಂದು ತೂಕವಾದರೆ ನಿನ್ನದೇ ಒಂದುತೂಕ ಎಂಬುದನ್ನು ಮರೆಯಬೇಡ. ತುಂಬಾ ದೊಡ್ಡ ಹೊಣೆಗಾರಿಕೆ ನಿನ್ನ ಮೇಲಿದೆ. ಅಷ್ಟಾವಕ್ರನ ಆಗಮನಕ್ಕೆ ಮೂಲ ಪುರುಷ ನೀನು!''

ಎಲ್ಲವನ್ನೂ ಅರಿತಂತೆ ರಾಕೇಶ್ ತಲೆಯಾಡಿಸಿದ. ''ತಂದೆಯು ಸಾಯುತ್ತಲೇ ಮಗಳನ್ನು ಹಣ ಕೇಳುವುದು ಕಷ್ಟವೆನಿಸಿತು. ಅದಕ್ಕಾಗಿ ತಡಮಾಡಿದೆ. ನಾನು ಯಾವಾಗ ಕೇಳಿದರೂ ಇಲ್ಲವೆನ್ನುವುದಿಲ್ಲ ಎಂಬ ನಂಬಿಕೆ ನನಗಿದೆ. ಈ ದಿನವೇ ಹೋಗಿ ಕೇಳುತ್ತೇನೆ''

ಮಹಾದ್ರಷ್ಟ ಪಕ್ಕದಲ್ಲಿದ್ದ ಅನುಚರನತ್ತ ನೋಡಿದ.

ರಾಕೇಶ್ ಅವನನ್ನು ಅನುಸರಿಸಿದ.

ಅಷ್ಟಮೂಲ ಪದಾರ್ಥಗಳ ಮಿಶ್ರವನ್ನು ಬೆರೆಸಿ ಕಾಯಿಸಿದ್ದ ನೀರಿನಲ್ಲಿ ರಾಕೇಶ್‌ನಿಗೆ ಅಭ-ಯಂಜನ ಸ್ನಾನವನ್ನು ಮಾಡಿಸಲಾಯಿತು. ಆರು ಗಂಟೆಯಾಗಲು ಇನ್ನೊಂದು ಗಂಟೆಯಿತ್ತು. ಇನ್ನೂ ಕತ್ತಲಾಗಿರಲಿಲ್ಲ.

ರಾಕೇಶ್ ಹೊರಬುರವ ವೇಳೆಗೆ ಉಸ್ತೋಕ್ ಸದಸ್ಯರಲ್ಲಿ ಉತ್ತಮ[illegible] ಆಲಂಕರಿಸಿದ್ದ ಐದು ಮಂದಿ ವೃದ್ಧರು ಅಲ್ಲಿದ್ದರು. ಅವರೊಂದಿಗೆ ಹಲವಾರು ಗ್ರೀನ್ ಸ್ಕೆಲಿಟನ್ನುಗಳು. ಆ ಸಮಯಕ್ಕಾಗಿಯೇ ಅವರೆಲ್ಲರೂ ಕಾತರರಾಗಿ ಕಾಯುತ್ತಿದ್ದಂತೆ ಅವರ ಮುಖಗಳಲ್ಲಿ ಊಹಾತೀತವಾದ ಆತುರವಿತ್ತು. ಅವರಿಗೆಲ್ಲಾ ಯಾವಾಗ ಸುದ್ದಿ ಹೋಯಿತೋ, ಅಷ್ಟು ಬೇಗ ಅವರೆಲ್ಲಾ ಅಲ್ಲಿಗೆ ಹೇಗೆ ಬಂದು ಸೇರಿಕೊಂಡರೋ ಅರ್ಥವಾಗಲಿಲ್ಲ. ಬಯಸುತ್ತಿದ್ದ ಕ್ಷಣ ಬಳಿ ಸಾರಿದಾಗ ತುಂಬಿಕೊಳ್ಳುವ ಆನಂದದಲ್ಲಿ ರಾಕೇಶ್ ಓಲಾಡುತ್ತಿದ್ದ.

ಮಣೆಯ ಮೇಲೆ ಮಂಡಿಸಿದ. ಸುತ್ತಲು ನಾಲ್ಕು ಹಗ್ಗಗಳಿದ್ದವು. ಮುಂದೆ ಹೋಮಕುಂಡ. ಅದರಲ್ಲಿ ಅಗ್ನಿ ತನ್ನ ಕೆನ್ನಾಲಿಗೆ ತೋರುತ್ತಿದ್ದ. ಸೂಜಿಕೆಳಗೆ ಬಿದ್ದರೂ ಕೇಳಿಸುವಷ್ಟು ನಿಶ್ಶಬ್ದ...ಹೋಮದಲ್ಲಿ ಸುಡುತ್ತಿದ್ದ ಮೂಳೆಗಳ ಸದ್ದು ಮಾತ್ರ ಭಯಂಕರವಾಗಿ ಕೇಳಿಸುತ್ತಿತ್ತು.

ಉರಿಯಿಂದ ಒಂದು ಮೂಳೆಯನ್ನು ಹೊರಕ್ಕೆ ತೆಗೆದುಕೊಂಡ ಮಹಾದ್ರಷ್ಟ.

''ಗ್ರಹತಾರಾದಿಗಳೇ, ಮೃಗ-ಪಕ್ಷಿ ಸಂಕುಲವೇ, ಸಕಲ ಚರಾಚರವೆ; ಎಲ್ಲರೂ ಕೇಳಿರಿ. ಅಷ್ಟಾವಕ್ರನ ಆಗಮನಾರ್ಥವಾಗಿ ನಾಳೆ ನಡೆಸಲಿರುವ ಕ್ಷುದಕ್ಷ ಮಹಾಯಜ್ಞಕ್ಕೆ ಕರ್ತವಾಗಿ ರಾಕೇಶ್ ಎಂಬ ಈ ಯುವಕನನ್ನು ಆಯ್ಕೆ ಮಾಡಿದ್ದೇನೆ. ಯಾರಿಗಾದರೂ ಅಭ್ಯಂತರವಿದೆಯೇ?''

ಮೌನ, ಸುತ್ತಲೂ ಇದ್ದವರತ್ತ ನೋಡಿದ ರಾಕೇಶ್. ಎಲ್ಲರ ಕಣ್ಣು ಗುಡ್ಡೆಗಳೂ ಹಿಂದಕ್ಕೆ ತಿರುಗಿದೆ, ತುಟಿಗಳು ಅಸ್ಪಷ್ಟವಾಗಿ ಏನೋ ಪಲುಕುತ್ತಿವೆ. ಎಲ್ಲರೂ ತಮ್ಮಲ್ಲಿ ತಾವೇ ಕಾಷ್ಮೋರಾವನ್ನು ಪ್ರಾರ್ಥಿಸುತ್ತಿದ್ದಾರೆ. ಯಾರೂ ಮಾತನಾಡಲಿಲ್ಲ.

ಪ್ರಾರ್ಥನೆ ಪೂರ್ಣಗೊಂಡಿತು.

ಮಹಾದ್ರಷ್ಟ ಅವನ ಕೈಗೆ ಒಂದು ತಾಯಿತವನ್ನು ಕಟ್ಟುತ್ತಾ ''ರಾಕೇಶ್ ನಾಳೆ ಚಂದ್ರೋದಯದ ಕಾಲಕ್ಕೆ ಸರಿಯಾಗಿ ಕ್ರತುವು ಪ್ರಾರಂಭವಾಗುತ್ತದೆ. ಅದುವರೆವಿಗೂ ನೀನೇ ಪುರುಷ-ಕರ್ತ ಈ ಕ್ರತುವಿನೊಂದಿಗೆ, ನೀನು ಯಜ್ಞ ಪುರುಷನಾಗುತ್ತೀ. ಈಗಿನಿಂದ ನಾಳೆ ರಾತ್ರಿ ಚಂದ್ರ ಆಕಾಶದಲ್ಲಿ ಕಾಣಿಸುತ್ತಿರುವಷ್ಟು ಕಾಲವು ಈ ತಾಯಿತ ನಿನ್ನ ಮೈಮೇಲೆಯೇ ಇರಬೇಕು. ಎಂತಹ ಪರಿಸ್ಥಿತಿಯಲ್ಲೂ ಈ ತಾಯಿತ ನಿನ್ನ ಮೈಯಿಂದ ದೂರವಾಗಬಾರದು ಎಚ್ಚರವಿರಲಿ''

ರಾಕೇಶ್ ತಲೆದೂಗಿದ. ಹೋಮಾಗ್ನಿಯ ಮುಂದೆ ಇದ್ದುದರಿಂದ ಅವನ ಕಣ್ಣು ಕೆಂಪಾಗಿ ಹೊಳೆಯುತ್ತಿತ್ತು.

''ನಾನು ಮಾಮೂಲಾಗಿ ಪ್ರಪಂಚದೊಂದಿಗೆ ವ್ಯವಹರಿಸಬಹುದೆ?''

''ಖಂಡಿತವಾಗಿ, ಅದಕ್ಕೂ ಇದಕ್ಕೂ ಸಂಬಂಧವಿಲ್ಲ''

ಅಂದೇ ಕೇದಾರಗೌರಿಯನ್ನು ಕಂಡು ಹಣ ತೆಗೆದುಕೊಳ್ಳಬೇಕೆಂದು ಕೊಂಡಿದ್ದ ಅವನು, ರಾಕೇಶ್ ಅವಳನ್ನು ಕಾಣುವ ವೇಳೆಗೆ ಮೊರದಲ್ಲಿ ಅಕ್ಕಿಹಾಕಿಕೊಂಡು ಆರಿಸುತ್ತಾ ಕುಳಿತಿದ್ದಳು. ಕೋಟೇಶ್ವರನ ಮಗಳು ಲಕ್ಷಾಂತರ ರೂಪಾಯಿಗಳ ವಾರಸುದಾರಳು ಅಷ್ಟು ಚಿಕ್ಕ ಮನೆಯಲ್ಲಿ ಹಾಗೆ ಕುಳಿತು ಅಕ್ಕಿ ಆರಿಸುವುದು ಮುಗ್ಧತೆಯ ಪರಾಕಾಷ್ಠೆ! ಮನುಷ್ಯನಾದವನು ಆದರ್ಶಗಳಿಗೆ ಅರ್ಪಿಸಬಹುದಾದ ಅತ್ಯುನ್ನ ಗೌರವ. ಆದರೂ ರಾಕೇಶ ಅದನ್ನು ಗುರ್ತಿಸುವ ಸ್ಥಿತಿಯಲ್ಲಿಲ್ಲ.

''ಗೌರೀ...'' ಎನ್ನುತ್ತಾ ಪಕ್ಕದಲ್ಲಿ ಕುಳಿತ, ''ಮಾವಯ್ಯನು ಹೋದ ದುಃಖದಿಂದ ಕೇಳದೆ ಸುಮ್ಮನಿದ್ದೆ. ಆದರೆ ನನ್ನ ಜತೆಯ ಪಾಲುದಾರರು ತುಂಬಾ ಒತ್ತಾಯ ಮಾಡುತ್ತಿದ್ದಾರೆ...''

''ಯಾವುದಕ್ಕೆ ಬಾವಾ?''

''ಅದೇ, ನನ್ನ ಪಾಲಿನ ಹಣಕ್ಕಾಗಿ''

''ಅಯ್ಯೋ ಅದಕ್ಕೆ ಇಷ್ಟೊಂದು ಸಂಕೋಚವೇ?'' ಎನ್ನುತ್ತಾ ಎದ್ದು ಪೆಟ್ಟಿಗೆಯಿಂದ ಚೆಕ್ ಬುಕ್ ತೆಗೆದು ''ಎಷ್ಟಕ್ಕೆ ಬರೆಯಲಿ?'' ಎಂದು ಕೇಳಿದಳು.

''ಆಗ್ಲೇ ಹೇಳಿದ್ದೆನಲ್ಲಾ...ಎರಡು ಲಕ್ಷ''

ಕೇದಾರಗೌರಿ ಚೆಕ್ಕು ಬರೆದಳು. ಅದೇ ಆಕೆ ತನ್ನ ತಂದೆಯ ಆಸ್ತಿಯಲ್ಲಿ ಮೊದಲ ಬಾರಿಗೆ ಖರ್ಚು ಮಾಡುತ್ತಿದ್ದ ಹಣ. ಅವಳಿಗಾಗಲಿ, ಸಿದ್ಧಾರ್ಥನಿಗಾಗಲಿ. ಸಿದ್ಧಾರ್ಥನ ತಾಯಿಯಾಗಲಿ ಈ ಹಣವನ್ನು ತಮಗಾಗಿ ಖರ್ಚು ಮಾಡಿಕೊಳ್ಳುವುದು ಸಾಧ್ಯವಿದೆ ಎಂಬ ಕಲ್ಪನೆಯೇ ಇರಲಿಲ್ಲ.

ರಾಕೇಶನಿಗೆ ಹಣ ಕೊಡುವ ಬಗ್ಗೆ ಸಿದ್ಧಾರ್ಥನನ್ನು ಕೇಳಿದ್ದಳು. ''ಮಾವಯ್ಯನವರು ಬದುಕಿದ್ದಿದ್ದರೆ ಅವನಿಗೆ ಹೇಗಿದ್ದರೂ ತಮ್ಮ ಆಸ್ತಿಯಲ್ಲಿ ಸ್ವಲ್ಪ ಪಾಲು ಕೊಡುತ್ತಿದ್ದರು. ಅವರು ಇಲ್ಲದಿದ್ದರೂ ಕೊಡುವುದು ನಮ್ಮ ಕೆಲಸ. ಕೊಡು ಗೌರಿ'' ಎಂದಿದ್ದ ಸಿದ್ಧಾರ್ಥ. ಅವರ ಅಂಶವನ್ನು ಸಮೂಲವಾಗಿ ನಾಶಗೊಳಿಸಲು, ದಂಪತಿಗಳನ್ನು ಅತ್ಯಂತ ಕ್ರೂರ ರೀತಿಯಲ್ಲಿ ಕೊಲ್ಲಲು ಈ ಹಣ ಉಪಯೋಗಿಸಲಾಗುತ್ತದೆ ಎಂಬುದನ್ನು ಅವರು ಊಹಿಸಿಯೂ ಇರಲಿಲ್ಲ.

ರಾಕೇಶನಿಗೆ ಚೆಕ್ಕು ಕೊಡುತ್ತಿದ್ದಾಗ ಹೊರಗೆ ಸದ್ದು ಕೇಳಿಸಿತು. ಬಾಗಿಲಿಂದ ಇಣುಕು ಹಾಕಿದಳು. ಒಬ್ಬ ವ್ಯಕ್ತಿ, ಎಲ್ಲೋ ನೋಡಿದ್ದ ನೆನಪು. ದೂರದಲ್ಲಿ ಬರುತ್ತಿರುವ ಆತನ ಕೈಯಲ್ಲಿ ಸಣ್ಣ ಪೆಟ್ಟಿಗೆ, ಆಕೃತಿ ಸಮೀಪಕ್ಕೆ ಬರುತ್ತಿದೆ. ತೀರ ಪರಿಚಿತವಾದ ನಡಿಗೆ...ತನ್ನದೇ ಮುಖ ಕವಳಿಕೆ...ನೆನಪಿನ ಪದರದಲ್ಲಿ ಎಂದಿನದೋ ನೆನಪು...ಅದಕ್ಕೊಂದು ನಿಖರ ರೂಪು. ಬಾಯಿ ಒಣಗಿತು. ಎಲ್ಲಾ ತನ,ನ ತಂದೆಯದೇ ರೂಪು...''ನೀನು...ನೀ...ನು...?'' ಎಂದು ಬಡಬಡಿಸಿದಳು.

ಏನೋ ಅರ್ಥಮಾಡಿಕೊಂಡಂತೆ ಆತ ತಲೆದೂಗಿದ. ಸುಳಿಗಾಳಿಯಂತೆ ಅವನ ಬಳಿಸಾರುತ್ತಾ ''ಅಣ್ಣಯ್ಯಾ...'' ಎನ್ನುತ್ತಾ ಅವನನ್ನು ಅಪ್ಪಿದಳು.

ವೈಟ್ ಷಾಡೋ ಪೆಟ್ಟಿಗೆಯನ್ನು ಕೆಳಗಿರಿಸಿ ನಕ್ಕ. ಚಿಕ್ಕಂದಿನಲ್ಲೇ ಮನೆ ಬಿಟ್ಟುಹಿಗಿದ್ದ ಅಣ್ಣಯ್ಯ ಇಷ್ಟು ದಿನಗಳ ನಂದತರ ಇಂದು ಆಕಸ್ಮಾತ್ತಾಗಿ ಬಂದದ್ದು, ಬಹು ದಿನಗಳ ನಂತರವೂ ಒಡನೆಯೇ ಆಕೆ ಅವನನ್ನು ಗುರ್ತಿಸಿದ್ದು...ಅವರ ಪರಸ್ಪರ ಮಮತೆ ಸ್ವಲ್ಪಕಾಲ ಮಾತನ್ನು ಇಲ್ಲದಾಗಿಸಿತ್ತು. ನಂತರ ಮಹಾಪೂರದಂತೆ ಮಾತು ಪ್ರವಹಿಸಿತು. ಚಿಕ್ಕಂದಿನಲ್ಲಿ ಬೇರೆಯಾದಾಗಿನಿಂದ ಇಂದಿನವರೆವಿಗಿನ ಘಟನೆಗಳು, ತಂದೆಯ ನೆನಪುಗಳು, ಬಾಲ್ಯಸ್ಮೃತಿಗಳು ಅವರು ಮಾತನಾಡಿಕೊಳ್ಳುತ್ತಿದ್ದರು. ಮಧ್ಯದಲ್ಲಿ ತೀರಿಹೋದ ತಂದೆಯ ನೆನಪು ಬಂದಾಗಲೆಲ್ಲಾ ಕಣ್ಣೀರು ಸುರಿಸುತ್ತಿದ್ದಳು. ರವಿ ಸಂತೈಸುತ್ತಿದ್ದ. ಅಣ್ಣನನ್ನು ಕಂಡ ಆನಂದ ತಂದೆ ಇಲ್ಲವೆಂಬ ದುಃಖ ಕಣ್ಣೀರನ್ನು ತರಿಸುತ್ತಿತ್ತು. ಅವರು ಈ ವಿಷಾದ-ಆನಂದಗಳ ಮಧ್ಯೆ ರಾಕೇಶನ ಇರುವನ್ನೇ ಮರೆತಿದ್ದರು ಅಸಹನೆಯಿಂದ ರಾಕೇಶ್ ಅಲ್ಲಿಂದ ಹೊರಡಲು ಪ್ರಯತ್ನಿಸಿದ. ಆದರೆ ಗೌರಿ ಎಚ್ಚತ್ತು ಅವನ ಪರಿಚಯ ಮಾಡಿಸಿದಳು. ರವಿ ಆ ಮನೆಯನ್ನು ಬಿಟ್ಟ ಒಂದು ವರ್ಷದ ನಂತರ ರಾಕೇಶ್ ಮನೆಗೆ ಬಂದಿದ್ದ.

''ನೀವೇನು ಮಾಡುತ್ತಿದ್ದೀರಿ?'' ಎಂದು ಕೇಳಿದ ರಾಕೇಶ್ ಕೈಕುಲುಕುತ್ತಾ.

ರಾಕೇಶನನ್ನು ಪರಿಶೀಲನಾ ದೂಷ್ಟಿಯಿಂದ ನೋಡುತ್ತಿದ್ದ ರವಿ. ಯಕ್ಷಿಣಿ ವಿದ್ಯೆಯ ಪ್ರಭಾವದಿಂದ ಅವನ ನೋಟ ಸೂಕ್ಷ್ಮವೂ, ತೀಕ್ಷ್ಣವೂ ಆಗಿತ್ತು. ರಾಕೇಶನಲ್ಲಿ ಏನೋ ಅವಲಕ್ಷಣವಿರುವಂತೆ ಅವನಿಗೆ ಭಾಸವಾಗುತ್ತಿತ್ತು. ಆದರೆ ಅದೇನು?

''ನನ್ನ ಮಾತಿಗೆ ಉತ್ತರವೇ ಹೇಳಲಿಲ್ಲ!''

ರವಿ ಎಚ್ಚತ್ತವನಂತೆ ''ಓ! ಅದಾ...ಮ್ಯಾಜಿಕ್ ಮಾಡ್ತಾ ಇರ್ತೇನೆ'' ಎಂದ.

ರಾಕೇಶ್ ಗಹಗಹಿಸಿ ನಗುತ್ತಾ ''ಮ್ಯಾಜಿಕ್ಕೇ? ಅದೇನು ಕೆಲಸ?'' ಎನ್ನುತ್ತಾ ಮತ್ತೆ ನಕ್ಕ.

ಷಾಡೋ ಮಾತನಾಡಲಿಲ್ಲ.

''ಎಲ್ಲಿ ಯಾವುದಾದರೂ ಚಿಕ್ಕ ಮ್ಯಾಜಿಕ್ ಮಾಡಿ ನೋಡೋಣ!'' ಎಂದ ರಾಕೇಶ್ ಮತ್ತೆ ''ಮ್ಯಾಜಿಕ್ ಎಂದರೆ ಏನು? ಗಾರುಡಿನೇ? ವಸ್ತುಗಳನ್ನು ಮಾಯಮಾಡುವುದೇ?''

ಷಾಡೋ ಜಿಗುಪ್ಸೆಯಿಂದ ಅವನನ್ನು ನೋಡಿದ. ಸುಮಾರು ಹದಿನೇಳು ವರ್ಷಗಳ ನಂತರ ಅಣ್ಣ-ತಂಗಿ ಭೇಟಿಯಾಗುತ್ತಿದ್ದಾರೆ. ತಂದೆ ತೀರಿಹೋದ ದುಃಖದಿಂದ ಪರಸ್ಪರ ಸಾಂತ್ವನ ಹೇಳಿಕೊಳ್ಳಬೇಕಾಗಿದೆ. ಇಂತಹ ಸಂದರ್ಭದಲ್ಲಿ ಮ್ಯಾಜಿಕ್ ಮಾಡು ಎಂದು ಕೇಳುತ್ತಾನಲ್ಲಾ. ಇವನಿಗ್ಯಾವ ಸಂಸ್ಕಾರ ತಾನೆ ಇರಲು ಸಾಧ್ಯ?

ರವಿ ಅವನ ಎದೆಯಮೇಲೆ ಮೆಲ್ಲನೆ ಹೊಡೆಯುತ್ತಾ ''ಚೆಕ್ ಷಾಡೋ'' ಎಂದು ಅವನ ಬಲಗೈಯನ್ನು ತನ್ನ ಕೈಯಲ್ಲಿ ತೆಗೆದುಕೊಂಡು ''ಬೇರೆ ಯಾವುದಾದರೂ ಸಮಯದಲ್ಲಿ ತೋರಿಸುತ್ತೇನೆ ಬಿಡಿ'' ಎನ್ನುತ್ತಾ ಕರಚಾಲನಮಾಡಿದ.

''ಸುಮ್ಮನೆ ಕೇಳಿದೆ ಬಿಡಿ'' ಎನ್ನುತ್ತಾ ರಾಕೇಶ್ ಅಲ್ಲಿಂದ ಹೋದ. ಅವನ ಮನಸ್ಸು ತೀರ ಹಗುರವಾಗಿತ್ತು. ಇಷ್ಟು ಸುಲಭವಾಗಿ ಗೌರಿ ಹಣಕೊಡುತ್ತಾಳೆ ಎಂದುಕೊಂಡಿರಲಿಲ್ಲ. ರವಿ ಬರುವ ಮೊದಲೇ ತನ್ನ ಕೆಲ ಸಮುಗಿದಿದ್ದದ್ದು ಮತ್ತಷ್ಟು ಸಂತೋಷದಾಯಕವಾಗಿತ್ತು.

ಇನ್ನು ರಾತ್ರಿ ಸ್ಮಶಾನದಲ್ಲಿ ಕಳೆಯಬೇಕು. ಕ್ಷುದಕ್ಷ ಯಜ್ಞವನ್ನು ಆಚರಿಸುವ ಪುರುಷನು ಹಿಂದಿನದಿನ ರಾತ್ರಿಯನ್ನು ಸ್ಮಶಾನದಲ್ಲಿ ಕಳೆಯಬೇಕು. ಹಾಗೆಂದು ಊರಿನ ಉತ್ತರದಿಕ್ಕಿಗೆ ನಡೆಯುತ್ತಿದ್ದದ. ಚಂದ್ರೋದಯಕ್ಕೆ ಇನ್ನು ಹತ್ತು ನಿಮಿಷಗಳಿವೆ. ಸ್ಮಶಾನವನ್ನು ಪ್ರವೇಶಿಸುತ್ತಾ ಅಭ್ಯಾಸ ಬಲದಿಂದ ಜೆಕ್ಷೀಬನ್ನು ಮುಟ್ಟಿನಿಡಿಕೊಂಡ. ಏನೋ ಬರಿದಾದಂತೆ ಭಾಸವಾಗಿಬೆಚ್ಚಿದ.

ಜೇಬಿನಲ್ಲಿ ಚೆಕ್ ಇರಲಿಲ್ಲ.

ಷಾಡೋ ಮುಖ ನೆನಪಾಯಿತು. 'ಗಾರುಡಿನೇ? ವಸ್ತುಗಳನ್ನೂ ಮಾಯಾ ಮಾಡ್ತೀರಾ?' ಎಂದು ತಾನು ಕೇಳಿದರೆ ಆತ 'ಚೆಕ್ ಷಾಡೋ' ಎಂದದ್ದು ನೆನಪಾಯಿತು.

ಇನ್ನೂ ಅನುಮಾನವಾಗಿ ಒಡನೆಯೇ ಕೈನೋಡಿಕೊಂಡ. ಮುಖ ಬಿಳಿಚಿಕೊಂಡಿತು. ಗಡಗಡನೆ ನಡುಗಿದ.

ಕೈಯಲ್ಲಿ ತಾಯಿತ ಇಲ್ಲ!

ಚಂದ್ರೋದಯಕ್ಕೆ ಸಂಕೇತವಾಗಿ ಆಗಲೇ ದಿಗಂತದಲ್ಲಿ ಚಂದ್ರಕಿರಣ ಕಾಣಿಸಿಕೊಂಡಿದೆ.

ರಾಕೇಶ್ ಓಡುತ್ತಾ ಹಿಂತಿರುಗಿದ. ಚಂದ್ರೋದಯಕ್ಕೆ ಮೊದಲೇ ಹೋಗಿ ತಾಯಿತವನ್ನು ಷಾಡೋವಿನಿಂದ ಹಿಂದಕ್ಕೆ ಪಡೆಯಬೇಕು. ಅವನು ತನ್ನ ಮೇಲೆ ಈ ರೀತಿ ಪ್ರಾಕ್ಟಿಕಲ್ ಜೋಕ್ ಪ್ರಯೋಗಿಸಿದ್ದಕ್ಕಾಗಿ ಷಾಡೋನನ್ನು ಕೊಲ್ಲಬೇಕೆನ್ನುವಷ್ಟು ಕೋಪ ಬಂತು. ಆಗ್ಗೆ ತುಂಬಾ ದೂರ ಬಂದುಬಿಟ್ಟಿದ್ದ. ಅತಿ ಕಷ್ಟದಿಂದ ಸಂತೈಸಿಕೊಂಡ.

ರಾಕೇಶ ಅಲ್ಲಿಗೆ ವಾಪಸ್ಸು ಬರುವ ವೇಳೆಗೆ ಕೇದಾರಗೌರಿ ಮತ್ತು ರವಿ ಇನ್ನೂ ಮಾತನಾಡುತ್ತಾ ಇದ್ದರು. ಆಗ್ಗೆತಂದೆಯ ಬಗ್ಗೆ ನೆನಪುಗಳಿಂದ ಅವರಿಬ್ಬರೂ ಬಿಡುಗಡೆ ಹೊಂದಿದ್ದರು.

''ನಿನ್ನನ್ನು ಕಂಡು ಎಷ್ಟು ದಿನಗಳಾಗಿವೆ! ನನಗಂತೂ ನಿನ್ನನ್ನು ಸರಿಯಾಗಿ ನೋಡಿದ ನೆನಪೇ ಇಲ್ಲ!!''

ರವಿ ನಕ್ಕು ಸುಮ್ಮನಿದ್ದ.

''ಡ್ಯಾಡಿ ಇರುವಾಗಲೇ ಒಮ್ಮೆ ಬಂದಿದ್ದರೆ ಎಷ್ಟು ಚೆನ್ನಾಗಿರುತ್ತಿತ್ತು. ನಿನಗೆ ಗೊತ್ತೋ ಇಲ್ಲವೋ ಡ್ಯಾಡಿಗೆ ನೀನೆಂದರೆ ತುಂಬಾ ಇಷ್ಟವೇ, ಆದರೆ ಹೊರ ನೋಟಕ್ಕೆ ಹಾಗೆ ಬಿಗುಮಾನ ಮಾಡುತ್ತಿದ್ದರು. ನೀನು ಹೋದುದಕ್ಕಾಗಿ ತುಂಬಾ ಚಿಂತಿಸುತ್ತಿದ್ದರು!''

ರವಿ ಮಾತನ್ನು ಬದಲಿಸುತ್ತಾ ''ಇದೇನು ಚಿಕ್ಕು?'' ಎಂದು ಕೇಳಿದ.

''ರಾಕೇಶ್ ಬೇಕೆಂದು ಕೇಳಿದ. ಡ್ಯಾಡಿಗೆ ರಾಕೇಶ್ ಎಂದರೆ ತುಂಬಾ ಇಷ್ಟ''

''ಆದರೆ ಇದೆಲ್ಲಾ ನನ್ನ ಆಸ್ತಿಯಲ್ಲವೇ? ಆತನಿಗೆ ಹೇಗೆ ಕೊಟ್ಟೆ?''

ಕೇದಾರಗೌರಿ ನಕ್ಕಳು. ಎದ್ದು ಬಳಿಗೆ ಬಂದು ನೆಲದ ಮೇಲೆ ಕುಳಿತು ರವಿಯ ಮೊಣಕಾಲ ಮೇಲೆ ತಲೆ ಇರಿಸಿ ಕಣ್ಣು ಮುಚ್ಚಿಕೊಂಡಳು. ಆ ಕ್ಷಣದಲ್ಲಿ ತನ್ನವರೆಂದು ಒಬ್ಬರು ಬಂದದ್ದು ತುಂಬಾ ಸಂತೋಷವನ್ನೇ ಕೊಟ್ಟಿತು. ಸಾಗರದಷ್ಟು ಪ್ರೇಮವನ್ನು ಸುರಿಸುವ ಗಂಡನಿದ್ದರೂ ತೌರಿನವರು ಯಾರೂ ಇಲ್ಲದಾಗ ಆಗುವ ವೇದನೆ ಅನುಭವಿಸಿದವರಿಗೆ ಮಾತ್ರವೇ ಗೊತ್ತಾಗುತ್ತದೆ. ಇದ್ದಕ್ಕಿದ್ದಂತೆಯೇ ಅಣ್ಣಯ್ಯ ಬಂದಿದ್ದು ಅವಳಿಗೆ ತುಂಬಾ ಆನಂದವನ್ನುಂಟುಮಾಡಿತು.

''ನಿನ್ನ ಆಸ್ತಿಯನ್ನು ನಿನ್ನ ಹಣವನ್ನು ನಾನು ಹೇಗೆ ದಾನ ಮಾಡಿದೆ ಎಂದು ತಾನೆ ನೀನು ಕೇಳುತ್ತಿರುವುದು?'' ಎಂದು ಮತ್ತೆ ನಕ್ಕಳು. ''ಅಣ್ಣಾ, ನಿನ್ನ, ನಮ್ಮವರನ್ನ ನೋಡದೆ ಇದ್ದಿದ್ದರೆ ಈ ಪ್ರಪಂಚದಲ್ಲಿ ಎಲ್ಲರೂ ಹಣದ ಮನುಷ್ಯರೇ ಎಂದು ನಂಬುತ್ತಿದ್ದೆ''

''ಆದರೆ ನೀನು ಅಪಾತ್ರದಾನ ಮಾಡುತ್ತಿರುವೆ ಎನಿಸುತ್ತದೆ. ಏನೋ ಆ ರಾಕೇಶನನ್ನು ನೋಡುತ್ತಿದ್ದರೆ ಅಂತಹ ಒಳ್ಳೆ ಅಭಿಪ್ರಾಯವೇ ಮೂಡುತ್ತಿಲ್ಲ''

'4ಛೇ, ಹಾಗನ್ನಬೇಡ. ರಾಕೇಶ್ ಬಗ್ಗೆ ನಿನಗೆ ಗೊತ್ತಿಲ್ಲ'' ಎಂದು ತನ್ನ ಮದುವೆ ರಾಕೇಶನೊಂದಿಗೆ ನಿಶ್ಚಯವಾಗಿದ್ದು ಆದರೆ ತಾನು ಸಿದ್ಧಾರ್ಥನೊಂದಿಗೆ ಮದುವೆಗೆ ಸಿದ್ಧವಾದದ್ದು, ತಂದೆ ಒಪ್ಪಿದ್ದು, ರಾಕೇಶನೂ ಅದನ್ನು ಅಂಗೀಕರಿಸಿದ್ದು ವಿವರಿಸಿದಳು, ''ತುಂಬಾ ಒಳ್ಳೆ ಹೃದಯ ಆತನದು''

ರವಿ ಈ ವಿವರಣೆಗೆ ಉತ್ತರ ಹೇಳಲಿಲ್ಲ. ''ಈ ತಾಯಿತ ಎಲ್ಲಿಯದು? ಅವನಿಗೆ ಈ ದೇವರು, ದೆವ್ವಗಳ ಮೇಲೆ ನಂಬಿಕೆ ಇದೆಯಾ?'' ಎಂದು ಕೇಳಿದ.

''ಏನೋ ಗೊತ್ತಿಲ್ಲ. ಈ ಊರಿನಲ್ಲಿ ಹೊಸದಾಗಿ ಒಬ್ಬ ಬಾಬಾ ಬಂದಿದ್ದಾನೆ. ಅವನೇ ಕಟ್ಟಿರ್ತಾನೆ. ಇದು ಕಟ್ಟಿಕೊಂಡರೆ ಬೇಗ ಮದುವೆಯಾಗುತ್ತೆ ಎಂದು ಜೆನೆಟಿಕ್ಸ್

ಹೇಳಿದಾನೇನೋ!...ಅ್ಞ, ನೀನು ಯಾವಾಗ ಮದುವೆ ಮಾಡಿಕೊಳ್ತೀಯಾ ಅಣ್ಣಯ್ಯ?''

''ಸರಿ ಒಳ್ಳೆ ಪ್ರಶ್ನೆ ಕೇಳಿದೆ- ಗಂಜಿಗೇ ಗತಿ ಇಲ್ಲದವನು ನಂಜಿಗಾಗಿ ತಡಕಿದಂತೆ...''

''ನಿನಗೇನು ಕಡಿಮೆ, ತಾಳು ನಾನೇ ನೋಡುತ್ತೇನೆ''

''ಎಲ್ಲಿ? ' ಹಳ್ಳಿಯಲ್ಲಿಯೇ?''

''ಯಾಕೆ ಈ ಹಳ್ಳಿಗೇನು ಕಡಿಮೆ? 'ರಾವೇ'ಗಾಗಿ ಅಗ್ರಿಕಲ್ಚರಲ್ ಬಿಎಸ್ಸಿ ಹುಡುಗಿಯರೆಲ್ಲಾ ಇಲ್ಲಿಗೇ ಬರುತ್ತಾರೆ ಗೊತ್ತೇ?...''

ಕಳೆದುದೆಲ್ಲಾ ನೆನಪಾಯಿತು.

ಆಗಲೇ ಒಂದು ವರ್ಷ ಕಳೆದಿದೆ! ದಿನಗಳೆಷ್ಟು ಬೇಗ ಕಳೆಯುತ್ತಿವೆ. ಕಳೆದ ವರ್ಷ ಈ ವೇಳೆಗೆ ವಿದ್ಯಾರ್ಥಿನಿಯಾಗಿ ಈ ಪ್ರದೇಶದಲ್ಲಿ ಸುತ್ತಾಡಿದ್ದಳು. ಒಂದೆರಡು ದಿನಗಳಲ್ಲಿ ಮುಂದಿನ ಬ್ಯಾಚ್ ಬರಲಿದೆ. ಕಣ್ಮುಚ್ಚಿ ತೆರೆಯುವುದರಲ್ಲಿ ಒಂದು ವರ್ಷ ಕಳೆದಿದೆ.

''ಹುಡುಗಿಯರು ಯಾವಾಗ ಬರುತ್ತಾರೆ?''

''ಹುಡುಗಿಯರು ಎನ್ನುತ್ತಲೇ ಎಷ್ಟೊಂದು ಕುತೂಹಲ?''

''ಸುಮ್ಮನೆ ಕೇಳಿದೆ ಅಷ್ಟೆ...''

''ನಾಳೆ ನಾಳಿದ್ದರಲ್ಲಿ ಬರ್ತ್ತಾರೆ. ಇನ್ನೊಂದು ತಿಂಗಳು ಹಳ್ಳಿಯಲ್ಲಾ ಕಂಗೊಳಿಸುತ್ತಿರುತ್ತದೆ. ಅವರ ಮೇಲೆ ನಿನ್ನ ಟ್ರಿಕ್ಸ್ ಉಪಯೋಗಿಸಬೇಡ''

ರವಿ ಪೆಚ್ಚು ಮುಖವನ್ನು ಹಾಕಿಕೊಂಡು ''ನಿಜವಾಗಿಯೂ ಬೇಡವೇ?'' ಎಂದು ಕೇಳಿದ.

ಗೌರಿ ಉಕ್ಕಿ ಬರುತ್ತಿದ್ದ ನಗುವನ್ನು ತಡೆದುಕೊಂಡು ಗಂಭೀರ ಸ್ವರದಲ್ಲಿ ''ಬೇಡ'' ಎಂದಳು.

''ನೀನು ಯಾರನ್ನು ಕೊಡ್ತೀಯಾ?- ಅಳಿಯನನ್ನೋ? ಸೊಸೆಯನ್ನೋ?''

ಇದ್ದಕ್ಕಿದ್ದಂತೆಯೇ ಈ ಪ್ರಶ್ನೆಯನ್ನು ಕೇಳಿ ವಿಷಯವನ್ನೇ ಬದಲಿಸಿದ್ದ. ನಾಚಿಕೆಯಿಂದ ಉತ್ತರಿಸದೆ ಸುಮ್ಮನಾದಳು. ರವಿ ಅದನ್ನೇ ಮತ್ತೆ ಮತ್ತೆ ಕೇಳಿದ.

''ಪ್ರತಿ ಮನೆಯಲ್ಲಿರೋ ರಾಮಾಯಣವೇ- ಅವರಿಗೆ ಹೆಣ್ಣು ಮಗು ನನಗೆ...''

ಗ್ಲಾಕ್ಸೋ ಬೇಬಿಯಂತಹ ಮಗ ಎಂದು ರವಿ ಪೂರೈಸಿದ. ಆಕೆ ನಕ್ಕಳು. ''ನನಗೆ ದಕ್ಷಿಣಾಧಿಗಳನ್ನು ಸಮರ್ಪಿಸಿದರೂ ಹೊಟ್ಟೆಯಲ್ಲಿ ಹೆಣ್ಣಿದ್ದರೂ ಗಂಡಾಗಿ ಬದಲಿಸುತ್ತೇನೆ. ಹೇಳು ಏನು ಕೊಡ್ತೀಯಾ?''

''ನಿನ್ನ ಮಗಳನ್ನು ತಂದುಕೊಳ್ತೇನೆ ಸರಿ ತಾನೇ?''

''ಇಲ್ಲ ಅಷ್ಟು ಹತ್ತಿರದ ಸಂಬಂಧಗಳನ್ನು ಬೆಳೆಸಬಾರದೆಂದು ಜೆನೆಟಿಕ್ಸ್ ಹೇಳುತ್ತದೆ''

ಪ್ರಸ್ತಾಪ ಬರುತ್ತಲೇ ಅವಳ ಮುಖ ಭಯದಿಂದ ಕಂಡಿತು. ಹೊಟ್ಟೆಯಲ್ಲಿಯ ಮಗುವನ್ನು ಗಂಡಾಗಿ ಬದಲಿಸುತ್ತೇನೆ ಎಂದು ತಮಾಷೆಗಾಗಿ ಹೇಳಿದಾಗಲೇ ಸ್ವಲ್ಪ ಭಯವಾಯಿತು ಅದು ಪೂರ್ಣವಾಗಿ ಭಯವೂ ಅಲ್ಲ ಅಪಶಕುನದಂತಹ ಮಜುಗರ. ಕೆಲವೇ ದಿನಗಳ ಹಿಂದೆ ಅದಕ್ಕೆ ಸಂಬಂಧಿಸಿದಂತೆ ಒಂದು ಘಟನೆ ನಡೆದಿತ್ತು. ಅದೇ ಈ ಮಜುಗರಕ್ಕೆ ಕಾರಣ.

★★★

ಆಗ್ಗೆ ಅವತಾರ್ ಬಾಬಾ ಹೆಸರು ಜನಜನಿತವಾಗಿತ್ತು. ಇಂಥಾದ್ದರಲ್ಲಿ ಸಿದ್ಧಾರ್ಥನ ತಾಯಿಗೆ ಸ್ವಲ್ಪ ನಂಬಿಕೆಯಿತ್ತು. ಸೊಸೆಯನ್ನು ಅಲ್ಲಿಗೆ ಕರೆದುಕೊಂಡು ಹೋದಳು. ಅತ್ತೆಯ ತೃಪ್ತಿಗಾಗಿ ಗೌರಿ ಅದಕ್ಕೆ ತನ್ನ ವಿರೋಧವನ್ನೂ ಹೇಳಲಿಲ್ಲ.

ಅವರು ಹೋಗುವ ವೇಳೆಗೆ ಪ್ರಶ್ನೋತ್ತರ ಕಾರ್ಯಕ್ರಮಸಾಗುತ್ತಿತ್ತು. ಬಾಬಾ ಅವರು ತಮ್ಮ ವೇಳೆಯಲ್ಲಿ ಸ್ವಲ್ಪವನ್ನು ಇದಕ್ಕಾಗಿ ಮೀಸಲಿಟಿಸಿದ್ದರು ಬಾಬಾ. ಕಾಗದದಲ್ಲಿ ಪ್ರಶ್ನೆಗಳನ್ನು ಬರೆದುಕೊಡುತ್ತಿದ್ದರೆ ಅದಕ್ಕೆ ಅವರು ಉತ್ತರ ಹೇಳುತ್ತಿದ್ದಾರೆ. ಒಂದು ಸಂಖ್ಯೆ, ಒಂದು ಹೂ, ಒಂದು ಬಣ್ಣ ಹೇಳಿದರೆ ಅವರ ಆ ಸಮಯವನ್ನೂ ಗಣನೆಗೆ ತೆಗೆದುಕೊಂಡು ಭವಿಷ್ಯ ಹೇಳುತ್ತಿದ್ದರು. ಈ ಕಾರ್ಯಕ್ರಮ ನಡೆಯುವ ಒಂದು ಗಂಟೆಯ ಕಾಲವು ಅಲ್ಲಿ ಜನರು ಬಹುವಾಗಿರುತ್ತಿದ್ದರು. ಆಶ್ರಮದ ಪ್ರಾಂಗಣದಲ್ಲಿ ತಮ್ಮ ಭವಿಷ್ಯತ್ತನ್ನು ಅರಿತುಕೊಳ್ಳಲು ಜನರು ಉತ್ಸುಕರಾಗಿರುತ್ತಿದ್ದರು.

ಗೌರಿಯ ಸರದಿ.

ಸಿದ್ಧಾರ್ಥನ ತಾಯಿ ಪ್ರಶ್ನೆ ಕೇಳಲು ಬಾಯ್ತೆರೆದರೆ ಪಕ್ಕದಲ್ಲಿದ್ದ ಶಿಷ್ಯ 'ಷ' ಎಂದು ಸನ್ನೆ ಮಾಡಿ ಗೌರಿಗೆ ಒಂದು ಸಣ್ಣ ಕಾಗದದ ಚೂರು ಕೊಟ್ಟ. ಅದರ ಮೇಲೆ ಆಕೆ '14, ಗುಲಾಬಿ, ಬಿಳಿ' ಎಂದು ಬರೆದಳು, ಅತ್ತೆ ಮನಸ್ಸಿನಲ್ಲಿಯೇ 'ಬಾಬಾ, ಯಾವ ಮಗು?' ಎಂದು ಕೇಳಿಕೊಂಡಳು.

ಅವತಾರ್ ಬಾಬಾ ಕಣ್ಮುಚ್ಚಿ ಲೆಕ್ಕಹಾಕಿದ. ಅಂತರ್ಮುಖನಾಗಿ ದೇವತೆಗಳೊಂದಿಗೆ ಮಾತನಾಡುತ್ತಿದ್ದಂತೆ ಆತನ ಹುಬ್ಬು ಗಂಟಿಕ್ಕಿತು. ಶಿಷ್ಯರು, ಆಶ್ರಿತರು ಆತನತ್ತಲೇ ನೋಡುತ್ತಿದ್ದರು. ಎಲ್ಲೆಲ್ಲೂ ಮೌನ.

ಕಣ್ತೆರೆಯುತ್ತಾ ''ಹೆಣ್ಣು ಮಗು'' ಎಂದ ಬಾಬಾ.

ಸಿದ್ಧಾರ್ಥನ ತಾಯಿಯ ಮುಖ ಅರಳಿತು. ಬಾಬಾಗೆ ನಮಸ್ಕರಿಸಿ ಕಾಣಿಕೆ ಒಪ್ಪಿಸಿ ಅಲ್ಲಿಂದ ಸೊಸೆಯನ್ನು ಕರೆದುಕೊಂಡು ಬಂದಳು.

ಗೌರಿಗೆ ಮಾತ್ರ ಇದೆಲ್ಲಾ ನಾಟಕವೆಂದೇ ಭಾಸವಾಗುತ್ತಿತ್ತು. ಇಷ್ಟೊಂದು ಸುಲಭವಾಗಿ ಹೇಗೆ ಹೇಳುತ್ತಾರೆ? ನಾಲ್ಕುದಿನ ಚಿಂತಿಸಿ ಒಂದು ನಿರ್ಣಯಕ್ಕೆ ಬಂದಳು.

ತಾನು ದೊಡ್ಡ ಪರ್ವತದೊಂದಿಗೆ ಡಿಕ್ಕಿ ಹೊಡೆಯಲು ಸನ್ನಾಹ ನಡೆಸುತ್ತಿರುವೆ

ಎಂಬುದು ಅವಳಿಗೆ ಗೊತ್ತಿತ್ತು. ಆದರೆ ಅವಳ ತಂದೆಯು ಸದಾ ಸಿದ್ಧಾಂತಗಳ ಬಗ್ಗೆ ಮಾತನಾಡುತ್ತಿದ್ದರು. ಅದನ್ನು ಆಚರಣೆಗೆ ತರುತ್ತಿದ್ದವನು ಅವಳ ಅಣ್ಣ. ಅಂತಹವರ ವಂಶದಲ್ಲಿ ಹುಟ್ಟಿದ ಅವಳಿಗೆ ಆ ಧೈರ್ಯ ತಾನಾಗಿಯೇ ಬಂತು.

ನಾಲ್ಕು ದಿನಗಳ ನಂತರ ಮತ್ತೆ ಅದೇ ಸಮಯಕ್ಕೆ ಹೋದಳು. ಅದೇ ಕಾರ್ಯಕ್ರಮ ಸಾಗುತ್ತಿತ್ತು.

ಪ್ರೊ॥ ಪುಟ್ಟಣ್ಣ ಪ್ರಶ್ನೆ ಕೇಳುತ್ತಿದ್ದರು, ಬಾಬಾ ಉತ್ತರ- ''ಖಂಡಿತವಾಗಿ ಮುಂದಿನ ತಿಂಗಳು ವಿದೇಶ ಪ್ರಯಾಣ ಯೋಗವಿದೆ. ನೀನು ಹೇಳುವ ಸಂಗತಿಗಳಿಗೆ ಅಲ್ಲಿ ಮಾನ್ಯತೆ ದೊರೆತು ನಿನಗೆ ಒಳ್ಳೆಯದಾಗುತ್ತೆ''

ಆ ವೃದ್ಧನ ಮುಖ ಬೆಳಗಿತು. ಬಾಬಾ ಪಾದಗಳಿಗೆ ನಮಸ್ಕರಿಸಿದ ಅಷ್ಟರಲ್ಲಿ ಗೌರಿಯ ಸರದಿ.

'13, ಉಮ್ಮತ್ತಿ ಹೂ, ಕೆಂಪು' ಎಂದು ಕಾಗದದಲ್ಲಿ ಬರೆದುಕೊಟ್ಟಳು. ನನಗೆ ಹುಟ್ಟುವ ಮಗು ಗಂಡೇ ಹೆಣ್ಣೇ?' ಎಂದು ಕೇಳಿದಳು. ಸ್ವಲ್ಪಕಾಲ ಕಣ್ಮುಚ್ಚಿದ್ದು ನಂತರ ''ಗಂಡು ಮಗು'' ಎಂದ ಬಾಬಾ.

ಭಕ್ತಗಣ ಮತ್ತಷ್ಟು ಗೌರವದಿಂದ ಬಾಬಾ ಅವರನ್ನು ನೋಡಿತು. ಸಾಷ್ಟಾಂಗ ನಮಸ್ಕಾರ ಮಾಡು ಎಂದು ಹೇಳುವಂತೆ ಆಕೆಯತ್ತ ಜನ ನೋಡಿದರು.

ಇನ್ನೊಂದು ಕಾಗದವನ್ನು ತೆಗೆದುಕೊಂಡು, ''ನಾಲ್ಕು ದಿನದ ಹಿಂದೆ ಬಂದಿದ್ದಾಗ ಹೆಣ್ಣುಮಗು ಎಂದು ಹೇಳಿದ್ದಾರಲ್ಲಾ?'' ಎಂದು ಬರೆದು ಆ ಕಾಗದವನ್ನು ಅವರ ಮುಂದೆ ಸರಿಸಿದಳು.

ಇದ್ದಕ್ಕಿದ್ದಂತೆಯೇ ನಿಶ್ಶಬ್ದ. ಬಾಬಾಗೆ ಆಕೆ ಹೇಳಿದ್ದು ಅರ್ಥವಾಗಲು ಸ್ವಲ್ಪ ಕಾಲವೇ ಬೇಕಾಯಿತು. ಮುಖವೆಲ್ಲಾ ಕೆಂಪಾಗಿ ''ನೀನು ಹೇಳುತ್ತಿರುವುದೇನು?'' ಎಂದು ಅಬ್ಬರಿಸಿದ.

ಗೌರಿ ಶಾಂತಳಾಗಿಯೇ ''ಜನರನ್ನು ಮೋಸ ಮಾಡುವುದನ್ನು ನಿಲ್ಲಿಸಿ ಸ್ವಾಮಿ'' ಎಂದಳು.

''ಈ ಮೂರ್ಖಳನ್ನು ಇಲ್ಲಿಂದ ತೊಲಗಿಸಿ'' ಎಂದು ಆಜ್ಞಾಪಿಸಿದರು ಬಾಬಾ.

ಅಷ್ಟರಲ್ಲಿ ಒಬ್ಬ ಶಿಷ್ಯ ಆಕೆಯ ತೋಳನ್ನು ಹಿಡಿದ. ಒಮ್ಮೆ ಕೊಡವಿ ಅವನಿಂದ ಬಿಡಿಸಿಕೊಂಡು ಥಟ್ಟನೆ ಏಳುತ್ತಾ ''ನಾನಲ್ಲ ಮೂರ್ಖಳು ಇವರು!'' ಎನ್ನುತ್ತಾ ಸುತ್ತಲಿದ್ದವರನ್ನು ತೋರಿಸಿದಳು. ''ಹೊಟ್ಟೆಯಲ್ಲಿ ಇರುವುದು ಹೆಣ್ಣು ಮಗುವಾದರೆ ಹದಿನಾಲ್ಕು-ಗುಲಾಬಿ-ಬಿಳಿ ಬಣ್ಣಗಳಿಗೆ ಕೈಮುಗಿಯಬೇಕು. ಆ ಹೆಣ್ಣು ಮಗುವನ್ನು ಗಂಡು ಮಾಡುವ ಶಕ್ತಿ ಹದಿಮೂರು-ಉಮ್ಮತ್ತಿ ಹೂ-ಕೆಂಪು ಬಣ್ಣಕ್ಕೆ ಇದ್ದರೆ ನಾವೆಲ್ಲಾ

ದೇವರು, ಬಾಬಾಗಳನ್ನು ಬಿಟ್ಟು ಉಮ್ಮತ್ತಿ ಹೂ ಪೂಜೆ ಮಾಡಬೇಕು'' ಎಂದಳು ಆವೇಶದಿಂದ.

ಅವತಾರ್ ಬಾಬಾ ಕೂಡ ಅಷ್ಟೇ ಕೃದ್ಧನಾದ. ಆವೇಶದಿಂದ ಎದ್ದು ''ಪರಮ ಪಾವನವಾದ ಜ್ಯೋತಿಷ್ಯ ಶಾಸ್ತ್ರವನ್ನೇ ಹೀಗೆ ಹಗುರ ಮಾಡಿದ ನೀನು ತುಂಬಾ ಬೇಗ ಅದಕ್ಕೆ ತನ್ನ ಶಿಕ್ಷೆಯನ್ನು ಅನುಭವಿಸುತ್ತೀ, ಇದೊ ನನ್ನ ಶಾಪ...'' ಎನ್ನುತ್ತಾ ತನ್ನ ಕಮಂಡಲದ ನೀರನ್ನು ತೆಗೆದು ಅವಳ ಮೇಲೆ ಚೆಲ್ಲುತ್ತಾ ''ಈ ಅವಹೇಳನ ನಡೆಸಿದ್ದಕ್ಕಾಗಿ ನಿನ್ನ ಹೊಟ್ಟೆಯಲ್ಲಿ ಅಷ್ಟಾವಕ್ರನು ಹುಟ್ಟಲಿ ಅವನು ಹುಟ್ಟುತ್ತಲೇ ನಿನ್ನನ್ನು, ನಿನ್ನ ಗಂಡನನ್ನು ಕೊಲ್ಲಲಿ! ಇದನ್ನು ಬ್ರಹ್ಮನೇ ಆದರೂ ನಿಲ್ಲಿಸುವುದು ಸಾಧ್ಯವಿಲ್ಲ'' ಎಂದ.

ಅಲ್ಲಿದ್ದವರೆಲ್ಲಾ ತೀರಾ ಹೆದರಿದರು. ಬಾಬಾನ ಶಾಪಕ್ಕಿಂತಲೂ ಅವರ ಅಜ್ಞಾನವೇ ಅವಳನ್ನು ನೋಯಿಸಿತು. ಸಾಧಾರಣವಾಗಿ ಆಕೆ ಭಾವಲಹರಿಗೆ ತುತ್ತಾಗುವವಳಲ್ಲ. ತನ್ನ ತಂದೆಯ ಮಾತು ನೆನಪಿಗೆ ಬಂತು. ಸುತ್ತಲೂ ಇದ್ದವರು ಕೈಜೋಡಿಸಿ ನಡೆಸುತ್ತಿರುವ ಅನುನಯದ ಪ್ರಾರ್ಥನೆ. ನಡುಗುವ ಅವರ ಮೆಎಗಳು ಅವಳಿಗೆ ಮತ್ತಷ್ಟು ಬೇಸರವನ್ನುಂಟುಮಾಡಿತು. ಯಾವಾಗಲೂ ಕೋಪವೇ ಮಾಡಿಕೊಳ್ಳದ ಗೌರಿ ಆವೇಶದಿಂದ ಅವನ ಕೈಯಲ್ಲಿದ್ದ ಕಮಂಡಲವನ್ನು ಕಿತ್ತುಕೊಂಡು ಅದರ ನೀರನ್ನೆಲ್ಲಾ ಅವನ ನೆತ್ತಿಯ ಮೇಲೇ ಸುರಿಯುತ್ತಾ ''ಈ ನೀರಿಗೇ ಆ ಶಕ್ತಿ ಇದ್ದರೆ ಎರಡು ದಿನಗಳಲ್ಲಿ ನಿನ್ನ ನಾಲಿಗೆ ಬಿದ್ದು ಹೋಗಲಿ. ಇದೇ ನನ್ನ ಶಾಪ'' ಎನ್ನುತ್ತಾ ಅಲ್ಲಿಂದ ಹೊರಬಂದಳು.

ಬರುತ್ತಿರುವಾಗ ಮನೆಯಲ್ಲಿ ಅತ್ತೆ ಏನು ಹೇಳುತ್ತಾರೋ ಎಂಬ ಭಯ ಮೊದಲಾಯಿತು. ವಿಶೇಷವೆಂದರೆ ಆಕೆ ಏನೂ ಹೇಳಲಿಲ್ಲ! ಸಿದ್ಧಾರ್ಥ ಮಾತ್ರ ''ನಮಗೇಕೆ ಈ ಉಸಾಬರಿ?'' ಎಂದ. ಗೌರಿ ಉತ್ತರಿಸದೆ ಮೌನವಾಗಿದ್ದಳು.

''ಜನರನ್ನು ಮೋಸ ಮಾಡುವವರು ಎಲ್ಲಾ ಕಾಲದಲ್ಲೂ ಇದ್ದೇ ಇರುತ್ತಾರೆ. ಎಲ್ಲರನ್ನೂ ರಕ್ಷಿಸುತ್ತೇವೆಂದು ನಾವೇನೂ ಕಂಕಣ ಕಟ್ಟಿಲ್ಲವಲ್ಲ. ಅವರಿಗೆ ಯಾವ ವಿಶೇಷ ಶಕ್ತಿಯೂ ಇಲ್ಲದಿರಬಹುದು. ಆದರೆ ದೇವರು, ದೆವ್ವ, ದುಷ್ಟ ಶಕ್ತಿಗಳು ಇವೆ. ಹಾಗೇ ಕೆಲವು ಮಹಾಪುರುಷರೂ ಇದ್ದಾರೆ''

ಗೌರಿಗೆ ಒಂದೇ ಸಂತೋಷ-ಕನಿಷ್ಟ ಮೋಸದ ಬಗ್ಗೆ ಸಿದ್ಧಾರ್ಥನಾದರೂ ಒಪ್ಪಿದನಲ್ಲ ಎಂಬುದು.

ನಂತರ ಈ ವಿಷಯವನ್ನು ಮರೆತಳು.

ಮತ್ತೆ ಈಗ ಆ ವಿಷಯ ಅಣ್ಣನ ಬಳಿ ನೆನಪಾಯಿತು. ಹೆಣ್ಣು, ಈ ಘಟನೆಯ ನಂತರ ಹಳ್ಳಿಯಲ್ಲಿ ಎಲ್ಲರೂ ಆಕೆಯನ್ನು ವಿಚಿತ್ರವಾಗಿ ನೋಡುತ್ತಿದ್ದರು. ಹಣವನ್ನೂ

ಸಾಧಾರಣವಾಗಿ ಮನೆಗೆ ಬರುತ್ತಿದ್ದವರೂ ಬರುವುದನ್ನು ನಿಲ್ಲಿಸಿದ್ದರು. ಇದನ್ನು ಗಮನಿಸಿ ಆಕೆ ನೊಂದುಕೊಂಡಳು. ಹಳ್ಳಿಯೇ ಅಂತಹುದು ಎಂದು ಸಂತೈಸಿಕೊಳ್ಳಲಾಗಲಿಲ್ಲ. ಎಷ್ಟು ಸುಮ್ಮನಿದ್ದರೂ ಮನಸ್ಸು ಕೇಳಬೇಕಲ್ಲಾ! ಈ ಪರಿಸರದಲ್ಲಿ ಇರುವುದು ಸರಿಯಲ್ಲ ಎನಿಸಿದರೂ ಏನು ಮಾಡಲು ಸಾಧ್ಯ?

ಹಾಗೆಂದೇ ಅಣ್ಣನ ಮೊಣಕಾಲ ಮೇಲೆ ತಲೆಯಿರಿಸಿ ಹತಾಶಳಾಗಿ ''ಏನೋ ನನಗೆ ಇತ್ತೀಚಿಗೆ ಭಯವಾಗುತ್ತೆ, ಏನೋ ಆಗುತ್ತೆ ಅಂತಲ್ಲ. ಆದರೂ ಏನೋ ಒಂದು ಭಯ...'' ಎಂದಳು ಕಣ್ಮುಚ್ಚಿಕೊಂಡೇ.

''ಅಂಥಾದ್ದೇನೂ ಇಲ್ಲ'' ಎಂದ ರವಿ. ''ಹೀಗೆ ಅನಾವಶ್ಯಕ ಸಂಗತಿಗಳ ಬಗ್ಗೆ ಯೋಚಿಸುತ್ತಾ ಆರೋಗ್ಯ ಹಾಳುಮಾಡಿಕೊಳ್ಳಬೇಡ''

ಆದರೆ ಬಾಬಾ ಮಹಾತ್ಮೆ ದಿನದಿನವೂ ವೃದ್ಧಿಗೊಳ್ಳುತ್ತಿದೆ. ಒಬ್ಬ ಮೂಗನಿಗೆ ಮಾತು ಬಂತಂತಲ! ಗೂನಿದ್ದವನ ಗೂನು ಹೋಯಿತಂತೆ!...''

''ಅದೇನೋ ನಾನಕ್ಷೇ ನೋಡ್ತೀನಿ'' ಎಂದ ರವಿ ತನ್ನ ತಂಗಿಗೆ ದೊರೆತಿರುವ ಶಾಪಕ್ಕೆ ಪ್ರತಿಯಾಗಿ ಅಷ್ಟನ್ನೂ ಹಿಂದಕ್ಕೆ ಸಲ್ಲಿಸುವುದು ನನ್ನ ಕೆಲಸ ಎಂದು ತೀರ್ಮಾನ ಕೈಗೊಂಡಿದ್ದ. ಈಗ ಷಾಡೋ ಮತ್ತು ಬಾಬಾಗಳ ಮೇಲಾಟವಾಗಿತ್ತು!

ರವಿ ಮತ್ತಷ್ಟು ಅಳಿಸಬೇಕೆಂದುಕೊಳ್ಳುತ್ತಿದ್ದರೆ ಅದನ್ನು ತಡೆಯುತ್ತಾ ಪಕ್ಕದಲ್ಲಿದ್ದ ತಾಯಿತನವನ್ನು ಗೌರಿ ತೆಗೆದುಕೊಟ್ಟಳು. ''ಇಷ್ಟು ಶ್ರಮದಿಂದ ಓಡಿ ಬಂದದ್ದು ಇದಕ್ಕಾಗಿಯೇ ಅಥವಾ ಇನ್ನೇನಾದರೂ ಹೋಗಿದೆಯೋ? ಎಂದು ಕೇಳುತ್ತಾ ಜೇಬಿನಿಂದ ಚೆಕ್ ತೆಗೆದುಕೊಟ್ಟ.

ಅರಳಿದ ಮುಖದೊಂದಿಗೆ ಅದನ್ನೂ ತೆಗೆದುಕೊಳ್ಳುತ್ತಾ ''ರಿಯಲೀ ಯೂ ಆರ್ ಗ್ರೇಟ್'' ಎಂದ.

ತಾಯಿತವನ್ನು ಕಟ್ಟಿಕೊಳ್ಳಲು ಅವನು ಪಡುತ್ತಿದ್ದ ಕಷ್ಟವನ್ನು ಕಂಡು ಕೇದಾರಗೌರಿ ಅದನ್ನು ತೆಗೆದುಕೊಂಡು ಕೈಗೆ ಕಟ್ಟಿದಳು.

ಆಗ ತಾನೇ ಮೂಡುತ್ತಿದ್ದ ಚಂದ್ರ ಅವಳ ಮುಖದ ಮೇಲೆ ಬೆಳದಿಂಗಳನ್ನು ಪ್ರಸರಿಸುತ್ತಿದ್ದದ. ಮುಗ್ಧವಾಗಿ ಕಾಣುತ್ತಿದ್ದ ಅವಳು ಆ ತಾಯಿತಕಟ್ಟುತ್ತಿರುವ ದೃಶ್ಯ ತುಂಬಾ ಮನೋಹರವಾಗಿತ್ತು.

ಪೂರ್ಣ ಚಂದ್ರೋದಯವನ್ನು ನೋಡುತ್ತಾ ರವಿ ಇದ್ದಕ್ಕಿದ್ದಂತೆ ''ಈ ದಿನ ರಾಖೀ ಪೌರ್ಣಮಿ...'' ಗೌರಿಯತ್ತ ತಿರುಗಿ ''ಸ್ವಂತ ಅಣ್ಣ ಎದುರು ಕುಳಿತಿದ್ದರೆ ಬೇರೆಯವರಿಗೆ ರಾಖೀ ಕಟ್ಟುತ್ತಿದ್ದೀಯಲ್ಲಾ!'' ಎಂದ.

ರಾಕೇಶ್ ''ಗೌರಿ ನನಗೆ ತಂಗಿಗಿಂತಲೂ ಹೆಚ್ಚು. ಎಲ್ಲಾ ಅಣ್ಣಂದಿರೂ ರಾಖೀ ಕಟ್ಟಿಸಿಕೊಂಡು ತಂಗಿಗೆ ಉಡುಗೊರೆ ಕೊಡುತ್ತಿದ್ದರೆ ಈ ಬಡವ ರಾಖಿಯೊಂದಿಗೆ

ತೆಗೆದುಕೊಳ್ಳುತ್ತಿದ್ದಾನೆ'' ಎಂದಾಗ ಅವನ ಮುಖದ ಮೇಲೆ ಚಿಂತೆ ಕಾಣಿಸುತ್ತಿತ್ತು.

ಅವನ ಮಾತಿಗೆ ಆಕೆಯ ಹೃದಯ ದ್ರವಿಸಿತು. ಅವನ ಪ್ರೇಮಕ್ಕೆ ಕಣ್ಣೀರು ಊರಿತು. ''ಹಾಗೆಲ್ಲಾ ಮಾತನಾಡಬೇಡ'' ಎಂದಳು.

''ಬರ್ತೀನಿ'' ಎಂದು ಹೇಳುತ್ತಾ ಹೋದ ರಾಕೇಶ್.

ರವಿ ಅವನು ಹೋಗುತ್ತಿದ್ದ ದಿಕ್ಕೇ ನೋಡುತ್ತಿದ್ದ. ಕಳೆದಿದ್ದ ತಾಯಿತ ಮತ್ತೆ ದೊರಕಿದಾಗ, ಅವನ ಮುಖದಲ್ಲಿ ಅಷ್ಟೊಂದು ಸಂತೋಷ ಕಾಣಿಸಿಕೊಂಡಿತಲ್ಲಾ ಏಕೆ? ಅವನು ತುಂಬಾ ಹಿಂದೆ ಓದಿದ್ದ ಪುಸ್ತಕ ನೆನಪಾಯಿತು- 'ಮ್ಯಾಜಿಕ್ ಆಫ್ ಅಕ್ಕಲ್ಟ್' ಸಿದ್ಧಿಗಾಗಿ ಸಾಧನೆ ನಡೆಸುತ್ತಿರುವ ಮಂತ್ರಗಾರ ಪೌರ್ಣಮಿಯಂದು ರಕ್ಷಾಬಂಧನದಲ್ಲಿರಬೇಕು.

ತನ್ನ ಯೋಚನಲಗೆ ತಾನೇ ನಗುತ್ತಿದ್ದ- ರಾಕೇಶ್ ಮಂತ್ರಗಾರನೇ?! ಬುದ್ಧಿ ಬೆಳೆದಂತೆಲ್ಲಾ ಈ ರೀತಿ ಅರ್ಥಹೀನ ಯೋಚನೆಗಳೇ ಹೆಚ್ಚಾಗುತ್ತಿವೆ!

★★★

ಸ್ಮಶಾನದಲ್ಲಿ ಯಜ್ಞ ಪ್ರಾರಂಭವಾಯಿತು. ರಾಕೇಶ್ ಯಜ್ಞಕುಂಡದ ಮುಂದೆ ಕುಳಿತಿದ್ದಾನೆ. ಮಹಾದ್ರಷ್ಟ ಕೇವಲ ಪ್ರೇಕ್ಷಕನಂತೆ ಕುಳಿತ್ತಿದ್ದಾನೆ. ಇನ್ನೂ ಸ್ವಲ್ಪ ದೂರದಲ್ಲಿ ಉಸ್ಲೋಕ್‌ನ ಇಪ್ಪತ್ತುಮಂದಿ ಮೌನವಾಗಿ ಕುಳಿತು ಇದನ್ನೆಲ್ಲಾ ಗಮನಿಸುತ್ತಿದ್ದಾರೆ.

ಅಗ್ನಿಯಲ್ಲಿರುಧಿರಾರ್ಘ ಅಪ್ಪಣೆಯಾದಂತೆಲ್ಲಾ ಅಗ್ನಿ ತನ್ನ ಕೆನ್ನಾಲಿಗೆಗಳನ್ನು ಎತ್ತರಕ್ಕೆ ಚಾಚುತ್ತಿದೆ. ಆಗ ಮಹಾದ್ರಷ್ಟನಿಗಿಂತಲೂ ರಾಕೇಶನ ಮುಖವೇ ಕ್ರೂರವಾಗಿ ವಿಕೃತವಾಗಿ ಕಾಣಿಸುತ್ತಿದೆ.

ಅವನು ಕ್ಷುದಕ್ಷವನ್ನು ಮಾಡುತ್ತಿದ್ದಷ್ಟು ಕಾಲವೂ ಸ್ತಬ್ಧವಾಗಿದ್ದ ವಾತಾವರಣವು ಮೊದಲ ದಿನದ ಪೂಜೆ ಪೂರ್ಣವಾಗಿ ಅವನು ಎದ್ದು ನಿಲ್ಲುತ್ತಲೇ ಗಾಳಿ ಮೊದಲಿಗೆ ಬಲವಾಗಿ ಬೀಸಲು ಪ್ರಾರಂಭಿಸಿತು. ಮರದ ಎಲೆಗಳು ತೂಗಾಡಿದವು. ಒಂದೇ ಕ್ಷಣದಲ್ಲಿ ಪ್ರಕೃತಿ ಬದಲಿಸಿತ್ತು.

ಅದೇ ಸಮಯಕ್ಕೆ ಕೇದಾರಗೌರಿಗೆ ಇದ್ದಕ್ಕಿದ್ದಂತೆಯೇ ಎಚ್ಚರವಾಯಿತು. ಸುತ್ತಲೂ ಕಣ್ಣೋಡಿಸಿದಳು. ಏನೋ ಚಲಿಸಿದಂತಹ ಸದ್ದು. ಇದ್ದಕ್ಕಿದ್ದಂತೆ ನಗುವಂತು- ಚಲಿಸಿತು ಹೊರಗಿನ ವಸ್ತುಗಳಲ್ಲ ಒಳಗಿನ ಶಿಶು. ಮೊದಲ ಬಾರಿಗೆ ಆದ ಈ ಅನುಭವ ಅವಳಿಗೆ ತೀರಾ ವಿಶೇಷವಾಗಿ ಕಾಣಿಸಿತು.

ಗಂಡನತ್ತ ನೋಡಿದಳು ಸಿದ್ಧಾರ್ಥ ಗಾಢ ನಿದ್ರೆಯಲ್ಲಿದ್ದ. ನಿದ್ರೆಯಲ್ಲೂ ಅದೇ ಗಾಂಭೀರ್ಯ. ಮೆಲ್ಲನೆ ಬಳಿಗೆ ಸರಿದು ಎಚ್ಚರವಾಗದಂತೆ ಮುತ್ತಿಟ್ಟಳು.

ಮತ್ತೆ ಚಲನೆ ಈ ಬಾರಿ ಸ್ವಲ್ಪ ಬಲವಾಗಿತ್ತು.

ಅದೇ ಸಮಯಕ್ಕೆ ಉಸ್ಲೋಕ್ ಸದಸ್ಯರು ಒಬ್ಬೊಬ್ಬರಾಗಿ ಯಜ್ಞದಲ್ಲಿ ಸ್ವರಕ್ತ

ತರ್ಪಣವನ್ನು ನಡೆಸುತ್ತಿದ್ದರು.

ಗರ್ಭದಲ್ಲಿ ಮಗುವು ಜೀವವನ್ನು ಸ್ವಲ್ಪ ಸ್ವಲ್ಪವಾಗಿ ಸಂಗ್ರಹಿಸಿಕೊಂಡಂತೆ ಚಲಿಸುತ್ತಿತ್ತು.

ಕೇದಾರಗೌರಿ ತನ್ನಲ್ಲಿಯೇ ಕೇಳಿಕೊಂಡಳು "ಅದೇಕೋ ಮಗು ಈಗಲೇ ನಿನಗಿಷ್ಟು ಆತುರ? ಹೊರಗೆ ಬರಲು ಇನ್ನೂ ಸಮಯವಿದೆಯಲ್ಲಾ!..."

ಶಿಶು ಈ ಮಾತು ಕೇಳಿಸಿಕೊಳ್ಳದಂತೆ ಗಲಾಟೆ ಮಾಡುತ್ತಲೇ ಇತ್ತು.

ಗೌರಿ ಗಂಡನನ್ನು ನಿಡಿದಳು. ತನ್ನ ಅರ್ಧ ಆತನ ಅರ್ಧ ಕೂಡಿ ರೂಪುಗೊಂಡ ಪೂರ್ಣ. ಇದನ್ನೇ ಶಾಸ್ತ್ರೀಯವಾಗಿ ಹೇಳಬೇಕೆಂದರೆ ತನ್ನ ಇಪ್ಪತ್ಮೂರು ಆತನ ಇಪ್ಪತ್ಮೂರು ಬೆರೆತು ರೂಪುಗೊಂಡ ಪೂರ್ಣತೆ.

ಮಗುವಿಗೆ ಯಾರ ಹೋಲಿಕೆ ಬರುತ್ತದೆ? ತನ್ನದೆ? ಅವರದೇ? ಅವರಂತೆ ದೇವರನ್ನು ನಂಬುತ್ತದೆಯೋ ಇಲ್ಲವೆ ತನ್ನಂತೆ ಕಾರ್ಯ-ಕಾರಣ ಸಂಬಂಧಾನ್ವೇಷಿಯಾಗುತ್ತದೆಯೋ...?

ಕೊನೆಯದಾಗಿ ರಕ್ತವನ್ನು ಯಜ್ಞಾಗ್ನಿಯಲ್ಲಿ ಅರ್ಪೋಸಿದ ಮಹಾದ್ರಷ್ಟ ರಾಕೇಶ್ ಯಜ್ಞಪುರುಷನಾದಂತೆ ಪ್ರಕಟಿಸಿದ.

ಇತ್ತ ಶಿಶು ತುಂಬಾ ಬಲವಾಗಿ ಚಲಿಸಿತು. ಶಿಶುವಿನ ಈ ತುಂಟಾಟದಿಂದ ಕೇದಾರಗೌರಿಗೆ ನಿದ್ರೆ ಬರಲಿಲ್ಲ. ತಂದೆಯ ಹೋಲಿಕೆಗಳೇ ಬರುತಿತ್ವೆಯೇನೋ? ದೇವರ ಹೆಸರು ಹೇಳಿಕೊಂಡರೆ ಸುಮ್ಮನಾಗಬಹುದು...ಇದೆಲ್ಲಾ ಏನು ಯೋಚನೆಗಳು. ತನ್ನ ಯೋಚನೆಗೆ ತಾನೇ ನಕ್ಕಳು. ಹೊಟ್ಟೆಯ ಮೇಲೆ ಇದ್ದ ಕೈ ತೆಗೆದಳು.

ಅಷ್ಟರಲ್ಲಿ ಜಗತ್ತಿನ ಬಲವನ್ನೆಲ್ಲಾ ಏಕತ್ರಗೊಳಿಸಿಕೊಂಡು ತಿರುಗಿದಂತೆ ಏನೋ ಚಲನೆ. ಆ ನೋವಿಗೆ ಕಣ್ಣಲ್ಲೀ ನೀರೂರಿತು. 'ಸುಮ್ಮನಿರೋ ಕಂದಾ...ಸುಮ್ಮನಿರೋ...' ಎನ್ನುತ್ತಾ ಮಗುವನ್ನು ಲಾಲಿಸಲು ತನ್ನಲ್ಲಿ ತಾನೇ ಕುರುಕಿದಳು: 'ರಾಮಾ ಲಾಲೀ...ಮೆಘ ಶ್ಯಾಮಾ ಲಾಲೀ...ದಶರಥತನಯಲಾಲೀ...'

ಈ ದೇವ ನಾಮಸ್ಮರಣೆಯೇ ಇಷ್ಟವಿಲ್ಲ ಎನು-ನವಂತೆ ಶಿಶು ಒಳಗೆ ಒಂದೇ ಸಮನೆ ಒದ್ದಾಡಿತು. ಆಕೆ ಆ ನೋವಿಗೆ ವಿಲಪಿಸಿದಳು. ನರಗಳನ್ನೆಲ್ಲಾ ಒಂದೇ ಸಮನೆ ಸೆಳೆದ ನೋವು. ಈ ನೋವನ್ನು ಹಲ್ಲುಕಚ್ಚಿ ಸಹಿಸುತ್ತಾ "ರಾ...ಮಾ...ಲಾ...ಲೀ ಮೇಘ...ಶ್ಯಾಮಾ...ಲಾ...ಲೀ..." ಎಂದಳು ಕ್ರಮ ಕ್ರಮವಾಗಿ ಅವಳಿಗೆ ಪ್ರಜ್ಞೆ ತಪ್ಪಿತು.

ಸ್ಮಶಾನದಲ್ಲಿ ಯಜ್ಞ ಬೆಳಗಾಗುವತನಕ ಸಾಗಿತು. ಉಸ್ತೋಕ್ ಸದಸ್ಯರು ಎಷ್ಟು ನಿಶ್ಯಬ್ದವಾಗಿ ಅಲ್ಲಿ ಸೇರಿದ್ದರೋ ಅಷ್ಟೇ ನಿಶ್ಯಬ್ದವಾಗಿ ಅಲ್ಲಿಂದ ಹೊರಟರು. ರಾಕೇಶ್ ಮಾತ್ರ ಅಲ್ಲಿಯೇ ಇದ್ದು ಮೂರು ದಿನಗಳ ಕಾಲ ಖೇಚರೀ ವಿದ್ಯೆಯನ್ನು

ಅಭ್ಯಸಿಸಬೇಕು.

ದೂರದಲ್ಲಿ ನಿಂತು ತನ್ನ ಕಡೆಯೇ ನೋಡುತ್ತಿದ್ದ ಮಹಾದ್ರಷ್ಟನ ಮೇಲೆ ರಾಕೇಶನ ದೃಷ್ಟಿ ಬಿತ್ತು. ಎವೆ ಇಕ್ಕದೆ ಒಂದೇ ಸಮನೆ ದಿಟ್ಟಿಸುತ್ತಿದ್ದಾನೆ. ಇಬ್ಬರ ನೋಟಗಳೂ ಬೆರೆತವು. ರಾಕೇಶ್ ತಲೆ ಚಲಿಸಲಿಲ್ಲ. ದೃಷ್ಟಿ ಮರಳಿಸಲಿಲ್ಲ. ಮಹಾದ್ರಷ್ಟ ಹಿಂತಿರುಗಿದ. ರಾಕೇಶ್‌ನ ತುಟಿಗಳ ಮೇಲೆ ವಿಕೃತವಾದ ನಗು ಮೂಡಿತು.

ಇನ್ನೂ ಬೆಳಕಾಗಿಲ್ಲ. ಹಿಂದಿನ ದಿನ ಸುಟ್ಟ ಶವದ ಚಿತೆಯಿಂದ ಹೊಗೆ ಬರುತ್ತಿದೆ. ಇನ್ನು ನಾಲ್ಕಾರು ಗಂಟೆಗಳ ಕಾಲ ಯಾವ ಶವವೂ ಅಲ್ಲಿಗೆ ಬರುವುದಿಲ್ಲ. ಅಷ್ಟರಲ್ಲಿ ತನ್ನ ವಿಶ್ರಾಂತಿ ಮುಗಿಸಬೇಕು.

ಕಣ್ಣು ಎಳೆಯುತ್ತಿತ್ತು. ನಿದ್ರೆ ಬಳಿಯ ಸಮಾಧಿಯೊಂದರ ಬಳಿ ಮಲಗಿ ನಿದ್ರಿಸಿದ.

ಕಿರುಧ್ವನಿಯೊಂದು ಕೇಳಿಸಿತು. ಅದನ್ನು ಮೊದಲು ಗಮನಿಸಲಿಲ್ಲ. ಕ್ರಮಕ್ರಮವಾಗಿ ಅದು ಹೆಚ್ಚಿತು. ಎಲೆಗಳ ಸಂದಿಯಿಂದ, ಕಲ್ಲುಗಳ ಅಡಿಯಿಂದ, ಮರಗಳ ಮರೆಯಿಂದ, ಬೀಸುತ್ತಿದ್ದ ಗಾಳಿಯಲ್ಲಿ ನಾನ ಸ್ವರಗಳು ಅದರಲ್ಲೆಲ್ಲಾ ಮಾತು.

ಮಾತು ಕೇಳಿಸುತ್ತಿದೆ ಎಂಬ ಭಾವನೆ ಬರುತ್ತಲೇ ರಾಕೇಶ್ ಧಿಗ್ಗನೆ ಎದ್ದು ಕುಳಿತ. ಕಿವಿಗಳನ್ನು ನಿಮಿರಿಸಿ ಕೇಳಿದ.

ಕರೆ...ತನ್ನನ್ನೇ ಕರೆಯುತ್ತಿರುವ ಕರೆ...ಬಾ...ಬಾ...ಎನ್ನುತ್ತಿದೆ. ಅದು ಗಾಳಿಯ ಸದ್ದೆ! ಆದರೆ ಅದೇ ಒಂದು ರೀತಿಯಾಗಿದೆ. ನಿಜವಾಗಿಯೂ ಅದು ಸಾಧಾರಣವಾದ ಗಾಳಿಯ ಮೊರೆತವಲ್ಲ. ಎಲೆಗಳೂ ಗಾಳಿಗೆ ಅಲುಗುತ್ತಿಲ್ಲ ಆದರೂ ಸದ್ದು ಬರುತ್ತಿದೆ- ಬಾ...ಬಾ...

ಕನಸಿನಲ್ಲಿ ನಡೆದುಹೋದಂತೆ ಹೊರಟ. ಸ್ಮಶಾನದ ಎಲ್ಲೆಗೆ ಬಂದ. ದೊಡ್ಡ ಮರಗಳು ಒತ್ತಾಗಿದ್ದವು. ಅವ್ಯಾವುದನ್ನೂ ಅವನು ಗಮನಿಸುವಂತಿರಲಿಲ್ಲ. ಕ್ಷುದ್ರಗಣವೊಂದು ಅವನಲ್ಲಿರುವಂತೆ ನಡೆಯುತ್ತಿದ್ದ.

ಇದ್ದಕ್ಕಿದ್ದಂತೆಯೇ ಆ ಕರೆ ನಿಂತಿತು.

ಅವನೂ ನಿಂತ.

ಆ ನಿಶ್ಶಬ್ದದಲ್ಲಿ ಅವನಿಗಿಂತ ಒಂದು ಅಡಿ ದೂರದಲ್ಲಿ ನೆಲದ ಮೇಲೆ ಗಾಳಿಯ ಸುಳಿ ತಿರುಗುತ್ತಾ ಮೇಲೇರಿತು. ನೋಡುತ್ತಿದ್ದಂತೆ ಆ ಸುಳಿ ದಟ್ಟಗೊಂಡಿತು ಅದು ಮರಗಳ ಮರೆಗೆ ಹೋಗುತ್ತಲೇ ''ಸ್...ಸ್...'' ಎಂದು ಸದ್ದು ಕೇಳಿಸಿತು. ರಾಕೇಶಾ ನಿರ್ವಿಣ್ಣನಾಗಿ ನೋಡುತ್ತಲೇ ಇದ್ದ. ಆ ಮರಗಳ ಪೊದೆಯಿಂದ ಬರುತ್ತಿದ್ದ ನಾನಾ ಸ್ವರಗಳು ಮಿಳಿತಗೊಂಡು ಏನೋ ಸಂದೇಶವನ್ನು ತಿಳಿಸುತ್ತಿತ್ತು. ಆಗ ತಾನೇ ಸೂರ್ಯ ಕಾಣಿಸಿಕೊಳ್ಳುತ್ತಿದ್ದ. ಯಾರೋ ರಕ್ತವನ್ನೆಲ್ಲಾ ಬಾನಿನಲ್ಲಿ ಚೆಲ್ಲಿದಂತೆ ಕೆಂಪಡರಿತ್ತು. ಕ್ಷುದ್ರಗಳು ವಿಶ್ರಮಿಸುವ ಸಮಯದಲ್ಲಿ ಅವನ್ನು ಯಾರೋ ಚಾವಟಿಯಿಂದ ಬಡಿದು

ಎಬ್ಬಿಸಿ ಅಲ್ಲಿಗೆ ಸೇರಿಸಿದಂತೆ ಗಾಳಿಯಲ್ಲಿ ಕೋಲಾಹಲ ಏನೋ ಉಪದೇಶಿಸಲು ಅಲ್ಲಿಗೆ ಕರೆಸಿದಂತೆ ಅನಿಸಿಕೆ.

ರ್ರ...ರ್ರ...ರ್ರಾ...ರ್ರಾ...ರಾಕೇ...ಶ್

ತನ್ನ ಕಿವಿಯನ್ನು ತಾನೇ ನಂಬಲಾರದೆ ನೋಡುತ್ತಿದ್ದ. ಬಲವಾದ ಗಾಳಿ ಪ್ರಾರಂಭವಾದಂತೆ ಸುಳಿ ಬಲಗೊಳ್ಳುತ್ತಿತ್ತು. ಅಲ್ಲಿಂದ ಒಂದು ಗುಸ ಗುಸ ಸದ್ದು ಅಸ್ಪಷ್ಟವಾಗಿ ಕೇಳಿಸಲು ಪ್ರಾರಂಭವಾಯಿತು-

ರಾಕೇಶ್...ಸೈತಾನನ ವಾರಸುದಾರ ಕುಟ್ಟಿಸೈತಾನ್...

ಅಷ್ಟಾವಕ್ರನ ರೂಪದಲ್ಲಿ ಭೂಮಿಯ ಮೇಲೆ ಬರುವ ಕಾಲ ಸಮೀಪಿಸಿದೆ. ತಾಯಿ-ತಂದೆಗಳನ್ನು ಕೊಲ್ಲುತ್ತಾ ಹುಟ್ಟುವ ಆ ಅಷ್ಟಾವಕ್ರನನ್ನು...ಎಂಟು ವರ್ಷಗಳವರೆಗೆ ಸಾಕುವ ಹೊಣೆಗಾರಿಕೆ ನಿನ್ದೇ!!ಐ..ಈ ಕ್ಷಣದಿಂದಲೇ ನೀನೂ ಪ್ರಥಮಗಳಲ್ಲಿ ಪ್ರಥಮನು. ಅದಕ್ಕೆ ಬದಲಾಗಿ ಮನೋರೂಪ ವಿದ್ಯೆಯನ್ನು ಪಂಚಭೂತಗಳು ಪ್ರಸಾದಿಸುತ್ತಿವೆ...ಸ್ವೀಕರಿಸು...

ಅವನಿಗೆ ಅರ್ಥವಾಗಲಿಲ್ಲ. ಇನ್ನೂ ಪೂರ್ಣವಾಗಿ ಆ ಭ್ರಾಂತಿಯಲ್ಲಿದ್ದ. ಯಾರೋ ಬಲವಾಗಿ ಮುಖದ ಮೇಲೆ ಬಡಿದಂತಾಗಿ ಮತ್ತು ಆವರಿಸಿ ಬಿದ್ದುಹೋದ.

ಮತ್ತೆ ಕಣ್ತೆರೆಯುವ ವೇಳೆಗೆ ಆಕಾಶದಲ್ಲಿ ನಕ್ಷತ್ರಗಳು ಕಾಣಿಸುತ್ತಿದ್ದವು. ಮೊದಲು ಅದು ಕನಸು ಎಂದುಕೊಂಡ. ಅಷ್ಟರಲ್ಲಿ ಉಸ್ಸೋಕ್ ಸದಸ್ಯರು ಕಾಣಿಸಿದರು. ಕನಿಷ್ಟ ಹನ್ನೆರಡು ಗಂಟೆಗಳ ಕಾಲ ತಾನು ಹಾಗೆ ಬಿದ್ದಿರಬೇಕೆನಿಸಿತು.

ಅಷ್ಟರಲ್ಲಿ ಮಹಾದ್ರಷ್ಟ ದೊನ್ನೆಯಲ್ಲಿ ಅವನಿಗಾಗಿ ಮಾಂತ್ರಿಕ ಭೋಜ್ಯಗಳಾದ ಮಾಂಸಾದಿಗಳನ್ನು ತೆಗೆದುಕೊಂಡು ಬಂದದ್ದು ಕಾಣಿಸಿತು.

ರಾಕೇಶ್ ಎದ್ದು ಕುಳಿತ

ದೊನ್ನೆಯನ್ನು ಮಹಾದ್ರಷ್ಟ ಅವನ ಮುಂದೆ ಇರಿಸಿದ. ದೊನ್ನೆ ಇಡಲು ಬಗ್ಗಿದ್ದ ಮಹಾದ್ರಷ್ಟನನ್ನು ಅವನ ಮುಖವನ್ನು ಪರಿಶೀಲಿಸಿದ ರಾಕೇಶ್.

'ತಿನ್ನು ರಾಕೇಶ್, ಇನ್ನೆಷ್ಟು ಕಾಲ ನಿನಗೆ ಈ ಸೇವೆ ಮಾಡ್ತೇವೆ? ನಿನ್ನ ಜೀವನ ಕಾಲ ಮುಗಿಯುತ್ತಾ ಬಂದಿದೆ. ಅಷ್ಟಾವಕ್ರನು ಆವಿರ್ಭವಿಸಿದ ಮರುಕ್ಷಣವೇ ನಿನ್ನ ಬಾಳೂ ಮುಗಿಯುತ್ತದೆ'

ರಾಕೇಶ್ ಬೆಚ್ಚಿಬಿದ್ದ.

ಮಹಾದ್ರಷ್ಟನ ಮನಸ್ಸನ್ನು ಸ್ಪಷ್ಟವಾಗಿ ಓದುವುದು ಸಾಧ್ಯವಾಗಿತ್ತು!

ತನ್ನ ಸೇವೆಯಿಂದ ಸಂತೃಪ್ತರಾದ ಕ್ಷುದ್ರಗಣಗಳು ತನ್ನೊಂದಿಗೆ ಮಾತನಾಡಿದವು. ಮನೋರೂಪ ವಿದ್ಯೆಯನ್ನು ಪ್ರಸಾದಿಸಲಾಗಿದೆ ಎಂದರೆ ಅದಕ್ಕೆ ಅರ್ಥ ಅದೇ!

ತಾನೀಗ ಮಹಾದ್ರಷ್ಟನ ಸಮಾನ.

ಆದರೆ ಆಗಲೇ ಇದೆಲ್ಲಾ ಅವರಿಗೆ ಗೊತ್ತಾಗದಿರುವಂತೆ ತಲೆ ತಗ್ಗಿಸಿಕೊಂಡು ದೊನ್ನೆಯಲ್ಲಿಯ ಮಾಂಸವನ್ನು ತಿನ್ನತೊಡಗಿದ.

## 20

''ಕೃಷ್ಣಾಪುರದಲ್ಲಿ ವಿಕೃತ ಶಿಶುಗಳ ಹುಟ್ಟಿನ ಹಿಂದೆ ಇರುವ ಶಾಸ್ತ್ರೀಯ ಜೆನೆಟಿಕ್ ಕಾರಣವನ್ನು ನಾನು ತಿಳಿಸಿದ್ದೇನೆ'' ಎಂದ ಪ್ರೊ।। ಪುಟ್ಟಣ್ಣ. ರಂಗಪ್ರಸಾದ್ ಮಾತನಾಡದೆ ಸುಮ್ಮನೆ ನೋಡುತ್ತಿದ್ದ. ಆ ಹಳ್ಳಿಯಲ್ಲಿ ಓದಿದ್ದವರು ತೀರಾ ಕಡಿಮೆ ಮಂದಿ. ಆದ್ದರಿಂದ ಪುಟ್ಟಣ್ಣನಿಗೆ ತನ್ನ ಸಂಶೋಧನೆಯ ಬಗ್ಗೆ ಮಾತನಾಡಲು ರಂಗಪ್ರಸಾದ್ ಒಬ್ಬನೇ ದೊರಕಿದ್ದು!

''ಈ ವಿಚಿತ್ರಗಳಿಗೆ ಕಾರಣ ಮ್ಯುಟೇಷನ್ಸ್. ಇದರಲ್ಲಿ ಎರಡು ಬಗೆ ಒಂದು ಪಾಯಿಂಟ್ ಮ್ಯುಟೇಷನ್; ಎರಡು ಕ್ರೋಮೋಜೋಮುಗಳಲ್ಲಿ ಬದಲಾವಣೆ'' ಎಂದು ವಿವರಿಸಿದ ಮಕ್ಕಳಿಗೆ ತಿಳಿಸುವಂತೆ. ತನ್ನೆದುರು ಕುಳಿತಿರುವುದು ಡಾಕ್ಟರ್ ಎಂಬುದನ್ನೇ ಮರೆತಂತಿತ್ತು.

''ಇದುವರೆವಿಗೂ ಎಲ್ಲರೂ ಈ ಜನನಗಳಿಗೆ ಕಾರಣ ಕ್ರೋಮೋಜೋಮ್‌ಗಳಲ್ಲಿಯ ಬದಲಾವಣೆ ಎಂದುಕೊಂಡಿದ್ದಾರೆ. ಅದೇ ಅವರು ಮಾಡಿರುವ ದೊಡ್ಡ ತಪ್ಪು. ಇದಕ್ಕೆ ಕಾರಣ ಪಾಯಿಂಟ್ ಮ್ಯುಟೇಷನ್ಸ್''

ರಂಗಪ್ರಸಾದ್ 'ಹೇಳಿ' ಎನ್ನುವಂತೆ ತಲೆದೂಗಿದ.

''ಡ್ರಿಫ್ಟ್ ಎಂಬ ಪದ ನೀವು ಕೇಳಿದ್ದೀರೋ ಇಲ್ಲವೋ? ಹಾಗೇ ಜೆನ್‌ಫ್ಲೋ ಎಂಬ ಪದವೂ ಕೂಡ ಹೊಸ ಪದವೇ...ಪ್ರಪಂಚದ ಕೆಲವು ಪ್ರಾಂತ್ಯದ ಮನುಷ್ಯರಿಗೆ ಕೆಲವು ಪ್ರತ್ಯೇಕ ಲಕ್ಷಣಗಳಿರುತ್ತವೆ. ಉದಾಹರಣೆಗೆ ಭಾರತದಲ್ಲಿ ಆಗಾಗ ಮೇಲ್ತುಟಿ ಮೂಗು ಅಂಟಿಕೊಂಡಿರುವುದನ್ನು ನೋಡುತ್ತೇವೆ. ಅದೇ ರೀತಿಯಲ್ಲಿ ಕಿರೋಪಾಡೀ ಸಂತತಿಯನ್ನು ಬ್ರೆಜಿಲ್‌ನಲ್ಲಿ ನೋಡುತ್ತೇವೆ'' ಎನ್ನುತ್ತಾ ತನ್ನೊಂದಿಗೆ ತನ್ನ ಫೈಲೊಂದನ್ನು ತೆರೆದು ತೋರಿದ.

''ಹುಟ್ಟುವಾಗಲೇ ಕೈ ಕಾಲು ಇಲ್ಲದೆ ಹುಟ್ಟುವ ಈ ಶಿಶುಗಳು ಕೇವಲ ಬ್ರೆಜಿಲ್‌ನಲ್ಲಿ ಮಾತ್ರವೇ ಏಕೆ ಹುಟ್ಟುತ್ತಾರೆ? ದೇಶೀಯರಾದ ಕಂಜೆನಿಟಲ್ ಮಾಲ್ ಫಾರ್ಮೇಷನ್ಸ್. ಈ ಕೃಷ್ಣಾಪುರವನ್ನು ಕಾಡುತ್ತಿರುವುದು ಇದೇ ವ್ಯಾಧ್ಯವೇ'' ಪ್ರೊ।। ಪುಟ್ಟಣ್ಣ ಹೇಳಿದರು.

''ಇದೇನೋ ಅರ್ಥವಾಗುತ್ತಿಲ್ಲ'' ಎಂದ ಡಾ।। ರಂಗಪ್ರಸಾದ್.

ಪ್ರೊ।। ಪುಟ್ಟಣ್ಣ ಚಿಕ್ಕ ಹುಡುಗನನ್ನು ನೋಡುವಂತೆ ನೋಡಿದ ಇಷ್ಟೊಂದು ಅರಿಯದ ವ್ಯಕ್ತಿಗೆ ತನ್ನ ರಿಸರ್ಚ್ ವಿವರಿಸಿ ಹೇಳಬೇಕಾಗಿಬಂತಲ್ಲಾ ಎಂದು ದುಃಖಿಸುತ್ತಿರುವಂತೆ! ಪುಟ್ಟಣ್ಣ ಹೇಳತೊಡಗಿದ:

''ಕೃಷ್ಣಾಪುರಕ್ಕೆ ಹದಿನಾರು ಮೈಲಿ ದೂರದಲ್ಲಿ ಇರುವ ಫ್ಯಾಕ್ಟರಿಯ ಕೆಟ್ಟ ನೀರು ಬಂದು ನದಿಯಲ್ಲಿ ಬೆರೆಯುತ್ತದೆ. ಅದರಲ್ಲಿರುವ ಟ್ರೈಮಿಥೇಲ್ ಕ್ಯಾನಥೈನ್ ಈ ವಿಪರೀತಕ್ಕೆ ಕಾರಣ''

''ನೀವು ಹೇಳುವಂಥಾ ನದಿ ಕೃಷ್ಣಾಪುರದ ಬಳಿ ಮಾತ್ರ ಹರಿಯುವುದಲ್ಲ, ಸುಮಾರು ಎರಡುನೂರು ಮೈಲಿ ಹರಿಯುತ್ತದೆ. ಆ ನೀರು ಕುಡಿದ ಬೇರೆಯವರಿಗೆಲ್ಲಾ ಈ ರೀತಿಯ ವಿಕೃತ ಜನಗಳಾಗಬೇಕಾಗಿತ್ತಲ್ಲ!''

ತೀರಾ ಸಾಮಾನ್ಯನಂತೆ ಕೇಳುತ್ತಿದ್ದ ರಂಗಪ್ರಸಾದನ ಈ ಪ್ರಶ್ನೆಯನ್ನು ಕೇಳುತ್ತಲೇ ಪುಟ್ಟಣ ಇಂಗು ತಿಂದ ಮಂಗನಂತಾದ. ಆದರೂ ತುಂಬಾ ಪ್ರಯತ್ನದಿಂದ ''ಆದ್ದರಿಂದಲೇ ಜೀನ್‌ಫ್ಲೋ ಕೂಡ ನಾವು ಪರಿಗಣಿಸಬೇಕು'' ಎಂದ. ಉದಾಹರಣೆ ಒಂದು ಕಡೆಯಿಂದ ರೇಡಿಯೋ ಆಕ್ಟೀವ್ ಕಿರಣಗಳು ಬಿಡುಗಡೆಗೊಳ್ಳುತ್ತಿವೆ ಎಂದುಕೊಳ್ಳಿ. ಅದರ ಪ್ರಭಾವ ಎಲ್ಲರ ಮೇಲೂ ಇರುವುದಿಲ್ಲ. ಮೊದಲು ನಿರ್ಬಲರು ನಷ್ಟಗೊಳ್ಳುತ್ತಾರೆ''

''ಹಾಗೆಂದರೆ ಅಂತಹ ನಿರ್ಬಲರೆಲ್ಲರೂ ಕೃಷ್ಣಾಪುರದಲ್ಲಿಯೇ ಇದ್ದಾರೆ ಎಂದೇ?''

-ಪುಟ್ಟಣ್ಣನಿಗೆ ಉಸಿರು ಕಟ್ಟಿತು. ತನ್ನ ತಿಳವಿನಿಂದ ''ನಿಮಗೆ ಅರ್ಥಮಾಡಿಕೊಳ್ಳುವುದು ಕಷ್ಟವೆಂದು ಸಾಧಾರಣ ಭಾಷೆಯಲ್ಲಿ ವಿವರಿಸಿದ್ದೇನೆ. ಅಮೆರಿಕಾದಲ್ಲಿನಾನು ಓದಲಿರುವ ರಿಸರ್ಚ್ ಪೇಪರ್ ಓದುತ್ತೇನೆ, ಕೇಳಿ. ಪದಗಳನ್ನು ಅರ್ಥಮಾಡಿಕೊಳ್ಳವುದು ಕಷ್ಟವಿರಬಹುದು. ಆದರೂ ಅರ್ಥಮಾಡಿಕೊಳ್ಳಲು ಪ್ರಯತ್ನಿಸಿ'' ಎಂದು ಪೇಪರ್ ತೆಗೆದ.

''ಈಗ ಬ್ರಿಟನ್‌ನಲ್ಲಿ ಪ್ರತಿ ವರ್ಷವೂ ಒಂದು ಲಕ್ಷ ಶಿಶುಗಳು ಅಂಗವಿಕಲರಾಗಿ ಹುಟ್ಟುತ್ತಾರೆ: ಇವುಗಳಲ್ಲಿ ಶೇಕಡ ತೊಂಬತ್ತಕ್ಕೂ ಹೆಚ್ಚು ಕ್ರೋಮೋಜೋಂಗಳ ವೈಫಲ್ಯದ ಫಲ. ಈ ಕ್ರೊಮಮೋಜೋಂಗಳ ವೈಪರೀತ್ಯಕ್ಕೆ ರೇಡಿಯೇಷನ್ ಕಾರಣ ಎಂಬುದನ್ನು ಎಲ್ಲರೂ ಅಂಗೀಕರಿಸಿದ್ದಾರೆ. ಆದರೆ ಈ ಅಲ್ಪಸಂಖ್ಯಾತ ದುರದೃಷ್ಟಕರವಾದ ಹುಟ್ಟಿನಿಂದ ಪೂರ್ಣವಾಗಿ ಎಕ್ಸ್‌ರೇಯನ್ನೇ ವೈದ್ಯಶಾಸ್ತ್ರದಿಂದ ಕೈ ಬಿಡುವುದು ಸರಿಯೇ? ಸರಿಯಲ್ಲ. ಮನುಷ್ಯನ ಬಾಳಿಗೂ ಎಕ್ಸ್‌ರೇಗೂ ತುಂಬಾ ಸಮೀಪದ ಬಾಂಧವ್ಯವಿದೆ'' ಎನ್ನುತ್ತಾ ಒಂದು ಹಾಳೆಯನ್ನು ರಂಗಪ್ರಸಾದ್ ಮುಂದಕ್ಕೆ ತಳ್ಳಿದ. ಅವುಗಳಲ್ಲಿ ಕೆಲವು ಫೋಟೋಗಿಳದ್ದವು. ರಂಗಪ್ರಸಾದ್ ದಿಗ್ಭ್ರಾಂತಿಯಿಂದ ಅವನ್ನು ನೋಡಿದ.

ಕೃಷ್ಣಾಪುರದಲ್ಲಿ ಇದೂವರೆವಿಗೂ ಹುಟ್ಟಿದ ಆರು ವಿಕೃತ ಶಿಶುಗಳ ಫೋಟೋಗಳು.

ಪ್ರೊ॥ ಪುಟ್ಟಣ್ಣ ರಂಗಪ್ರಸಾದ್ ಎದುರು ಹಿಡಿದ ಆರು ಚಿತ್ರಗಳಲ್ಲಿ:

(1) ಕೃಷ್ಣಾಪುರದಲ್ಲಿ ಹುಟ್ಟಿದ ಮೊಟ್ಟಮೊದಲ ವಿಚಿತ್ರ ಶಿಶು. ಸೈಕ್ಲೋಪ್ಸ್, ಕಣ್ಣಿಲ್ಲ,

ಮೂಗು ಇರಬೇಕಾಗಿದ್ದೆಡೆ ಒಂದು ರಂಧ್ರವಿದೆ. ಮೃತ ಶಿಶು.

(2) ಎರಡನೆಯ ಶಿಶು- ಸೈಕ್ಲೋಪ್ಸ್, ಹೈಪೋಗ್ನಾತಸ್ ಬದಲು ಗದ್ದದ ಕೆಳಗೆ ಚಿಕ್ಕ ರಂಧ್ರವಿತ್ತು.

(3) ಪುಟ್ಟಣ್ಣ ಮೂರನೆಯ ಫಟೋ ತೋರಿಸುತ್ತಾ ರಂಗಪ್ರಸಾದ್‌ಗೆ ಹೇಳಿದ- ''ಸಿರೇನೋ ಮೆಲನ್ ಅವಸ್ಥೆಯಲ್ಲಿ ಅವಯವಗಳು ಕಿರಿದಾಗಿರುವ ಶಿಶು ಇದರ ತಾಯಿಯನ್ನೇ ಯಾರೋ ಕೊಂದರು. ಇದನ್ನು ನೀವೇ ಪೋಸ್ಟ್‌ಮಾರ್ಟಮ್ ಮಾಡಿದಿರಿ. ತಾಯಿಯನ್ನು ಯಾರು ಯಾಕೆ ಕೊಂದರೋ ಗೊತ್ತಿಲ್ಲ'' ಎಂದು ನಕ್ಕ. ಆ ನಗುವಿನಲ್ಲಿ ಮೂದಲಿಕೆಯಿತ್ತು ಎಂಬುದನ್ನು ರಂಗಪ್ರಸಾದ್ ಗಮನಿಸಿದ.

(4) ಸ್ಟಿಲ್ ಬಾರ್ನ್ ಫೀಟಸ್, ''ಇದರ ಜನನದೊಂದಿಗೇ ಕೃಷ್ಣಾಪುರದ ಜನರು ಭಯಭ್ರಾಂತರಾದದ್ದು, ತಮ್ಮ ಗ್ರಾಮಕ್ಕೆ ದುಷ್ಟಗ್ರಹದ ಶಾಪ ತಟ್ಟಿದೆಯೆಂದು ಹೆದರಿದರು. ಗ್ರಾಮದೇವತೆಯ ಪೂಜೆಗಳು, ಬಲಿಗಳು ಆದವು'' ಪುಟ್ಟಣ್ಣ ಮತ್ತೆ ನಕ್ಕ.

(5) ''ಐದನೆಯ ಈ ಶಿಶುವಿನ ಹುಟ್ಟು, ದೇಶದ ಎಲ್ಲಾ ಜನರ ದೃಷ್ಟಿಯನ್ನು ಕೃಷ್ಣಾಪುರದತ್ತ ಸೆಳೆಯಿತು. ಸೈನ್ಸ್ ಇಂಡಿಯಾ ಪತ್ರಿಕೆ ಈ ಫಟೋವನ್ನು ಪ್ರಧಾನವಾಗಿ ಪ್ರಕಟಿಸಿತು- ಫೆರ್ರಿಕಲ್ ಫಿಷರ್ಸ್ ಹರ್ವಿನ್ ಮೂಗಿನ ಹೊಳ್ಳೆಯಲ್ಲಿದೆ. ಹುಟ್ಟಿದ ಸ್ವಲ್ಪ ಹೊತ್ತಿನವರೆಗೂ ಶಿಶು ಬದುಕಿದ್ದು ಸಾಯುತ್ತಾ ತನ್ನ ಕಡೆ ನೋಡಿ ನಕ್ಕಿತೆಂದೂ ಮಿಡ್ವೈಫ್ ಒಂದು ಸಂದರ್ಶನದಲ್ಲಿ ಹೇಳಿದಳು. ಇದು ಸ್ಪಷ್ಟವಾಗಿ ಮಾಕ್ರೋಸ್ಟೋಮಿಯಾ.

(6) ''ಈ ಶಿಶುವಿನ ಹುಟ್ಟು ಜಗತ್ತಿನ ದೃಷ್ಟಿನ್ನೇ ಕೃಷ್ಣಾಪುರದತ್ತ ಸೆಳೆಯಿತು. ಅವತಾರ್ ಬಾಬಾನನ್ನು ಧಿಕ್ಕರಿಸಿದ ದಂಪತಿಗಳಿಗೆ ಹುಟ್ಟಿದ ಮಗು. ಈ ಶಿಶುವಿಗೆ ಕಣ್ಣು ಸಂಪೂರ್ಣವಾಗಿಲ್ಲ, ಹಣೆಯಲ್ಲಿ ಕಣ್ಣುಗುಡ್ಡೆ ಮೂಗಿನ ಬಳಿ ಒಂದು ರಂಧ್ರ ಬಾಯಲ್ಲಿ ಹನ್ನೆರಡು ಹಲ್ಲುಗಳು. ಹುಟ್ಟಿದ ಎರಡು ದಿನಗಳು ಬದುಕೇ ಇತ್ತು. ಜನರು ತಂಡೋಪತಂಡವಾಗಿ ಬಂದು ಹೋದರು''

ಕಾಗದವನ್ನು ಪಕ್ಕಕ್ಕಿರಿಸಿ ಮತ್ತೆ ಹೇಳಲು ಪ್ರಾರಂಭಿಸಿದ:

''ಈ ಎಲ್ಲಾ ಮಕ್ಕಳ ತಾಯಂದಿರೂ ಕೂಲಿಗಾರರೇ, ಅವರಲ್ಲಿ ಯಾರೂ ತಮ್ಮ ಆದುವರೆವಿನ ಬಾಳಿನಲ್ಲಿ ಎಕ್ಸ್‌ರೇ ಮಿಷನ್ ಹೇಗಿದೆ ಎಂಬುದನ್ನೂ ನೋಡವವರು. ಭಾರತದೇಶದಲ್ಲಿ ಬಡವರಾದ ಹಳ್ಳಿಗರಿಗೆ ವೈದ್ಯ ಸೌಲಭ್ಯವೇ ದೊರೆಯುವುದಿಲ್ಲ, ಅಂಥಾದ್ದರಲ್ಲಿ ಎಕ್ಸ್‌ರೇ ಸೌಲಭ್ಯ ಎಲ್ಲಿಯದು? ಉಳಿದ ಗ್ರಾಮಗಳಿಗೂ ಕೃಷ್ಣಾಪುರಕ್ಕೂ ಅಂತರವಿದೆ. ಇಲ್ಲಿ ಉಚಿತವಾಗಿ ವೈದ್ಯಕೀಯ ಸೌಲಭ್ಯ ಒದಗಿಸುವ ಕರುಣಾಮಯನಾದ ಡಾಕ್ಟರ್ ಒಬ್ಬ ಇದ್ದಾನೆ. ಸಾಮಾನ್ಯರಿಂದ ಒಂದು ಕಾಸೂ ಕೇಳದೆ ಡೆಲಿವರಿ ಕೇಸಿನಿಂದ ಎಕ್ಸ್‌ರೇವರೆಗೆ ಮಾಡುತ್ತಾನೆ...''

ಇದನ್ನು ಕೇಳುತ್ತಿದ್ದ ರಂಗಪ್ರಸಾದ್ ಮುಖ ಕೆಂಪೇರಿತು. ಈತ ಸಮಸ್ಯೆಯನ್ನು ಎಲ್ಲಿಂದ ಎಲ್ಲಿಗೆ ಸೆಳೆಯುತ್ತಿದ್ದಾನೆ ಎಂಬುದು ಗೊತ್ತಾಗಿ ಮೈ ನಡುಗಿತು. ಅದೂ ಯಾವುದೂ ಗಮನಿಸಿದವನಂತೆ ಪುಟ್ಟಣ್ಣ ಹೇಳುತ್ತಾ ಹೋದ:

''...ತನ್ನ ಬಳಿಗೆ ಚಿಕಿತ್ಸೆಗೆ ಬಂದ ಗರ್ಭಿಣಿ ಸ್ತ್ರೀಯನ್ನು ಡಾಕ್ಟರ್ ರಂಗಪ್ರಸಾದ್ ಅರಿಯದೆ ಎಕ್ಸ್‌ರೇ ಪ್ರಯೋಗಿಸಿ...''

''ಸಾಕು ನಿಲ್ಲಿಸಿ...ಇದು ಅನ್ಯಾಯ'' ಎಂದು ಕಿರುಚಿದ.

''ಇಲ್ಲ ನಿಮ್ಮ ತಪ್ಪು ಒಂದು ನಾನು ಹೇಳುತ್ತಿಲ್ಲ. ಡಾಕ್ಟರ್ ಕೆಲಸ ನೀವು ಮಾಡಿದ್ದೀರಿ. ಆದರೆ ಅರಿತೋ ಅರಿಯದೆಯೋ...''

''ಇದೇನು ಈಡಿಯಾಸಿಟಿ?'' ಎಂದ ರಂಗಪ್ರಸಾದ್ ಅದೇ ಧ್ವನಿಯಲ್ಲಿ ''ಅರಿತೂ ಅರಿಯದ ಬುದ್ಧಿ ನನ್ನದಲ್ಲ- ನಿಮ್ಮದು. ಗರ್ಭಿಣಿ ಸ್ತ್ರೀಯರ ಮೇಲೆ ಪ್ರಯೋಗಿಸುವ ಎಕ್ಸ್‌ರೇಗೂ ಅದಕ್ಕೂ ಮೊದಲು ಯಾವಾಗಲೋ ಆಕೆಯಲ್ಲಿ ಸೇರಿದ ವೀರ್ಯಕಣಗಳ ಮ್ಯೂಟೇಷನ್‌ಗೂ ಏನು ಸಂಬಂಧ? ನಿಮ್ಮ ಮೇಲೆ ಮಾನನಷ್ಟ ಮೊಕದ್ದಮೆ ಹೂಡಬೇಕಾಗುತ್ತದೆ''

ಪುಟ್ಟಣ್ಣನಲ್ಲಿ ಇದ್ದಕ್ಕಿದ್ದಂತೆಯೇ ಬದಲಾವಣೆ ಕಾಣಿಸಿಕೊಂಡಿತು.ನೀವು ನನ್ನನ್ನು ಅರ್ಥಮಾಡಿಕೊಳುಳ್ಳುತ್ತಿಲ್ಲ ಡಾಕ್ಟರ್. ಅಮೆರಿಕಾದಲ್ಲಿ ನಿಮ್ಮ ಬಗ್ಗೆ ಯಾಗಲಿ, ನಿಮ್ಮ ಪೇಪರಾಗಲಿ ಯಾರಿಗೂ ಗೊತ್ತಿಲ್ಲ. ನಿಮ್ಮ ಹೆಸರನ್ನು ಬಳಸಿಕೊಳ್ಳುತ್ತಿದ್ದೇನೆ ಅಷ್ಟೆ. ಈ ಮಾತಿನಲ್ಲಿ ''ನಾನು ಒಳ್ಳೆಯವನಾದ್ದರಿಂದ ನಿಮಗೆ ಈ ಮಾತು ಮೊದಲೇ ಹೇಳಿದ್ದೇನೆ. ಇಲ್ಲದಿದ್ದರೆ ನಿಮಗೆ ಹೇಗೆ ಗೊತ್ತಾಗುತ್ತಿತ್ತು'' ಎಂಬ ಧ್ವನಿ ಇತ್ತು.

ಆತನ ಮಾತನ್ನು ಕಿವಿಗೆ ಹಾಕಿಕೊಳ್ಳದೆ ಆತನ ರಿಸರ್ಚ್ ಪೇಪರನ್ನು ಕೈಎಗೆತ್ತಿಕೊಂಡು ಅದರಲ್ಲಿಯ ಫೋಟೋಗಳನ್ನು ಪರೀಕ್ಷಾ ದೃಷ್ಟಿಯಿಂದ ನೋಡುತ್ತಾ ''ಈ ಆರು ಫೋಟೋಗಳು ನಿಮಗೆಲ್ಲಿ ದೊರಲತವು?'' ಎಂದು ಕೇಳಿದ. ''ಏಕೆಂದರೆ ಮೊದಲ ಮೂರು ಶಿಶುಗಳ ಫೋಟೋ ನಮಗೇ ದೊರೆಯಲಿಲ್ಲ''

ಡಾಕ್ಟರ್ ಶಾಂತರಾಗಿ ಕೇಳಿದ್ದರಿಂದ ಧೈರ್ಯಬಂತು. ಏನೋ ರಹಸ್ಯ ಹೇಳುವವನಂತೆ ''ನಿಜವಾದ ಮಕ್ಕಳಿಗೂ ಈ ಫಿಟೋಗಳಿಗೂ ಸಂಬಂಧವಿಲ್ಲ. ಸುಮ್ಮನೆ ಅಮೆರಿಕಾದವರಿಗೆ ತೋರಿಸಲೆಂದು ಈ ಫಿಟೋಗಳನ್ನು ತೆಗೆದುಕೊಂಡು ಹೋಗುತ್ತಿದ್ದೇನೆ'' ಎಂದು ನಕ್ಕು ಕುರ್ಚಿಯನ್ನು ಇನ್ನೂ ಸಮೀಪಕ್ಕೆ ಎಳೆದುಕೊಂಡು ಒಪ್ಪಿಸಲು ಪ್ರಯತ್ನಿಸುತ್ತಿರುವವನಂತೆ ''ನೀವು ಇದನ್ನ ಒಪ್ಪಿಕೊಳ್ಳಿ. ಅದರಿಂದ ನಿಮಗೇನೂ ನಷ್ಟವಿಲ್ಲ. ಅಮೆರಿಕಾದಲ್ಲಿ ಎಲ್ಲೋ ನಾನು ಹೇಳಿದರೆ ಇಲ್ಲಿ ನಿಮಗೇನು ತೊಂದರೆ? ಅದರಿಂದ ನಿಮಗೆ ಗೌರವವು ಕಡಿಮೆಯಾಗದು. ನಂತರದಲ್ಲಿ ನಿಮ್ಮ ಋಣವನ್ನು ನಾನು ಉಳಿಸಿಕೊಳ್ಳುವುದಿಲ್ಲ'' ಎಂದ.

ರಂಗಪ್ರಸಾದ್ ಅಷ್ಟೇ ಶಾಂತವಾಗಿ ''ಈಗಾಗಲೇ ವಿದೇಶಿಯರಿಗೆ ನಮ್ಮ ಬಗ್ಗೆ ತುಂಬಾ ಹಗುರವಾದ ಅಭಿಪ್ರಾಯವಿದೆ ಪುಟ್ಟಣ್ಣ. ನಿಮ್ಮಂತಹವರು ಅದನ್ನು ಮತ್ತಷ್ಟು ಹೆಚ್ಚಿಸುತ್ತಾರೆ. ನೀವು ಹೇಳಿದ್ದನ್ನು ಅವರು ಕುರುಡಾಗಿ ಒಪ್ಪಿಕೊಳ್ಳುತ್ತಾರೆ ಎಂದು ಏಕೆ ನಂಬುತ್ತೀರಿ?'' ಹೇಳಿದ.

''ನಂಬದೆ ಇರೋದೇನಿದೆ ಇದರಲ್ಲಿ?''

''ನೀವು ಜೆನೆಟಿಕ್ಸ್ ಪ್ರೊಫೆಸರ್ ಹ್ಯಾಗಾದಿರೋ ನನಗೆ ಅರ್ಥವಾಗುತ್ತಿಲ್ಲ. ನೀವು ಹೇಳಿದ ಥಿಯರೀ, ಫೋಟೋಗಳು ಎಲ್ಲಾ ಎಕೆನ್‌ಡ್ರೋಪ್ಲಾಸ್ಟಿಕ್ ಡ್ವಾರ್ಫ್ಸ್‌ಗೆ ಸಂಬಂಧಿಸಿರುವುದು ಇಂತಹ ಕೇಸುಗಳು ಸಾಮಾನ್ಯವಾಗಿ 4x10 ಟು ದಿ ಪವರ್ ಆಫ್ ಮೈನಸ್ 5 ಎಂದು ಜೆನೆಟಿಕ್ಸ್‌ನಬ ಓನಾಮ ಪ್ರಾರಂಭಿಸಿರುವದೂ ಹೇಳುತ್ತಾರೆ. ಎಂದರೆ ಕೃಷ್ಣಾಪುರದಲ್ಲಿ ಆ ರೀತಿಯ ಆರು ಜನಗಳಾಗಿವೆ. ಎಂದರೆ ಆ ಲೆಕ್ಕದಲ್ಲಿ1,50,000ಮಂದಿ ಗರ್ಭಿಣಿಯರಾಗಬೇಕು. ಇದಕ್ಕೆ ಅಮೆರಿಕಾದಲ್ಲಿ ಏನು ಹೇಳುತ್ತೀರಿ? ಡಾಕ್ಟರ್ ರಂಗಪ್ರಸಾದ್ ಇಷ್ಟು ಮಂದಿಯನ್ನು ಎಕ್ಸ್‌ರೇಗೆ ತುತ್ತು ಮಾಡಿದ್ದ ಎಂದು ಹೇಳುತ್ತೀರಾ? ಭಾರತ ದೇಶದ ಪ್ರತಿಯೊಂದು ಹಳ್ಳಿಯಲ್ಲೂ ಕೋಟ್ಯಂತರ ಜನರಿದ್ದಾರೆ. ಅವರಲ್ಲಿ ಪ್ರತಿವರ್ಷವೂ 1,50,000 ಗರ್ಭವತಿಯರಾಗುತ್ತಾರೆ. ಅವರೆಲ್ಲರಿಗೂ ಡಾ॥ ರಂಗಪ್ರಸಾದ್ ಒಬ್ಬನೇ ಡಾಕ್ಟರ್ ಎಂದು ಹೇಳುತ್ತೀರಾ?''

ಪುಟ್ಟಣ್ಣ ಅಪ್ರತಿಭನಾದ. ತೀರಾ ಸಾಧಾರಣವಾಗಿ ಕಾಣಿಸುವ ಡಾಕ್ಟರ್ ತನಗೆ ಗೊತ್ತಿಲ್ಲದೆ ಜೆನೆಟಿಕ್ಸ್ ಬಗ್ಗೆ ಇಷ್ಟೊಂದು ಸಾಧಾರಣವಾಗಿ ಬೇಳುತ್ತಿರುವವನಲ್ಲ!

''ಡಾ॥ ರಂಗಪ್ರಸಾದ್, ನಿಜವಾಗಿಯೂ ನೀವು ತುಂಬಾ ಇಂಟಲಿಜೆಂಟ್ ಸಾಧಾರಣ ಡಾಕ್ಟರ್ ಆದರೂ ಜೆನೆಟಿಕ್ಸ್ ಬಗ್ಗೆ ಇಷ್ಟೊಂದು ತಿಳಿದಿರುವುದು ನಿಮ್ಮ ಹೆಮ್ಮೆಯ ಸಾಧನೆ. ನಿಮಗೆ ಖಂಡಿತ ಗೌರವದ ಸ್ಥಾನ ಯಾವುದಾದರೂ ಕೊಡಿಸುತ್ತೇನೆ''

''ಅದಕ್ಕೆ ಪ್ರತಿಫಲವಾಗಿ ಈ ಆರು ಮಂದಿ ತಾಯಿಯರಿಗೆ ನಾನು ಎಕ್ಸ್‌ರೇ ರೇಡಿಯೇಷನ್ ನಡೆಸಿದೆ ಎಂದು ಹೇಳಬೇಕು ಅಷ್ಟೇ ಅಲ್ವೇ?'''

ಪುಟ್ಟಣ್ಣ ಮಾತನಾಡಲಿಲ್ಲ.

ರಂಗಪ್ರಸಾದ್ ಎದ್ದುನಿಂತು ''ನೀವು ಅಮೇರಿಕಾಕ್ಕೆ ಹೋಗುತ್ತಲೇ ನಮ್ಮ ರಾಯಭಾರಿಯೊಂದಿಗೆ ಮಾತನಾಡಿ ನಿಮ್ಮ ಭಾಷಣವು ರೆಕಾರ್ಡ್ ಆಗುವಂತೆ ಮಾಡಿಸುತ್ತೇನೆ. ಒಂದು ಸುಳ್ಳನ್ನು ಎಷ್ಟು ಸುಂದರವಾಗಿ ಸತ್ಯವನ್ನಾಗಿಸಿ ನೀವು ಬದಲಿಸಿದ್ದೀರಿ. ನಮ್ಮ ದೇಶದವರ ಗೌರವ ಮರ್ಯಾದೆಗಳನ್ನು ಹೇಗೆ ವಿದೇಶಿಯರ ಮುಂದೆ ಹಾಳು ಮಾಡುತ್ತಿದ್ದೀರಿ ಎಂಬುದನ್ನು ನಾನೇ ಸಾಧಿಸಿತೋರುತ್ತೇನೆ. ನೀವು ಮತ್ತೆ ಭಾರತಕ್ಕೆ ಹಿಂತಿರುಗುವ ವೇಳೆಗೆ ನಿಮ್ಮನ್ನು ಸೆಕ್ಷನ್ 420ರ ಪ್ರಕಾರ ಅರೆಸ್ಟ್

ಮಾಡಲು ವಾರೆಂಟ್ ಸಿದ್ಧಪಡಿಸಿರುತ್ತೇನೆ'' ಎಂದಾಗ ಆತನ ಕಂಠ ಶಾಂತವಾಗಿ ಗಂಭೀರವಾಗಿಯೇ ಇತ್ತು.

ಪುಟ್ಟಣ್ಣ ಕಾಲಿನಿಂದ ಕುರ್ಚಿಯನ್ನು ಬಲವಾಗಿ ಹಿಂದಕ್ಕೆ ತಳ್ಳುತ್ತಾ ಎದ್ದುನಿಂತು ''ಅಷ್ಟೇನೆ?'' ಎಂದ ಕೋಪದಿಂದ.

''ಖಂಡಿತವಾಗಿಯೂ ಅಷ್ಟೇ!''

''ಸರಿ, ಹಾಗಿದ್ದರೆ ನಾನೂ ನೋಡ್ತೀನಿ! ಈ ಎಲ್ಲಾ ಹುಟ್ಟುಗಳಿಗೂ ನೀವೇ ಮೂಲಕಾರಣ ಎಂದು ನಾನು ಸಾಧಿಸುತ್ತೇನೆ. ಇಲ್ಲದಿದ್ದರೆ ನನ್ನ ಹೆಸರು ಪುಟ್ಟಣ್ಣನೇ ಅಲ್ಲ'' ಎನ್ನುತ್ತಾ ಆ ಮುದುಕ ಬೇಗ ಬೇಗನೆ ಅಲ್ಲಿಂದ ಹೊರಕ್ಕೆ ಬಂದ. ಮೆಟ್ಟಿಲಿಳಿದು ಕ್ರೂರವಾದ ನಿಟ ಬೀರುತ್ತಾ ಅಸಹ್ಯಭಾವದಿಂದ ಆ ಮನೆಯನ್ನು ಹಿಂತಿರುಗಿ ನಿಡಿದ ಪುಟ್ಟಣ್ಣ.

ಅವನ ಮನಃಪಟಲದಲ್ಲಿ ಒಂದು ದೃಶ್ಯ ಮೆರೆಯುತ್ತಿತ್ತು.

ಸಾವಿರಾರು ಮಂದಿ ಜನರು ಆ ಮನೆಯ ಮಕ್ಷೇಲೆ ಎರಗುತ್ತಿದ್ದಾರೆ. ಕೆಲವರು ರಂಗಪ್ರಸಾದನನ್ನು ಹೊರಕ್ಕೆಳೆದುಕೊಂಡು ಬಂದರು, ಮೈಮೇಲಿನ ಬಟ್ಟೆಗಳೆಲ್ಲಾ ಚಿಂದಿಯಾಗಿದೆ. ರೊಚ್ಚಿಗೆದ್ದ ಜನರು ಆತನನ್ನು ತುಂಡುತುಂಡಾಗಿ ಕತ್ತರಿಸಿ ಎಸೆಯುತ್ತಿದ್ದಾರೆ...

ಪುಟ್ಟಣ್ಣನ ತುಟಿಗಳಲ್ಲಿ ಕ್ರೌರ್ಯಪೂರ್ಣ ನಗೆ ಮಿಂಚಿತು. ತಲೆ ದೂಗುತ್ತಾ ಅಲ್ಲಿಂದ ಹೊರಕ್ಕೆ ಹೊರಟ.

ಜನರನ್ನಂ ಆ ರೀತಿ ರೊಚ್ಚಿಗೆಬ್ಬಿಸಬಲ್ಲ ವ್ಯಕ್ತಿ ಒಬ್ಬನೇ!

ನಿಜ. ಆತನ ನೆರವನ್ನು ತಾನು ಪಡೆಯಬೇಕು, ತಾನು ಅರ್ಪಿಸಲಿರುವ ಪೂಜಾದ್ರವ್ಯಗಳಿಗೆ ಸಂಪ್ರೀತನಾಗಿ ಆತ ಈ ಕೆಲಸವನ್ನು ಅಮೇರಿಕಾದಲ್ಲಿ ಮಾಡಿಕೊಡುತ್ತಾನೆ. ನಂತರದಲ್ಲಿ ತನ್ನ ಥಿಯರಿಯನ್ನು ಅಮೇರಿಕಾದಲ್ಲಿ ಯಾರು ತಾನೇ ವಿರೋಧಿಸಬಲ್ಲರು? ಇನ್ನೊಂದು ರೀತಿಯಲ್ಲಿ ತನ್ನ ದ್ವೇಷವೂ ಫಲಿಸುತ್ತದೆ...

★★★

''ಆಗಲೇ ಬಿಜಿ ಆಗ್ಬಿಟ್ಟೆಯಲ್ಲಾ?'' ಎಂದು ಕೇಳಿದ ಸಿದ್ಧಾರ್ಥ ಒಳಕ್ಕೆ ಬರುತ್ತಾ.

ಗಂಡನನ್ನು ಕಂಡು ಕುರ್ಚಿಯಿಂದ ಏಳಲು ಪ್ರಯತ್ನಿಸಿದಳು ಗೌರಿ.

''ಇರಲಿ ಕೂತ್ಕೊ...'' ಎನ್ನುತ್ತಾ ನಕ್ಕು '' ಮೊದಲಿನಂತೆ ಆತುರದಿಂದ ಬೇಗ ಬೇಗ ಕೆಲಸ ಮಾಡಿ ಮುಗಿಸಬೇಡ''

ಕೇದಾರಗೌರಿ ದೊಡ್ಡದಾಗಿ ಮುಂದಕ್ಕೆ ಚಾಚಿಕೊಂಡಿದ್ದ ತನ್ನ ಹೊಟ್ಟೆಯನ್ನು ನೋಡಿಕೊಂಡು ನಾಚಿದಳು.

''ಅದೇನು ಹಾಗೇ ನೋಡ್ತಿದಿಯಾ?''

ಗೌರಿ ನಾಚಿಕೆಯಿಂದ ''ಇನ್ನೇನು ಚಳಿಗಾಲ ಬರುತ್ತಲ್ಲ. ಅದಕ್ಕೆ ಉಲ್ಲನ್ ಸ್ವೆಟರ್ ಹೆಣೆಯುತ್ತಿದ್ದೇನೆ'' ಎಂದಳು.

ಬಗ್ಗಿ ಅದನ್ನು ಆಕೆಯ ಮಡಿಲಿನಿಂದ ಎತ್ತಿಕೊಳ್ಳುತ್ತಾ ''ಅರೆ...ಇದೇನು ಇಷ್ಟು ಚಿಕ್ಕದಾಗಿ...'' ಎನ್ನುತ್ತಿದ್ದಂತೆಯೇ ಅರ್ಥವಾಗಿ ನಗುತ್ತಾ ''ಇದು ತೀರಾ ಅನ್ಯಾಯ. ಗುಡ್ಡದ ಹಾಗೆ ನಾನು ಮುಂದೆಯೇ ಇದ್ದರೂ ನನ್ನ ಬಗ್ಗೆ ಚಿಂತಿಸದೆ ಇನ್ನು ಎಂದೋ ಹುಟ್ಟುವವನಿಗಾಗಿ ಇದು ಸಿದ್ಧಮಾಡುತ್ತಿದ್ದೀಯಲ್ಲಾ!'' ಎಂದ.

''ಇನ್ನೂ ಯಾವಾಗಲೋ ಏನು ಬರುವ ತಿಂಗಳೇ ಡೆಲಿವರಿ''

''ಹೌದು ಬಿಡು. ಚಳಿಗಾಲ ಪ್ರಾರಂಭವಾಗುವ ವೇಳಲಗೆ ಅವನಿಗೆ ಮೂರು ತಿಂಗಳಾಗಿರುತ್ತೆ!''

''ಅಷ್ಟರಲ್ಲಿ ನಿಮಗೂ ಒಂದು 'ನಿಟ್' ಮಾಡಿಕೊಡ್ತೀನಿ ಬಿಡಿ''

''ಹೋಗಲಿ ಬಿಡು. ಚಳಿಯಿಂದ ದೂರ ಇರಲು ಬೇರೊಂದಿದೆ''

ಮುಗ್ಧೆಯಾಗಿ ''ಅದೇನು?'' ಎಂದು ಕೇಳಿದಳು

''ಕೇದಾರಗೌರೀ...'' ಎಂದೇನೋ ಹೇಳುತ್ತಿದ್ದರೆ ಮತ್ತಷ್ಟು ನಾಚಿ 'ಷ್' ಎಂದು ''ಏನು ಮಾತು? ಒಳಗೆ ಅತ್ತೆ ಇದಾರೆ'' ಎಂದಳು.

''ಸರಿ, ನಾನು ಮಾತನಾಡೊಲ್ಲ ಬಿಡು, ಇನ್ನೇನಾದರೂ ಹೇಳು''

''ರೀ...''

''ಹೇಳು''

''ಈ ದಿನ ಹೊಸ ಥಿಯರಿ ಕಂಡುಕೊಂಡೆ. ನಾನೇನು ಹೊಸದಾಗಿ ಕಂಡುಕೊಂಡದ್ದಲ್ಲ, ಮೆಂಡಲ್ ಥಿಯರಿನೇ ಅದನ್ನು ನಮಗೆ ಅನ್ವಯಿಸಿಕೊಂಡೆ ಹಿಗ್ರಿ ನೀವು ನಗ್ತೀರಿ...''

''ನಗೋಲ್ಲ ಹೇಳು''

ಮೆಂಡಲನ ಥಿಯರಿ ಪ್ರಕಾರ ಮೊದಲ ಪೀಳಿಗೆಗೆ ಸಂಬಂಧಿಸಿದ ವಂಶ ಲಕ್ಷಣವೂ ಎರಡನೆಯ ಪೀಳಿಗೆಗೆ ಬರದು ಮೂರನೆಯ ಪೀಳಿಗೆಗೆ ಬರುತ್ತದೆ. ಅಥವಾ ಬರುವ ಸಾಧ್ಯತೆ ಹೆಚ್ಚಾಗಿದೆ''

''ಹಾಗೆಂದರೆ...?'' ಅನುಮಾನಿಸುತ್ತಾ ಕೇಳಿದ ಸಿದ್ಧಾರ್ಥ.

ನಮ್ಮ ಮಗುವಿಗೆ ನಮ್ಮ ಲಕ್ಷಣಗಳಿಗಿಂತಲೂ ಹೆಚ್ಚಾಗಿ ನಮ್ಮ ತಂದೆ ತಾಯಿಗಳ ಲಕ್ಷಣಗಳೇ ಹೆಚ್ಚಾಗಿರುವ ಅವಕಾಶವಿದೆ. ನಮ್ಮ ತಂದೆಯ ಠೀವಿ, ಗಾಂಭೀರ್ಯಗಳು, ನಿಮ್ಮ ತಾಯಿಯ ರೂಪ ಸೌಂದರ್ಯ...''

ಸಿದ್ಧಾರ್ಥನಿಗೆ ಆಕೆ ಹೇಳುತ್ತಿರುವುದು ಅರ್ಥವಾಗುತ್ತಲೇ ಅಪ್ರಯತ್ನವಾಗಿ ಕಣ್ಣಲ್ಲಿ ನಿಮಿರುವ ತಾವಿಬ್ಬರೂ ಅಂದ ಹೀಗಿರುವ ನಿಮ್ಮ ಅಂಶ ತಮ್ಮ ಮಕ್ಕಳಿಗೆ ಲಕ್ಷಾಂತರದ

ಬರಬಾರದೆಂದು ತನ್ನ ಹೆಂಡತಿ ಎಷ್ಟು ಬಯಸುತ್ತಿದ್ದಾಳೆ ಎಂಬುದು ಗೊತ್ತಾಯಿತು. ತನ್ನ ಅನಿಸಿಕೆಯನ್ನು ಬಲಗೊಳಿಸಲು ಆ ತಾಯಿಯು ಎಷ್ಟೊಂದು ಪ್ರಯತ್ನಿಸುತ್ತಿದ್ದಾಳೆಂಬುದು ಕಂಡು ಮನಸ್ಸು ಆರ್ದ್ರಗೊಂಡಿತು.

ಹೆಂಡತಿಯನ್ನು ಅಪ್ಪಿಕೊಂಡು ''ನೀನು ಬಯಸುವಂತೆ ಆದರೆ ಒಳ್ಳೆಯದೇ ಗವರೀ. ಆದರೆ ಹಾಗೆ ಆಗಲಿಲ್ಲವೆಂದರೂ ಚಿಂತೆಯಿಲ್ಲ. ನಮ್ಮಂತೆಯೇ ಹುಟ್ಟಿದರೂ ನಮ್ಮ ಮಗುವೇ ನಮ್ಮ ಮುದ್ದಿನ ಮಗುವೇ! ಏನೂ ಇಲ್ಲದೆ ನಿನ್ನ ಕಣ್ಣುಗಳು ಮಾತ್ರವೇ ಇದ್ದರೂ ಸಾಕು. ಆ ನಿರ್ಮಲ ನಿಟದಿಂದಲೇ ಅವನ್ನೆಲ್ಲವನ್ನೂ ಗೆಲ್ಲುತ್ತಾನೆ ಆ ಅಂದವೇ ಸಾಕು ನಮ್ಮ ಮಗುವಿಗೆ'' ಎಂದ.

ಕೇದಾರಗೌರಿ ಮಾತಿಲ್ಲದೆ ಮೌನವಾಗಿದ್ದಳು; ಕಣ್ಮುಚ್ಚಿದ್ದಳು.

ಅವನೂ ಕಣ್ಮುಚ್ಚಿದ.

ಅವರಿಬ್ಬರ ಮನಃಪಟಲದ ಮೇಲೂ ಒಂದೇ ರೂಪು ಪುಷ್ಪ ಮೈಯ ಮಗು, ಗ್ಲಾಕ್ಸೋ ಬೇಬಿಯಂತಹುದು ಅಂಬೆಗಾಲಿಡುತ್ತಾ ಕೈಚಾಚಿಕೊಂಡು 'ಅಂ...ಮಾ...ಅಂ...ಮಾ...' ಎನ್ನುತ್ತಾ ನಗುತ್ತಿದ್ದಾನೆ.

ಕಣ್ತೆರೆದರೆ ತಮ್ಮ ಕನಸು ಕರಗುತ್ತದೆ ಎಂದುಕೊಂಡೇ ಗಾಢವಾದ ಅಪ್ಪುಗೆಯಲ್ಲಿ ಅಂತೆಯೇ ಉಳಿದರು.

ಅದೇ ಸಮಯಕ್ಕೆ ಸರಿಯಾಗಿ ಸ್ಮಶಾನದಲ್ಲಿ ರಾಕೇಶ್ ಲಕ್ಷಗಳ ಖರ್ಚಿನೊಂದಿಗೆ ಪ್ರಾರಂಭಿಸಿದ್ದ ಕ್ಷುದಕ್ಷಯಜ್ಞದ ಕೊನೆಯ ಕ್ರಿಯೆಯು ಕೊನೆಗೊಂಡಿತು.

## 21

''ಸಾಮಾನ್ಯವಾಗಿ ಮನುಷ್ಯರು ತುಂಬಾ ದೊಡ್ಡದಾಗಿ ಯೋಚಿಸುತ್ತಾರೆ. ತುಂಬಾ ಉತ್ತಮವಾಗಿ ಬದುಕಬೇಕೆಂದು ಬಯಸುತ್ತಾರೆ ಎಂಬುದು ನನಗೆ ಗೊತ್ತು. ಆದರೆ ಆ ಎಲ್ಲಾ ಬಯಕೆಗಳನ್ನೂ,ನ ಯೋಚನೆಗಳನ್ನೂ ಅಷ್ಟಕ್ಕೇ ಪರಿಮಿತಗೊಳಿಸಿರುತ್ತಾರೆ ಎಂಬ ಅಭಿಪ್ರಾಯ ನನಗಿತ್ತು. ನಿಮ್ಮನ್ನು ಕಂಡ ನಂತರ ಆ ಅಭಿಪ್ರಾಯ ಬದಲಿಸಿದ್ದೆವು'' ಎಂದರು ಡಾಕ್ಟರ್ ರಂಗಪ್ರಸಾದ್.

''ನಿಮ್ಮ ಮಾತು ಅರ್ಥವಾಗುತ್ತಿಲ್ಲ'' ಎಂದ ರವಿ ವೈಟ್‌ಷಾಡೋ.

''ಹೀಗಿದ್ದರೆ ಚೆನ್ನಾಗಿರುತ್ತದೆ ಎಂದು ಹೇಳುವವರು ಬಹುಮಂದಿ ಇರುತ್ತಾರೆ. ಆದರೆ ಹಾಗೆ ಇರಲು ಪ್ರಯತ್ನಿಸುವವರು ತುಂಬಾ ವಿರಳ. ಆ ವಿರಳ ಜನರಲ್ಲಿ ನೀವೊಬ್ಬರು. ನಮ್ಮ ಮೊದಲ ಪರಿಚಯದಲ್ಲಿ ಇದನ್ನು ಗ್ರಹಿಸಲು ಸಾಧ್ಯವಾಗಿರಲಿಲ್ಲ. ವಿಮಾನದಲ್ಲಿ ನಿಮ್ಮನ್ನು ಕಂಡಾಗ ತಿಳಿದಿರುವ ಟ್ರಿಕ್‌ಗಳಿಂದ ಯುವತಿಯನ್ನು ಆಕರ್ಷಿಸಿ, ಆಡಿಸಿ, ಖುಷಿ ಪಡೆಯುವ ಪಡ್ಡೆ ಹುಡುಗ ಎಂದುಕೊಂಡೆ. ನಂಬಿದ ಸಿದ್ಧಾಂತಕ್ಕಾಗಿ

ಆಸ್ತಿಯನ್ನು ಬಿಟ್ಟಿರುವ ದೊಡ್ಡ ವ್ಯಕ್ತಿ ಎನಿಸಿರಲಿಲ್ಲ''

'4ಅನಗತ್ಯವಾಗಿ ನುಗ್ಗೇಮರ ಹತ್ತಿಸುತ್ತಿದ್ದೀರಿ!''

''ನಾನು ಹೇಳುತ್ತಿರುವುದರಲ್ಲಿ ತಪ್ಪಿಲ್ಲ. ನಿಮ್ಮ ಲೈಫ್‌ಸ್ಟೈಲ್ ಎಲ್ಲಾ ಸಿದ್ಧಾರ್ಥ ತಿಳಿಸಿದ''

''ನನ್ನ ತಂದೆ ಕಮ್ಯುನಿಸಂ ಬಗ್ಗೆ ಹೆಚ್ಚು ಮಾತನಾಡುತ್ತಿದ್ದರು. ಆದರೆ ಹಣವನ್ನು ಮಾತ್ರ ಅನೇಕ ಮಾರ್ಗಗಳಲ್ಲಿ ಸಂಪಾದಿಸುತ್ತಿದ್ದದ್ದು ನನ್ನ ಎಳೆ ವಯಸ್ಸಿನಲ್ಲಿಯೇ ಹಿಡಿಸಲಿಲ್ಲ. ಅದಕ್ಕೆ ಮನೆಯನ್ನು ಬಿಟ್ಟೆ...''

''ನಾನೂ ಹೇಳಿದ್ದೂ ಅದೇ, ಸಿದ್ಧಾಂತವನ್ನು ಆಶಿಸಿ ಅದರ ಬಗ್ಗೆ ಪ್ರೇಮ ಬೆಳೆಸಿಕೊಳ್ಳುವುದು ಬೇರೆ, ಅದನ್ನು ಆಚರಣೆಗೆ ತರುವುದೇ ಬೇರೆ. ಮೊದಲ ಬಾರಿ ನಿಮ್ಮನ್ನು ಕಂಡಾಗ ನಾನು ಹೀಗೆ ಭಾವಿಸಿರಲಿಲ್ಲ. ನಮ್ಮ ಮಧ್ಯೆ ನಡೆದ ಮಾತು ನೆನಪಿದೆಯೇ?''

ರವಿ ಸಂದಿಗ್ಧದದಲ್ಲಿದ್ದ ''ಇನ್ನು ಆ ವಿಷಯ ಬಿಟ್ಟು ಬೇರೆ ಮಾತು ಆಡಿಣವೇ? ನಾನು ನಿಮ್ಮ ಬಳಿ ಬಂದಿದ್ದು ಬೇರೆ ಕೆಲಸದ ಮೇಲೆ''

''ಏನು ಹೇಳಿ''

''ಕೃಷ್ಣಾಪುರದಲ್ಲಿ ಈ ವೇಳೆಗಾಗಲೇ ಆರು ವಿಕೃತ ಜನನಗಳು ನಡೆದಿವೆ. ಇದರಿಂದ ಇಲ್ಲೆಲ್ಲಾ ಅಲ್ಲೋಲ ಕಲ್ಲೋಲವಾಗಿದೆ. ಇದರ ಹಿನ್ನೆಲೆ ನಮಗೆ ಗೊತ್ತಿಲ್ಲ. ಇಲ್ಲಿಯ ನೀರು ಗಾಳಿ ಯಾವುದಾದರೂ ಆಗಿರಬಹುದು. ಈಗ ನಮ್ಮ ಮುಂದಿರುವ ಸಮಸ್ಯೆ ಎಂದರೆ ನನ್ನ ತಂಗಿಯು ಗರ್ಭವತಿಯಾಗಿರುವುದು, ನಾಲ್ಕೈದು ವಾರಗಳಲ್ಲಿಕ ಪ್ರಸವ ನಡೆಯುತ್ತದೆ. ಅದೇ ನನಗೆ ಭಯದ ಕಾರಣವಾಗಿದೆ''

ರವಿಯೇ ಹೇಳಿದ ''ನನಗೊಂದು ಮಾರ್ಗ ಕಾಣಿಸುತ್ತದೆ''

''ಅದೇನು?''

''ಈಗಂತೂ ಗರ್ಭದಲ್ಲಿರುವ ಶಿಶುವನ್ನು ಹಾಗೆಯೇ ಸ್ಕ್ರೀನಾ ಮೇಲೆ ತೋರುವ ಪರಿಕರಗಳು ಇವೆಯಲ್ಲಾ? ಅವುಗಳಿಂದ ಪರೀಕ್ಷಿಸಿ...''

''ಊಂ...ಪರೀಕ್ಷಿಸಿ?''

ರವಿ ಅನುಮಾನಿಸುತ್ತಾ ''ನಮ್ಮ ಅನುಮಾನ ನಿಜವಾಗಿದ್ದಲ್ಲಿ ಈಗಲೇ ಅಬಾರ್ಷನ್ ಮಾಡುವುದೇ ಒಳ್ಳೆಯದು'' ಎಂದ.

''ಎಂಟನೆಯ ತಿಂಗಳಲ್ಲಿ ಅದು ಸಾಧ್ಯವೇ ಇಲ್ಲ''

''ಆದರೆ ಈ ರೀತಿಯ ಶಿಶು ತನ್ನದು ಎಂದು ಗೌರಿಗೆ ಗೊತ್ತಾದರೆ ಅವಳು ಖಂಡಿತ ಸಹಿಸುವುದಿಲ್ಲ. ಅಬಾರ್ಷನ್ ಎಂದರೆ ಅದೇ ಬೇರೊಂದು ಅರ್ಥ ಎಷ್ಟು ಲಘುವಾಗಿ ಯೋಚಿಸಿದರೂ ಪ್ರಸವವೆಂದರೆ ಅದೇ ಬೇರೆ...''

''ಸಾರಿ ರವಿ, ಇಷ್ಟು ಕಾಲದ ನಂತರ ಅಬಾರ್ಷನ್ ತಾಯಿಯ ಪ್ರಾಣಕ್ಕೇ ಅಪಾಯಕಾರಿ''

''ನೀವು ನಾಲ್ಕೈದು ತಿಂಗಳ ಮೊದಲೇ ಪರೀಕ್ಷಿಸಿರಬೇಕಾಗಿತ್ತು''

''ಮಾಡಲಿಲ್ಲ. ಆ ಪರೀಕ್ಷಲಗೆ ಎಕ್ಷರೇ ಉಪಯೋಗವಾಗುತ್ತದೆ . ಮೊದಲೇ ಮ್ಯುಟೇಷನ್ ಎಂದು ಅನುಮಾನವಿದೆ. ತೀರಾ ಅನಿವಾರ್ಯವಾದಾಗ ಮಾತ್ರವೇ ಎಕ್ಸ್‌ರೇ ಉಪಯಿಗಿಸಬೇಕು. ಇಲ್ಲದಿದ್ದರೆ ಇಲ್ಲ. ಅದು ಗರ್ಭದ ಮೇಲೆ ಪ್ರಭಾವ ಬೀರುತ್ತದೆ''

''ಹಾಗಿದ್ದರೆ ಮುಂದಿನ ದಾರಿ?''

''ಇಲ್ಲಿ ಆರು ವಿಕೃತ ಜನನಗಳು ನಡೆದಿವೆ ಎಂಬುದು ನಿಜವೇ. ಆದರೆ ಇದೇ ಕಾಲದಲ್ಲಿ ನಾಲ್ಕು ಸಾಧಾರಣ ಪ್ರಸವಗಳೂ ನಡೆದಿವೆ. ಕೇದಾರಗೌರಿಯದು ಐದನೆಯದೇಕಾಗಬಾರದು?''

ಡಾಕ್ಟರನ್ನು ಸಂದಿಗ್ಧವಾಗಿ ನೋಡುತ್ತಾ ''ಇದರಲ್ಲೊಂದು ಸಣ್ಣ ತೊಂದರೆಯೂ ಇದೆ'' ಎಂದ ರವಿ.

''ಏನು?''

''ನಾವು ಪ್ರತಿಯೊಂದಕ್ಕೂ ಕಾರಣ ಇರಬೇಕೆಂದು ನಂಬುತ್ತೇವೆ. ಆರದೆ ನಮ್ಮಲ್ಲಿಗೆ ಸಮಸ್ಯೆ ಬರುವ ವೇಳಲಗೆ ಕಾರಣವಿಲ್ಲದೆ ನಾವು ಅದನ್ನು ಚಿಂತಿಸಲಾರದೆ...''

ರಂಗಪ್ರಸಾದ್ ನಗುತ್ತಾ ''ನಿನ್ನನ್ನು ಕಾಡುತ್ತಿರುವ ಸಂದಿಗ್ಧವೇನು?'' ಎಂದು ಹೇಳಿದರು.

''ಕೃಷ್ಣಾಪುರದಲ್ಲಿ ಸಾಧಾರಣ ಜನನಗಳು ನಾಲ್ಕು ನಡೆದಿವೆ. ಆ ತಾಯಂದಿರ ಕೆವಿಗಳಿಗೆ ಅವತಾರ್ ಬಾಬಾ ತಾಯತ ಕಟ್ಟಿದ್ದ. ಕಟ್ಟಿದವರಿಗೆ ಮಾತ್ರವೇ ವಿಕೃತ ಶಿಶುಗಳು ಜನಸಿವೆ...''

ಮೊದಲ ವಿಕೃತ ಶಿಶು ಹುಟ್ಟಿ ಕೃಸ್ಣಾಪುರಕ್ಕೆ ಹಿಡಿದಿರುವ ಪೀಡೆಯನ್ನು ಸೂಕ್ಷ್ಮವಾಗಿ ಹೇಳಿದಂದಿನಿಂದ ಇದುವರೆಗೂ ಈ ಗ್ರಾಮದಲ್ಲಿ ಹತ್ತು ಪ್ರಸವಗಳು ನಡೆದಿವೆ. ಅವುಗಳಲ್ಲಿ ನಾಲ್ಕು ಆರೋಗ್ಯವಂತ ಮಕ್ಕಳು, ಅವತಾರ್ ಬಾಬಾಗೆ ಯಾವ ಮಹತ್ತೂ ಇಲ್ಲವೇ?...ಇಲ್ಲದೆ ಇದ್ದರೆ ಆತ ತಾಯತ ಕಟ್ಟಿದ ತಾಯಂದಿರು ಮಾತ್ರ ಯಾವ ಅಪಾಯವೂ ಇಲ್ಲದೆ ಸಾಧಾರಣ ಪ್ರಸವದಲ್ಲಿ ಮಾಮೂಲು ಶಿಶುಗಳೇ ಹೇಗೆ ಹುಟ್ಟಿದರು?''

ಹೇಗೆ ಹುಟ್ಟಿದರು?...ಹೇಗೆ ಹುಟ್ಟಿದರು?...

ಇಬ್ಬರಿಗಮ ಇದೇ ಸಮಸ್ಯೆಯಾಗಿತ್ತು. ಯಾವ ಉತ್ತರವೂ ದೊರೆಯದೆ ಸಿದ್ದಾರ್ಥ ಹೊರಕ್ಕೆ ಹೋದ. ಕೇದಾರಗೌರಿ ಒಳಕ್ಕೆ ಹೋದಳು. ರವಿ ಒಬ್ಬನೇ

ಉಳಿದ. ತೀರಾ ಸಪ್ಪೆಯಾಗಿ ಒಳಕ್ಕೆ ಹೋಗುತ್ತಿದ್ದ ತಂಗಿಯ ಮುಖ ನೋಡುತ್ತಿದ್ದರೆ ಅವನಲ್ಲಿ ಕರುಣೆಯುಕ್ಕಿತು. ಕೋಪವೂ ಬಂತು.

ಕಾರಣವೇ ದೊರೆಯದ ಈ ಸಮಸ್ಯೆಗೆ ಉತ್ತರ ಕೊಡಬಹುದಾದವನು ಅವತಾರ್‌ಬಾಬಾ ಒಬ್ಬನೇ. ಹಾಗೆ ಆತ ಒಬ್ಬನೇ ಆಗಿದ್ದರೆ ಅವನ ಬಾಯಿಂದ ರಕ್ತವನ್ನು ಕಕ್ಕಿಸಿದರೂ ರಹಸ್ಯವನ್ನು ತಿಳಿಯಬೇಕು. ತನ್ನ ತಂಗಿಯ ಗರ್ಭದಲ್ಲಿ ಅವನ ಶಾಪದಿಂದ ಶಿಶು ವಿಕೃತವಾಗುವಂತಿದ್ದರೆ ಆ ರೀತಿ ಶಾಪವನ್ನು ಕೊಟ್ಟವನ ಎಂಟು ಅವಯವಗಳನ್ನೂ ಕತ್ತರಿಸಿ ಎಂಟು ದಿಕ್ಕುಗಳಿಗೆಸೆದು, ನಂತರ ಯಾರನ್ನೂ ಶಪಿಸಲು ಸಾಧ್ಯವಿಲ,ಲದಂತೆ ನಾಲಿಗೆಯನ್ನು ಕತ್ತರಿಸಬೇಕು.

'ನೋ ನಿರ್ಣಯಕ್ಕೆ ಬಂದವನಂತೆ ಅವನು ಅಲ್ಲಿಂದ ಎದ್ದು ಹೊರಟ.

ಅದೇ ಸಮಯಕ್ಕೆ ಸರಿಯಾಗಿ ಕೇದಾರಗೌರಿ ದೇವರ ಬಳಿ ಪ್ರಾರ್ಥಿಸುತ್ತಿದ್ದಳು ''ಬಗವಂತಾ, ಇಷ್ಟು ಕಾಲವೂ ನಿನ್ನಲ್ಲಿ ನಾನೇನೂ ಪ್ರಾರ್ಥಿಸಿರಲಿಲ್ಲ. ಈಗಲೂ ನಿನ್ನಲ್ಲಿ ನನ್ನ ಬೇಡಿಕೆಗಳೇನೂ ಇಲ್ಲ. ಸ್ವಲ್ಪ ಕಷ್ಟ ಬರುತ್ತಲೇ ನಿನ್ನನ್ನು ನೆನಪಿಸಿಕೊಳ್ಳುವುದು, ನಿನ್ನನ್ನೇ ನಂಬುವುದು, ನಿನಗೆ ಲಂಚದ ಆಸೆ ಒಡ್ಡುವುದು...ಇವೆಲ್ಲಾ ಸಾಧಾರಣ ಮನುಷ್ಯರು ಮಾಡುವ ಕೆಲಸ. ಅವರನ್ನು ಕಂಡು ನನಗೆ ನಗು ಬರುತ್ತದೆ. ನನಗೆ ದೇವರಿಗಿಂತಲೂ ಮನುಷ್ಯರ ಮೇಲೆ ಹೆಚ್ಚು ನಂಬಿಕೆ ಇದೆ. ಆದರೆ ನನ್ನ ನಂಬಿಕೆಯನ್ನು ಬಲಗೊಳಿಸಲು ಒಬ್ಬ ಮನುಷ್ಯನ ಜೊತೆಯೂ ನನಗೆ ದೊರೆಯುತ್ತಿಲ್ಲ. ಕೊನೆಗೆ ನನ್ನ ಗಂಡ, ಅಣ್ಣ ಇವರು ಕಾರ್ಯಕಾರಣ ಸಂಬಂಧ ಶೃನಂಖಲೆಯನ್ನು ಬಿಟ್ಟು ಇವೆಲ್ಲವನ್ನೂ ಬಾಬಾ ಅಥವಾ ದೆವ್ವ ಮಾಡುತ್ತಿದ್ದಾರೆ ಎಂದು ನಂಬುತ್ತಾರೆ. ನನ್ನ ಹೊಟ್ಟೆಯಲ್ಲಿ ಎಂಟು ತಲೆಗಳು, ಹದಿನಾರು ಕಿವಿಗಳಿರುವ ಶಿಶು ಜನಿಸಲಿ ಚಿಂತೆಯಿಲ್ಲ. ಅಂತಹ ಮಗುವನ್ನು ಹೆರಲಾರದೆ ನಾನು ಅಲ್ಲೇ ಸತ್ತರೂ ಸರಿಯೆ. ಆದರೆ ಇದೆಲ್ಲಾ ಏಕೆ ನಡೆಯುತ್ತಿದೆ ಇದಕ್ಕೆ ಕಾರಣವೇನು ತಿಳಿಸಿ ಈ ಜನರನ್ನು ಮೂರ್ಖತ್ವದಿಂದ ತಪ್ಪಿಸು, ದೇವರೆಂಬ ನೀನು ಇದ್ದರೆ ನಿನ್ನಿಂದ ನಾನು ಪ್ರಾರ್ಥಿಸುವುದು ಇದೊಂದೇ...''

''ನಿನ್ನ ನಂಬಿಕೆಯನ್ನು ಪುಷ್ಟೀಕರಿಸಲು ನಾನಿದ್ದೇನೆ ಗೌರಿ'' ಎಂದು ಹಿಂದಿನಿಂದ ಕೇಳಿದ ಸ್ವರಕ್ಕೆ ಒಡನೆಯೇ ಹಿಂತಿರುಗಿ ನೋಡಿದಳು ಬಾಗಿಲ ಬಳಿ ರಾಕೇಶ್ ನಿಂತಿದ್ದ!

''ಅನಾವಶ್ಯಕವಾಗಿ ಇವರೆಲ್ಲಾ ಗಾಬರಿಪಡುತ್ತಿದ್ದಾರೆ, ನೀನು ಮುದ್ದಾದ ಮಗನನ್ನೇ ಹೆರುತ್ತಿ...''

ಗೌರಿ ನಗುತ್ತಾ ''ನೀನಾದರೂ ನನ್ನ ಜತೆ ಇದ್ದರೆ ಸಾಕು!'' ಎಂದಳು. ಅವನ ಮಾತು ಅವಳಲ್ಲಿ ಧೈರ್ಯ ಮೂಡಿಸಿತ್ತು.

'4ಇವರ ಮಾತುಗಳಿಗೆ ಹೆದರಿ ಕೃಷ್ಣಾಪುರ ಬಿಡಬೇಡ''

ಗವರಿ ತಲೆಯಾಡಿಸಿದಳು. ಜೇಬಿನಿಂದ ಒಂದು ಸಣ್ಣ ಪೊಟ್ಟಣವನ್ನು ಹೊರತೆಗೆದು

''ನಿನಗಾಗಿ ಪ್ರಸಾದವನ್ನು ತಂದಿದ್ದೇನೆ'' ಎಂದು ಅದನ್ನು ಬಿಡಿಸಿದ. ಅದರಲ್ಲಿ ಬೂದಿ ಇತ್ತು. ''ಸ್ವಲ್ಪ ಬಾಯಲ್ಲಿ ಹಾಕಿಕೋ'' ಎಂದು ಹೇಳಿದ. ಕ್ಷುದ್ರಕ್ಷ ಯಜ್ಞ ಸಂಪೂರ್ಣವಾದ ನಂತರ ಕುಂಡದಿಂದ ತಂದಿರುವ ಬೂದಿ. ಅದನ್ನು ಆಕೆ ತಿಂದರೆ ಅವನ ಕೆಲಸ ಪೂರ್ಣವಾಯಿತು.

ಗೌರಿಗೆ ಇಂತಹ ಪ್ರಸಾದಗಳ ಮೇಲೆ ನಂಬಿಕೆಯಿಲ್ಲ. ಆದರೂ ಅವನ ತೃಪ್ತಿಗಾಗಿ ತೆಗೆದುಕೊಂಡಳು.

''ರವಿ ಆಸ್ತಿಯನ್ನೆಲ್ಲಾ ಯಾವುದಕ್ಕೂ ಖರ್ಚು ಮಾಡುತ್ತಾನಂತೆ ಗೊತ್ತಾ?'' ಎಂದು ಕೇಳಿದ.

''ಹಾಗೆ ನಾನೂ ಕೇಳಿದ್ದೇನೆ ಯಾಕೆ?''

''ಅಷ್ಟು ಲಘುವಾಗಿ ಹೇಳುವ ಸಂಗತಿಯೇ ಅದು? ಅದರಲ್ಲಿ ನಿನ್ನ ಪಾಲೂ ಇದೆ. ಮಾವಯ್ಯ ನಮ್ಮಿಬ್ಬರನ್ನೂ ತಮ್ಮ ಮಕ್ಕಳೆಂದೇ ಸಾಕಿಲ್ಲವೇನು?'' ಇದರಲ್ಲಿ 'ಅವನ' ಸಂಬಂಧವೂ ಇದೆಯೆಂಬುದು ಗೌರಿ ಗುರ್ತಿಸಿದಳು.

''ನನ್ನನ್ನು ಕೇಳಿದ, ನಿನಗೆ ಸರಿತೋರಿದಂತೆ ಮಾಡು ಎಂದೆ''

ಮತ್ತೇನೋ ಹೇಳಲು ಬಾಯ್ತೆರೆಯುತ್ತಿದ್ದಂತೆ ಸರಿಸರನೆ ನಾಲ್ಕುಮಂದಿ ವಿದ್ಯಾರ್ಥಿನಿಯರು ಒಳಕ್ಕೆ ಬಂದರು. ಗೌರಿ ಸಂತಿಷದಿಂದ ಅವರನ್ನು ಒಳಕ್ಕೆ ಕರೆದೊಯ್ದಳು.

ಹೊರಗೆ ರಾಕೇಶ್ ಒಬ್ಬನೇ ಉಳಿದ. ಕೇದಾರಗೌರಿಯ ಮೂಲಕವಾದರೂ ಸಂಪತ್ತಿನಲ್ಲಿ ಸ್ವಲ್ಪ ಭಾಗವನ್ನಾದರೂ ಸಂಪಾದಿಸೋಣವೆಂಬ ತನ್ನ ಆಸೆ ನೆರವೇರುವಂತಿಲ್ಲ. ಕೋಪದಿಂದ ಹಲ್ಲು ಕಚ್ಚಿದ, ಮುಷ್ಟಿ ಬಿಗಿಸಿದ. ಹಣದ ಅಗತ್ಯ ಇದೆ. ರವಿ ತುಂಬಾ 'ಟಫ್' ಆಸಾಮಿ. ಏನಾದರೂ ಮಾಡಲೇ ಬೇಕು. ಇನ್ನು ಒಂದೇ ತಿಂಗಳ ಅವಧಿ ಅಷ್ಟರಲ್ಲಿ ಉಸ್ಲೋಕ್ ಸದಸ್ಯರನ್ನು ಸಾಧ್ಯವಿರುವಷ್ಟೂ ತನ್ನ ಕಡೆ ಒಲಿಸಿಕೊಳ್ಳಬೇಕು. ಸೈತಾನ್ ತನಗೆ ದಯಪಾಲಿಸಿರುವ ಶಕ್ತಿಯಿಂದ ಒಬ್ಬೊಬ್ಬ ಸದಸ್ಯನ ಮನಸ್ಸಿನಲ್ಲಿ ಇರುವ ವಿಷಯವನ್ನು ಪ್ರತ್ಯೇಕವಾಗಿ ತಿಳಿದುಕೊಳ್ಳಬೇಕು. ಈ ಕೆಲಸ ಅವತಾರ್ ಬಾಬಾನಿಂದ ಪ್ರಾರಂಭಿಸಿದರೆ ಒಳ್ಳೆಯದು. ಇತ್ತೀಚೆಗೆ ಆತ ತುಂಬಾ ಗಳಿಸುತ್ತಿದ್ದಾನೆ. ತನ್ನ ಕಡೆಗೆ ಆತನು ಬಂದರೆ ಹಣದ ಸಮಸ್ಯೆ ಇರದು. ಮಹಾದ್ರಸ್ಪನನ್ನು ಭೇಟಿಯಾಗುವುದು ಇನ್ನುಮೇಲೆ ತೀರಾ ಕಡಿಮೆ ಮಾಡಬೇಕು. ಭೇಟಿಯಾದಾಗ ಯಾವ ಯಿಚನೆಗಳೂ ಆಗ ಮನಸ್ಸಿನಲ್ಲಿ ಇರದಂತೆ ನೋಡಿಕೊಳ್ಳಬೇಕು.

ಹೊರಕ್ಕೆ ಹೇರಟವನು ಇದ್ದಕ್ಕಿದ್ದಂತೆಯೇ ಅಲ್ಲಿಯೇ ನಿಂತ.

ಕೇದಾರಗೌರಿ ಆ ಭಸ್ಮವನ್ನು ಬಾಯಲ್ಲಿ ಹಾಕಿಕೊಂಡಳೇ?

ಈ ಪ್ರಶ್ನೆ ಮನಸ್ಸಿಗೆ ಬರುತ್ತಲೇ ಅವನ ಮನದ ಆಂದೋಳನ ಮತ್ತಷ್ಟು ಬೆಳೆಯಿತು.

ಇಷ್ಟೊಂದು ಮುಖ್ಯವಾದ ವಿಷಯದಲ್ಲಿ ಹೀಗೆ ನಿರ್ಲಕ್ಷ್ಯದಿಂದ ಇದ್ದುದು ಸರಿಯೆ?

ಒಳಗೆ ಇಣುಕಿ ನಿಡಿದ. ವಿದ್ಯಾರ್ಥಿಗಳೊಂದಿಗೆ ಮಾತನಾಡುತ್ತಾ ನಗುತ್ತಿದ್ದಾಳೆ. ಹಿಂಜರಿಯದೆ ಗೌರಿಯನ್ನು ಕರೆದ. ''ಏನು ಬಾವಾ?'' ಎಂದು ಕೇಳಿದಳು.

''ನಾನು ಕೊಟ್ಟ ಪ್ರಸಾದವನ್ನು ತಿಂದೆಯಾ''

''ತಿಂದಂತಿದೆ ಯಾಕೆ?''

ಈ ರೀತಿಯ ಉತ್ತರವನ್ನು ಗೌರಿಯಲ್ಲದೆ ಬೇರ್‍ಯಾರಾದರೂ ಕೊಟ್ಟಿದ್ದರೆ ಅವನ ಉಂಗುರುಗಳು ಅವರ ಮುಖದಲ್ಲಿಳಿಯುತ್ತಿತ್ತು. ಅಷ್ಟೊಂದು ರಾಕ್ಷಸ ಕೋಪವನ್ನು ಕೃತ್ರಿಮ ನಗುವಿನಿಂದ ಮರೆಮಾಡಿ ''ತುಂಬಾ ಶ್ರಮದಿಂದ ಆ ಪ್ರಸಾದ ಸಂಪಾದಿಸಿದ್ದೇನೆ. ತುಂಬಾ ಪವಿತ್ರವಾದ ಪ್ರಸಾದ. ಅದು ನಿನ್ನ ಎಲ್ಲಾ ಭಯಗಳನ್ನು ದೂರಮಾಡುತ್ತದೆ...'' ಎಂದ.

''ಬಾಯಲ್ಲಿ ಹಾಕಿಕೊಂಡ ಹಾಗೇ ನೆನಪು. ಆ ಕಾಗದ ಕೂಡ ಇಲ್ಲೇ ಹಾಕಿದಿನೇನೋ'' ಎನ್ನುತ್ತಾ ಕಿಟಕೀಯ ಕಡೆ ನೋಡಿದಳು. ರಾಕೇಶ್ ಕೂಡ ಅತ್ತ ನೋಡಿದ.

ಕಿಟಕಿಯಲ್ಲಿ ಪೊಟ್ಟಣವಾಗಲಿ, ಕಾಗದವಾಗಲಿ ಇಲ್ಲ. ಗೌರಿ ಅವನತ್ತ ಅನುಮಾನದಿಂದ ನೋಡುತ್ತ ''ತಿಂದನೋ ಏನೋ, ಹೋಗ್ಲಿ ಬಿಡು'' ಎನ್ನುತ್ತಾ ಒಳಕ್ಕೆ ಹೋದಳು.

ರಾಕೇಶ್ ಕೋಪದಿಂದ ಕುದಿಯುತ್ತಾ ಅಷ್ಟೇ ನಿಸ್ಸಹಾಯಕನಾಗಿ ನಿಂತಿದ್ದ.

''ಚೆಕ್ ಷಾಡೋ''

ಅವನ ಕೈಯಲ್ಲಿ ಮೂರು ಕಾಗದಗಳು ಕಾಣಿಸಿಕೊಂಡವು. ಹುಡುಗಿಯರೆಲ್ಲಾ ಅವನನ್ನು ನೋಡುತ್ತಿದ್ದಾರೆ. 'ರಾವೇ' ಪ್ರೋಗ್ರಾಂಗಾಗಿ ಆ ಹಳ್ಳಿಗೆ ಬಂದವರು ಅವರು. ಕೇದಾರಗೌರಿಯ ನಂತರದ ಬ್ಯಾಚಿನವರು. ಕಳೆದ ವರ್ಷ ತಾನು ಇವರಂತೆಯೇ ಯಾವ ಹೊಣೆಗಾರಿಕೆಯೂ ಇಲ್ಲದೆ ಹಾಯಾಗಿ ಆಡುತ್ತ ಕಾಲ ಕಳೆಯುತ್ತಿದ್ದಳು! ಕಾಲ ಎಷ್ಟು ಬೇಗ ಬದಲಿಸುತ್ತದೆ!

ಈ ಬ್ಯಾಚಿನಲ್ಲಿ ವಿದ್ಯಾರ್ಥಿ-ವಿದ್ಯಾರ್ಥಿನಿಯರನ್ನು ಬೆರಸಿಲ್ಲ. 1984ಕ್ಕೂ ಮೊದಲಿಗಿದ್ದ ಪದ್ಧತಿ ಪ್ರಕಾರವೇ ನಡೆಸುತ್ತಿದ್ದರು. ಇಬ್ಬರು ಹೋಗಿ ಮೂವ್ವರು ಹಿಂದಿರುಗುವ ತೊಂದರೆಯನ್ನು ವಿಶ್ವವಿದ್ಯಾಲಯದವರೂ ಗ್ರಹಿಸಿದಂತೆ ತೋರುತ್ತದೆ.

ಅಲ್ಲಿ ಹಿಂದು ಹಿಂಡಾಗಿ ಹುಡುಗಿಯರ ಕಾಣುತ್ತಲೇ ರವಿ ಎಚ್ಚತ್ತ. ಆ ಹಳ್ಳಿಯಲ್ಲಿ ತನ್ನ ತಂಗಿಗಾಗಿ ಮಾತ್ರವೇ ಆ ರೀತಿಯ ಸಾರಹೀನ ಬದುಕುತ್ತಿದ್ದ. ಎಂದೂ ಪ್ರಾರ್ಥನೆ ಮಾಡದವ ಅಂದು ದೇವರನ್ನೂ ಪ್ರಾರ್ಥಿಸಿದ್ದ. ಅವನ ಪ್ರಾರ್ಥನೆ ಹೀಗಿತ್ತು

''ದೇವರೇ, ಅಗ್ರಿಕಲ್ಚರಲ್ ಬಿಎಸ್ಸಿಯವರಿಗೆ ಈ 'ರಾವೇ' ಪ್ರೋಗ್ರಾಂ ಕನಿಷ್ಟ

ಒಂದು ವರ್ಷದ್ದಾಗಿರಲಿ. ಸಾಧ್ಯವಾದರೆ ಬಿ.ಎ., ಬಿ.ಎಸ್ಸಿ...ಯವರಿಗೂ ಈ ಹಳ್ಳಿಯಲ್ಲಿ ಮೂರು ತಿಂಗಳ ಟ್ರೈನಿಂಗ್ ಏರ್ಪಾಟು ಮಾಡುವಂತೆ ಯೂನಿವರ್ಸಿಟಿಯವರಿಗೆ ಬುದ್ಧಿ ಕರುಣಿಸು...''

ಅವನ ಪ್ರಾರ್ಥನೆ ದೇವರನ್ನು ಮುಟ್ಟಿತ್ತೋ ಇಲ್ಲವೋ ಅದೇ ದಿನವೇ ರಾವೇ ಪ್ರೋಗ್ರಾಂಗಾಗಿ ವಿದ್ಯಾರ್ಥಿನಿಯರು ಬಂದಿಳಿದರು. ಹಳೆಯ ವಿದ್ಯಾರ್ಥಿ ನಿಯಾಗಿದ್ದ ಕೇದಾರಗೌರಿಯ ಪರಿಚಯ ಒಡನೆಯೇ ನಡೆಯಿತು.

ಇದ್ದಕ್ಕಿದ್ದಂತೆಯೇ ಪ್ರತ್ಯಕ್ಷವಾದ ಬಿಳಿಕಾಗದಗಳನ್ನು ನೋಡಿ ಹುಡುಗಿಯರು ಬೆಪ್ಪಾದರು. ಷಾಡೋ ನಗುತ್ತಾ ಆ ಮೂರು ಕಾಗದಗಳನ್ನು ಮುವ್ವರ ಕೈಯಲ್ಲಿರಿಸಿದ. ''ನಿಮ್ಮ ಮನಸ್ಸಿನ ಒಳತಿರುಳನ್ನು ಕಾಮರೂಪಿಯಾದ ಅದೃಷ್ಯೇಶ್ವರನು ನನ್ನ ಮೂಲಕ ಹೇಳುತ್ತಾನೆ. ನಾನು ಹೇಳಿದಂತೆ ಮಾಡಿ'' ಎಂದ ಷಾಡೋ.

ಇನ್ನೇನೋ ಪ್ರಾರಂಭಿಸಿದ ಎಂದುಕೊಂಡು ಗೌರಿ ತನ್ನ ಅಣ್ಣನನ್ನು ನೋಡಿದಳು. ಇವ್ಯಾವುದನ್ನೂ ಗಮನಿಸದವನಂತೆ ತುಂಬಾ ಎಚ್ಚರಿಕೆಯಿಂದ ಅವನತ್ತ ಮುಂದೇನು ಮಾಡಬೇಕು ಎನ್ನುವಂತೆ ನೋಡಿದರು ಅವರು. ಅವರಲ್ಲಿ ಕೆಂಪುಲಿಂಗ ಹಾಕಿಕೊಂಡಿದ್ದ ಹುಡುಗಿ ತನ್ನ ಮನಸ್ಸು ಎಂತಹುದೊ ತಿಳಿಯಲು ತುಂಬಾ ಆತುರಳಾಗಿದ್ದಳು. ಇನ್ನಿಬ್ಬರಲ್ಲಿ ಬಿಳಿಸೀರೆ ಉಟ್ಟವಳು. ಒಬ್ಬಳು. ಪಂಜಾಬಿ ಡ್ರೆಸ್ ತೊಟ್ಟವಳು ಇನ್ನೊಬ್ಬಳು.

''ನಿಮಗೆ ನೆನಪಾಗುವ ಪಕ್ಷಿಯ ಬಗ್ಗೆ ಅಥವಾ ಪ್ರಾಣಿಯ ಬಗ್ಗೆ ನಿಮಗೆ ತೋಚಿದ ಮೂರು ವಿಶೇಷಣಗಳನ್ನು ಬರೆಯಿರಿ...ವಿಶೇಷಣಗಳು ಎಂದರೆ ಅಡ್ಜೆಕ್ಟಿವ್ಸ್...'' ಷಾಡೋ ಕಂಠ ತುಂಬಾ ಗಂಭೀರವಾಗಿತ್ತು.

ಒಂದು ಕ್ಷಣಕಾಲ ಯಿಚಿಸಿ ನಂತರ ಮುವ್ವರೂ ಕಾಗದದಲ್ಲಿ ಬರೆದರು.

''ಈಗಿನ ಸಾಹಿತ್ಯದ ಬಗ್ಗೆ ನಿಮ್ಮ ಅಭಿಪ್ರಾಯಗಳನ್ನು ಮೂರು ಭಾಗಗಳಲ್ಲಿ ಬರೆಯಿರಿ'' ಎಂದ ಷಾಡೋ.

ಹುಡುಗಿಯರು ಸರಸರನೆ ಬಂದರು.

''ಇನ್ನು ಕೊನೆಯ ಪ್ರಶ್ನೆ. ಒಳ್ಳೆಯ ಕಾಫೀ ಬಗ್ಗೆ ನಿಮ್ಮ ಅಭಿಪ್ರಾಯ ಬರೆಯಿರಿ- ಮೂರು ವಾಕ್ಯಗಳಲ್ಲಿ''

ಅದನ್ನು ಪೂರ್ಣಗೊಳಿಸಿದರು. ಉಳಿದವರು ಇವರೇನೂ ಬರೆದಿರುವರೊ ಎಂದು ಕುತೂಹಲದಿಂದ ಬಗ್ಗಿ ನೋಡುತ್ತಿದ್ದರು. ಸೌಮ್ಯವಾಗಿ, ಲಜ್ಜಾಶೀಲೆಯಾಗಿ ಕಾಣಿಸುತ್ತಿದ್ದ ಬಿಳಿಯ ಹೂಗಳ ಸೀರೆಯ ಹುಡುಗಿ ಹೀಗೆ ಬರೆದಿದ್ದಳು;

ಕೋಗಿಲೆ 1. ಮನಸ್ಸಂತೋಷಗೊಳಿಸುತ್ತದೆ. 2. ಆಗಾಗ ಮೋಸ ಹೋಗುತ್ತಿರುತ್ತದೆ. 3. ಕಪ್ಪು ಬಣ್ಣವೇ ಸುಂದರ.

ಇಂದಿನ ಸಾಹಿತ್ಯ 1. ಹೊರಗೆ ತೋರ್ಪಡಿಸಿಕೊಳ್ಳದೆ ನೆಲುಜಮಿತ್ರನಂತೆ

ಸಹಾಯ ಮಾಡುತ್ತದೆ. 2. ವಸ್ತುವಿನ ಗುಣಕ್ಕಿಂತಲೂ ಬುದ್ಧಿಯದೇ ಮೇಲುಗೈ. 3. ಒಳ್ಳೆಯದೇ.

ಕಾಫೀ 1. ಹೆಚ್ಚಾಗಿ ಕುಡಿದರೆ ಅಪಾಯಕಾರಿ. 2. ಆರೋಗ್ಯಕ್ಕೆ ಒಳ್ಳೆಯದಲ್ಲ. 3. ಆಗಾಗ ಬಳಸಿದರೆ ಪರವಾಗಿಲ್ಲ.

ಉಳಿದಿಬ್ಬರೂ ಪೂರ್ತಿ ಮಾಡುತ್ತಲೇ ಷಾಡೋ ''ಡಿಯರ್ ಫ್ರೆಂಡ್ಸ್! ಈಗ ನಿಮ್ಮ ಮನಸ್ಸಿನ ಬಗ್ಗೆ ಅದೃಶ್ಯ ಪ್ರಭು ಹೇಳುತ್ತಾನೆ'' ಎನ್ನುತ್ತಾ ಗಾಳಿಯಲ್ಲಿ ಕೈಯಾಡಿಸಿದ. ಮತ್ತೆ ಮೂರು ಕಾಗದಗಳು ಸಿಕ್ಕಿದವು. ಅದರಲ್ಲಿ ಇದ್ದ ಉತ್ತರಗಳನ್ನು ಓದಲು ಅವರಿಗೇ ಕೊಟ್ಟ.

'ಮೊದಲಿನದರ ಬಗ್ಗೆ ನೀವೇನು ಬರೆದಿದ್ದೀರೋ ಅದು ನಿಮ್ಮ ಬಗ್ಗೆ ನೀವೇನೆಂದುಕೊಂಡಿದ್ದೀರೋ ಅದು' ಎಂದು ಬರೆದಿತ್ತು ಅದರಲ್ಲಿ.

ಬಿಳಿಯ ಹೂಗಳ ಸೀರೆಯ ಹುಡುಗಿ ತಾನು ಬರೆದಿರುವುದನ್ನು ಓದಿಕೊಂಡಳು

1. (ತನ್ನ ಬಾಳು ಇತರರ) ಮನಸ್ಸಂತೋಷಗೊಳಿಸುತ್ತವೆ. 2. (ಸ್ನೇಹಿತರಿಂದ) ಆಗಾಗ ಮೋಸ ಹೋಗುತ್ತದೆ (ತ್ತಾಳೆ). 3. ಕಪ್ಪು ಬಣ್ಣ (ದಲ್ಲೇ) ಸುಂದರ (ವಾಗಿರುತ್ತಾಳೆ).

ಈ ಅನ್ವಯಕ್ಕೆ ಸಂತೋಷಗೊಂಡಳು.

'ಎರಡನೆಯದು ನಿಮ್ಮ ಬಗ್ಗೆ ಇತರರ ಅಭಿಪ್ರಾಯ'

ಅದನ್ನೂ ಓದಿ ಸಂತೃಪ್ತಿಯಿಂದ ಮುಖ ಅರಳಿತು.

'ಮೂರನೆಯದು ನೀವು ಬರೆದಿರುವುದು ಸೆಕ್ +ಸ ಬಗ್ಗೆ ನಿಮ್ಮ ಅಭಿಪ್ರಾಯ'

ಬಿಳಿ ಸೀರೆಯ ಹುಡುಗಿ ತಾನು ಬರೆದಿದ್ದನ್ನು ಓದಿಕೊಂಡಳು. ಅಷ್ಟರಲ್ಲಿ ಮತ್ತೊಂದು ಮೂಲೆಯಿಂದ ಕಿಟಾರನೆ ಕಿರುಚಿ, ಗಲಾಟೆ ಕೇಳಿಸಿತು, ಕೆಂಪುಲಂಗ ಹಾಕಿದ್ದ ಹುಡುಗಿಯ ಮುಖ ತೀರಾ ಕೆಂಪಾಗಿತ್ತು. ಅವಳ ಕೈಯಿಂದ ಕಾಗದವನ್ನು ಕಸಿದುಕೊಳ್ಳಲು ಪ್ರಯತ್ನಿಸುತ್ತಿದ್ದರು. ಪಂಜಾಬಿ ಡ್ರೆಸ್ಸಿನ ಹುಡುಗಿ ಯಾರೂ ಆ ಕಾಗದವನ್ನು ಓದಲಾರದಂತೆ ಉಂಡೆ ಮಾಡುತ್ತಿದ್ದಳು. ಆದರೆ ಸಾಧ್ಯವಾಗಲಿಲ್ಲ.

ಸದಾ ಗಂಭೀರವಾಗಿರುವ ಕೇದಾರಗೌರಿ ಕೂಡ ಅವರು ಬರೆದಿರುವುದನ್ನು ನೋಡಿ ನಗೆಯನ್ನು ತಡೆಹಿಡಿಯಲಾರದಾದಳು.

ಕೆಂಪು ಲಂಗದ ಹುಡುಗಿ ಹೀಗೆ ಬರೆದಿದ್ದಳು.

ಕಾಗೆ 1. ಸದಾ ಕಾಕಾ ಎಂದು ಅರಚುತ್ತಿರುತ್ತದೆ. 2. ತೀರಾ ನಿರರ್ಥಕ ಬಾಳು. 3. ಮುನ್ಸಿಪಾಲಿಟಿ ಗಿರಾಕಿ.

ಸಾಹಿತ್ಯ 1. ಶುದ್ಧ ಬೇವಾರ್ಸ್. 2. ತೀರಾ ಕೆಲಸಕ್ಕೆ ಬಾರದ್ದು. 3. ಲೋಕಕ್ಷೇಪಕ್ಕೂ ಅನರ್ಹ.

ಕಾಫೀ 1. ನೆನಪಾದರೆ ಬಾಯಲ್ಲಿ ನೀರೂತ್ತುದೆ. 2. ಬಿಸಿ ಬಿಸಿ ಯಾಗಿದ್ದರೆ ಹೆಚ್ಚು ರುಚಿ. 3. ತುಂಬಾ ಬೇಕು.

ಪಂಜಾಬಿ ಡ್ರೆಸ್ ಹುಡುಗಿಗೆ ಕಣ್ಣೀರೊಂದೇ ಬಾಕಿ. ಆಕೆ ಪಾಪ ಹೀಗೆ ಬರೆದಿದ್ದಳು.

ಹುಲಿ 1. ತುಂಬಾ ಗಾಂಭೀರ್ಯ. 2. ರಾಜರ ರಾಜ. 3. ತುಂಬಾ ಚುರುಕು.

ಸಾಹಿತ್ಯ 1. ಇತ್ತೀಚೆಗೆ ತೀರಾ ಹಾಳಾಗಿದೆ. 2. ಬೆಂಕಿ ಇಟ್ಟರೆ ಒಳ್ಳೆಯದು. 3. ಯಾರಿಗೂ ಉಪಯಿಗವಿಲ್ಲ.

ಕಾಫಿ 1. ದಿನಕ್ಕೆ ಮೂರು ಸಾರಿಯಾದರೂ ಖಂಡಿತ ಬೇಕು. 2. ಹಾಲು ಹೆಚ್ಚಾಗಿದ್ದರೆ ಚೆನ್ನಾಗಿರುತ್ತದೆ. 3. ಕುಡಿಯುವಾಗ ಸದ್ದು ಮಾಡಿದರೆ ರುಚಿ ಕಡಿಮೆ.

ಅಲ್ಲಿಯ ಗಲಿಬಿಲಿ ಅಡಗಲು ನಾಲ್ಕೈದು ನಿಮಿಷಗಳಿಗಿಂತಲೂ ಹೆಚ್ಚೇ ಬೇಕಾಯಿತು. ಹುಡುಗಿಯರು ಪರಸ್ಪರ ಜೋಕ್ ಮಾಡಿಕೊಂಡರು. ನಗುತ್ತಿದ್ದವರು ಇನ್ನೂ ನಗುತ್ತಲೇ ಇದ್ದರು. ಮತ್ತೆ ಕೆಲವರ ಮುಖ ಕೆಂಪಾಗಿ ಊದಿತ್ತು. ಒಟ್ಟಿನಲ್ಲಿ ಕೋಲಾಹಲ.

''ಮಿಸ್ಟರ್ ಷಾಡೋ''

ಮಂತ್ರ ಹಾಕಿದಂತೆ ಕೋಲಾಹಲವೆಲ್ಲಾ ಒಂದೇ ಕ್ಷಣದಲ್ಲಿ ನಿಂತಿತು. ಕುರ್ತಾ ತೊಟ್ಟ ಹುಡುಗಿ ಅವನ ಬಳಿಗೆ ಬರುತ್ತಾ ''ನಿಮಗೆ ತೊಂದರೆ ಇಲ್ಲವೆಂದರೆ ನಾನೂ ಒಂದು ಮ್ಯಾಜಿಕ್ ಮಾಡಿ ತೋರಿಸುತ್ತೇನೆ'' ಎಂದಳು. ''ನನ್ನ ಹೆಸರು ರಂಜಿತಾ...''

''ಮ್ಯಾಜಿಕ್ಕೇ?'' ನಂಬಲಾರದವನಂತೆ ನುಡಿದ ಷಾಡೋ, ಗುಂಡಾದ ಮುಖ, ಮುದ್ದಾದ ಬಾಯಿ. ಬಿಳಿಯ ಕೆನ್ನೆಗಳು, ದೂರದಿಂದ ಕೋಮಾಬಿಲ್ಲೆಯಂತೆ ಬಳಿಯಿಂದ ಕೋಣಾರ್ಕ ಶಿಲ್ಪದಂತಿದ್ದಾಳೆ.

''ಮ್ಯಾಜಿಕ್ಕೆಂದರೆ ನಿಮ್ಮಂತೆ ಹ್ಯಾಂಡ್ ಟ್ರಿಕ್ ಅಲ್ಲ. ನಮ್ಮ ಪೂರ್ವಜನರು ಕ್ಷುದ್ರ ದೇವತೆಗಳನ್ನು ವಶೀಕರಿಸಿಕೊಂಡಿದ್ದರು. ಆ ರಹಸ್ಯ ವಿದ್ಯೆ ನಿಮಗೆ ತೋರಿಸುತ್ತೇನೆ. ಸಾಮಾನ್ಯವಾಗಿ ಇದನ್ನು ಪ್ರದರ್ಶಿಸಬಾರದು ಆದರೆ ನಿಮಗೋಸ್ಕರ...ವಿಶೇಷಕ್ಕಾಗಿ...''

''ನನಗೆ ನಂಬಿಕೆಯಿಲ್ಲ''

''ಯಾವುದರ ಬಗ್ಗೆ?''

''ಕ್ಷುದ್ರದೇವತೆಗಳ ಬಗ್ಗೆ ರಂಜಿತಾ ತನ್ನ ಕೈಯಲ್ಲಿ ಅರ್ಧ ರೂಪಾಯಿಯ ನಾಣ್ಯವನ್ನು ತೆಗೆದುಕೊಂಡು ಅಂಗೈಯಲ್ಲಿರಿಸಿಕೊಂಡಳು- ಅಂಗೈ ಮುಚ್ಚಲಿಲ್ಲ ತೆರೆದಿತ್ತು. ನಾಣ್ಯ ಹೊಳೆಯುತ್ತಿತ್ತು.

''ಮಿಸ್ಟರ್ ವೈಟ್ ಷಾಡೊ...ಇದನ್ನೇ ನೋಡಿ, ಇದೋ ಮಾಯವಾಗುತ್ತದೆ. ನಿಮ್ಮ ಕಣ್ಮುಂದೆಯೇ ನೀವು ನೋಡುವಂತೆಯೇ ನಾಣ್ಯಮಾಯವಾಗುತ್ತದೆ...''

ಅಂಗೈಯಲ್ಲಿದ್ದ ಅರ್ಧ ರೂಪಾಯಿ ಕ್ರಮವಾಗಿ ಅದೃಶ್ಯವಾಯಿತು.

ಷಾಡೋ ಇದನ್ನು ಕಂಡು ಅಪ್ರತಿಭನಾದ. ಎಷ್ಟೋ ಅನುಭವಿಯಾದ ಮೆಜೀಷಿಯನ್ನಿಗೂ ಬೆರಳನ್ನು ಆಡಿಸದೆಯೇ ಅವಳು ಮಾಡಿದ್ದು ನೋಡಿಯೂ ತನ್ನ ಕಣ್ಣನ್ನು ತಾನು ನಂಬಲಾರದಾದ. ಇದು ಟ್ರಿಕ್ ಅಲ್ಲ. ನಾಣ್ಯವು ಸ್ವಲ್ಪ ಸ್ವಲ್ಪವಾಗಿ ಕರಗಿ ಹೋಗುವುದನ್ನು ತಾನೇ ಕಣ್ಣಾರೆ ಕಂಡಿದ್ದ. ಇದು ಮಾನವಾತೀತ ಶಕ್ತಿಯೇ...?! ನಿಜವೇ...?

ಅಷ್ಟರಲ್ಲಿ ರಂಜಿತಾಳ ಕಂಠ ಪ್ರತಿಧ್ವನಿಸಿತು...''ಇದೇನು ಯಾವಥಿಯರಿಗೂ ಸಂಬಂಧಿಸಿದ್ದಲ್ಲ. ಈ ವಿಶಾಲವಾದ ಜಗತ್ತಿನಲ್ಲಿ ಎಲ್ಲಿ ಹುಡುಕಿದರೂ ಈ ನಾಣ್ಯ ನಿಮಗೆ ಕಾಣಿಸುವುದಿಲ್ಲ. ಕ್ಷುದ್ರಾತ್ಮಗಳು ಅದನ್ನು ತಮ್ಮಲ್ಲಿ ಲೀನ ಮಾಡಿಕೊಂಡಿವೆ''

ಆಕೆ ಕಣ್ಮುಚ್ಚಿಯೇ ಮಾತನಾಡುತ್ತಿದ್ದಾಳೆ.

''ಮಿಸ್ಟರ್ ವೆಎಟ್‌ಷಾಡೋ ಇದುವರೆವಿಗೂ ನೀವು ತುಂಬಾ ಮಂದಿಯನ್ನು ಅಳಿಸಿದ್ದೀರಿ. ಈಗ ನನ್ನ ಕಣ್ಮುಂದೆಯೇ ನನ್ನ ಗೆಳತಿಯರನ್ನು ತೀರ ಕ್ರೂರವಾಗಿ ಅಪಮಾನಿಸಿದ್ದೀರಿ. ಅದಕ್ಕೆ ಪ್ರತಿಯಾಗಿ ನಮ್ಮ ದೇವತೆಗಳ ಸಹಾಯದಿಂದ ನಿಮಗೆ ಶಿಕ್ಷೆ ವಿಧಿಸಬೇಕೆಂದಿದ್ದೇನೆ. ನೀವು ಮಾಡಿರುವುದು ನಿಜವಾಗಿಯೂ ತಪ್ಪೇ ಆಗಿದ್ದರೆ ದೇವತೆಗಳು ನನ್ನ ನೆರವಿಗೆ ಬರಲಿ...''

ಆಕೆಯ ತುಟಿ ಮಾತ್ರ ಚಲಿಸುತ್ತಿದೆ. ಕಣ್ತೆರೆದು ಅವನ ಮುಖದಲ್ಲಿ ನೇರವಾಗಿ ನೋಡುತ್ತಿದ್ದಾಳೆ. ಕಣ್ಣು ಕೆಂಪಾಗಿದೆ.

''ಮಿಸ್ಟರ್ ರವಿ, ನೋಡಿಕೊಳ್ಳಿ ನಿಮ್ಮಿಂದ ಮುಖ್ಯವಾದ ಅಂಶವೊಂದು ಶಾಶ್ವತವಾಗಿ ಮಾಯವಾಗಿದೆ'' ಎಂದಳು.

ಷಾಡೋ ಬಿಳಿಚಿಕೊಂಡು ನೋಡಿದ, ಹುಡುಗಿಯರು ಮುಸಿಮುಸಿ ನಗುತ್ತಿದ್ದಾರೆ. ರಂಜಿತಾ ಮಾತ್ರ ಸೀರಿಯಸ್ಸಾಗಿದ್ದಾಳೆ. ಅಪ್ರಯತ್ನವಾಗಿ ಅವನ ದೃಷ್ಟಿ ಕನ್ನಡಿಯತ್ತ ಹರಿಯಿತು. ಕಣ್ಣು, ಮೂಗು, ಕಿವಿ ಎಲ್ಲಾ ಸರಿಯಾಗಿಯೇ ಇವೆ. ಸಾಧಾರಣ ಪರಿಸ್ಥಿತಿಯಲ್ಲಾಗಿದ್ದರೆ ಅವನು ಖಂಡಿತ ನಂಬುತ್ತಿರಲಿಲ್ಲ. ಕಣ್ಮುಂದೆಯೇ ನಾಣ್ಯಮಾಯ ಮಾಡಲಿಲ್ಲವೇ? ಅಂಗವು ಮಾಯವಾಗಿರಲಿ ಇಲ್ಲದಿರಲಿ ಇಷ್ಟು ಮಂದಿಯ ಮುಂದೆ ಉಂಟಾದ, ಉಂಟಾಗುವ ಮುಜುಗರ ಅಪಮಾನ...

ಇಷಯ್ಟು ದಿನಗಳೂ ಹುಡುಗಿಯರನ್ನು ತುಂಬಾ ಇಕ್ಕಟ್ಟಿಗೆ ಸಿಲುಕಿಸಿ ಮ್ಯಾಜಿಕ್ ಮಾಡುತ್ತಿದ್ದ. ಅದೇ ಪರಿಸ್ಥಿತಿ ತನಗೇ ಬಂದರೆ ಇಷ್ಟೊಂದುತೊಂದರೆ ಅನುಭವಿಸಬೇಕು!

ರಂಜಿತಾಳ ನೋಟ ತನ್ನ ಕೈಮೇಲೆ ಬಿದ್ದದ್ದನ್ನು ಕಂಡು ತಟ್ಟನೆ ಕೈ ಎತ್ತಿನೋಡಿದ- ಬಲಗೈಯ ತೋರುಬೆರಳಿಲ್ಲ!

ಯಕ್ಷಿಣಿಗಾರನಿಗೆ ಜಗತ್ತಿನಲ್ಲೆಲ್ಲಾ ಅತಿ ಮುಖ್ಯವಾದುದ.ಉ ತೋರುಬಲರಳೇ. ಗಾಬರಿಯಿಂದ ಮುಟ್ಟಿನೋಡಿಕೊಂಡ- ಇಲ್ಲ.

ಇನ್ನೇನು ನಡೆದಿದ್ದರೂ ಅವನು ಅಷ್ಟು ಗಾಬರಿಯಾಗುತ್ತಿರಲಿಲ್ಲವೇನೋ. ಆದರೆ ತನ್ನ ಯಕ್ಷಿಣಿ ಜೀವನವನ್ನೇ ಸೀಳಿ ಹಾಳುಮಾಡುತ್ತಿರುವ ಈ ಪ್ರಯತ್ನ ಅವನನ್ನು ಗಡಗಡನೆ ನಡುಗಿಸಿತ್ತು.

ಅದುವರೆವಿಗೂ ಅವನನ್ನೇ ನೋಡುತ್ತಿದ್ದ ಕೇದಾರಗೌರಿ ತಟ್ಟನೆ ಎದ್ದುಬಂದು ''ಏನಾಯಿತು?'' ಎಂದು ಕೇಳಿದಳು. ಮಾತನಾಡದೆ ಕೈ ಮೆಲೆತ್ತಿದ.

''ಏನು...? ಏನಾಗಿದೆ?''

''ನನ್ನ...ನನ್ನ ತೋರುಬೆರಳು''

''ಅದಕ್ಕೇನು ಚೆನ್ನಾಗೇ ಇದೆ''

ರಂಜಿತಾ ಕಡೆ ನೋಡಿದ. ಅದುವರೆವಿಗೂ ಗಂಭೀರವಾಗಿದ್ದ ಆಕೆ ಮೆಲುವಾಗಿ ನಕ್ಕಳು. ಮತ್ತೆ ತನ್ನ ಕೈ ನೋಡಿಕೊಂಡ. ತೋರುಬೆರಳು ಮತ್ತೆ ಕಾಣುತ್ತಿದೆ!

''ನಿಮ್ಮ ಮಾತು ನಿಜವೆ ಪ್ರತಿಯೊಂದು ಕಾರ್ಯಕ್ಕೂ ಕಾರಣ ಸಂಬಂಧ ಇದೆ-ದೇ ಇರುತ್ತದೆ. ಇರಬೇಕು ಕೂಡ...''

''ಹಾಗಾದರೆ ನನ್ನ ಕಣ್ಮುಂದೆಯೇ ನನ್ನ ತೋರುಬೆರಳು ಹೇಗೆ ಮಾಯವಾಯಿತು?''

ಉಳಿದೆಲ್ಲಾ ವಿದ್ಯಾರ್ಥಿನಿಯರು ಹೊರಟುಹಿಗಿದ್ದರು. ಸುಮಾರು ಒಂದು ಗಂಟೆಯಿಂದ ಅವನು ಬೇಡುತ್ತಲೇ ಇದ್ದಾನೆ. ಆಕೆ ಏನೂ ಹೇಳುತ್ತಿಲ್ಲ.

''ಇದೂ ನಿಜವಾಗಿಯೂ ಟ್ರಿಕ್ ಅನ್ನುತ್ತಾ?''

''ಒಬ್ಬ ಹುಡುಗಿಯ ಹಣೆಗೆ ನಾಣ್ಯವನ್ನು ಬಡಿದು ಮಾಯಮಾಡಿದಾಗಲೂ ಆಕೆ ಹೀಗೆ ಭಯಗೊಂಡಿದ್ದಳು''

'4ಆಕೆ ನಿಮಗೆ ಗೊತ್ತೇ?''

''ನನ್ನ ದೊಡ್ಡಪ್ಪನವರ ಮಗಳು, ಪಾಪ ಬಹಳ ಕಾಲದವರೆಗೆ ಆ ಅಪಮಾನದಿಂದ ಬಿಡುಗಡೆಯೇ ಹೊಂದಲಿಲ್ಲ ಆಕೆ...''

''ಸಾರಿ ಅಷ್ಟೊಂದು ಬಲವಾಗಿ ಅಪಮಾನಗೊಳಿಸಬೇಕೆಂಬುದು ನನ್ನ ಉದ್ದೇಶವಾಗಿರಲಿಲ್ಲ''

''ಮ್ಯಾಜಿಕ್ ಒಳ್ಳೆಯದೇ. ಆದರೆ ಅದು ಬರುತ್ತದೆ ಎಂದು ಇತರರನ್ನು ನೋವಿಗೆ ತುತ್ತು ಮಾಡಬಾರದು. ನಾವು ಮಾಡುತ್ತಿರುವುದನ್ನು ಅವರು ಪೆಚ್ಚಾಗಿ ನೋಡುತ್ತಿದ್ದರೆ ಅದನ್ನು ಕಂಡು ನಾವು ನಗಬಾರದು''

"ತಪ್ಪಾಯಿತೆಂದು ಕೆನ್ನೆಗೆ ಬಡಿದುಕೊಳ್ಳಲೇ?"

"ಅದೆಲ್ಲಾ ಬೇಕಾಗಿಲ್ಲ ಬಿಡಿ"

"ಹಾಗಿದ್ದರೆ ನನ್ನ ಬೆರಳು ಹೇಗೆ ಮಾಯವಾಯಿತೆಂಬುದನ್ನು ಹೇಳಿ"

ರಂಜಿತಾ ನಗುತ್ತಾ ತನ್ನ ವಾಚನ್ನು ತೋರಿಸುತ್ತಾ "ಇದೇ ಅದಕ್ಕೆ ಕಾರಣ" ಎಂದಳು.

ಷಾಡೋ ಅಚ್ಚರಿಗೊಂಡು "ಅದೇನು?" ಎಂದ.

"ಮಾಮೂಲಿ ವಾಚೇ. ಆದರೆ ಬೇಕಾದಾಗ ಒಂದೇ ಟೋನ್‌ನಲ್ಲಿ ಅಡಿಬಲ್ ವೈಬ್ರೇಷನ್ ಕೊಡುತ್ತದೆ. ಸುಮಾರು ಎರಡು ಅಡಿಗಳ ದೂರದ ತನಕ ಇರುವವರನ್ನು ನಮ್ಮ ಧ್ವನಿಯ ಭ್ರಾಂತಿಯೊಳಕ್ಕೆ ಆಕರ್ಷಿಸುತ್ತದೆ"

"ಮೈ ಗಾಡ್!"

"ತಿಳಿದವರೆಗೂ ಅದ್ಭುತ ತಿಳಿದ ನಂತರ ಟ್ರಿಕ್..."

"ಮಾರ್ಕೆಟ್ಟಿಗೆ ಯಾವಾಗ ಬಂತು ಈ ವಾಚ್?"

"ಇನ್ನೂ ಬಂದಿಲ್ಲ, ನಮ್ಮ ತಾತನವರು ಈ ವಾಚ್ ಸಿದ್ಧಪಡಿಸಿದ್ದಾರೆ. ಅವರಿಗೆ ಸುಮಾರು ಎಂಬತ್ತು ವರ್ಷ. ಪ್ರಮುಖ ಹಿಪ್ನಿಸ್ಟ್"

"ಯಾರು...? ಅವರ ಹೆಸರು?"

"ಪ್ರೊಫೆಸರ್ ಜಯದೇವ್"

"ಜಯದೇವ್ ಅವರ ಮೊಮ್ಮಗಳೇ ನೀವು!"

"ಅವರ ಅಣ್ಣನ ಮಗಳ ಮಗಳು ನಾನು"

"ನೀವು ಅಗ್ರಿಕಲ್ಚರ್ ಬಿಎಸ್ಸಿ ಓದುತ್ತಾ ಹೀಗೆ ನಮ್ಮ ಹಳ್ಳಿಗೆ ಬಂದದ್ದು ನಮ್ಮ ಅದೃಷ್ಟ"

"ಯಾಕೋ...?"

"ಯಾಕೆ ಅಂದರೆ ನಾವು ಹೀಗೆ ಪರಿಚಯವಾಗುವ ಅವಕಾಶ ದೊರೆಯಿತ್ತಲ್ಲಾ...! ನೀವು ಇಲ್ಲಿಗೆ ಬರದೆ ಇದ್ದಿದ್ದರೆ ಈ ವಾಚು ಮ್ಯಾಜಿಕ್‌ಗೆ ಉಪಯೋಗವಾಗುತ್ತದೆ ಎಂಬುದು ನನಗೆ ಗೊತ್ತಾಗುತ್ತಲೇ ಇರಲಿಲ್ಲ"

"ಇದನ್ನು ಮರುಕಟ್ಟೆಯಲ್ಲಿ ಬಿಡುಗಡೆ ಮಾಡಿ ಹಣ ಮಾಡಬೇಕೆಂಬ ಆಸೆ ಅವರಲ್ಲಿ ಇಲ್ಲ. ಮನುಷ್ಯನ ಒಳ್ಳೆಯದಕ್ಕಾಗಿಯೇ ಅವರು ಇದು ವರೆಗಿನ ಬಾಳನ್ನು ಮುಡುಪಾಗಿಸಿದ್ದಾರೆ"

"ಹೌದು, ಅವರ ಬಗ್ಗೆ ತುಂಬಾ ಕೇಳಿದ್ದೇನೆ"

"ಬಾಲ್ಯದಲ್ಲಿ ತುಂಬಾ ಡಲ್ಲಾಗಿರುತ್ತಿದ್ದೆನಂತೆ. ನನ್ನನ್ನು ಹಿಪ್ನಾಟಿಕ್ ಟ್ರಾನ್ಸ್‌ಗೆ ಆಗಾಗ

ತೆಗೆದುಕೊಂಡು ಹೋಗಿ ಈಗ ನನ್ನನ್ನು ಏಕ ಸಂಧಿಗ್ರಾಹಿಯನ್ನಾಗಿ ಮಾಡಿದ್ದಾರೆ'' ಎಂದಳು ಆಕೆ.

'ಅಬ್ಬಾ, ನೀವು ಏಕಸಂಧಿಗ್ರಾಹಿಯೇ?!''

''ಹಾಗೆಂದುಕೊಂಡಿದ್ದೇನೆ. ಏಕೆ?''

''ದೋಣಿ, ಕಾಗೆ, ಷಾಡೋ, ನೊಣ, ಪೆನ್ನು, ನಾನು, ಅವರನ್ನು, ಆಕೆಯನ್ನು, ನಿನ್ನನ್ನು, ನಿಂಬೆ, ಕಂಬ, ತುಂಬಾ, ಅಂಟಾರ್ಟಿಕಾ, ಬಿಡುತ್ತೇನೆ. ಪ್ರೇಮಿಸುತ್ತೇನೆ-'' ಇದೇ ಕ್ರಮದಲ್ಲಿ ಇವನ್ನು ಹೇಳಿ ನೋಡೋಣ.

''ದೋಣಿ, ಕಾಗೆ, ಷಾಡೋ, ನೊಣ, ಪೆನ್ನು, ನಾನು, ಅವರನ್ನು, ಆಕೆಯನ್ನು, ನಿನ್ನನ್ನು, ನಿಂಬೆ, ಕಂಬ, ತುಂಬಾ, ಅಂಟಾರ್ಟಿಕಾ, ಬಿಡುತ್ತೆನೆ. ಪ್ರೇಮಿಸುತ್ತೇನೆ''

''ಮೈಗಾಡ್, ಯೂಆರ್ ರಿಯಲೀ ಬ್ರಿಲಿಯಂಟ್...''

ರಂಜಿತಾ ನಗುತ್ತಾ '4ಥ್ಯಾಂಕ್ಯೂ'' ಎಂದಳು.

''ನಿಮ್ಮ ಜ್ಞಾಪಕಶಕ್ತಿ ಇನ್ನೂ ಬಲವಾಗಿದ್ದರೆ ಮೊದಲ ಎರಡು ಪದಬಿಟ್ಟು ಮೂರು, ಆರು, ಒಂಬತ್ತು, ಹನ್ನೆರಡು ಮತ್ತು ಹದಿನೈದನೆಯ ಪದಗಳು ಮಾತ್ರ ಹೇಳಲು ಸಾಧ್ಯವೇ?''

''ಆಗದೇನು?'' ಎಂದು ಅದೇ ವೇಗದಲ್ಲಿ ಹೇಳಿದಳು. ಹೇಳಿದ ನಂತರ ಅರ್ಥವಾಗಿ ''ಯೂ...'' ಎಂದು ಏನೋ ಹೇಳುತ್ತಿದ್ದಂತೆಯೇ ಷಾಡೋ ಸೀಟಿಹಾಕುತ್ತಾ ''ಥ್ಯಾಂಕ್ಯೂ'' ಎಂದ.

ಆಕೆ ಮತ್ತಷ್ಟು ಕೋಪದಿಂದ ''ಬೇರೆ ಯಾರಾದರೂ ಆಗಿದ್ದರೆ ಕೆನ್ನೆಗೆ ಬಿಗಿಯುತ್ತಿದ್ದೆ'' ಎಂದಳು.

''ಹೋಗಲಿ ಬಿಡಿ. ಬೇರೆಯವರನ್ನ ತಾನೆ! ಸದ್ಯ ನನ್ನನ್ನು ಅಲ್ಲವಲ್ಲಾ!''

''ನೀವು ಈ ಮಾತು ಈ ವೇಳೆಗೆ ಇಪ್ಪತ್ತು ಮಂದಿ ಹುಡುಗಿಯರ ಬಳಿ ಹೇಳಿರುವುದಾಗಿ ನನಗೆ ಗೊತ್ತಾಗಿದೆ''

''ನಿಮಗೊಂದು ಸೈಕಲಾಜಿಕಲ್ ವಿಷಯ ಹೇಳ್ತಿನಿ, ಅದನ್ನು ನೀವು ಜಂಬ ಅಂದ್ಕೋಕೂಡದು. ನಾನು ನಿಜವಾಗಿ ಈ ಮಾತು ಹೇಳಿದ್ದು ಒಬ್ಬಿಬ್ಬರಲ್ಲಿ ಮಾತ್ರವೇ ಉಳಿದ ಹದಿನೆಂಟು ಮಂದಿಯೂ ಸುಮ್ಮನೆ ಅವರೇ ಪ್ರಚಾರ ಮಾಡಿಕೊಂಡು ಬರುತ್ತಿದ್ದಾರೆ, 'ನನ್ನನ್ನು ಷಾಡೋ ಹಾಗೆ ಕೇಳಿದ್ದಾನೆ' ಎಂದು ಹೇಳದಿದ್ದರೆ ಉಳಿದವರಿಗೆ ಅನುಮಾನ ಬರುತ್ತದೆ ಎಂಬ ಭಯಕೆಲವರಿಗೆ. 'ನನ್ನ ಕಡೆ ಕೂಡಾ ಹಾಗೇ ನೋಡಿದ' ಎಂದು ಹೇಳಿಕೊಂಡು ತಮ್ಮ ಅಹಮಿಗೆ ತೃಪ್ತಿ ನೀಡುವವರು ಕೆಲವರು...ಹಿಪ್ನಾಟಿಸ್ಟ್ ಮೊಮ್ಮಗಳಾದ ನಿಮಗೆ ಹೆಣ್ಣು ಮನಸ್ಸನ್ನು ನಾನು ಹೇಳಬೇಕಾಗಿಲ್ಲ...''

ರಂಜಿತಾ ಸ್ವಲ್ಪ ತಣ್ಣಗಾದಳು. '4ಆದರೂ ಒಬ್ಬಿಬ್ಬರ ಬಳಿ ಹೇಳಿದ್ದೀರಲ್ಲಾ''

ಎಂದಳು ಅವಮಾನದಿಂದ.

''ಅದೂ ನೀವು ಕಾಣಿಸುವುದಕ್ಕೆ ಮೊದಲು''

''ನಾನ್ಸೆನ್ಸ್. ನಾನು ಪರಿಚಯವಾಗಿ ಒಂದು ಗಂಟೆಯೂ ಆಗಲಿಲ್ಲ ಆಗಲೇ ಈ ಪ್ರೇಮವೇನು?''

''ಪ್ರೇಮ ಅನ್ನೋದೇ ಅದು. ಕಾಳಿದಾಸ ಮೊದಲ ನಿಟದಲ್ಲಿಯೇ ಶಾಕುಂತಲೆಯನ್ನು ಪ್ರೇಮಿಸಲಿಲ್ಲವೇ? ಜೂಲಿಯೆಟ್ ಮೊದಲ ಭೇಟಿಯಲ್ಲೇ ಷೇಕ್ಸ್‌ಪಿಯರನ್ನು 'ಲವ್' ಮಾಡಲಿಲ್ಲವೇ?''

''ಸ್ವಾಮಿ ನಿಮ್ಮ ಸಾಹಿತ್ಯದ ಅಪಾರ ಜ್ಞಾನಕ್ಕೆ ನಮಸ್ಕಾರ! ನಾವು ಈ ವಿಷಯ ಕೈಬಿಡೋಣ''

''ನಿಜವಾಗಿ ನನ್ನನ್ನು ಪ್ರೇಮಿಸುವುದಿಲ್ಲವೇ?''

''ಸಾರೀ...''

ಷಾಡೋ ಪೆಚ್ಚಾದ. ''ಹೋಗಲಿ ಬಿಡಿ...ನನಗೊಂದು ಸಹಾಯ ಮಾಡ್ತೀರಾ...?'' ಎಂದ.

ಅನುಮನದಿಂದ ಆಕೆ ''ಏನು?'' ಎಂದು ಕೇಳಿದಳು.

''ನನ್ನ ಮುದ್ದು ತಂಗಿ ಕೇದಾರಗೌರಿ ಬಗ್ಗೆ ನಿಮ್ಮ ಅಭಿಪ್ರಾಯವೇನು?''

''ಆಕೆ ತುಂಬಾ ಒಳ್ಳೆಯವಳು. ತಪ್ಪಾಗಿ ನಿಮ್ಮ ತಂಗಿಯಾಗಿದ್ದಾಳೆ ಆಕೆ''

ಆಗಲಿ ಬಿಡಿ, ಈಗ ಏನ್ಮಾಡೋಕಾಗುತ್ತೆ...! ಆದರೆ ಪ್ರೊ.ಜಯದೇವ್ ಅವರ ಮೊಮ್ಮಗಳಾಗಿ ನಿಮ್ಮದೊಂದು ಕರ್ತವ್ಯವಿದೆ. ನನ್ನೊಂದಿಗೆ ನೀವು ಅವತಾರ್ ಬಾಬಾ ಬಳಿಗೆ ಬರಬೇಕು. ಅವನು ನನ್ನ ತಂಗಿಗೆ ಏನೊ ಶಾಪ ಕೊಟ್ಟಿದ್ದಾನಂತೆ. ಅದೆಷ್ಟು ನಿಜವೋ ಕಂಡುಕೊಳ್ಳಬೇಕು'' ಎಂದ ಷಾಡೋ.

'4ಈ ಬಾಬಾಗಳನ್ನು ಅವರ ಶಾಪಗಳನ್ನು ನೀವು ನಂಬುತ್ತೀರಾ?''

''ಕೆಲವು ಬಾಬಾಗಳು ನಿಸ್ವಾರ್ಥಿಗಳಾಗಿ ಮಾನವ ಸೇವೆ ನಡೆಸುತ್ತಾರೆ. ತಮ್ಮ ಬಗ್ಗೆ ಜನರು ಇರಿಸಿರುವ ನಂಬಿಕೆಯನ್ನು ಧೈರ್ಯವನ್ನಾಗಿ ಬದಲಿಸಿ ಅವರ ಕಷ್ಟಗಳನ್ನು ಎದುರಿಸಲು ಅವರ ನೆರವಿಗೆ ನಿಲ್ಲುತ್ತಿದ್ದಾರೆ. ಆದರೆ ಬಹು ಮಂದಿ ಬಾಬಾಗಳು ಜನರ ಅಜ್ಞಾನವನ್ನು 'ಕ್ಯಾಷ್' ಮಾಡಿಕೊಳ್ಳುತ್ತಿದ್ದಾರೆ. ಅವತಾರ್ ಬಾಬಾ ಕೂಡ ಅದೇ ಕ್ಯಾಷ್ ಗುಂಪಿನವನು''

''ಹಾಗಿದ್ದರೆ ನಾನೇನು ಮಾಡಬೇಕು?''

''ಮೊದಲು ಈ ಬಾಬಾ ಬರೀ ಬುಡಿಬುಡಿಕೆಯೋ ಅಥವಾ ಏನಾದರೂ ಬಂಡವಾಳ ಇರುವವನೇ ಎಂಬುದನ್ನು ತಿಳಿದುಕೊಳ್ಳಬೇಕು''

''ಅದಕ್ಕೇನು ಉಪಾಯ?''

''ಐದು ತಿಂಗಳಾದಂತೆ ಅಲ್ಲಿಗೆ ಬರಬೇಕು''

''ಓ್ಹ...''

ನನ್ನ ಹೆಂಡತಿ ಗರ್ಭಿಣಿ ಎಂದು ಅಲ್ಲಿಗೆ ಬಂದರೆ...''ಕೆನ್ನೆ ಭದ್ರವಾಗಿರಲಿ ಎಚ್ಚರಿಕೆ...''

''ಅಷ್ಟು ಬೇಗ ಕೋಪಗೊಂಡರೆ ಹೇಗೆ ಮಿಸ್ ರಂಜಿತಾ? ಇದೆಲ್ಲಾ ನಾಟಕವೇ'' ಎನ್ನುತ್ತಾ ತೀವವಾದ ಕಣ್ಣೊಂದಿಗೆ ''ಇದೆಲ್ಲಾ ನನ್ನ ತಂಗಿಯ ರಕ್ಷಣೆಗಾಗಿ ಮಾತ್ರವೇ. ಎಷ್ಟೋ ಪಂದಿ ಕಪಟ ಮಂತ್ರವಾದಿಗಳನ್ನು ಎದುರಿಸಿದ. ಪ್ರೊಫೆಸರ್ ಜಯದೇವ್ ಅವರ ಮೊಮ್ಮಗಳಾಗಿ ಇದು ನಿಮ್ಮ ಕರ್ತವ್ಯ ಎಂದು ಕೊಂಡಿದ್ದೇನೆ...ಅದೂ ಅಲ್ಲದೆ ನನ್ನ ತಂಗಿ...''

''ಸಾಕು ಸಾಕು...ನಿಲ್ಲಿಸಿ...ಯಾವಾಗ ಹೋಗಬೇಕು?''

''ಅಂದ್ರೆ ನೀವೊಪ್ಪಿದಿರಾ...? ಥ್ಯಾಂಕ್ಯೂ...ಥ್ಯಾಂಕ್ಯೂ...ನಾಳೇನೇ ಹಿಗೋಣ. ನೀವು ಸೀರೆ ಉಟ್ಕೊಳ್ಳಬೇಡಿ...'' ಕಣ್ಣರಳಿಸಿ ''ಏನು?''

ಐ ಮೀನ್ ಕುರ್ತಾ ಹಾಕಿಕೊಳ್ಳಿ. ಹೊಟ್ಟೆ ಚೆನ್ನಾಗಿ ಕಾಣಿಸುತ್ತೆ''

''ಈ ರೀತಿ ಸಲಹೆಗಳು ಬಂದರೆ ನಾನು ಬರೋದೇ ಇಲ್ಲ''

''ಸಾರಿ...ನಾಳೆಯೇ ಹೋಗುತ್ತಿದ್ದೇವೆ''

★★★

ಶಿವಶಂಕರಶಾಸ್ತ್ರಿ ಗೌರ್ನರ್.

ಯಾವುದೇ ದೇಶವನ್ನಾಗಲಿ, ರಾಜ್ಯವನ್ನಾಗಲಿ ಆಳಬೇಕೆಂದರೆ ತನ್ನ ವಿಷಯಕ್ಕಿಂತಲೂ ದೇಶ ಅಥವ ರಾಜ್ಯದ ಸಮಸ್ಯೆಯೇ ಮುಖ್ಯ ಎಂಬ ನಿಯಮವನ್ನು ಮಾಡಿದರೆ ಅದಕ್ಕೆ ಮೊದಲು ಹೊರತಾಗುವ ವ್ಯಕ್ತಿ ಇವರೇ.

ರಾಜ್ಯದ ತುಂಬಾ ಕಳವಳ ಹರಡಿದ್ದಾಗ ಆತ ಗವರ್ನರ್ ಆಗಿ ನಿಯಮಿಸಲ್ಪಟ್ಟಿದ್ದ. ಅಲ್ಲಿಯ ವಾತಾವರಣವನು,ನ ಶುದ್ಧಿಗೊಳಿಸುವುದು ಆತ ಮೊದಲು ಮಾಡಬೇಕಾಗಿದ್ದ ಕೆಲಸ. ಆದರೆ ಇವರು ಮಾಡಿದ ಮೊದಲ ಕೆಲಸ ತಿರುಪತಿಗೆ ಹಿಗಿ ಒಂದು ದಿನವಿದ್ದು ಅಲ್ಲಿ ಎಲ್ಲಾ ವಿಶೇಷ ಅರ್ಚನೆಗಳನ್ನೂ ನಡೆಸಿದ್ದು (ಬಹುಶಃ ಈ ದೇಶವನ್ನು ಒಳ್ಳೆಯದನ್ನಾಗಿ ಮಾಡಬಲ್ಲ ಶಕ್ತಿ ದೇವರೊಬ್ಬರಿಗೇ ಇದೆ ಎಂಬ ನಂಬಿಕೆ ಇರಬಹುದು). ಅಷ್ಟಕ್ಕೆ ಈತನ ಮೂರ್ಖತ್ವ ನಿಲ್ಲಲಿಲ್ಲ. ನೆಹರೂ ಅವರಂತೆ ದೇಶದಲ್ಲೆಲ್ಲಾ ತನ್ನ ಚಿತಾಭಸ್ಮಚೆಲ್ಲಬೇಕೆಂದು ಉಯಿಲು ಬರೆದಿದ್ದ (ಇದರ ಖರ್ಚು ಯಾರದು ಎಂಬುದು ಬರೆದಿರಲಿಲ್ಲ!)

ರಾಷ್ಟ್ರವನ್ನಾಳುವ ಪ್ರಧಾನಮಂತ್ರಿ, ರಾಜ್ಯಪಾಲಕನಾದ ಗವರ್ನರ್, ಪುರಪಾಲಕನಾದ ಮೇಯರ್, ಗ್ರಾಮಪಾಲಕರಾದ ಪಂಚಾಯಿತಿ ಛೇರ್ಮನ್ ಹೀಗೆ

ಇವರೆಲ್ಲಾ ತಮ್ಮ ಚಿತಾಭಸ್ಮಗಳನ್ನು ಭೂಮಿಯ ಮೇಲೆ ಸಿಂಪಡಿಸಬೇಕೆಂದರೆ ದೇಶವೆಲ್ಲಾ ಬೂದಿಯಿಂದಲೇ ತುಂಬಿರುತ್ತದೆ.

ಪ್ರತಿಯೊಬ್ಬ ವ್ಯಕ್ತಿಗೂ ತನಗೆ ಇಷ್ಟ ಬಂದಂತೆ ಜೀವಿಸುವ ಹಕ್ಕು ಇದೆ. ಆದರೆ ಶಿವಶಂಕರ ಶಾಸ್ತ್ರಿ ಬೆಳಗ್ಗೆ ಹನ್ನೊಂದು ಘಂಟೆಗೆ ತನಕ ಪೂಜೆಯಲ್ಲಿ ಕಳೆಯುತ್ತಾನೆ. ಪ್ರತಿ ವಾರವೂ ರಾಜ್ಯದ ಯಾವುದಾದರೂ ಪುಣ್ಯಕ್ಷೇತ್ರಕ್ಕೆ ಖಂಡಿತ ಹೋಗುತ್ತಾನೆ. ಅಮಾವಾಸ್ಯೆ ಮತ್ತು ಪೌರ್ಣಮಿಗಳಲ್ಲಿ ಮನೆಯೆಲ್ಲಾ ಭಜನೆಗಳಿಂದ ತುಂಬಿರುತ್ತದೆ. ರಾಜ್ಯಾಡಳಿತ ಸೂತ್ರಧಾರಿಗೆ ತನ್ನ ಕಾಲವನ್ನು ಈ ರೀತಿ ವ್ಯಯಮಾಡುವುದು ಸರಿಯಲ್ಲ ಎಂಬುದನ್ನು, ಪ್ರಜೆಗಳ ಹಣವನ್ನು ಈ ರೀತಿ ಖರ್ಚು ಮಾಡುವುದು ಸರಿಯಲ್ಲ ಎಂಬುದನ್ನು ಆತನಿಗೆ ಹೇಳುವವರು ತಾನೇ ಯಾರು? 'ನೀನು ಸಂಬಳ ಪಡೆಯುತ್ತಿರುವುದು ಭಜನೆಮಾಡುವುದಕ್ಕಲ್ಲ' ಎಂದು ಎಚ್ಚರಿಸುವವರು ಯಾರು?

ಇಂಥಾ ಪುಣ್ಯಸಂಗ್ರಹಿಸಿ ಶಿವಶಂಕರ ಶಾಸ್ತ್ರಿ ಅವತಾರ್ ಬಾಬಾ ಬಳಿ ಕುಳಿತಿದ್ದಾನೆ. ಪ್ರಶ್ನೋತ್ತರ ಕಾರ್ಯಕ್ರಮ ಹಾಗೂ ಭಕ್ತರ ಕಿರಿಕೆಯನ್ನು ತೀರಿಸುವ ಕಾಲ ಅದು.

ದಿಂಬಿಗೆ ಒರಗಿ ಕುಳಿತಿದ್ದಾರೆ ಬಾಬಾ. ಇನ್ನೊಂದು ಕಡೆ ಗವರ್ನರ್ ಕುತಿಳಿದ್ದಾರೆ. ಒಬ್ಬೊಬ್ಬರೇ ಬಂದು ತಮ್ಮ ಕಷ್ಟಗಳನ್ನು ಬಾಬಾ ಅವರಲ್ಲಿ ನಿವೇದಿಸಿಕೊಂಡು, ಸಮಸ್ಯೆಗೆ ಪರಿಮಹಾರ, ಪ್ರಸಾದಗಳನ್ನು ಪಡೆಯುವುದನ್ನು ಗವರ್ನರ್ ಭಕ್ತಿಯಿಂದ ನೋಡುತ್ತಿದ್ದಾರೆ.

ಕ್ಯೂ ತುಂಬಾ ಉದ್ದವಾಗಿದೆ. ಸುಮಾರು ಆರು ಗಂಟೆಗಳ ಕಾಲ ನಿಂತ ಮೇಲೆ ಷಾಡೋ ಮತ್ತು ಆಕೆ ಸಮೀಪಕ್ಕೆ ಬಂದರು. ಅವರ ಮುಂದೆ ಇನ್ನೂ ಐದು ಮಂದಿ ಇದ್ದಾರೆ.

ಕೆಲವು ಎಕರೆಗಳ ಆ ಪ್ರದೇಶವೆಲ್ಲಾ ಯಾತ್ರಾ ಸ್ಥಳದಂತೆ ಕಾಣುತ್ತಿದೆ. ಹಳ್ಳಿಗರು ಗಾಡಿಗಳಲಿ,ಲ ಬಂದು ಅಲ್ಲಿಯೇ ಉಳಿದುಕೊಂಡು ಅಡಿಗೆ-ಊಟಗಳನ್ನು ಮಾಡುತ್ತಾ ದಿನಗಟ್ಟಲೆ ಕಾಯುತ್ತಿದ್ದರು! ವಿದೇಶಿಯರೂ ಅಲ್ಲಿಗೆ ಬರಲು ಪ್ರಾರಂಭಿಸಿದ ನಂತರ ಒಂದು ಕ್ಯಾಪಿಟಲಿಸ್ಟ್ ಸಂಸ್ಥೆ ಸ್ಟಾರ್ ಹೋಟೇಲನ್ನು ಪ್ರಾರಂಭಿಸುವ ಯೋಜನೆ ಸಿದ್ಧಮಾಡಿತ್ತು. ಅಂದು ಕೃಷ್ಣಾಪುರ ಪ್ರಮುಖರೆಲ್ಲಾ ಅಲ್ಲೆ ಇದ್ದರು.

ಕ್ಯೂನಲ್ಲಿ ಎರಡನೆಯವನು ರಾಕೇಶ್! ಸಾಧಾರಣ ಭಕ್ತನಂತೆ ಕ್ಯೂನಲ್ಲಿ ಸಾಗುತ್ತಿದ್ದ.

ಅವನು ಬಯಸಿದ್ದರೆ ರೆಡ್‌ಸ್ಕೆಲಿಟನ್ನಾಗಿ ಅವನು ಉಸ್ಟ್ರೋಕ್‌ನಲ್ಲಿ ತನಗಿಂತಲೂ ಕಡಿಮೆ ಸ್ಥಾನದಲ್ಲಿರುವ ಬಾಬಾನನ್ನು ಯಾವ ಸಮಯದಲ್ಲಾದರೂ ಕಾಣುವುದು ಸಾಧ್ಯವಿತ್ತು. ಆದರೆ ಅವನು ಹಾಗೆ ಮಾಡಲು ಇಚ್ಛಿಸಲಿಲ್ಲ. ಕ್ಯೂನಲ್ಲಿ ನೆರವಾಗಬೇಕು''

ಮುಂದುವರಿಯುತ್ತಿದ್ದ.

ಅವನ ನಂತರ ಒಬ್ಬ ವೃದ್ಧ ಆತನ ಮೊಮ್ಮಗಳು ಇದ್ದರು. ಆಕೆಗೆ ಚಿಕ್ಕಂದಿನಿಂದಲೂ ಗೂನು. ಎಷ್ಟೋ ಮಂದಿ ಡಾಕ್ಟರರ ಬಳಿ ತೋರಿಸಿ ಗುಣವಾಗದೆ ಕೊನೆಗೆ ಬಾಬಾ ಬಳಿಗೆ ಬಂದಿದ್ದರು. ಆ ಮೊಮ್ಮಗಳಿಗೆ ಹನ್ನೆರಡು ವರ್ಷ ಇರಬಹುದು.

ಅವರ ನಂತರ ಪ್ರೊಫೆಸರ್ ಪುಟ್ಟಣ್ಣ. ತನ್ನ ಅಮೇರಿಕಾ ಪ್ರಯಾಣದ ಬಗ್ಗೆ ಡಾ॥ ರಂಗಪ್ರಸಾದ್ ನಾಶದ ಬಗ್ಗೆ ಕೇಳಲು ಬಂದಿದ್ದ ಆತ.

ಪುಟ್ಟಣ್ಣನ ನಂತರ ಒಬ್ಬ ಅಸ್ತಮಾ ರೋಗಿ. ಸುಮಾರು ಇಪ್ಪತ್ತೈದು ವರ್ಷಗಳಿಂದ ಉಬ್ಬಸದಿಂದ ನರಳುತ್ತಿದ್ದ. ಸುಮಾರು ಹತ್ತು ಸಾವಿರ ರೂಪಾಯಿ ಖರ್ಚುಮಾಡಿ ನರಗಳಿಗೆ ಇಂಜಕ್ಷನ್ ಚುಚ್ಚಿಸಿಕೊಂಡು ಎರಡೂ ಕೈ ತೂತುಗಳಿಂದ ತುಂಬಿತ್ತು. ಆದರೆ ಉಬ್ಬಸ ಮಾತ್ರ ಗುಣವಾಗಿರಲಿಲ್ಲ. ನಂತರದಲ್ಲಿ ಒಬ್ಬ ಹಿಪ್ನೊಥೆರಪಿಸ್ಟನ್ನು ಆಶ್ರಯಿಸಿದ್ದ. ಹಿಪ್ನಾಟಿಸಂನಿಂದ ಉಬ್ಬಸ ಗುಣವಾಗುವುದು ದೇವರಿಗೇ ಗೊತ್ತು. ಆದರೂ ಎರಡು ಸಾವಿರ ರೂಪಾಯಿ ಕೈಬಿಟ್ಟಿತ್ತು.

ನಂತರ ಇದ್ದದ್ದು ಷಾಡೋ- ರಂಜಿತಾ!

ಕ್ಯೂ ನಿಧಾನವಾಗಿ ಮುಂದುವರಿಯುತ್ತಲೇ ಇದೆ. ಮುಂದಿರುವವನು ತಾನು ಉಬ್ಬಸದಿಂದ ಅನುಭವಿಸುತ್ತಿರುವ ನೋವು, ಯಾರ್ಯಾರು ಎಷ್ಟೆಷ್ಟು ಹಣ ತನ್ನಿಂದ ಸೆಳೆದರು ಎಂಬುದನ್ನು ನಕಲಿ ವೈದ್ಯರು ನೀಡಿದ ಯಾತನೆ, ಮೂಲಿಕಾ ವೈದ್ಯದ ಕಷ್ಟ ವಿವರಿಸಿದ. ಮಧ್ಯದಲ್ಲಿ ಕೆಮ್ಮುತ್ತಲೂ ಇದ್ದ; ಆಯಾಸ ಪಡುತ್ತಲೂ ಇದ್ದ.

ರಾಕೇಶ್ ಸರದಿ.

ಬಾಬಾ ರಾಕೇಶ್ ಕಡೆ ನೋಡಿದ. ಗುರ್ತಿಸಿದಂತೆ ತಲೆಯಾಡಿಸಿದ. ಮಿಕ್ಕೆಲ್ಲಾ ಭಕ್ತರಂತೆಯೇ ರಾಕೇಶ್ ಕೂಡ ತನ್ನ ಪ್ರಶ್ನೆಯನ್ನು ಬಾಬಾ ಅವರಿಗೆ ಕೊಟ್ಟ. ಅದನ್ನು ತೆಗೆದುಕೊಂಡು ಓದಿ ''ಹಾಗೋ, ಆಗಲಿ...'' ಎಂದ, ರಾಕೇಶ್ ಕೇಟ್ಟ ಕಾಗದದಲ್ಲಿ 'ಈ ದಿನ ಸಂಜೆಗೆ ಉಸ್ಪೋಕ್ ಸಭೆ ಇದೆ ಬನ್ನಿ' ಎಂದು ಬರೆದಿತ್ತು. ಉಸ್ಪೋಕ್ ಸದಸ್ಯರು ವಾರ್ತೆಯನ್ನು ಇದೇ ರೀತಿ ಹರಡುವುದು.

ಬಾಬಾ ಆಗಲಿ ಎನ್ನುತ್ತಲೇ ರಾಕೇಶ್ ಅಲ್ಲಿನಂದ ಮುಂದೆ ಹೆಗಲಿಲ್ಲ. ಬಾಬಾ ಕಣ್ಣೊಳಕ್ಕೆ ನೋಡಿದ. ಆತನ ಮನದ ಮಾತುಗಳು ತಿಳಿದವು:

''ಉಸ್ಪೋಕ್‌ನ ಭಾವೀ ನಾಯಕ, ಅಷ್ಟಾವಕ್ರನನ್ನು ಬೆಳೆಸಿ ದೊಡ್ಡವನನ್ನಾಗಿ ಮಾಡುವ ಹೊಣೆಗಾರಿಕೆಯನ್ನು ಹೇತ್ತಿರುವ ಪ್ರಥಮ ಗಣಗಳಲ್ಲಿ ಪ್ರಥಮ ಮಹಾದ್ರಷ್ಟನ ಮರಣಾನಂತರ ಆ ಸಾ+ಥನವನ್ನು ವಹಿಸಿಕೊಳ್ಳಲಿರುವವನು, ಈತನಿಗೆ ಉಸ್ಪೋಕ್ ಸದಸ್ಯರೆಲ್ಲರೂ ವಿಧೇಯರಾಗಿರಬೇಕು...ಮಹಾದ್ರಷ್ಟನ ಶೀಘ್ರ ಅಂತ್ಯಕ್ಕೆ

ರಾಕೇಶ್ ಮುಖ ವಿಕಸಿಸಿತು, ಮನೋರೂಪ ವಿದ್ಯೆಯಿಂದ ಅವತಾರ್ ಬಾಬಾನ ಮನಸ್ಸಿನಲ್ಲಿರುವುದನ್ನು ಅರಿತಿದ್ದ ಬಾಬಾ ಕೂಡ ತನ್ನ ಪರವೇ...! ದೊಡ್ಡ ವಿಜಯ! ಮಹಾದ್ರಷ್ಟನ ವಿರುದ್ಧವಾಗಿ ಬಾಬಾ ಕೂಡ ಇದ್ದಾನೆ ಎಂದರೆ ಸಣ್ಣ ಮಾತೇ? ತನ್ನ ಅದ್ಭುತ ಶಕ್ತಿಯ ಮೂಲಕವಾಗಿ ಮಹಾದ್ರಷ್ಟನ ಅಂತ್ಯವನ್ನು ತಿಳಿದುಕೊಳ್ಳುತ್ತಿದ್ದಾನೆ. ಉಳಿದ ರೆಡ್‌ಸ್ಕೆಲಿಟನ್‌ಗಳನ್ನು ಕಂಡು ಅವರ ಮನವನ್ನು ತಿಳಿಯಬೇಕು. ತನ್ನನ್ನು ವಿರೋಧಿಸುವವರನ್ನು ಮೂರನೆಯವರಿಗೆ ತಿಳಿಯದಂತೆ ದಮನ ಮಾಡಬೇಕು. ಅಷ್ಟಾವಕ್ರನ ಜನನಕ್ಕೆ ಇನ್ನು ತಿಂಗಳೂ ಇಲ್ಲ, ಅಷ್ಟರಲ್ಲಿ ಎಲ್ಲವನ್ನೂ ತನ್ನ ಅನುಕೂಲಕ್ಕೆ ತಕ್ಕಂತೆ ರೂಪಿಸಬೇಕು. ಸಾಧ್ಯವಾದರೆ ಅಷ್ಟರಲ್ಲಿ ಎಲ್ಲವನ್ನೂ ತನ್ನ ಅನುಕೂಲಕ್ಕೆ ತಕ್ಕಂತೆ ರೂಪಿಸಬೇಕು. ಸಾಧ್ಯವಾದರೆ ಅಷ್ಟರಲ್ಲಿ ಮಹಾದ್ರಷ್ಟನನ್ನು ಕೊಲ್ಲಬೇಕು.

ಸಂತೃಪ್ತಿಯಿಂದ ಕ್ಯೂನಿಂದ ಸರಿದು ಪಕ್ಕದಲ್ಲಿ ಒಂದು ಕಡೆ ನಿಂತ.

ರಾಕೇಶ್ ಮುಂದುವರಿಯುತ್ತಲೇ ತಾತ-ಮೊಮ್ಮಗಳು ಬಂದರು ಆಕೆಯನ್ನು ನೋಡುತ್ತಲೇ ಬಾಬಾ ನಕ್ಕ.

''ಸಕಲ ಚರಾಚರಗಳನ್ನೂ ರಕ್ಷಿಸುವವನು ಭಗವಂತನೊಬ್ಬನೇ! ನಾನೇ ಆ ಭಗವಂತನ ರೂಪ! ನಿಮ್ಮ ಎಲ್ಲಾ ಕಷ್ಟಗಳನ್ನೂ ದೂರ ಮಾಡಲೆಂದೇ ಬಂದಿರುವವನು! ಮನಸ್ಫೂರ್ತಿಯಾಗಿ ನನ್ನನ್ನು ನಂಬಿ ನಿಮ್ಮ ಕಷ್ಟಗಳು ತೀರುತ್ತವೆ'' ಎನ್ನುತ್ತಾ ಆಕೆಯ ಬೆನ್ನಿನ ಮೇಲೆ ಕೈ ಆಡಿಸುತ್ತಾ ''ಎಲ್ಲಿ, ತಲೆ ಎತ್ತಮ್ಮ'' ಎಂದ.

ಆಕೆ ತಲೆ ಎತ್ತಿದಳು.

''ಇನ್ನೂ...ಇನ್ನೂ...''

ವಿಚಿತ್ರ ಆಕೆ ತಲೆ ಮೇಲೆತ್ತುತ್ತಲೇ ಇದ್ದಾಳೆ. ತಲೆ ಮೇಲಕ್ಕೆ ಬರುತ್ತಲೇ ಇದೆ. ಸೊಂಟವೂ ಮೇಲಕ್ಕೆ ಬರುತ್ತಿದೆ. ಕ್ರಮಕ್ರಮವಾಗಿ ಆಕೆ ನೇರವಾಗಿ ನಿಂತಳು.

ಅಲ್ಲಿದ್ದವರೆಲ್ಲಾ ಅದ್ಭುತವಾದುದನ್ನು ನೋಡಿದವರಂತೆ ವಿಭ್ರಾಂತರಾದರು. ಇವ್ಯಾವುದನ್ನೂ ನಂಬದ ರವಿ ಕೂಡ ಕ್ಷಣಕಾಲ ತನ್ನ ಕಣ್ಣನ್ನು ತಾನು ನಂಬದಾದ.

ವಿದೇಶಿ ಪತ್ರಕರ್ತರು ಸರಸರನೆ ಫೋಟೋ ತೆಗೆದುಕೊಳ್ಳುತ್ತಿದ್ದರು.

ಪುಟ್ಟಣ್ಣ ಮುಂದೆ ಬಂದು ಬಾಬಾ ಪಾದಗಳಿಗೆನಮಸ್ಕರಿಸಿದರು. ಆತ ತನ್ನ ಸಮಸ್ಯೆ ಹೇಳುವ ಮೊದಲೇ ಬಾಬಾ ಆತನ ತಲೆಯ ಮೇಲೆ ಕೈಯಿರಿಸಿಗವರ್ನರ್ ಕಡೆ ತಿರುಗಿ ಏನೋ ಹೇಳಿದ. ನಂತರ ಪುಟ್ಟಣ್ಣನ ಕಡೆ ನೋಡಿ ''ನಿಮ್ಮ ಮೊದಲ ಬಯಕೆ ಕೂಡಲೆ ಕೈಗೂಡುತ್ತದೆ. ವಿದೇಶಿ ಪ್ರಯಾಣಕ್ಕೆ ಸಿದ್ಧರಾಗಬೇಕಾದ್ದು ನೀವೇ, ಇನ್ನು

ಎರಡನೆಯ ಬಯಕೆ ನಿಮ್ಮ ಶತ್ರುವಿನ ನಾಶ. ಆತನಿಗೆ ಇನ್ನೂ ಸ್ವಲ್ಪ ಸಮಯವಿದೆ. ಹೆಚ್ಚೆಲ್ಲ ಒಂದು ತಿಂಗಳು. ನಂತರ ಕೃಷ್ಣಾಪುರದ ಜನರೇ ಆತನನ್ನು ಕೊನೆ ಮುಟ್ಟಿಸುತ್ತಾರೆ''

ಪುಟ್ಟಣ್ಣನ ಕಣ್ಣಿಂದ ನೀರು ಟಪಟಪನೆ ಉದುರಿತು ತನ್ನ ಬಯಕೆ ಪೂರೆಎಸುತ್ತದೆ ಎನ್ನುವ ಆನಂದವೋ ಅಥವ ಮನಸ್ಸಿನಲ್ಲಿದ್ದುದನ್ನು ಹೇಳದೆಯೇ ತಿಳಿದರೆಂಬ ಸಂತೋಷವೋ ಗೊತ್ತಾಗಲಿಲ್ಲ. ಆತನ ಮುಖದಲ್ಲಿ ಒಂದು ರೀತಿಯ ದಿವ್ಯ ಚೈತನ್ಯ ಕಾಣುತ್ತಿತ್ತು.

ಗೂನನ್ನು ಕಳೆದುಕೊಂಡಿದ್ದ ಹುಡುಗಿಯನ್ನು ಆಕೆಯ ತಾತನನ್ನು ವಿದೇಶಿ ಪತ್ರಕರ್ತರು ಪ್ರಶ್ನೆಗಳನ್ನು ಕೇಳಿ ವಿವರ ಬರೆದುಕೊಳ್ಳುತ್ತಿದ್ದರು.

ಅಸ್ತಮಾ ರೋಗಿ ಬಾಬಾ ಬಳಿಗೆ ಬಂದ. ಆತನೊಂದಿಗೆ ಎರಡು ನಿಮಿಷ ಮಾತನಾಡಿ ನೊಸಲ ಮೇಲೆ, ಕೊರಳಿನ ಮೇಲೆ ಬಲರಳಿನಿಂದ ಏನೋ ಬರೆದ.

ರವಿ ಆತನನ್ನೇ ನೋಡುತ್ತಿದ್ದ. ಅನೇಕ ರೀತಿಯ ಭಾವನೆಗಳು ಅವನಲ್ಲಿ ಬಂದುಹೋಗುತ್ತಿವೆ. ರಂಜಿತಾ ಮನಸ್ಸು ಹಾಗೇ ಇತ್ತು. ಎದುರಿಗಿದ್ದ ರೋಗಿಯ ಆಯಾಸ ಇಳಿದುಹೋದಂತೆ ಕಣ್ಣಿಗೇ ಕಾಣಿಸುತ್ತಿದೆ. ಇದು ಹಿಪ್ನಾಟಿಸಂ ಅಥವ ಭ್ರಾಂತಿ ಎಂದುಕೊಳ್ಳಲು ಸಾಧ್ಯವಿಲ್ಲ. ಎಷ್ಟೇ ಹಿಪ್ನಾಟಿಸಂ ಆದರೂ ಕ್ಷಣಗಳಲ್ಲಿ ಉಬ್ಬಸ ಹಾಗೆ ಇಳಿಯುವುದು ಸಾಧ್ಯವೇ? ಉಬ್ಬಸಕ್ಕೂ ಹಿಪ್ನಾಟಿಸಂಗೂ ಯಾವ ಸಂಬಂಧ?

ಹಾಗಿದ್ದರೆ ಈಗ ನಡೆಯುತ್ತಿರುವುದೇನು?

ಪವಾಡ ಸ್ಪರ್ಶವೇ!

ಪತ್ರಿಕೆಗಳಲ್ಲಿ ಪ್ರಕಟವಾಗುತ್ತಿರುವಂತೆ, ಜನರೆಲ್ಲಾ ಹೇಳುತ್ತಿರುವಂತೆ ಈತನಿಗೆ ದಿವ್ಯಶಕ್ತಿ ಇದೆಯೇ? ತಾವು ಭಾವಿಸಿರುವಂತೆ ಈತ ಕಪಟಿಯಲ್ಲವೇ? ಆತುರದಲ್ಲಿ ನಾವು ಇಷ್ಟಿದ್ದೇವೆಯೇ? ನಮ್ಮದು ಮುಂಜಾಗರೂಕತೆ ಇರದ ಕಾರ್ಯವೆನೋ?

-ಹೀಗೆ ಯೋಚಿಸುತ್ತಿರುವಾಗಲೇ ಅವರ ಸರದಿ ಬಂತು. ಬಾಯ್ತೆರೆಯುತ್ತಿದ್ದಂತೆಯೇ ಬಾಬಾ ಅಬ್ಬರಿಸಿದ ''ಮೂರ್ಖಾ'' ರವಿ ತಲೆ ಎತ್ತಿ ನೋಡಿದ.

ಅಷ್ಟರಲ್ಲಿ ರಂಜಿತಾ ಕಡೆ ತಿರುಗಿದ ಬಾಬಾ ''ಹೆಣ್ಣಾಗಿದ್ದು ದೊಡ್ಡ ಸಾಹಸಕ್ಕೆ ಕೈಹಾಕಿದ್ದೀ, ಮದುವೆ ಇಲ್ಲದೆಯೇ ಬಸುರಿ ಎಂದು ಬಂದು ಪ್ರಶ್ನೆ ಕೇಳಬೇಕೆಂದಿದ್ದೀಯಾ? ಅದರ ಫಲ ಅನುಭವಿಸು ಸದ್ಯೋಗರ್ಭವನ್ನು ದರಿಸು. ಮದುವೆಯಾಗದೆ ಗರ್ಭ ಧರಿಸಿದ ನೀನು ಅದರ ಕಾರಣ ತಿಳಿಯದೆ ಒಂದು ಕಡೆ

ಕೂಶಿಸಿದರೆ, ಬೊಟ್ಟು ಮಾಡಿ ನಿನ್ನನ್ನೇ ನೋಡುವ ಜನರಿಗೆ ಉತ್ರ ಹೇಳಲಾರದೆ ಮತ್ತೊಂದು ಕಡೆ ನಶಿಸುತ್ತೀ. ಮಾನವಾತೀತ ಶಕ್ತಿಯ ಇರುವನ್ನೇ ಪ್ರಶ್ನಿಸುವ ನೀನು ಯಾವ ಶರೀರ ಸಂಪರ್ಕವೂ ಇಲ್ಲದೆ ಬಂದ ಗರ್ಭಕ್ಕೆ ಕಾರಣ ಹುಡುಕುತ್ತಾ ಹುಚ್ಚಳಾಗುತ್ತೀ, ಅದೇ ನಿನ್ನ ಭವಿಷ್ಯ ಇನ್ನು ನೀನು ಹೊರಡಬಹುದು'' ಎಂದ.

ಅಲ್ಲಿ ಹಾಹಾಕಾರ.

ರವಿ ನಿಶ್ಚೇಷ್ಟಿತನಾದ. ಸುಮ್ಮನೆ ತಾನು ಕೈಗೊಂಡ ಕಾರ್ಯ ಈ ರೀತಯ ಫಲ ನೀಡುವುದೆಂದು ಅವನು ಕನಸಿನಲ್ಲಿಯೂ ಎಣಿಸಿರಲಿಲ್ಲ. ಅಲ್ಲಿದ ಬಾಬಾ ಭಕ್ತರು ಅವರನ್ನು ಅಲ್ಲಿಯೇ ಕೊಂದುಹಾಕುವಂತಿದ್ದರು.

ರಂಜಿತಾ ಸ್ಥಿತಿ ಮತ್ತೂ ಭಯಂಕರವಾಗಿತ್ತು. ಅದುವರೆವಿಗೂ ಆಕೆ ನಂಬಿಕೆಗಳ ಮೇಲೆ, ಕಾರ್ಯ- ಕಾರಣ ಸಂಬಂಧಗಳ ಮೇಲೆ ಬಲವಾಗಿ ನಿಂತಿದ್ದವಳು. ಆ ದುರ್ಬಲ ಕ್ಷಣದಲ್ಲಿ ಅವತಾರ್ ಬಾಬನಿಂದ ಯಾವುದೋ ಶಕ್ತಿ ಬಂದು ಬತಾಲ್ಕಾರವಾಗಿ ಆಕ್ರಮಿಸುತ್ತಿರುವಂತೆ ಅನಿಸುತ್ತಿತ್ತು. ಬಾಬಾ ನಾಲ್ಕು ಕೈಗಳಿಂದ, ಎರಡು ತಲೆಗಳಿಂದ ವಿಕಟಾಟ್ಟಹಾಸ ನಡೆಸುತ್ತಿರುವಂತೆ ಭ್ರಮೆಯಾಯಿತು.

ಅಲ್ಲೇ ಪ್ರಜ್ಞೆ ತಪ್ಪಿ ಕುಸಿದಳು.

ಒಂದು ಕಡೆ ರೊಚ್ಚಿಗೆದ್ದ ಜನ, ಮತ್ತೊಂದು ಕಡೆ ಅಚೇತಳಾಗಿರುವ ಹೆಣ್ಣು...ಅಲ್ಲಿ ತುಂಬಾ ಗಲಾಟೆಯೇ ನಡೆಯಲಿತ್ತು. ಆದರೆ ಗವರ್ನರ್ ಅದೂಷ್ಟವಶಾತ್ ಬಂದಿದ್ದರಿಂದ ಅವರ ಸೆಕ್ಯೂರಿಟಿ ಫೋರ್ಸ್ ಅಲ್ಲಿಯೇ ಇದ್ದೂ ಅವರು ಜಾಗರೂಕತೆಯಿಂದ ಆಕೆಯನ್ನು ಹೊರಕ್ಕೆ ಸಾಗಿಸಿದರು.

ಒಳಗಿನ ವಿವರಗಳು ಹೊರಕ್ಕೆ ಹರಡುವ ಮುನ್ನವೇ ರವಿ ಅಲ್ಲಿಂದ ರಂಜಿತಾಳನ್ನು ಕರೆದುಕೊಂಡು ಬಂದ. ಆದರೆ ಎಷ್ಟು ಕಾಲ ಇದು ಅಡಗುತ್ತದೆ? ದಾವಾನಲದಂತೆ ಒಂದು ಗಂಟೆಯ ಒಳಗಾಗಿ ಈ ಸುದ್ದಿ ಊರಲೆಲ್ಲಾ ಹರಡಿತು.

ಊರಿನವರೆಲ್ಲಾ ಆಕೆಯನ್ನು ದ್ವೇಷ, ಭಯ. ಅಸಹ್ಯಗಳೊಂದಿಗೆ ನೋಡಲಾರಂಭಿಸಿದರು.

ಊರಿನವರೆಲ್ಲಾ ಆಕೆಯನ್ನು ದ್ವೇಷ, ಭಯ, ಅಸಹ್ಯಗಳೊಂದಿಗೆ ನೋಡಲಾರಂಭಿಸಿದರು.

ಮರುದಿನ ಬರಿದಾದ ನೋಟದೊಂದಿಗೆ ಮನಸ್ಥಿತಿ ತಪ್ಪಿದಂತೆ ಇದ್ದ ತಮ್ಮ ಮಗಳನ್ನು ನಗರದಿಂದ ಬಂದ ಆಕೆಯ ತಂದೆ- ತಾಯಿಗಳು ತಮ್ಮೊಂದಿಗೆ

ಕರೆದೊಯ್ದರು.

ರವಿಯ ಮನಃಸ್ಥಿತಿ ವರ್ಣನಾತೀತ. ತೀರಾ ಸಾಧಾರಣವಾಗಿ ಪಾ-ರರಂಭವಾಗಿ ನೋಡುತ್ತಿದ್ದಂತೆಯೇ ಕೆಎ ದಾಟಿ ಅಪಾಯಕಾರವಾಗಿ ಬೆಳೆದಿತ್ತು. ಇದೇಲ್ಲಕ್ಕೂ ತಾನೇ ಕಾರಣವಲ್ಲವೇ?

ಇದಕ್ಕೆ ಉತ್ತರಿಸುವದು ಹೇಗೆ? ನಾಶವಾದ ಒಬ್ಬ ಹುಡುಯ ಬಾಳನ್ನು ಹೇಗೆ ಸರಿಗೊಳಿಸುತ್ತಾನೆ?

ಅವತಾರ್ ಬಾಬಾ ಹೇಗೆ ಉತ್ತರಿಸಬಲ್ಲ?

ಅವನೇ ಒಂದು ನಿರ್ಣಯಕ್ಕೆ ಬಂದ.

ಆ ಕ್ಷಣದಲ್ಲಿ ಬೆಟ್ಟವನ್ನು ಢೀಕೊಡಲು ಸಿದ್ಧವಾಗುವ ಟಗರಿನಂತೆ ಹಣೆ ಒಡೆದರೂ ಪ್ರಯತ್ನಿವನ್ನು ಕೈಬಿಡದ ಹಠಮಾರಿ ಟಗರಿನಂತೆ ಸನ್ನದ್ಧನಾದ.

**ಈ ಕಾದಂಬರಿಯ ಉಳಿದ ಭಾಗ**
**ಅಷ್ಟಾವಕ್ರ-2 ರಲ್ಲಿ ಮುಂದುವರೆದಿದೆ**